ಸೋಮವಾರ, ಏಪ್ರಿಲ್ 22, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಷೇಕ
ಜಾರ್ಖಂಡ್‌ನ ರಾಂಚಿಯಲ್ಲಿ ಮಹಾವೀರ ಜಯಂತಿ ಅಂಗವಾಗಿ ಭಾನುವಾರ ಭಕ್ತರು 'ಮಹಾವೀರ' ಮೂರ್ತಿಗೆ ಅಭಿಷೇಕ ಮಾಡಿದರು

ಜಾಹೀರಾತು

ಕಾಂಗ್ರೆಸ್ ಡೇಂಜರ್

ದಲಿತರ ಕಲ್ಯಾಣಕ್ಕಾಗಿಯೇ ಮೀಸಲಾಗಿದ್ದ ಹಣ ಅನ್ಯರ ಪಾಲಾಗಬೇಕಾ?

ಹೋಟೆಲ್ ಗೆ ಟೀ ಕುಡಿಯಲು ಹೋದ ಅಮಾಯಕರು ಬಾಂಬ್ ಸ್ಫೋಟಕ್ಕೆ ತುತ್ತಾಗಬೇಕಾ?

ಆಟೋದಲ್ಲಿ ಹೋದ ಪ್ರಯಾಣಿಕರು ಕುಕ್ಕರ್ ಬಾಂಬ್ ಸ್ಫೋಟಕ್ಕೆ ಬಲಿಯಾಗಬೇಕಾ?

ಕಾಲೇಜಿಗೆ ಹೋದ ಹೆಣ್ಣು ಮಗಳು ಲವ್ ಜಿಹಾದ್ ಗೆ ಬಲಿಯಾಗಬೇಕಾ?

ಕೆಜಿ ಹಳ್ಳಿ, ಡಿಜೆ ಹಳ್ಳಿ ಗಲಭೆಕೋರರರನ್ನು ಓಲೈಸುವವರು ಬೇಕಾ?

ಮುಗ್ಧ ಜನರು ನಕ್ಸಲರಿಗೆ ಬಲಿಯಾಗುವುದನ್ನು ನೋಡಬೇಕಾ?

ಕನ್ನಡಿಗರ ಪಾಲಿನ ಕಾವೇರಿ ನೀರು ಬೇರೆ ರಾಜ್ಯಕ್ಕೆ ಸೇರಬೇಕಾ?

ವಿಧಾನಸೌಧಕ್ಕೆ ಹೋದಾಗ ಪಾಕಿಸ್ತಾನ ಜಿಂದಾಬಾದ್ ಎಂಬ ಘೋಷಣೆ ಕೇಳಬೇಕಾ?

ಮೇಯಲು ಹೋದ ಗೋ ಮಾತೆ ಕಸಾಯಿಖಾನೆ ಸೇರಬೇಕಾ?



DANGER ಎಚ್ಚರಿಕೆ

ಭದ್ರತೆ ಮತ್ತು ಸುರಕ್ಷತೆಗಾಗಿ ಬಿಜೆಪಿಗೆ ಮತ ನೀಡಿ

ಕಮಲದ ಬಟನ್ ಒತ್ತಿ ಬಿಜೆಪಿಯನ್ನು ಗೆಲ್ಲಿಸಿ

ಈ ಜಾಹೀರಾತಿನಲ್ಲಿ ವ್ಯಕ್ತವಾದ ಎಲ್ಲಾ ಅಭಿಪ್ರಾಯಗಳು ಜಾಹೀರಾತುದಾರರಾದ ರಾಜಕೀಯ ಪಕ್ಷದ ಅಭಿಪ್ರಾಯಗಳಾಗಿರುತ್ತದೆ ಜಾಹೀರಾತಿನಲ್ಲಿರುವ ವಿಚಾರಗಳ ಸತ್ಯತೆಗೆ ಜಾಹೀರಾತುದಾರರೇ ಪೂರ್ಣ ಹೊಣೆಗಾರರಾಗಿರುತ್ತಾರೆ.

Published by: Bharatiya Janata Party, Karnataka

ಬಿಜೆಪಿ ಪ್ರತಿಭಟನೆ ಇಂದು

ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಖಂಡಿಸಿ ರಾಜ್ಯದಾದ್ಯಂತ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರ ಹತ್ಯೆ ಮತ್ತು ಹಿಂದೂಗಳ ಮೇಲಿನ ಮುಸ್ಲಿಂ ಮತಾಂಧರ ನಿರಂತರ ದಾಳಿಯ ಹಿನ್ನೆಲೆಯಲ್ಲಿ ಸೋಮವಾರ ರಾಜ್ಯಾದ್ಯಂತ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಬೀದಿಗಿಳಿದು ಹೋರಾಟ ನಡೆಸಲಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

'ಎಕ್ಸ್' ಮೂಲಕ ಈ ಕುರಿತು ಪಕ್ಷದ ಕಾರ್ಯಕರ್ತರಿಗೆ ಹೋರಾಟಕ್ಕೆ ಕರೆ ನೀಡಿರುವ ಅವರು, 'ನಮ್ಮ ಆದ್ಯತೆ ಏನಿದ್ದರೂ 'ಧ್ಯೇಯ'ಕ್ಕೇ ಹೊರತು ಅಧಿಕಾರಕ್ಕಲ್ಲ, ಚುನಾವಣಾ ಕಾರ್ಯವನ್ನು ಬದಿಗಿರಿಸಿ ನಾಳೆ ಎಲ್ಲರೂ ಬೀದಿಗಿಳಿದು ಹೋರಾಟ ನಡೆಸಬೇಕು' ಎಂದಿದ್ದಾರೆ.

'ಚುನಾವಣೆಯ ಗಡಿಬಿಡಿಯಲ್ಲಿ ನಾವು ಹೆಣ್ಣು ಮಕ್ಕಳ ಮೇಲಿನ ಕೌರ್ಯ, ದೈವ ನಿಂದನೆ ಹಾಗೂ ರಾಷ್ಟ್ರ ಭಕ್ತರ ಮೇಲಿನ ಹಲ್ಲೆಗಳನ್ನು ನಿರ್ಲಕ್ಷಿಸಿ ಕೂರಲಾಗದು. ನೇಹಾ ಹಿರೇಮಠ ಹತ್ಯೆ ಅತ್ಯಂತ ಅಮಾನುಷ ಘಟನೆ. ಎಲ್ಲ ಆಯಾಮಗಳಿಂದಲೂ ಇದರ ತನಿಖೆಯಾಗಬೇಕು. ಆದರೆ, ಮುಖ್ಯಮಂತ್ರಿಗಳು, ಗೃಹ ಸಚಿವರು ಹಾಗೂ ಕೆಲ ಸಚಿವರು ಈ ಕುರಿತು ಲಘುವಾಗಿ ಪ್ರತಿಕ್ರಿಯಿಸಿರುವುದು ನೋಡಿದರೆ ದುಷ್ಕರಿಗೆ ಹಾಗೂ ಹಿಂದೂ ಧರ್ಮದ ಕಂಟಕರಿಗೆ ಸರ್ಕಾರದ ಕೃಪಾಪೋಷಣೆ ದೊರೆತಿರುವುದು ಸ್ಪಷ್ಟವಾಗಿದೆ' ಎಂದು ಅವರು ಹೇಳಿದ್ದಾರೆ.

'ಅಲ್ಪಸಂಖ್ಯಾತರ ಓಲೈಕೆಯೇ ಈ ಸರ್ಕಾರದ ಆದ್ಯತೆ ಆಗಿದೆ. ಭಾರತೀಯ ಜನತಾ ಪಕ್ಷ ಸಿದ್ಧಾಂತಕ್ಕಾಗಿ ಜನ್ಮ ತಾಳಿದ ಪಕ್ಷ. ನಮ್ಮ ಆದ್ಯತೆ ಏನಿದ್ದರೂ ಧ್ಯೇಯಕ್ಕೇ ಹೊರತು ಅಧಿಕಾರಕ್ಕಲ್ಲ' ಎಂದಿದ್ದಾರೆ.

ಕೊಲೆ ಪ್ರಕರಣ ಸಿಬಿಐಗೆ ಒಪ್ಪಿಸಿ: ಜೆ.ಪಿ. ನಡ್ಡಾ

ಹುಬ್ಬಳ್ಳಿ: 'ವಿದ್ಯಾರ್ಥಿನಿ ನೇಹಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ. ಪರಮೇಶ್ವರ ಅವರ ಹೇಳಿಕೆಗಳು ತನಿಖೆಯನ್ನು ದುರ್ಬಲಗೊಳಿಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ರಾಜ್ಯ ಸರ್ಕಾರ ಸಿಬಿಐಗೆ ಒಪ್ಪಿಸಬೇಕು' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಆಗ್ರಹಿಸಿದರು.

ಭಾನುವಾರ ಇಲ್ಲಿನ ಬಿಡ್ನಾಳದಲ್ಲಿರುವ ಮೃತ ನೇಹಾ ಹಿರೇಮಠ ಅವರ ನಿವಾಸಕ್ಕೆ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಮಾಧ್ಯಮದವರೊಂದಿಗೆ ಮಾತನಾಡಿದರು.

'ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಪ್ರಕರಣವನ್ನು ದಾರಿ ತಪ್ಪಿಸುವ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯ. ಅವರು ತುಷ್ಟೀಕರಣದ ರಾಜಕಾರಣ ಮಾಡುತ್ತಿದ್ದು, ರಾಜ್ಯದ ಜನತೆ ಎಂದಿಗೂ ಕ್ಷಮಿಸುವುದಿಲ್ಲ. ನೇಹಾ ಸಾವಿಗೆ ನ್ಯಾಯ ದೊರಕುತ್ತದೆ ಎಂದು ರಾಜ್ಯದ ಜನತೆ ನಿರೀಕ್ಷಿಸುತ್ತಿದ್ದಾರೆ. ರಾಜ್ಯದ ಪೊಲೀಸರು ಆಳವಾದ ತನಿಖೆ ನಡೆಸಲು ಅಸಮರ್ಥರಾದರೆ, ಕೂಡಲೇ ಸಿಬಿಐಗೆ ಹಸ್ತಾಂತರಿಸಬೇಕು' ಎಂದರು.

'ನೇಹಾ ಕುಟುಂಬಕ್ಕೆ ನ್ಯಾಯ ದೊರೆಯಬೇಕು. ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಬೇಕು ಎಂದು ಪಾಲಕರು ಸಹ ಮನವಿ ಮಾಡಿದ್ದಾರೆ. ಅವರ ದುಃಖದಲ್ಲಿ ನಾವು ಸಹ ಭಾಗಿಯಾಗಿದ್ದು, ನ್ಯಾಯ ದೊರೆಯುವವರೆಗೂ ಬಿಜೆಪಿ ಅವರ ಜೊತೆ ಇರಲಿದೆ' ಎಂದು ಹೇಳಿದರು.

ಅವರೊಂದಿಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಜರಿದ್ದರು.

'ಪ್ರಕರಣ ಮುಚ್ಚಿಹಾಕುವ ತಂತ್ರ': ನೇಹಾ ಹಿರೇಮಠ ಕೊಲೆ ಪ್ರಕರಣವನ್ನು 'ವೈಯಕ್ತಿಕ' ಎಂದು ಗೃಹ ಸಚಿವರು ಹೇಳುವ ಮೂಲಕ ಪ್ರಕರಣ ಮುಚ್ಚಿಹಾಕುವ ಕೆಲಸ ಮಾಡಲಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ದಾವಣಗೆರೆಯಲ್ಲಿ ದೂರಿದರು.

'ಇಂಡಿಯಾ ಮೈತ್ರಿ ಭ್ರಷ್ಟರ ಕೂಟ'

ಹುಬ್ಬಳ್ಳಿ: 'ಇಂಡಿಯಾ ಒಕ್ಕೂಟದಲ್ಲಿರುವ ಕೆಲವರು ಜೈಲಿನಲ್ಲಿದ್ದರೆ, ಇನ್ನೂ ಕೆಲವರು ಜಾಮೀನಿನ ಮೇಲೆ ಹೊರಗಿದ್ದಾರೆ. ಇದು ಭ್ರಷ್ಟರ ಕೂಟ' ಎಂದು ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ. ನಡ್ಡಾ ಟೀಕಿಸಿದರು.

ನಗರದ ಸಾಖರೆ ಶಾಲೆ ಮೈದಾನದಲ್ಲಿ ಭಾನುವಾರ ನಡೆದ ಧಾರವಾಡ ಲೋಕಸಭಾ ಕ್ಷೇತ್ರದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು.

'ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಅನುದಾನ ಕಡಿತ ಮಾಡಿದೆ ಎಂದು ಇಲ್ಲಿನ ಕಾಂಗ್ರೆಸ್ ಸರ್ಕಾರ ಸುಳ್ಳು ಜಾಹೀರಾತು ನೀಡುತ್ತಿದೆ. ಆದರೆ, ಕೇಂದ್ರದಿಂದ ರಾಜ್ಯಕ್ಕೆ ನೀಡಿದ ಅನುದಾನವನ್ನು ನಾಲ್ಕು ಪಟ್ಟು ಹೆಚ್ಚಿಸಲಾಗಿದೆ. ಕಾಂಗ್ರೆಸ್ ಹೇಳುತ್ತಿರುವುದು ಸುಳ್ಳುಗಳ ಕಂತೆ' ಎಂದು ಹರಿಹಾಯ್ದರು.

'ವಿಧಾನಸೌಧದ ಮುಂದೆ ಪಾಕಿಸ್ತಾನ್ ಜಿಂದಾಬಾದ್ ಎಂದೂ ಕೂಗಿದವರ ವಿರುದ್ಧ ಕಾಂಗ್ರೆಸ್ ಸರ್ಕಾರ ಸೂಕ್ತ ಕ್ರಮ ಕೈಗೊಂಡಿಲ್ಲ. ಕಡೇಪಕ್ಷ ಖಂಡನೆಯನ್ನೂ ವ್ಯಕ್ತಪಡಿಸದೆ, ಬೇಜವಾಬ್ದಾರಿ ಹೇಳಿಕೆ ನೀಡಿ ತನಿಖೆಯ ದಿಕ್ಕು ತಪ್ಪಿಸುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್‌ನವರಿಗೆ ನಾಚಿಕೆ ಆಗುವುದಿಲ್ಲವೇ?' ಎಂದು ವಾಗ್ದಾಳಿ ನಡೆಸಿದರು.

'ರಾಜ್ಯದಲ್ಲಿ ಅಶಾಂತಿಯ ವಾತಾವರಣ ನಿರ್ಮಾಣವಾಗಿದೆ. ಹನುಮಾನ್ ಚಾಲೀಸಾ ಪಠಿಸಿದರೆ ಕಿಡಿಗೇಡಿಗಳು ಹಲ್ಲೆ ನಡೆಸುತ್ತಾರೆ. ರಾಜ್ಯ ಸರ್ಕಾರ ಹಿಂದೂ ದೇಗುಲಗಳಿಗೆ ತೆರಿಗೆ ವಿಧಿಸುತ್ತಿದೆ. ಪಿಎಫ್‌ಐ ಹಾಗೂ ಎಸ್‌ಎಫ್‌ಐ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತದೆ. ಭ್ರಷ್ಟಾಚಾರಿಗಳು, ಉಗ್ರರ ರಕ್ಷಣೆ ಮಾಡುತ್ತಿದೆ. ಈ ಮಟ್ಟದಲ್ಲಿ ತುಷ್ಟೀಕರಣ ಸಲ್ಲದು' ಎಂದು ಹೇಳಿದರು.

ಕ್ಷೇತ್ರದ ಅಭ್ಯರ್ಥಿ ಪ್ರಲ್ಹಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಶಾಸಕ ಮಹೇಶ ಟೆಂಗಿನಕಾಯಿ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಮಾತನಾಡಿ, ಕೇಂದ್ರ ಸಾಧನೆಗಳನ್ನು ವಿವರಿಸಿದರು.

ಇದಕ್ಕೂ ಮೊದಲು ನಗರದ ಖಾಸಗಿ ಹೋಟೆಲ್‌ನಲ್ಲಿ ವಿವಿಧ ಸಮುದಾಯಗಳ ಪ್ರಮುಖರ ಸಭೆ ನಡೆಸಲಾಯಿತು.

ಸುದ್ದಿ 2 ನಿಮಿಷ

'ಅಕ್ರಮ ಹಣದಲ್ಲಿ ಚುನಾವಣೆ ಎದುರಿಸುತ್ತಿರುವ ಬಿಜೆಪಿ'

ಚಾಮರಾಜನಗರ: 'ಬಿಜೆಪಿಯು ಈ ಚುನಾವಣೆಯನ್ನು ಅಕ್ರಮವಾಗಿ ಸಂಪಾದಿಸಿದ ಹಣದಿಂದ ಎದುರಿಸಲು ಬಯಸಿದೆ. ಆದರೆ, ಕಾಂಗ್ರೆಸ್ ಪಕ್ಷವು ಐದು ಗ್ಯಾರಂಟಿ ಯೋಜನೆಗಳು ಮತ್ತು ಜನ ಕಲ್ಯಾಣದ ಬದ್ಧತೆಯ ಮೇಲೆ ಎದುರಿಸುತ್ತಿದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು,

'ಬೆಂಗಳೂರಿನಲ್ಲಿ ಶನಿವಾರ ಕಾರೊಂದರಲ್ಲಿ ಬಿಜೆಪಿಗೆ ಸೇರಿದ ₹ 2 ಕೋಟಿ ಪತ್ತೆಯಾಗಿದೆ. ಕಾರಿನಲ್ಲಿದ್ದ ವೆಂಕಟೇಶ್ ಎಂಬ ವ್ಯಕ್ತಿ, 'ಮೈಸೂರು ಮತ್ತು ಚಾಮರಾಜನಗರಕ್ಕೆ ಒಯ್ಯುತ್ತಿದ್ದ ಹಣ' ಎಂದು ಹೇಳಿಕೆ ನೀಡಿದ್ದಾರೆ' ಎಂದು ತಿಳಿಸಿದರು.

'ಆ ಕಾರ್‌ನಲ್ಲಿ 2 ಪತ್ರಗಳೂ ಇದ್ದು, ಅದರಲ್ಲಿ ಒಂದು ಪತ್ರದಲ್ಲಿ ಈ ಹಣ ಬಿಜೆಪಿಗೆ ಸೇರಿದ್ದು ಎಂದಿದ್ದರೆ, ಇನ್ನೊಂದು ಬ್ಯಾಂಕ್ ಪ್ರಮಾಣಪತ್ರವಾಗಿದ್ದು, ಮಾರ್ಚ್ 27ರಂದು ಬಿಜೆಪಿ ಐದು ಕೋಟಿ ನಗದನ್ನು ಕೋದಂಡರಾಮಪುರದ ಕೆನರಾ ಬ್ಯಾಂಕ್‌ನಿಂದ ಡ್ರಾ ಮಾಡಿರುವ ಮಾಹಿತಿ ಇದೆ' ಎಂದರು.

'ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ₹ 50 ಸಾವಿರಕ್ಕಿಂತ ಹೆಚ್ಚು ನಗದು ಸಾಗಿಸುವಂತಿಲ್ಲ. ಆದರೆ, ಬಿಜೆಪಿಯವರು ಕೋಟಿಗಟ್ಟಲೆ ಹಣ ಸಾಗಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಸುದೀರ್ಘ ಚುನಾವಣೆ ಪ್ರಕ್ರಿಯೆಯಲ್ಲಿ ಕುತಂತ್ರ'

ಮಂಗಳೂರು: 'ಈ ಬಾರಿ ಲೋಕಸಭಾ ಚುನಾವಣೆಯ ಪ್ರಕ್ರಿಯೆ ಮೂರು ತಿಂಗಳ ಕಾಲ ನಡೆಯುತ್ತಿರುವುದನ್ನು ಗಮನಿಸಿದರೆ, ಅದರ ಹಿಂದೆ ಕೇಂದ್ರ ಸರ್ಕಾರದ ಕುತಂತ್ರ ಅಡಗಿರುವ ಸಂದೇಹ ಕಾಡುತ್ತಿದೆ. ಈ ಕುರಿತು ಪ್ರಧಾನಮಂತ್ರಿ ಮತ್ತು ಚುನಾವಣಾ ಆಯುಕ್ತರು ಸ್ಪಷ್ಟನೆ ನೀಡಬೇಕು' ಎಂದು ಸಿಡಬ್ಲ್ಯುಸಿ ಸದಸ್ಯ ವೀರಪ್ಪ ಮೊಯಿಲಿ ಒತ್ತಾಯಿಸಿದರು.

ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದೆ ಚುನಾವಣೆ 20 ದಿನಗಳ ಒಳಗೆ ಮುಗಿದದ್ದೂ ಇದೆ. ತಂತ್ರಜ್ಞಾನ ಸಾಕಷ್ಟು ಬೆಳೆದಿರುವ ಈ ಕಾಲದಲ್ಲಿ ವಾಸ್ತವವಾಗಿ ಚುನಾವಣೆ ಬೇಗ ಮುಗಿಯಬೇಕಾಗಿತ್ತು. ಅನಗತ್ಯ ವಿಳಂಬ ಮಾಡಿರುವುದನ್ನು ಗಮನಿಸಿದರೆ 'ಒಂದು ದೇಶ, ಒಂದು ಚುನಾವಣೆ' ಎಂಬ ಬಿಜೆಪಿ ಅಜೆಂಡಾಗೆ ಮುಂದಿನ ಚುನಾವಣೆಯಲ್ಲಿ ನಾಂದಿ ಹಾಡುತ್ತಾರೆ ಎಂಬ ಗುಮಾನಿ ಕಾಡುತ್ತಿದೆ' ಎಂದರು.

'ತಡ ಆದಷ್ಟು ಚುನಾವಣೆಯಲ್ಲಿ ಹಸ್ತಕ್ಷೇಪಕ್ಕೆ ಅವಕಾಶ ಹೆಚ್ಚುತ್ತದೆ. ಒಂದು ದೇಶ, ಒಂದು ಚುನಾವಣೆ ಎಂಬುದರ ಹಿಂದೆ ಎಲ್ಲ ಹಂತದಲ್ಲೂ ತಮ್ಮ ಪಕ್ಷಕ್ಕೇ ಮತ ಎಂಬ ಆಶಯವನ್ನು ಈಡೇರಿಸುವುದು ಮೋದಿ ಅವರ ಬಯಕೆ. ಹೀಗೆ ಆದರೆ ಸಂವಿಧಾನದ ಆಶಯಗಳಿಗೆ ಧಕ್ಕೆ ಆಗಬಹುದು' ಎಂದು ಅವರು ಹೇಳಿದರು.

'ವಿದೇಶಿ ಶಕ್ತಿಗಳು ತಮ್ಮನ್ನು ಪ್ರಧಾನಿ ಪಟ್ಟದಿಂದ ಕೆಳಗಿಳಿಸಲು ಪ್ರಯತ್ನಿಸುತ್ತಿವೆ ಎಂದು ಪ್ರಧಾನಿ ಹೇಳಿದ್ದಾರೆ. ಅವರನ್ನು ಅಭದ್ರತೆ ಕಾಡುತ್ತಿದೆ ಎಂಬುದಕ್ಕೆ ಸ್ಪಷ್ಟ ಸಾಕ್ಷಿ ಇದು. ಕರ್ನಾಟಕದಲ್ಲಿ ದೇವೇಗೌಡರು ಬಿಜೆಪಿಯವರ ಜೊತೆ ಸೇರಿ ಸುಳ್ಳು ಹೇಳುತ್ತಿದ್ದಾರೆ. ಇದು ಅವರ ವ್ಯಕ್ತಿತ್ವದ ಸಮಸ್ಯೆಯಲ್ಲ, ವಯಸ್ಸಿನ ಸಮಸ್ಯೆ' ಎಂದು ಮೊಯಿಲಿ ಹೇಳಿದರು

ಕೊಲೆ ಪೂರ್ವಯೋಜಿತ: ತಂದೆ ಆರೋಪ

ನೇಹಾ ನಿವಾಸಕ್ಕೆ ಮುಸ್ಲಿಂ ಧರ್ಮಗುರುಗಳು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಭೇಟಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಗಳು ನೇಹಾ ಕೊಲೆ ಪೂರ್ವಯೋಜಿತವಾಗಿದ್ದು, ಅದರ ಹಿಂದೆ ಆರೋಪಿ ಫಯಾಜ್ ಅಷ್ಟೇ ಅಲ್ಲ ಇನ್ನೂ ಅನೇಕರು ಇದ್ದಾರೆ' ಎಂದು ನೇಹಾ ತಂದೆ, ಪಾಲಿಕೆ ಕಾಂಗ್ರೆಸ್ ಸದಸ್ಯ ನಿರಂಜನಯ್ಯ ಹಿರೇಮಠ ಆರೋಪಿಸಿದರು.

ಭಾನುವಾರ ತಮ್ಮ ನಿವಾಸದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಆರೋಪಿ ಫಯಾಜ್ ಅವರ ಕುಟುಂಬದವರ ಹೇಳಿಕೆ ಗಮನಿಸಿದರೆ, ಇದೊಂದು ಪೂರ್ವಯೋಜಿತ ಕೊಲೆ ಎನ್ನುವ ಸಂಶಯ ವ್ಯಕ್ತವಾಗುತ್ತಿದೆ. ಅವರ ವಿರುದ್ಧವೂ ಪೊಲೀಸರಿಗೆ ದೂರು ನೀಡಿ ಪ್ರಕರಣ ದಾಖಲಿಸುತ್ತೇನೆ' ಎಂದರು.

'ಮಗಳು ಕೊಲೆಯಾದ ದಿನವೇ ನಾಲ್ವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದೆ. ಇನ್ನೂ ಅವರನ್ನು ಬಂಧಿಸಿಲ್ಲ. ಮಗಳು ಫಯಾಜ್‌ನನ್ನು ಪ್ರೀತಿಸಲು ನಿರಾಕರಿಸಿದ್ದಳು. ಫಯಾಜ್‌ಗೆ ಕೆಲವರು ತಲೆಗೆ ತುಂಬಿ, ಮಗಳನ್ನು ಕೊಲೆ ಮಾಡುವಂತೆ ಪ್ರೇರೇಪಿಸಿದ್ದಾರೆ. ಪ್ರಕರಣದ ಹಿಂದೆ ಇರುವ ಎಲ್ಲರನ್ನೂ ವಿಚಾರಣೆ ನಡೆಸಬೇಕು' ಎಂದು ಆಗ್ರಹಿಸಿದರು.

ಕಠಿಣ ಶಿಕ್ಷೆಗೆ ಅಂಜುಮನ್ ಸಂಸ್ಥೆ ಆಗ್ರಹ: ಕೊಲೆಯಾದ ನೇಹಾ ಹಿರೇಮಠ ಅವರ ನಿವಾಸಕ್ಕೆ ಮುಸ್ಲಿಂ ಧರ್ಮಗುರುಗಳು, ಹುಬ್ಬಳ್ಳಿ ಅಂಜುಮನ್ ಸಂಸ್ಥೆ ಪದಾಧಿಕಾರಿಗಳು ಹಾಗೂ ಸಮುದಾಯದ ಮುಖಂಡರು ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಹುಬ್ಬಳ್ಳಿ ಅಂಜುಮನ್ ಸಂಸ್ಥೆ ಅಧ್ಯಕ್ಷ ಎ.ಎಂ. ಹಿಂಡಸಗೇರಿ, 'ನೇಹಾ ಕೊಲೆ ಅತ್ಯಂತ ಖಂಡನೀಯ. ಈ ಪ್ರಕರಣ ಬೇರೆ ಬೇರೆ ತಿರುವು ಪಡೆದುಕೊಳ್ಳುತ್ತಿರುವುದು ಸರಿಯಲ್ಲ. ಇದರಲ್ಲಿ ಜಾತಿ, ಧರ್ಮ ಯಾವುದನ್ನೂ ತರಬಾರದು' ಎಂದರು.

'ಒಬ್ಬ ಕೊಲೆಯಾಗಿದ್ದಾನೆ ಅಂದರೆ, ಅದು ಇಡೀ ಜನಾಂಗದ ಕೊಲೆ ಎಂದು ಕುರಾನ್ ಹೇಳುತ್ತದೆ. ಈ ಪ್ರಕರಣವನ್ನು ಸಮಸ್ತ ಮುಸ್ಲಿಂ ಸಮುದಾಯ ಖಂಡಿಸಿದೆ. ತ್ವರಿತ ನ್ಯಾಯಾಲಯ ಸ್ಥಾಪಿಸಿ, ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡಿ ವಿಚಾರಣೆ ನಡೆಸುವ ಮೂಲಕ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಇದು ರಾಜ್ಯಕ್ಕೇ ಮಾದರಿಯಾಗಬೇಕು' ಎಂದು ಹೇಳಿದರು.

'ಹುಬ್ಬಳ್ಳಿ–ಧಾರವಾಡ ಭಾಗದ ಯಾವೊಬ್ಬ ಮುಸ್ಲಿಂ ವಕೀಲರೂ ಆರೋಪಿ ಪರ ವಾದ ಮಾಡಬಾರದು ಎಂದು ಮುತವಲ್ಲಿಗಳ ಸಮ್ಮುಖದಲ್ಲಿ ತೀರ್ಮಾನಿಸಿದ್ದೇವೆ. ವಕೀಲರು ಸಹ ಒಪ್ಪಿಗೆ ನೀಡಿದ್ದಾರೆ. ಆರೋಪಿಗೆ ಶಿಕ್ಷೆಯಾಗುವವರೆಗೂ ಮುಸ್ಲಿಂ ಸಮುದಾಯ ಹಿರೇಮಠ ಅವರ ಕುಟುಂಬದ ಜೊತೆಗೆ ಇರಲಿದೆ' ಎಂದು ಹಿಂಡಸಗೇರಿ ಹೇಳಿದರು. ಮುಸ್ಲಿಂ ಧರ್ಮಗುರು ತಾಜುದ್ದೀನ್ ಖಾದ್ರಿ ಇದ್ದರು.

ಧಾರವಾಡದಲ್ಲಿ ಇಂದು ಮೌನ ಮೆರವಣಿಗೆ: 'ನೇಹಾ ಕೊಲೆ ಅಮಾನವೀಯ ಕೃತ್ಯ. ಪ್ರಕರಣದ ಆರೋಪಿ ಫಯಾಜ್‌ಗೆ ಕಠಿಣ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿ ಧಾರವಾಡದ ಅಂಜುಮನ್ ಇ ಇಸ್ಲಾಂ ಸಂಸ್ಥೆ ವತಿಯಿಂದ ನಗರದಲ್ಲಿ ಸೋಮವಾರ (ಏ.22)ಮೌನ ಮೆರವಣಿಗೆ ನಡೆಸಲಾಗುತ್ತಿದೆ' ಎಂದು ಧಾರವಾಡ ಅಂಜುಮನ್ ಸಂಸ್ಥೆ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ ತಿಳಿಸಿದರು.

ನೇಹಾ ಹಿರೇಮಠ ಕೊಲೆ ಘಟನೆ ಖಂಡಿಸಿ, ಬೆಳಗಾವಿ ಜಿಲ್ಲೆ ಮುನವಳ್ಳಿಯಲ್ಲಿ ಸಾರ್ವಜನಿಕರು ನಡೆಸುತ್ತಿರುವ ಪ್ರತಿಭಟನೆ ಮೂರನೇ ದಿನವೂ ಮುಂದುವರಿಯಿತು. ಪ್ರತಿಭಟನಕಾರರು, ವ್ಯಾಪಾರ–ವಹಿವಾಟು ಸ್ಥಗಿತಗೊಳಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಬಸ್ ಸಂಚಾರ ಯಥಾಸ್ಥಿತಿ ಇತ್ತು.

ಹುಬ್ಬಳ್ಳಿ ಅಂಜುಮನ್ ಸಂಸ್ಥೆ ಅಧ್ಯಕ್ಷ ಎ.ಎಂ.ಹಿಂಡಸಗೇರಿ ಹಾಗೂ ಮುಸ್ಲಿಂ ಸಮುದಾಯದ ಧರ್ಮಗುರುಗಳು ಭಾನುವಾರ ಮೃತ ನೇಹಾ ಹಿರೇಮಠ ಮನೆಗೆ ಭೇಟಿ ನೀಡಿ ಅವರ ತಂದೆ, ತಾಯಿಗೆ ಸಾಂತ್ವನ ಹೇಳಿದರು –ಪ್ರಜಾವಾಣಿ ಚಿತ್ರ

ನೇಹಾ ಕೊಲೆ ಆರೋಪಿ ಅನ್ಯ ಕೋಮಿನವನಾಗಿದ್ದಾನೆ. ಲೋಕಸಭಾ ಚುನಾವಣೆ ಸಮಯ ಆಗಿರುವುದರಿಂದ ಕೆಲವರು ಸಾವಿನ ಮೇಲೆ ರಾಜಕಾರಣ ಮಾಡುತ್ತಿದ್ದಾರೆ
ಶ್ರೀನಿವಾಸ ಮಾನೆ
ಕಾಂಗ್ರೆಸ್ ಶಾಸಕ, ಹಾನಗಲ್

ನೇಹಾ ಕೊಲೆ ಆರೋಪಿ ಫಯಾಜ್ ಮೊಬೈಲ್‌ನಲ್ಲಿದ್ದ ಫೋಟೊಗಳನ್ನು ರಾಜ್ಯ ಸರ್ಕಾರವು ಪೊಲೀಸ್ ಅಧಿಕಾರಿಗಳ ಮೂಲಕವೇ ಜಾಲತಾಣದಲ್ಲಿ ಹರಿಯಬಿಡುತ್ತಿದೆ
ಮಹೇಶ ಟೆಂಗಿನಕಾಯಿ,
ಶಾಸಕ, ಹು–ಧಾ ಸೆಂಟ್ರಲ್

ಕಾಂಗ್ರೆಸ್ ಸರ್ಕಾರ ಜನರ ಬದುಕಿನ ಗ್ಯಾರಂಟಿ ಕಸಿದುಕೊಂಡು, 'ಲವ್ ಜಿಹಾದ್ ಗ್ಯಾರಂಟಿ' ನೀಡುತ್ತಿದೆ. ದೊಡ್ಡ ಪ್ರಮಾಣದಲ್ಲಿ ಲವ್ ಜಿಹಾದ್ ನಡೆಯುತ್ತಿದೆ
ಅರವಿಂದ ಬೆಲ್ಲದ,
ಶಾಸಕ, ಹು–ಧಾ ಪಶ್ಚಿಮ

ಕೊಲೆ ಪ್ರಕರಣದಲ್ಲಿ ಬಿಜೆಪಿ ಮೊಸಳೆ ಕಣ್ಣೀರು ಸುರಿಸುತ್ತಿದೆ. ಇದರಲ್ಲೂ ರಾಜಕೀಯ ಮಾಡಲು ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ
ಲಕ್ಷ್ಮಿ ಹೆಬ್ಬಾಳಕರ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ರಾಜ್ಯ ಸರ್ಕಾರವೇ ಲವ್ ಜಿಹಾದ್ ಪರ ನಿಂತಿದ್ದು, ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಕಾಂಗ್ರೆಸ್ ಯಾವುದೇ ಹಂತಕ್ಕೆ ಬೇಕಾದರೂ ಇಳಿಯುತ್ತದೆ
ಪ್ರಲ್ಹಾದ ಜೋಶಿ ಕೇಂದ್ರ ಸಚಿವ, ಧಾರವಾಡ ಜಿಲ್ಲಾ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

'ಸೂಕ್ಷ್ಮತೆ ಅರಿತು ಮಾತನಾಡಬೇಕು'

ಹುಬ್ಬಳ್ಳಿ: 'ನೇಹಾ ಕೊಲೆಯನ್ನು ಜಾತಿ, ಧರ್ಮ ಹಾಗೂ ರಾಜಕಾರಣದಂತಹ ವಿಚಾರಕ್ಕೆ ಬಳಸಿಕೊಳ್ಳಬಾರದು. ಇಂತಹ ಪ್ರಕರಣಗಳು ನಡೆದಾಗ ಮುಖ್ಯಮಂತ್ರಿ, ಗೃಹ ಸಚಿವರು ಹಾಗೂ ಯಾರೇ ಆದರೂ ಸೂಕ್ಷ್ಮತೆಯಿಂದ ಮಾತನಾಡಬೇಕು. ಕುಟುಂಬಸ್ಥರಿಗೆ ನೋವು ಹಾಗೂ ಅವಮಾನ ಆಗದಂತೆ ನಡೆದುಕೊಳ್ಳಬೇಕು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಹೇಳಿದರು.

ನೇಹಾ ಹಿರೇಮಠ ಅವರ ನಿವಾಸಕ್ಕೆ ಭಾನುವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

'ಇಂತಹ ಪ್ರಕರಣದಲ್ಲಿ ಆರೋಪಿ ಒಬ್ಬನೇ ಇರುವುದಿಲ್ಲ. ತನಿಖೆ ಸಾಗಿದಂತೆ ಸಾಕ್ಷ್ಯಗಳು ಸಂಗ್ರಹವಾಗುತ್ತ ಹೋಗುತ್ತವೆ. ಆರೋಪಿಗೆ ಗಲ್ಲು ಶಿಕ್ಷೆಯಾಗಬೇಕು. ನೇಹಾ ಕುಟುಂಬಸ್ಥರಿಗೆ ನ್ಯಾಯ ಸಿಗುವವರೆಗೂ ನಾವು ಜೊತೆಗೆ ನಿಲ್ಲುತ್ತೇವೆ' ಎಂದರು.

'ಮಹಿಳಾ ಆಯೋಗದಿಂದ ಎಲ್ಲ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ಶಾಲಾ–ಕಾಲೇಜುಗಳಿಗೆ ಭದ್ರತೆ ಒದಗಿಸಲು ಸೂಚನೆ ನೀಡಲಾಗುವುದು' ಎಂದು ಹೇಳಿದರು.

'ಕರ್ನಾಟಕದಲ್ಲಿ ತಾಲಿಬಾನ್ ಸರ್ಕಾರ'

ಪ್ರಜಾವಾಣಿ ವಾರ್ತೆ

ಆನೇಕಲ್: ಕರ್ನಾಟಕದಲ್ಲಿ ತಾಲಿಬಾನ್ ಸರ್ಕಾರ ಆಡಳಿತದಲ್ಲಿದೆ. ಕಾನೂನು, ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಹುಬ್ಬಳ್ಳಿಯಲ್ಲಿ ನೇಹಾ ಹಿರೇಮಠ ಕೊಲೆ ನಂತರ ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಬಗ್ಗೆ ಗಾಬರಿಯಾಗುತ್ತಿದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ತಾಲ್ಲೂಕಿನ ಬಿದರಗುಪ್ಪೆಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನಲ್ಲಿಯೂ ವಿದ್ಯಾರ್ಥಿನಿಯರಿಗೆ ರಕ್ಷಣೆ ಇಲ್ಲದಂತಾಗಿರುವುದು ದುರಂತ. ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದರು.

ಕಾಂಗ್ರೆಸ್ ಸರ್ಕಾರ ಪ್ರೇಮಿಗಳ ಕಲಹ ಎಂಬ ಉಡಾಫೆ ಉತ್ತರ ನೀಡುತ್ತಿದೆ. ಈ ಪ್ರಕರಣದಿಂದಾಗಿ ಕರ್ನಾಟಕದ ಜನತೆ ತಲೆ ತಗ್ಗಿಸುವಂತಾಗಿದೆ. ಗೃಹ ಸಚಿವ ಪರಮೇಶ್ವರ ಈ ಬಗ್ಗೆ ದಾಖಲೆ ಬಿಡುಗಡೆ ಮಾಡಿ ನಂತರ ಕ್ಷಮಾಪಣೆ ಕೇಳುತ್ತಾರೆ. ಸರ್ಕಾರ ಹೆಣ್ಣು ಮಗುವಿನ ವಿಚಾರದಲ್ಲಿ ಚೆಲ್ಲಾಟ ಆಡುವುದು ಬೇಡ ಎಂದು ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್ ಕಾರ್ಯಕರ್ತರಾಗಿರುವ ನೇಹಾ ತಂದೆ ನಿರಂಜನಯ್ಯ ಹಿರೇಮಠ ಅವರೇ ಕಾಂಗ್ರೆಸ್ ಆಡಳಿತದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಇದು ಲವ್ ಜಿಹಾದ್ ಎಂಬ ಬಗ್ಗೆ ಅನುಮಾನ ವ್ಯಕ್ತ ಪಡಿಸುತ್ತಿದ್ದಾರೆ ಎಂದರು.

ಲಾರಿಯಲ್ಲಿ ತೆರಳಿದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ತುರುವೇಕೆರೆ: ಲೋಕಸಭಾ ಚುನಾವಣೆ ಕಾರ್ಯಕ್ಕೆ ತಾಲ್ಲೂಕಿನಿಂದ ನಿಯೋಜನೆಗೊಂಡಿದ್ದ ನೌಕರರು ಭಾನುವಾರ ಆಯಾ ತಾಲ್ಲೂಕು ಕೇಂದ್ರಗಳಲ್ಲಿ ನಡೆದ ತರಬೇತಿಗೆ ತೆರಳಲು ಬಸ್ ಸೌಕರ್ಯವಿಲ್ಲದೆ ಲಾರಿ ಸೇರಿದಂತೆ ಸಿಕ್ಕ, ಸಿಕ್ಕ ವಾಹನಗಳಲ್ಲಿ ತೆರಳಿದರು.

ತುಮಕೂರು ಜಿಲ್ಲಾಡಳಿತ ಸಾರಿಗೆ ವ್ಯವಸ್ಥೆ ಮಾಡದ ಕಾರಣ ಬೆಳಿಗ್ಗೆ 10ಕ್ಕೆ ಪ್ರಾರಂಭವಾಗುವ ತರಬೇತಿಗೆ ದೂರದ ಪಾವಗಡ, ಮಧುಗಿರಿ, ಶಿರಾ ಸೇರಿದಂತೆ ವಿವಿಧ ತಾಲ್ಲೂಕುಗಳಿಗೆ ಸಮಯಕ್ಕೆ ಸರಿಯಾಗಿ ಹೋಗಲು ಬಸ್ ಇಲ್ಲದೆ ನೌಕರರು ಪರದಾಡಿದರು. ಲಾರಿ, ಟೆಂಪೊ, ಆಟೊ, ಬೈಕ್‌ನಲ್ಲಿ ತೆರಳಿದರು.

ತುರುವೇಕೆರೆ, ಪಾವಗಡ, ಮಧುಗಿರಿ, ಕೊರಟಗೆರೆ, ಕುಣಿಗಲ್, ಚಿಕ್ಕನಾಯಕನಹಳ್ಳಿ, ತುಮಕೂರು ಮತ್ತು ಗುಬ್ಬಿ ತಾಲ್ಲೂಕುಗಳಿಗೆ ಸಾವಿರಾರು ಸಂಖ್ಯೆಯ ನೌಕರರು ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದಾರೆ. ಆದರೆ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳ ತರಬೇತಿಗೆ ತೆರಳಲು ಮಾತ್ರ ಜಿಲ್ಲಾಡಳಿತ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಮಾಡಿತ್ತು.

ಚುನಾವಣೆ ತರಬೇತಿಗೆ ತೆರಳಲು ಬಸ್ ಇಲ್ಲದ ಕಾರಣ ಲಾರಿ ಏರಿದ ಸಿಬ್ಬಂದಿ

'ಕಾಂಗ್ರೆಸ್ ಅಲೆಗೆ ಹೆದರಿ ಜೆಡಿಎಸ್ ಮೈತ್ರಿ'

ರಾಮನಗರ: 'ನುಡಿದಂತೆ ನಡೆಯುತ್ತಾ ಕೆಲಸ ಮಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನನ್ನ ಮುಂದೆ ಗಾಳಿಯಲ್ಲಿ ತೂರಿ ಹೋಗುತ್ತೇವೆ ಎಂಬ ಭಯದಿಂದ ಜೆಡಿಎಸ್‌ನವರು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ತಾಲ್ಲೂಕಿನ ಕೂಟಗಲ್‌ನಲ್ಲಿ ತಮ್ಮ ಸಹೋದರ, ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಶಿವಕುಮಾರ್ ಪರವಾಗಿ ಭಾನುವಾರ ಪ್ರಚಾರ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ನಮ್ಮ ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಮಾಡಿದೆ. ಇನ್ನೂ ಒಂಬತ್ತು ವರ್ಷ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರಲಿದೆ. ಕುಮಾರಸ್ವಾಮಿ ಅವರು ಏನಾದರೂ ಕೆಲಸ ಮಾಡಿದ್ದರೆ, ಇಲ್ಲೇ ಚುನಾವಣೆಗೆ ಸ್ಪರ್ಧಿಸುತ್ತಿದ್ದರು. ಆದರೆ, ಅವರಿಗೆ ವಿಶ್ವಾಸವಿಲ್ಲ. ಹೊಸದಾಗಿ ಜನರನ್ನು ಮರಳು ಮಾಡುವುದಕ್ಕೆ ಮಂಡ್ಯಕ್ಕೆ ಹೋಗಿದ್ದಾರೆ. ದೇವೇಗೌಡರು, ಅನಿತಾ ಕುಮಾರಸ್ವಾಮಿ ಎಲ್ಲರೂ ಇಲ್ಲಿ ಅಧಿಕಾರ ಅನುಭವಿಸಿಏನೂಮಾಡಲಿಲ್ಲ.ಈಗಮನೆ ಅಳಿಯನನ್ನು ಬಿಜೆಪಿಯಿಂದ ನಿಲ್ಲಿಸಿದ್ದಾರೆ. ಅವರದ್ದೇನಿದ್ದರೂ ಸ್ವಾರ್ಥದ ರಾಜಕಾರಣ' ಎಂದು ಟೀಕಿಸಿದರು.

'ಯಾರೇ ಮೈತ್ರಿ ಮಾಡಿಕೊಂಡರೂ, ಟಾರ್ಗೆಟ್ ಮಾಡಿದರೂ ಸುರೇಶ್ ಮೂರು ಲಕ್ಷ ಮತಗಳ ಅಂತರದಿಂದ ಗೆಲ್ಲಲಿದ್ದಾರೆ. ಈಗಾಗಲೇ ಇಂತಹದ್ದನ್ನೆಲ್ಲಾ ಎದುರಿಸಿದ್ದೇವೆ. ಈಗ ಚಿಹ್ನೆ ಬದಲಾಗಿದೆಯಷ್ಟೆ. ಬಿಜೆಪಿ–ಜೆಡಿಎಸ್ ನಡುವೆ ಹೆಸರಿಗಷ್ಟೇ ಮೈತ್ರಿಯಾಗಿದ್ದು ಕಾರ್ಯಕರ್ತರಲ್ಲಿ ಹೊಂದಾಣಿಕೆ ಆಗಿಲ್ಲ. ಈ ವಿಷಯ ಬಿಜೆಪಿಯ ಸಿ.ಪಿ. ಯೋಗೇಶ್ವರ್‌ಗೂ ಗೊತ್ತು. ಅದಕ್ಕೆ ಆ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್‌ಗೆ ಬರುತ್ತಿದ್ದಾರೆ. ಅವರಿಗೆ ನಮ್ಮ ಮನೆಯ ಬಾಗಿಲು ಸದಾ ತೆರೆದಿರುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಿಜೆಪಿ–ಜೆಡಿಎಸ್ ತಿರಸ್ಕರಿಸಿ ಸೌಹಾರ್ದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಹಾರ್ದ ಸಂಸ್ಕೃತಿ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿರುವ ಬಿಜೆಪಿ–ಜೆಡಿಎಸ್ ಮೈತ್ರಿಕೂಟವನ್ನು ಲೋಕಸಭಾ ಚುನಾವಣೆಯಲ್ಲಿ ತಿರಸ್ಕರಿಸಬೇಕು ಎಂದು ಸೌಹಾರ್ದ ಕರ್ನಾಟಕ ಸಂಘಟನೆಯು ಮತದಾರರಿಗೆ ಕೋರಿದೆ.

ಸೌಹಾರ್ದ ಕರ್ನಾಟಕ ಸಂಘಟನೆಯಲ್ಲಿ ಗುರುತಿಸಿಕೊಂಡಿರುವ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಜಿ.ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ದೇವನೂರ ಮಹಾದೇವ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸೇರಿದಂತೆ ಹಲವು ಬರಹಗಾರರು, ಹೋರಾಟಗಾರರು, ದಲಿತ, ರೈತ, ಕಾರ್ಮಿಕ, ಮಹಿಳಾ ಸಂಘಟನೆಗಳ ಮುಖಂಡರು ಜಂಟಿ ಸಹಿಯೊಂದಿಗೆ ಭಾನುವಾರ ಜಂಟಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಕರ್ನಾಟಕದಲ್ಲಿ ದೇವರು, ಧರ್ಮದ ಹೆಸರಿನಲ್ಲಿ ಜನರ ಭಾವನೆಗಳನ್ನು ಕೆರಳಿಸುವ ರಾಜಕೀಯವನ್ನು ಬೆಂಬಲಿಸಬಾರದು. ಊಟ, ಉಡುಪಿನ ವಿಚಾರದಲ್ಲೂ ವಿವಾದ ಸೃಷ್ಟಿಸುವವರಿಗೆ ಅವಕಾಶ ನೀಡಬಾರದು. ಭ್ರಷ್ಟ, ಕಾರ್ಪೊರೇಟ್– ಕೋಮುವಾದಿ ಮತ್ತು ಜಾತಿವಾದಿ ಕೂಟವನ್ನು ಈ ಚುನಾವಣೆಯಲ್ಲಿ ಸೋಲಿಸಬೇಕು' ಎಂದು ಮನವಿ ಮಾಡಿದ್ದಾರೆ.

ಸಾಮರಸ್ಯ, ಸಹಬಾಳ್ವೆ, ಜಾತ್ಯತೀತ ತತ್ವ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವ ದೃಢವಾದ ನಿರ್ಧಾರದೊಂದಿಗೆ ಮತ ಚಲಾಯಿಸಬೇಕು ಎಂದಿದ್ದಾರೆ.

ರಾಜ್ಯದಲ್ಲಿ 1,832 ವಿಶೇಷ ಮತಗಟ್ಟೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 1,832 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಎರಡು ಹಂತದ ಚುನಾವಣೆಗೆ ಒಟ್ಟು 58,834 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮತದಾರರನ್ನು ಆಕರ್ಷಿಸಲು ವಿವಿಧ ವಿಷಯ ಆಧಾರಿತವಾಗಿ 1,832 ವಿಶೇಷ ಮತಗಟ್ಟೆಗಳಿರಲಿವೆ ಎಂದು ಮಾಹಿತಿ ನೀಡಿದರು.

ಮಹಿಳಾ ಮತದಾರರನ್ನು ಉತ್ತೇಜಿಸಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಐದರಂತೆ ಒಟ್ಟು 1,120 ಸಖಿ ಮತಗಟ್ಟೆ ಸ್ಥಾಪಿಸಲಾಗುವುದು. ಭದ್ರತಾ ಸಿಬ್ಬಂದಿ, 'ಡಿ' ದರ್ಜೆ ಸಿಬ್ಬಂದಿ ಎಲ್ಲ ಮಹಿಳೆಯರೇ ಇರುತ್ತಾರೆ ಎಂದರು.

ಅಂತೆಯೇ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು 'ಅಂಗವಿಕಲರ ವಿಶೇಷ ಮತಗಟ್ಟೆ' ಸ್ಥಾಪಿಸಲಿದ್ದು, ಅಲ್ಲಿಗೆ ಅಂಗವಿಕಲ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜಿಸಲಾಗುವುದು. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಯುವ ಮತಗಟ್ಟೆ ತೆರೆದು ಅಲ್ಲಿಗೆ ಯುವ ಅಧಿಕಾರಿಗಳು, ಸಿಬ್ಬಂದಿ ನಿಯೋಜಿಸಲಾಗುವುದು ಎಂದು ಹೇಳಿದರು.

ಎಲ್ಲ ಮತದಾರರಲ್ಲಿ ಚುನಾವಣೆ ಮತ್ತು ಮತದಾನದ ಕುರಿತು ಅರಿವು ಮೂಡಿಸಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಧ್ಯೇಯ ಆಧಾರಿತ ಮತಗಟ್ಟೆ ತೆರೆಯಲಾಗುವುದು.

ಪರಿಶಿಷ್ಟ ಪಂಗಡಗಳ ಜನರನ್ನು ಮತಗಟ್ಟೆಗಳತ್ತ ಸೆಳೆಯಲು ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬುಡಕಟ್ಟು ಜನರ ಸಾಂಸ್ಕೃತಿಕ ವೈವಿಧ್ಯ ಬಿಂಬಿಸುವ 40 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು ಎಂದು ಮೀನಾ ತಿಳಿಸಿದ್ದಾರೆ.

ಅಕ್ರಮ ತಡೆ: ವಶದಲ್ಲಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಅಕ್ರಮ ತಡೆ ಕಾರ್ಯಾಚರಣೆಯಲ್ಲಿ ನಗದು, ಮದ್ಯ, ಚಿನ್ನಾಭರಣ, ಉಚಿತ ಉಡುಗೊರೆ ಮತ್ತು ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳುವುದರಲ್ಲಿ ರಾಜ್ಯದ ಚುನಾವಣಾಧಿಕಾರಿಗಳು ದಾಖಲೆ ಬರೆದಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಒಟ್ಟು ₹88 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. 2023 ರ ವಿಧಾನಸಭಾ ಚುನಾವಣೆಯಲ್ಲಿ ₹384 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳುವ ಮೂಲಕ ದಾಖಲೆ ಬರೆಯಲಾಗಿತ್ತು. ಈಗ ಭಾನುವಾರದವರೆಗೆ ₹ 403.40 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದು, ಹೊಸ ದಾಖಲೆ ಸೃಷ್ಟಿಯಾಗಿದೆ.

ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅಭಿಪ್ರಾಯ

'ಮೋದಿ ಎಂಬ ಔಷಧದ 'ಅವಧಿ' ಮುಗಿದಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೋದಿ ಎಂಬ ಔಷಧದ ಅವಧಿ (ಎಕ್ಸ್‌ಪೈರಿ ಡೇಟ್) ಮುಗಿದಿದೆ. ಹೀಗಾಗಿ, ಲೋಕಸಭೆ ಚುನಾವಣೆಯಲ್ಲಿ ಈ ಬಾರಿ ಬಿಜೆಪಿ ಹೀನಾಯ ಸೋಲು ಕಾಣಲಿದೆ' ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರಕ್ಕೆ ರಾಜ್ಯಕ್ಕೆ ಬಂದಿರುವ ಅವರು ಮಾಧ್ಯಮ ಸಂಸ್ಥೆಗಳ ಪ್ರತಿನಿಧಿಗಳ ಜೊತೆ ಅನೌಪಚಾರಿಕವಾಗಿ ಭಾನುವಾರ ಮಾತನಾಡಿದರು.

'ಈ ಬಾರಿಯ ಚುನಾವಣೆಯಲ್ಲಿ ಮತದಾರರ ಮುಂದೆ ಹಲವು ವಿಚಾರಗಳಿವೆ. ಆದರೆ, ಇಡೀ ದೇಶದ ಜನತೆ ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಿ ಮುಂದುವರೆಯಬೇಕೊ, ಬೇಡವೊ ಎಂಬ ಪ್ರಶ್ನೆಯನ್ನು ಮುಂದಿಟ್ಟು ಮತ ಚಲಾಯಿಸಲಿದ್ದಾರೆ' ಎಂದರು.

'ವ್ಯವಸ್ಥೆಗಿಂತಲೂ ದೊಡ್ಡವನು ಎಂದು ಭಾವಿಸಿ ಯಾವ ವ್ಯಕ್ತಿ ತಾನು ಸರ್ವಾಧಿಕಾರ ಧೋರಣೆ ತೋರಿಸುತ್ತಾನೆಯೊ ಆಗ ಪ್ರಕೃತಿಯೇ ಆ ವ್ಯವಸ್ಥೆಯನ್ನು ಮರುಸ್ಥಾಪಿಸಲು ಮುಂದಾಗುತ್ತದೆ. ಇದು ಪ್ರಕೃತಿಯ ನಿಯಮ. ಪ್ರತಿಯೊಬ್ಬರ ಖಾಸಗಿ ಬದುಕಿನ ಮೇಲೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ದಾಳಿ ಮಾಡುತ್ತಿದೆ. ವ್ಯಾಪಾರಿಯನ್ನು ಕಳ್ಳನಂತೆ, ರಾಜಕಾರಣಿಯನ್ನು ದರೋಡೆಕೋರನಂತೆ ನೋಡುತ್ತಿದೆ. ರೈತರು ಮತ್ತು ಮಾಧ್ಯಮಗಳನ್ನು ಶೋಷಿಸುತ್ತಿದೆ' ಎಂದು ಹೇಳಿದರು.

'ವಿರೋಧ ಪಕ್ಷಗಳಲ್ಲಿ ಒಗ್ಗಟ್ಟಿಲ್ಲ, ನಾಯಕತ್ವವೂ ಇಲ್ಲ. ನಾವೆಲ್ಲರೂ ಕೆಲಸ ಮಾಡಿಲ್ಲ ಎಂಬಂತಹ ಎಲ್ಲ ವಿಚಾರಗಳು ಪ್ರಕೃತಿ ನಿಯಮದ ಮುಂದೆ ಮರೆಗೆ ಸರಿಯಲಿವೆ. ಮೋದಿ ಭಾಷಣಕ್ಕೆ ಈಗ ಜನರು ಮರುಳಾಗುತ್ತಿಲ್ಲ. ಭಾಷಣ ಆಲಿಸಲು ಮುಂದಾಗುತ್ತಿಲ್ಲ. ಮೋದಿ ಜನಮನ್ನಣೆ ಕಳೆದುಕೊಂಡಿದ್ದಾರೆ ಎನ್ನುವುದಕ್ಕೆ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾವೇಶದಲ್ಲಿದ್ದ ಖಾಲಿ ಕುರ್ಚಿಗಳೇ ಸಾಕ್ಷಿ' ಎಂದರು.

'ಈ ದೇಶದಲ್ಲಿ ಸತತವಾಗಿ ಎರಡು ಬಾರಿ ಅಧಿಕಾರ ಹಿಡಿದವರು ಮತ್ತೆ ಅಧಿಕಾರಕ್ಕೆ ಬರುವುದಿಲ್ಲ. ವಾಜಪೇಯಿ ಮತ್ತು ಮನಮೋಹನ್ ಸಿಂಗ್ ಅವರು ಎರಡು ಬಾರಿ ಪ್ರಧಾನಿಯಾಗಿದ್ದರು. ಬಳಿಕ ಅಧಿಕಾರ ಕಳೆದುಕೊಂಡರು. ಅದೇ ಸ್ಥಿತಿ ಮೋದಿಗೂ ಬರಲಿದೆ' ಎಂದರು.

'ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ 220 ಸ್ಥಾನ ಪಡೆಯುವುದೇ ಹೆಚ್ಚು' ಎಂದ ರೆಡ್ಡಿ, 'ಲಕ್ಷದ್ವೀಪ ಸೇರಿದಂತೆ ದಕ್ಷಿಣದಲ್ಲಿ ಒಟ್ಟು 131 ಸ್ಥಾನಗಳಿವೆ. ಈ ಪೈಕಿ, ಕರ್ನಾಟಕದಲ್ಲಿ 13 ರಿಂದ 14 ಸೀಟುಗಳನ್ನು ಬಿಜೆಪಿ ಗೆಲ್ಲಬಹುದು. ತೆಲಂಗಾಣದಲ್ಲಿ ಮೂರರಿಂದ ನಾಲ್ಕು ಸೀಟು ಆ ಪಕ್ಷಕ್ಕೆ ಬಂದರೆ ಹೆಚ್ಚು. ಉಳಿದ ಕಡೆ ಬಿಜೆಪಿಗೆ ಅಸ್ತಿತ್ವವೇ ಇಲ್ಲ. ಅಂದರೆ, ಬಿಜೆಪಿ 20 ಸ್ಥಾನಗಳನ್ನು ಗೆಲ್ಲಬಹುದು' ಎಂದರು.

'ಬಿಜೆಪಿಯ ಪ್ರತಿಯೊಬ್ಬ ನಾಯಕ ಹಾಗೂ ಅಭ್ಯರ್ಥಿ ತಾನು ಗೆಲ್ಲಬೇಕು, ಪಕ್ಕದ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸೋಲಬೇಕು ಎಂದು ಕೆಲಸ ಮಾಡುತ್ತಿದ್ದಾನೆ. ಬಿಜೆಪಿಯ ಈ ಒಳಜಗಳ ಮೋದಿ ಅವರ ಸೋಲಿಗೆ ಕಾರಣ ಆಗಲಿದೆ' ಎಂದು ವಿಶ್ಲೇಷಿಸಿದರು.

'ಅಧಿಕಾರ ಹಂಚಿಕೆ: ದಕ್ಷಿಣದ ರಾಜ್ಯಗಳಿಗೆ ಅನ್ಯಾಯ'

'ತೆರಿಗೆ ಹಂಚಿಕೆ ಜೊತೆಗೆ ಅಧಿಕಾರದಲ್ಲಿ ಪಾಲು ನೀಡುವ ವಿಷಯದಲ್ಲೂ ದಕ್ಷಿಣ ಭಾರತದ ಬಗ್ಗೆ ಮೋದಿ ತಾರತಮ್ಯ ಧೋರಣೆ ಅನುಸರಿಸುತ್ತಿದ್ದಾರೆ' ಎಂದು ರೇವಂತ್ ರೆಡ್ಡಿ ಟೀಕಿಸಿದರು.

'ಕರ್ನಾಟಕ, ತೆಲಂಗಾಣ ರಾಸೇರಿದಂತೆ ದಕ್ಷಿಣ ಭಾರತದಲ್ಲಿ ಬಂಡವಾಳ ಹೂಡಿಕೆಗೆ ಮುಂದಾಗುವ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರಧಾನಿ ಕಚೇರಿಯಿಂದಲೇ ದೂರವಾಣಿ ಕರೆ ಮಾಡಿ ಗುಜರಾತ್‌ನಲ್ಲೇ ಹೂಡಿಕೆ ಮಾಡಲು ಒತ್ತಡ ಹಾಕಲಾಗಿತ್ತು' ಎಂದೂ ದೂರಿದರು.

'ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಪ್ರಧಾನಿ ಉತ್ತರ ಭಾರತೀಯವರಾದರೆ, ರಾಷ್ಟ್ರಪತಿ ಹುದ್ದೆ ದಕ್ಷಿಣ ಭಾರತೀಯರಿಗೆ ಸಿಗುತ್ತಿತ್ತು. ರಕ್ಷಣೆ, ವಿದೇಶಾಂಗ ವ್ಯವಹಾರ, ಹಣಕಾಸು ಸೇರಿ 5–6 ಪ್ರಮುಖ ಖಾತೆಗಳಲ್ಲಿ ನಾಲ್ಕು ಉತ್ತರ ಭಾರತೀಯರಿಗೆ, ಮೂರು ದಕ್ಷಿಣ ಭಾರತೀಯರಿಗೆ ಸಿಗುತ್ತಿತ್ತು. ಸ್ಪೀಕರ್ ಹುದ್ದೆ ಉತ್ತರ ಭಾರತೀಯರಿಗಾದರೇ ಉಪ ಸಭಾಧ್ಯಕ್ಷ ಹುದ್ದೆ ದಕ್ಷಿಣದವರಿಗೆ ಇರುತ್ತಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ದಕ್ಷಿಣ ಭಾರತೀಯರಿಗೆ ಸಿಕ್ಕಿರುವ ಅಧಿಕಾರದ ಪಾಲು ನೋಡಿದರೆ ಬಿಜೆಪಿ ಮತ್ತು ಪ್ರಧಾನಿ ಮೋದಿ ಅವರು ದಕ್ಷಿಣಕ್ಕೆ ಮಾಡಿರುವ ಅನ್ಯಾಯ ಗೊತ್ತಾಗುತ್ತದೆ' ಎಂದರು.

ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಸೋಲಿಗೆ ಆ ಪಕ್ಷದ ನಾಯಕರ ನಡುವಿನ ಭಿನ್ನಮತವೇ ಮುಖ್ಯ ಕಾರಣವಾಗಲಿದೆ
ಎ. ರೇವಂತ್ ರೆಡ್ಡಿ
ಮುಖ್ಯಮಂತ್ರಿ, ತೆಲಂಗಾಣ

ಸೋಮವಾರ, ಏಪ್ರಿಲ್ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 112 | ಪುಟ 16
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ
ನವದೆಹಲಿಯಲ್ಲಿ ಭಾನುವಾರ 'ರುಸ್ಲಾನ್' ಸಿನಿಮಾ ಪ್ರಚಾರ ಸಂದರ್ಭದಲ್ಲಿ ನಟಿ ಸುಶ್ರಿ ಶ್ರೇಯಾ ಮಿಶ್ರಾ ಕಂಡಿದ್ದು ಹೀಗೆ...

ಆಳ-ಅಗಲ
'ಭಾರತ ಉಪಖಂಡದಲ್ಲಿತ್ತು ವಿಶ್ವದ ಈವರೆಗಿನ ದೈತ್ಯ ಹಾವು'

ಕಚ್ಚಾ ತೈಲ, ಎಲ್‌ಎನ್‌ಜಿ ದರ ಏರಿಕೆ? 5

ಮೋದಿಗೆ 'ಚೊಂಬು' 'ಇಂಡಿಯಾ'ಕ್ಕೆ ಬೆಂಬಲ 10

ಭಕ್ತರ ಭಾವನೆಗಳಿಗೆ ಧಕ್ಕೆ ಎಂಬ ದೂರು-ಆಕ್ಷೇಪಗಳೇನೂ ಇಲ್ಲ
ಕೇರಳದ ದೇಗುಲದಲ್ಲಿ ಕೋಳಿ 'ಪ್ರಸಾದ' 4

'ಮೋದಿ ದೇಶಕ್ಕೆ ಹಿಡಿದ ಶನಿ'

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ)/ ಬೆಂಗಳೂರು: 'ಮೋದಿ ಈ ದೇಶಕ್ಕೆ ಹಿಡಿದಿರುವ ಶನಿ. ಜೂನ್ 4ಕ್ಕೆ ಶನಿ ಬಿಡಲಿದೆ' ಎಂದು ವಿಧಾನಸಭೆ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಕೆ.ಆರ್.ರಮೇಶ್ ಕುಮಾರ್ ಹೇಳಿದ್ದಾರೆ.

'ದೇವರಲ್ಲಿ ನಂಬಿಕೆ ಇಟ್ಟುಕೊಂಡು ಜೂನ್ 4 ತಾರೀಖು ಕಾಯುತ್ತಿದ್ದೇವೆ. ಈ ದೇಶಕ್ಕೆ ಹಿಡಿದ ಶನಿ ಬಿಡುಗಡೆಯಾಗಲಿ ನಮ್ಮಪ್ಪ ಎಂದು ಕಾಯುತ್ತಿದ್ದೇವೆ' ಎಂದು ತಾಲ್ಲೂಕಿನ ರೋಜರ್‌ನಹಳ್ಳಿ ಗ್ರಾಮದಲ್ಲಿ ಶನಿವಾರ ಸಂಜೆ ಕಾಂಗ್ರೆಸ್ ಪಕ್ಷದಿಂದ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಲ್ಲಿ ಹೇಳಿದರು.

'ಒಳ್ಳೆಯವರಿಗೆ ಒಳ್ಳೆಯದು ಮಾಡುವ ಮತ್ತು ಕೆಟ್ಟವರನ್ನು ಶಿಕ್ಷಿಸುವವನೇ ಶನಿ ದೇವ. ಮೋದಿಯವರು ಕಾಂಗ್ರೆಸ್‌ಗೆ ಶನಿಯಾಗಿ ಕಾಡಲಿದ್ದಾರೆ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಂಗಳೂರಿನಲ್ಲಿ ತಿರುಗೇಟು ನೀಡಿದ್ದಾರೆ.

4ನೇ ಪುಟ ನೋಡಿ

ವಸತಿಶಾಲೆಗಳಲ್ಲಿಯೂ ಬಾಲಗರ್ಭಿಣಿಯರು ಪತ್ತೆ: ತಡೆಗೆ ಸಿ.ಎಂ ಸೂಚನೆ

ಬಾಲೆಯರ ರಕ್ಷಣೆಗೆ ಕಾರ್ಯಪಡೆ

● ಎಂ.ಎನ್.ಯೋಗೇಶ್

ಮಂಡ್ಯ: 'ರಾಜ್ಯದ ವಸತಿ ಶಾಲೆಗಳಲ್ಲಿಯೂ ಬಾಲ ಗರ್ಭಿಣಿಯರು ಪತ್ತೆಯಾಗುತ್ತಿರುವುದು ಆತಂಕಕಾಗಿ ಬೆಳವಣಿಗೆಯಾಗಿದ್ದು, ಹೆಣ್ಣು ಮಕ್ಕಳ ರಕ್ಷಣೆಗಾಗಿ ವಿವಿಧ ಇಲಾಖೆ ಅಧಿಕಾರಿಗಳನ್ನು ಒಳಗೊಂಡ 'ಕೇಂದ್ರ ಕಾರ್ಯಪಡೆ' ರಚನೆ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

ಈಚೆಗೆ ತುಮಕೂರು ಜಿಲ್ಲೆಯ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಬಾಲ ಗರ್ಭಿಣಿ ಪತ್ತೆಯಾದ ಪ್ರಕರಣವನ್ನು ಮುಖ್ಯಮಂತ್ರಿ ಬಹಳ ಗಂಭೀರವಾಗಿ ಪರಿಗಣಿಸಿದ್ದು ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿದ್ದಾರೆ.

ಜೊತೆಗೆ ಕೇಂದ್ರ ಸರ್ಕಾರದ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಪೋರ್ಟಲ್ ದಾಖಲಾತಿಯಂತೆ ರಾಜ್ಯದಲ್ಲಿ 2023 ಜನವರಿಯಿಂದ ನವೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ 28,657 ಬಾಲಗರ್ಭಿಣಿಯರು ಪತ್ತೆಯಾಗಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.

ಬಾಲ್ಯವಿವಾಹ, ಬಡತನ, ಸಾಂಸ್ಕೃತಿಕ ಭಿನ್ನತೆ, ವೈಯಕ್ತಿಕ ವರ್ತನೆ, ದುಶ್ಚಟ, ಲೈಂಗಿಕ ದೌರ್ಜನ್ಯವೇ ಬಾಲ ಗರ್ಭಿಣಿಯರು ಹೆಚ್ಚಾಗಲು ಕಾರಣ. ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಸಮರೋಪಾದಿಯಲ್ಲಿ ಪರಿಹಾರ ಕಂಡುಕೊಳ್ಳಲು ಕೇಂದ್ರ ಕಾರ್ಯಪಡೆಯ ಸದಸ್ಯರು ಕಾರ್ಯೋನ್ಮುಖರಾಗಬೇಕು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ. ವಸತಿ ಶಾಲೆಗಳಲ್ಲಿ, ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಬಾಲಗರ್ಭಿಣಿ ಸಮಸ್ಯೆ ಮರುಕಳಿಸಬಾರದು ಎಂದು ನಿರ್ದೇಶಿಸಿದ್ದಾರೆ.

4ನೇ ಪುಟ ನೋಡಿ

ಗರ್ಭಪಾತ ಔಷಧಿ ಮಾರಾಟ

ಗರ್ಭಪಾತಕ್ಕೆ ಅವಶ್ಯವಿರುವ 'ಶೆಡ್ಯೂಲ್-ಎಚ್' (ವರ್ಗದ) ಔಷಧಿಗಳು ಅನಧಿಕೃತವಾಗಿ ಮಾರಾಟವಾಗುತ್ತಿರುವುದು ಕೂಡ ಬಾಲಗರ್ಭಿಣಿ ಸಮಸ್ಯೆ ಹೆಚ್ಚಳಕ್ಕೆ ಕಾರಣ ಎಂಬ ಅಂಶವೂ ಮುಖ್ಯಮಂತ್ರಿ ಪತ್ರದಲ್ಲಿದೆ.

ವೈದ್ಯರ ಸಲಹಾ ಚೀಟಿ ಇಲ್ಲದೇ ಗರ್ಭಪಾತ ಔಷಧಿ ಮಾರುವ ಔಷಧಿ ಅಂಗಡಿ ಮಾಲೀಕರು ಹಾಗೂ ವೈದ್ಯರ ವಿರುದ್ಧ ಕ್ರಮ ಜರುಗಿಸಬೇಕು. ಈ ಕುರಿತು ಗ್ರಾಮ ಪಂಚಾಯಿತಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಕಾರ್ಯಪಡೆ ಮೂಲಕ ಜಾಗೃತಿ ಕಾರ್ಯಕ್ರಮ ನಡೆಸಬೇಕು ಎಂದೂ ಸೂಚಿಸಲಾಗಿದೆ.

ಬಾಲ ಗರ್ಭಿಣಿ ವಿದ್ಯಾರ್ಥಿನಿಯಾಗಿರಲಿ, ಯಾರೇ ಆಗಿರಲಿ ಅವರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುತ್ತೇವೆ. ಜೊತೆಗೆ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಕಾರ್ಯಪಡೆ ರಚಿಸಲಾಗುವುದು

ಡಾ.ಜಿ.ಎನ್.ಶ್ರೀನಿವಾಸ್, ಯೋಜನಾ ನಿರ್ದೇಶಕರು, ಆರ್‌ಸಿಎಚ್

ಸೂಚಿಸಿದ ಕ್ರಮಗಳೇನು?

- ವಿದ್ಯಾರ್ಥಿನಿಯರು ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಇರಬೇಕು, ಪ್ರತಿ ತಿಂಗಳು ಅವರ ಆರೋಗ್ಯ ತಪಾಸಣೆ ನಡೆಸಬೇಕು
- ದೀರ್ಘಾವಧಿ ರಜೆ ಪಡೆದ ವಿದ್ಯಾರ್ಥಿನಿ ಮತ್ತೆ ವಸತಿನಿಲಯಕ್ಕೆ ಬಂದಾಗ ಆಕೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು. ಅವರ ದೈಹಿಕ ಬೆಳವಣಿಗೆಗಳ ಕುರಿತು ಜಾಗೃತಿ ಮೂಡಿಸಬೇಕು
- ಶಾಲೆಗೆ ಗೈರು ಹಾಜರಾದ ವಿದ್ಯಾರ್ಥಿನಿಯರ ಮಾಹಿತಿ ಪರಿಶೀಲಿಸಬೇಕು. ಈ ಎಲ್ಲಾ ವಿಷಯಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಮೇಲ್ವಿಚಾರಣೆ ಮಾಡಬೇಕು ಎಂದು ಸೂಚಿಸಲಾಗಿದೆ

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಚೊಂಬು– ಚಿಪ್ಪು' ಜಟಾಪಟಿ ತೀವ್ರ

ಬಿಜೆಪಿ ವಿರುದ್ಧ ಕಾಂಗ್ರೆಸ್ ಪ್ರಯೋಗಿಸಿದ 'ಚೊಂಬು' ಅಸ್ತ್ರ ರಾಜಕೀಯ ವಲಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಕಾಂಗ್ರೆಸ್ ವಿರುದ್ಧ ಪ್ರತ್ಯಸ್ತ್ರವಾಗಿ ಬಿಜೆಪಿ 'ತೆಂಗಿನಕಾಯಿ ಚಿಪ್ಪು' ಅನ್ನು ಮುನ್ನೆಲೆಗೆ ತಂದಿದೆ. ರಾಜ್ಯದ ವಿವಿಧೆಡೆ ಚೊಂಬು– ಚಿಪ್ಪು ಕುರಿತು ಕಾಂಗ್ರೆಸ್, ಬಿಜೆಪಿ–ಜೆಡಿಎಸ್ ಮೈತ್ರಿಕೂಟ ವಾಕ್ಸಮರ ನಡೆಸಿವೆ. ಸೋಮವಾರ (ಏ.22) ರಾಜ್ಯವ್ಯಾಪಿ ಚಿಪ್ಪು ಪ್ರದರ್ಶಿಸಿ ಪ್ರತಿಭಟಿಸಲು ಬಿಜೆಪಿ ನಿರ್ಧರಿಸಿದೆ

'ಅಕ್ಷಯಪಾತ್ರೆ ಅಲ್ಲ, ಸಾಲದ ಪಾತ್ರೆ'

ಕೋಲಾರ/ಬಂಗಾರಪೇಟೆ: 'ರಾಜ್ಯಕ್ಕೆ ಮೋದಿ ಕೊಟ್ಟ ಖಾಲಿ ಚೊಂಬನ್ನು ದೇವೇಗೌಡರು ಅಕ್ಷಯಪಾತ್ರೆ ಎಂದು ಬಣ್ಣಿಸಿದ್ದಾರೆ. ಖಾಲಿ ಚೊಂಬು ಗೌಡರ ಕಣ್ಣಿಗೆ ಅಕ್ಷಯಪಾತ್ರೆಯಂತೆ ಕಂಡಿದೆ. ಅದು ಅಕ್ಷಯಪಾತ್ರೆ ಅಲ್ಲ, ಸಾಲದ ಪಾತ್ರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದರು.

ಬಂಗಾರಪೇಟೆಯಲ್ಲಿ ಭಾನುವಾರ ಕೋಲಾರ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ.ಗೌತಮ್ ಪರ ರೋಡ್ ಶೋನಲ್ಲಿ ಅವರು ಮಾತನಾಡಿದರು.

'ಮೋದಿ ಶ್ರೀಮಂತರ ಪಾಲಿನ ಅಕ್ಷಯಪಾತ್ರೆ. ನಾಡಿನ ಬಡಜನರ ಪಾಲಿಗೆ ಖಾಲಿ ಚೊಂಬು ಅಷ್ಟೇ' ಎಂದರು.

4ನೇ ಪುಟ ನೋಡಿ

ಇಂದು ಬಿಜೆಪಿಯಿಂದ 'ಚಿಪ್ಪು' ಚಳವಳಿ

ದಾವಣಗೆರೆ: ಬಿಜೆಪಿ ವಿರುದ್ಧ ಕಾಂಗ್ರೆಸ್ ನೀಡಿರುವ 'ಚೊಂಬು' ಜಾಹೀರಾತಿಗೆ ಕಿಡಿಕಾರಿರುವ ಬಿಜೆಪಿ, ಏಪ್ರಿಲ್ 22ರಂದು ರಾಜ್ಯದಾದ್ಯಂತ 'ಚಿಪ್ಪು ಚಳವಳಿ' ಹಮ್ಮಿಕೊಳ್ಳಲು ನಿರ್ಧರಿಸಿದೆ.

ಭಾನುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತೆಂಗಿನಕಾಯಿಯ 'ಚಿಪ್ಪು' ಪ್ರದರ್ಶಿಸಿದ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಅವರು, 'ಕಾಂಗ್ರೆಸ್ ಪಕ್ಷವು ನಾಡಿನ ಜನತೆಗೆ ಚಿಪ್ಪು ನೀಡಿದೆ' ಎಂದರು. ರಾಜ್ಯದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾದರೂ ಕ್ರಮ ಕೈಗೊಂಡಿಲ್ಲ. ರೈತರಿಗೆ ಬರ ಪರಿಹಾರ ನೀಡಿಲ್ಲ' ಎಂದರು.

4ನೇ ಪುಟ ನೋಡಿ



‘ಉಚಿತ ಕೊಡುಗೆ: ಒಮ್ಮತಕ್ಕಾಗಿ ಕೇಂದ್ರ ಶ್ವೇತಪತ್ರ ಹೊರಡಿಸಲಿ’

ಹೈದರಾಬಾದ್ (ಪಿಟಿಐ): ಉಚಿತ ಕೊಡುಗೆಗಳ ವಿಚಾರದಲ್ಲಿ ರಾಜಕೀಯ ಪಕ್ಷಗಳ ನಡುವೆ ಒಮ್ಮತ ಮೂಡಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ‘ಶ್ವೇತಪತ್ರ’ ಹೊರಡಿಸಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಜಿ ಗವರ್ನರ್ ಡಿ. ಸುಬ್ಬರಾವ್ ಹೇಳಿದ್ದಾರೆ.


ಡಿ.ಸುಬ್ಬರಾವ್

ಈ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳಿಗೆ ಹೇಗೆ ನಿರ್ಬಂಧ ಹೇರಬಹುದು ಎಂಬುದರ ಕುರಿತು ಕೂಲಂಕಷ ಚರ್ಚೆ ಆಗಬೇಕು. ಉಚಿತ ಕೊಡುಗೆಗಳ ಯೋಜನೆಗೆ ತಗಲುವ ಖರ್ಚು, ವೆಚ್ಚ ಮತ್ತು ಅದರ ಪ್ರಯೋಜನಗಳ ಕುರಿತು ಸಾರ್ವಜನಿಕರಿಗೆ ಹೆಚ್ಚಿನ ಅರಿವು ಮೂಡಿಸಬೇಕಿದೆ. ಅಲ್ಲದೆ ಈ ಕುರಿತು ಜನರಿಗೆ ಶಿಕ್ಷಣ ನೀಡುವ ಜವಾಬ್ದಾರಿಯೂ ಸರ್ಕಾರದ್ದಾಗಿದೆ ಎಂದು ಅವರು ತಿಳಿಸಿದ್ದಾರೆ.

ಇದು ಅಂತಿಮವಾಗಿ ರಾಜಕೀಯ ವಿಷಯ. ಹೀಗಾಗಿ ಈ ಬಗ್ಗೆ ರಾಜಕೀಯವಾಗಿ ಒಮ್ಮತ ಇರಬೇಕು. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಮತ್ತು ಪ್ರಧಾನಿ ಅವರೇ ನಾಯಕತ್ವ ವಹಿಸಿಕೊಳ್ಳುವುದು ಸೂಕ್ತ. ಆದ್ದರಿಂದಲೇ ಅವರು ಈ ಬಗ್ಗೆ ಶ್ವೇತಪತ್ರ ಹೊರಡಿಸಿ, ಒಮ್ಮತ ಸೃಷ್ಟಿಸಲು ಪ್ರಯತ್ನಿಸಬೇಕು ಎಂದು ಹೇಳಿದ್ದಾರೆ.

ಉಚಿತ ಕೊಡುಗೆಗಳ ಸಾಧಕ–ಬಾಧಕಗಳ ಕುರಿತು ಜನರಿಗೆ ಶಿಕ್ಷಣ ನೀಡಬೇಕು. ಅದನ್ನು ಹೇಗೆ ಜಾರಿಗೊಳಿಸಬಹುದು ಮತ್ತು ಹೇಗೆ ನಿಗಾ ಇಡಬಹುದು ಎಂಬುದು ಜನರಿಗೆ ಗೊತ್ತಿರಬೇಕು ಎಂದು ಅವರು ಪಿಟಿಐ ಜತೆಗಿನ ಸಂವಾದದಲ್ಲಿ ತಿಳಿಸಿದ್ದಾರೆ.

ಭಾರತದಂತಹ ಬಡ ದೇಶದಲ್ಲಿ ಅತ್ಯಂತ ದುರ್ಬಲ ವರ್ಗಗಳಿಗೆ ಸುರಕ್ಷತಾ ಸಂರಕ್ಷಣೆ ಒದಗಿಸುವುದು ಸರ್ಕಾರದ ಜವಾಬ್ದಾರಿ. ಇವುಗಳನ್ನು ಎಷ್ಟು ವರ್ಷ ವಿಸ್ತರಿಸಬಹುದು ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

‘ಈ ಸಂಬಂಧ ಒದಗಿಸಲಾದ ಹಣವು ಸದ್ಬಳಕೆ ಆಗಿದೆಯೇ ಅಥವಾ ಯೋಜನೆಯನ್ನು ಇನ್ನೂ ಉತ್ತಮಪಡಿಸಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಬೇಕು. ಅಲ್ಲದೆ ಈ ವಿಷಯದಲ್ಲಿ ರಾಜಕೀಯ ಪಕ್ಷಗಳ ಮೇಲೆ ಹೇಗೆ ಸ್ವಲ್ಪ ಮಟ್ಟಿಗೆ ನಿರ್ಬಂಧ ವಿಧಿಸಬಹುದು ಎಂಬುದರ ಕುರಿತು ಚರ್ಚೆಯಾಗಬೇಕಿದೆ’ ಎಂದಿದ್ದಾರೆ.

ಕೆಲ ರಾಜ್ಯಗಳು ಹಣಕಾಸಿನ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆಯ (ಎಫ್‌ಆರ್‌ಬಿಎಂ) ಮಿತಿಗಳನ್ನು ದಾಟಿವೆ ಎಂದ ಅವರು, ‘ರಾಜ್ಯಗಳು ಮತ್ತು ಕೇಂದ್ರ ಸರ್ಕಾರಗಳು ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳಬೇಕು. ಎಫ್‌ಆರ್‌ಬಿಎಂ ಗುರಿಗಳಿಗೆ ಬದ್ಧರಾಗಿರಬೇಕು’ ಎಂದು ಹೇಳಿದ್ದಾರೆ.

ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು 2047ರವರೆಗೆ ಸತತವಾಗಿ ಶೇ 7.6ರಷ್ಟು ದರದಲ್ಲಿ ಅಭಿವೃದ್ಧಿ ಹೊಂದಬೇಕು ಎಂದು ಐಎಂಎಫ್ ಅಧ್ಯಯನ ಹೇಳುತ್ತದೆ ಎಂದು ಅವರು ತಿಳಿಸಿದ್ದಾರೆ.

ಪೂರ್ತಿ ನೀಡದೆ ಕಂತು ರೂಪದಲ್ಲಿ ನೀಡಿದಕ್ಕೆ ಕಲಾವಿದರ ಅಸಮಾಧಾನ

ವರ್ಷದ ಬಳಿಕ ‘ಬೆಂಗಳೂರು ಹಬ್ಬ’ದ ಹಣ ಸಂದಾಯ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ‘ನಮ್ಮ ಬೆಂಗಳೂರು ಹಬ್ಬ’ ನಡೆದು ವರ್ಷ ಕಳೆದ ಬಳಿಕ ಕಲಾವಿದರಿಗೆ ಪ್ರದರ್ಶನದ ಹಣ ಸಂದಾಯವಾಗಿದೆ. ಆದರೆ, ಅಲ್ಪ ಹಣವನ್ನು ‘ಧನಸಹಾಯ’ದಂತೆ ಕಂತು ರೂಪದಲ್ಲಿ ನೀಡಿರುವುದು ಕಲಾವಿದರ ಅಸಮಾಧಾನಕ್ಕೆ ಕಾರಣವಾಗಿದೆ.

ಬೆಂಗಳೂರಿನ ಸಂಸ್ಕೃತಿ, ಕಲೆ ಹಾಗೂ ಪರಂಪರೆಯನ್ನು ಇಲ್ಲಿ ನೆಲೆಸಿರುವವರಿಗೆ ಪರಿಚಯಿಸುವ ಉದ್ದೇಶದಿಂದ ಬೆಂಗಳೂರು ಹಬ್ಬ ನಡೆಸಲಾಗಿತ್ತು.

ಬಿಜೆಪಿ ನೇತೃತ್ವದ ಹಿಂದಿನ ರಾಜ್ಯ ಸರ್ಕಾರ 2023ರ ಮಾರ್ಚ್ 25 ಮತ್ತು 26 ರಂದು ಕಬ್ಬನ್ ಉದ್ಯಾನ ಹಾಗೂ ವಿಧಾನಸೌಧದ ಆವರಣದಲ್ಲಿ ಹಮ್ಮಿಕೊಂಡಿತ್ತು.

ಎರಡು ದಿನಗಳ ಉತ್ಸವದ ನಿರ್ವಹಣೆಯನ್ನು ಇಲಾಖೆಯು ‘ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್’ ಸಂಸ್ಥೆಗೆ ನೀಡಿತ್ತು. ಸಂಸ್ಥೆಯು ಈ ಉತ್ಸವಕ್ಕೆ ಒಟ್ಟು ₹ 5.59 ಕೋಟಿ ಹಣ ವೆಚ್ಚವಾಗಿರುವುದಾಗಿ ದರಪಟ್ಟಿಯನ್ನು ಇಲಾಖೆಗೆ ಸಲ್ಲಿಸಿತ್ತು.

ಕುರ್ಚಿ, ಟೇಬಲ್ ಸೇರಿ ಹಬ್ಬಕ್ಕೆ ಬೇಕಾದ ವಸ್ತುಗಳಿಗೆ ದುಪ್ಪಟ್ಟು ಹಣ ನಿಗದಿಪಡಿಸಲಾಗಿದೆ ಎಂದು ಕಲಾ ಸಂಘಟನೆಗಳು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದವು. ಇದರಿಂದಾಗಿ ಹಣ ಪಾವತಿಗೆ ಕಾಂಗ್ರೆಸ್ ಸರ್ಕಾರ ತಡೆ ಹಿಡಿದಿತ್ತು.

ವಿವಿಧ ಜಾನಪದ ಕಲಾ ತಂಡಗಳು, ಚಲನಚಿತ್ರ ಗಾಯಕರ ಬ್ಯಾಂಡ್‌ಗಳು, ರಿಯಾಲಿಟಿ ಶೋಗಳ ಗಾಯಕರು ಉತ್ಸವದಲ್ಲಿ ಪ್ರದರ್ಶನ ನೀಡಿದ್ದರು.

ಸಂಸ್ಥೆಯು ಇಲಾಖಾ ತನಿಖೆ ಬಳಿಕ ಜಾನಪದ ಗಾಯನ, ನೃತ್ಯ ಸೇರಿ ವಿವಿಧ ಪ್ರದರ್ಶನಗಳಿಗೆ ಗೌರವ ಧನ ಪರಿಷ್ಕರಿಸಿದ್ದು, ಜಾನಪದ ಗಾಯಕರಿಗೆ ನಿಗದಿ ಮಾಡಿದ್ದ ₹5 ಸಾವಿರದಲ್ಲಿ ₹3,500 ಮಾತ್ರ ಪಾವತಿಸಿದೆ. ಇದೇ ರೀತಿ, ಕಲಾ ತಂಡ ಹಾಗೂ ಕಲಾವಿದರಿಗೆ ನಿಗದಿಪಡಿಸಿದ್ದ ಗೌರವಧನದಲ್ಲಿ ಶೇ 75 ರಷ್ಟು ಹಣ ಸಂದಾಯ ಮಾಡಿದೆ.

ಕಲಾವಿದ ಅಸಮಾಧಾನ: ಅನುದಾನದ ಕೊರತೆಯಿಂದಾಗಿ ಸಂಸ್ಕೃತಿ ಇಲಾಖೆಯು ಈ ಬಾರಿ ಧನಸಹಾಯವನ್ನು ಸಂಘ–ಸಂಸ್ಥೆಗಳಿಗೆ ಕಂತು ರೂಪದಲ್ಲಿ ಬಿಡುಗಡೆ ಮಾಡಿತ್ತು.

ಪರಿಶಿಷ್ಟ ಜಾತಿ ಉಪಯೋಜನೆಯಡಿ ಆಯ್ಕೆಯಾದ ಸಂಘಸಂಸ್ಥೆಗಳಿಗೆ ಶೇ 31ರಷ್ಟು, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಆಯ್ಕೆಯಾದವರಿಗೆ ಶೇ 33ರಷ್ಟು ಹಾಗೂ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದವರಿಗೆ ಶೇ 40ರಷ್ಟು ಅನುದಾನ ಒದಗಿಸಿತ್ತು. ಈಗ ನಮ್ಮ ಬೆಂಗಳೂರು ಹಬ್ಬದ ಗೌರವಧನವನ್ನೂ ಪೂರ್ಣದಲ್ಲಿ ಪಾವತಿಸದಿರುವುದು ಕಲಾವಿದರನ್ನು ಕೆರಳಿಸಿದೆ.

‘ಕಲಾವಿದರಿಗೆ ಇತ್ತೀಚೆಗೆ ಅವಕಾಶಗಳು ಸಿಗುವುದೇ ಅಪರೂಪ. ಸಿಕ್ಕ ಅವಕಾಶಗಳಿಗೂ ಗೌರವಧನ ಪಾವತಿಸದಿದ್ದರೆ ಜೀವನ ನಡೆಸುವುದು ಕಷ್ಟಸಾಧ್ಯ. ಕಳೆದೊಂದು ವರ್ಷದಿಂದ ಕನ್ನಡ ಭವನಕ್ಕೆ ಅಲೆದಾಟ ನಡೆಸಲಾಗಿತ್ತು. ಈಗ ಗೌರವಧನ ಪಾವತಿಯಾದರೂ ಪೂರ್ಣ ಹಣ ನೀಡಿಲ್ಲ.

ಇನ್ನುಳಿದ ಹಣವನ್ನು ಯಾವಾಗ ನೀಡುತ್ತಾರೆ ಎನ್ನುವ ಖಚಿತತೆಯೂ ಇಲ್ಲವಾಗಿದೆ’ ಎಂದು ಬೆಂಗಳೂರು ಹಬ್ಬದಲ್ಲಿ ಪ್ರದರ್ಶನ ನೀಡಿದ ಕಲಾ ಸಂಘಟನೆಯ ಮುಖ್ಯಸ್ಥರೊಬ್ಬರು ತಿಳಿಸಿದರು.

ತನಿಖೆ ಬಳಿಕ ಹಣ ಕಡಿತ

ಬೆಂಗಳೂರು ಹಬ್ಬಕ್ಕೆಸಂಬಂಧಿಸಿದಂತೆ ಸಂಸ್ಕೃತಿ ಇಲಾಖೆ ನಡೆಸಿದ ಪ್ರಾಥಮಿಕ ತನಿಖೆಯಲ್ಲಿ ಪೂರ್ಣ ಪ್ರಮಾಣದಲ್ಲಿ ನಡೆಯದ ಕಾರ್ಯಕ್ರಮಗಳಿಗೂ ದರಪಟ್ಟಿ ಸಲ್ಲಿಸಿರುವುದು ದೃಢಪಟ್ಟಿತ್ತು.

ಇದರಿಂದಾಗಿ ಹಬ್ಬ ನಿರ್ವಹಣೆ ಮಾಡಿದ್ದ ಸಂಸ್ಥೆಗೆ ₹44.27 ಲಕ್ಷವನ್ನು ತಡೆ ಹಿಡಿದು, ಉಳಿದ ಹಣವನ್ನು ಆರ್ಥಿಕ ಇಲಾಖೆ ಬಿಡುಗಡೆ ಮಾಡಿತ್ತು.

‘ವಿವಿಧ ಸಂಗೀತ ಬ್ಯಾಂಡ್‌ಗಳಿಗೆ ಲಕ್ಷಾಂತರ ರೂಪಾಯಿಯನ್ನು ಸಂಸ್ಥೆಯ ಮೂಲಕ ಪಾವತಿಸಿರುವ ಸಂಸ್ಕೃತಿ ಇಲಾಖೆ, ಜಾನಪದ ಸೇರಿ ವಿವಿಧ ಸಾಂಪ್ರದಾಯಿಕ ಕಲಾ ಪ್ರಕಾರದ ಕಲಾವಿದರನ್ನು ಕಡೆಗಣಿಸಿದೆ. ನಿಗದಿಪಡಿಸಿದ ಗೌರವಧನದಲ್ಲಿಯೂ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡದಿರುವುದು ವಿಪರ್ಯಾಸ. ಕಲಾವಿದರಿಗೆ ನಿರಂತರ ಅನ್ಯಾಯ ಆಗುತ್ತಿದೆ’ ಎಂದು ಕಲಾವಿದ ಜಯಸಿಂಹ ಎಸ್. ತಿಳಿಸಿದರು.

ಸುದ್ದಿ 2 ನಿಮಿಷ

‘ಧರ್ಮಬೀರು ನಾಡಪ್ರಭು ಕೆಂಪೇಗೌಡ’ ಚಿತ್ರಕ್ಕೆ ತಾತ್ಕಾಲಿಕ ತಡೆ

ಬೆಂಗಳೂರು: ಕಿರಣ್ ತೋಟಂಬೈಲ್ ನೇತೃತ್ವದಲ್ಲಿ ‘ಧರ್ಮಬೀರು ನಾಡಪ್ರಭು ಕೆಂಪೇಗೌಡ’ ಸಿನಿಮಾ ನಿರ್ಮಾಣ, ಪ್ರಸಾರ ಮತ್ತು ಆ ಹೆಸರಿನಲ್ಲಿ ಜಾಹೀರಾತು ಪ್ರಕಟಿಸದಂತೆ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

‘ನಾಡಪ್ರಭು ಕೆಂಪೇಗೌಡ’ ಸಿನಿಮಾ ಶೀರ್ಷಿಕೆಯನ್ನು ನೋಂದಾಯಿಸಿರುವ ನಿರ್ದೇಶಕ ಟಿ.ಎಸ್. ನಾಗಾಭರಣ, ಲೇಖಕಿ ಪ್ರತಿಭಾ ನಂದಕುಮಾರ್, ಈಶ್ವರ ಎಂಟರ್‌ಟೇನ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಹಾಗೂ ನಿರ್ಮಾಪಕರಾದ ಎಂ.ಎನ್. ಶಿವರುದ್ರಪ್ಪ ಮತ್ತು ರಾಹುಲ್ ಗುಂಡಾಲ ಅವರು ‘ಧರ್ಮಬೀರು ನಾಡಪ್ರಭು ಕೆಂಪೇಗೌಡ’ ಹೆಸರಿನಲ್ಲಿ ಸಿನಿಮಾ ನಿರ್ಮಾಣಕ್ಕೆ ತಡೆಯಾಜ್ಞೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಕಿರಣ್ ತೋಟಂಬೈಲ್, ಚೇತನ್ ರಾಜ್, ಧರ್ಮೇಂದ್ರ ಕುಮಾರ್ ಅರೇಹಳ್ಳಿ, ದಿನೇಶ್ ಬಾಬು ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಾಧೀಶರು, ಪ್ರತಿವಾದಿಗಳು ಮತ್ತು ಅವರ ನೌಕರರು, ಏಜೆಂಟರು, ಪಾಲುದಾರರು, ಪ್ರತಿನಿಧಿಗಳು ‘ಧರ್ಮಬೀರು ನಾಡಪ್ರಭು ಕೆಂಪೇಗೌಡ’ ಹೆಸರಿನ ಅಥವಾ ಆ ವಿಷಯ ಹೊಂದಿರುವ ಸಿನಿಮಾ ನಿರ್ಮಾಣ, ಪ್ರಸಾರ, ಜಾಹೀರಾತು ಪ್ರಕಟಿಸದಂತೆ ತಡೆಯಾಜ್ಞೆ ವಿಧಿಸಿದ್ದಾರೆ.

ಶ್ರೀಸಿದ್ದೇಶ್ವರ ಜಾತ್ರಾ ಮಹೋತ್ಸವ

ಕೆ.ಆರ್.ಪುರ: ಕನ್ನಮಂಗಲ ಸಮೀಪದ ಖಾಜಿಸೊಣ್ಣೇಹಳ್ಳಿಯಲ್ಲಿಯ ಕುರುಬ ಸಮುದಾಯದ ಆರಾಧ್ಯದೈವ ಸಿದ್ದೇಶ್ವರ ಸ್ವಾಮಿಯ ದೊಡ್ಡ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಹೋತ್ಸವ ಪ್ರಯುಕ್ತ ವೇಮಗಲ್ ತಾಲ್ಲೂಕು ಕುರುಬರಹಳ್ಳಿ ಬೀರೇಶ್ವರ ಕಲಾತಂಡ ವೀರಗಾರರ ತಲೆ ಮೇಲೆ ತೆಂಗಿನಕಾಯಿ ಒಡೆದು ದೇವರಿಗೆ ಅರ್ಪಿಸುವ ಪವಾಡ ಕಾರ್ಯ ನಡೆಸಿಕೊಟ್ಟರು.

ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ಕಲ್ಕೆರೆ, ಹಲಸೂರು, ದೇವನಹಳ್ಳಿ, ಕೆ.ಚನ್ನಸಂದ್ರ, ಶಿವಕೋಟೆ, ಶ್ರೀನಗರ ಸೇರಿದ ವಿವಿಧ ಪ್ರದೇಶಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿದರು. ಉತ್ಸವದಲ್ಲಿ ವೀರಗಾಸೆ, ಗೊರವನ ಕುಣಿತ, ಡೊಳ್ಳು ಕುಣಿತ, ಪೂಜಾ ಕುಣಿತ, ಗೊಂಬೆ ಕುಣಿತ ಸೇರಿದಂತೆ ಜನಪದ ನೃತ್ಯಗಳು ಗಮನ ಸೆಳೆಯಿತು.

ಡಿ.ಡಿ ಲಾಂಛನಕ್ಕೆ ಕೇಸರಿ ಬಣ್ಣ; ಸ್ಟಾಲಿನ್ ಟೀಕೆ

ಚೆನ್ನೈ (ಪಿಟಿಐ): ಸರ್ಕಾರಿ ಸ್ವಾಮ್ಯದ ದೂರದರ್ಶನ (ಡಿ.ಡಿ) ವಾಹಿನಿಯ ಲಾಂಛನದ ಬಣ್ಣವನ್ನು ಕೇಸರಿಗೆ ಬದಲಾಯಿಸಿರುವ ಕ್ರಮದ ವಿರುದ್ಧ ಡಿಎಂಕೆ ಅಧ್ಯಕ್ಷ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಟೀಕಾಪ್ರಹಾರ ನಡೆಸಿದ್ದಾರೆ.

‘ಎಲ್ಲವನ್ನೂ ಕೇಸರೀಕರಣಗೊಳಿಸುವ ಬಿಜೆಪಿಯ ಸಂಚಿನ ಮುನ್ಸೂಚನೆ ಇದು’ ಎಂದು ಅವರು ಹೇಳಿದ್ದಾರೆ.

‘ಎಕ್ಸ್’ನಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ‘ದೂರದರ್ಶನ ಲಾಂಛನಕ್ಕೆ ಕೇಸರಿ ಬಣ್ಣ ಹಚ್ಚಲಾಗಿದೆ. ಇಂಥ ನಿರಂಕುಶ ಪ್ರಭುತ್ವದ ವಿರುದ್ಧ ಜನರು ಎಚ್ಚೆತ್ತಿರುವುದನ್ನು ಈ ಬಾರಿಯ ಲೋಕಸಭೆ ಚುನಾವಣೆಯ ಫಲಿತಾಂಶ ತೋರಿಸಲಿದೆ’ ಎಂದು ಹೇಳಿದ್ದಾರೆ.

ತಮಿಳು ಸಂತಕವಿ ತಿರುವಳ್ಳುವರ್ ಅವರ ಪ್ರತಿಮೆಯನ್ನು ಮೊದಲಿಗೆ ಕೇಸರೀಕರಣಗೊಳಿಸಿದ್ದನ್ನು ಸ್ಮರಿಸಿದ ಅವರು, ತಮಿಳುನಾಡಿನ ಹಲವು ಮಹಾನ್ ನಾಯಕರ ಪ್ರತಿಮೆಗಳಿಗೆ ಹೀಗೆಯೇ ಕೇಸರಿ ಬಣ್ಣ ಬಳಿಯಲಾಗಿದೆ ಎಂದಿದ್ದಾರೆ.

ಡಿ.ಡಿ ಲಾಂಛನದ ಬಣ್ಣ ಬದಲಾಯಿಸಿದ್ದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದ ವಿರೋಧ ಪಕ್ಷಗಳು, ‘ಇದು ಅಕ್ರಮ ಮತ್ತು ಬಿಜೆಪಿ ಪರ ಪಕ್ಷಪಾತ ಧೋರಣೆಯನ್ನು ತೋರುತ್ತದೆ’ ಎಂದಿದ್ದರು.

ಹಾಸ್ಯ ನಟ ನಾಗರಾಜ್ ಕೋಟೆ ಅಭಿಮತ

‘ರಾಜ್ ಚಿತ್ರಗಳು ಪ್ರಸ್ತುತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಟ ರಾಜ್‌ಕುಮಾರ್ ಅವರ ಚಲನಚಿತ್ರಗಳು ಉತ್ತಮ ಸಂದೇಶಗಳನ್ನು ಸಾರಿದ್ದವು. ಇದರಿಂದಾಗಿ ಅವರ ಚಲನಚಿತ್ರಗಳು ಇಂದಿಗೂ ಪ್ರಸ್ತುತ’ ಎಂದು ಹಾಸ್ಯ ನಟ ನಾಗರಾಜ್ ಕೋಟೆ ತಿಳಿಸಿದರು.

ಸಂಸ್ಕೃತಿ ಸೌರಭ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡ ರಾಜ್‌ಕುಮಾರ್ ಗೀತೋತ್ಸವ ಸಮಾರಂಭದಲ್ಲಿ ಕನ್ನಡ ಪರ ಹೋರಾಟಗಾರ ರಾಜು ಸಿ. ಚಾಮರಾಜಪೇಟೆ, ಡಾ.ರಾಜ್‌ಕುಮಾರ್ ಕಲಾಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಸ್. ಜಯರಾಮರಾಜು ಹಾಗೂ ಕೃಷ್ಣದೇವರಾಯ ಕನ್ನಡ ಅಭಿವೃದ್ಧಿ ಕಲಾ ಸಂಘದ ಅಧ್ಯಕ್ಷ ವಿ. ರಾಮದಾಸ್ ಅವರಿಗೆ ‘ಡಾ. ರಾಜ್‌ಕುಮಾರ್ ಅಭಿಮಾನಿ ಪುರಸ್ಕಾರ’ ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ರಾಜು ಸಿ. ಚಾಮರಾಜಪೇಟೆ, ಬಿ.ಎಸ್. ಜಯರಾಮರಾಜು ಹಾಗೂ ವಿ.ರಾಮದಾಸ್ ಅವರಿಗೆ ‘ಡಾ. ರಾಜಕುಮಾರ್ ಅಭಿಮಾನಿ ಪುರಸ್ಕಾರ’ ಪ್ರದಾನ ಮಾಡಲಾಯಿತು. ವಿ.ಮನೋಹರ್, ನಾಗರಾಜ್ ಕೋಟೆ, ಎಂ.ಪ್ರಕಾಶಮೂರ್ತಿ, ಸಂಸ್ಕೃತಿ ಸೌರಭ ಟ್ರಸ್ಟ್ ಅಧ್ಯಕ್ಷ ರಾ.ಬಿ.ನಾಗರಾಜ್, ಕಾರ್ಯದರ್ಶಿ ಎಚ್.ಬಿ.ಸಿದ್ಧರಾಜು, ಬ್ಲೂಮೂನ್ ಪಬ್ಲಿಕ್ ಶಾಲೆ ಕಾರ್ಯದರ್ಶಿ ಚಂದ್ರಶೇಖರ್, ಉದ್ಯಮಿ ಶೋಭಾ ಪದ್ಮನಾಭ ಪಾಲ್ಗೊಂಡಿದ್ದರು.

‘ರಾಜ್‌ಕುಮಾರ್ ಅವರ ಗುಣಗಳನ್ನು ಮೈಗೂಡಿಸಿಕೊಂಡಿರುವವರು ಸಮಾಜಮುಖಿ ಕೆಲಸವನ್ನು ಮಾಡುತ್ತಿದ್ದಾರೆ. ಅವರ ಸಮಾಜಮುಖಿ ಚಿತ್ರಗಳಿಂದಾಗಿ ಹಿರಿಯರ ಜತೆಗೆ ಹೊಸ ತಲೆಮಾರಿನವರೂ ಅಭಿಮಾನಿಗಳಾಗಿದ್ದಾರೆ’ ಎಂದು ನಾಗರಾಜ್ ಕೋಟೆ ಹೇಳಿದರು.

ಸಂಗೀತ ನಿರ್ದೇಶಕ ವಿ.ಮನೋಹರ್, ‘ರಾಜ್‌ಕುಮಾರ್ ಗುಣಗಳು ನಮಗೆಲ್ಲ ಆದರ್ಶಪ್ರಾಯ. ಅವರ ಹೆಸರಿನಲ್ಲಿ ಅಭಿಮಾನಿಗಳನ್ನು ಗೌರವಿಸುತ್ತಿರುವುದು ಶ್ಲಾಘನೀಯ’ ಎಂದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ‘ರಾಜ್‌ಕುಮಾರ್ ಅವರು ಈ ನಾಡು ನುಡಿಯ ಬಹುದೊಡ್ಡ ಶಕ್ತಿಯಾಗಿದ್ದರು. ಒಬ್ಬ ಕಲಾವಿದರಾಗಿ ನಮಗೆ ಬಾಲ್ಯದಲ್ಲೇ ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಿದರು’ ಎಂದು ಸ್ಮರಿಸಿಕೊಂಡರು.

ಗಾಯಕರಾದ ಮೈಸೂರು ಕೃಷ್ಣಮೂರ್ತಿ, ಎಸ್. ರಘುನಾಥ್ ತಂಡವು ರಾಜಕುಮಾರ್ ರವರ ಜನಪ್ರಿಯ ಚಿತ್ರಗೀತೆಗಳನ್ನು ಹಾಡಿದರು.

ಸಹ ಶಿಕ್ಷಕ ರಾಮು ಅಮಾನತು

ಪ್ರಜಾವಾಣಿ ವಾರ್ತೆ

ರಾಯಚೂರು: ಲೋಕಸಭಾ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಮಾಡಿದ ಆರೋಪದ ಮೇಲೆ ತಾಲ್ಲೂಕಿನ ಉಡುಮಗಲ್-ಖಾನಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ರಾಮು ಅವರನ್ನು ಜಿಲ್ಲಾ ಚುನಾವಣಾಧಿಕಾರಿ ಎಲ್.ಚಂದ್ರಶೇಖರ ನಾಯಕ ಅಮಾನತುಗೊಳಿಸಿದ್ದಾರೆ.

ವಿಧಾನ ಪರಿಷತ್ ಸದಸ್ಯ ಕೆ.ಪಿ. ನಂಜುಂಡಿ ಅವರ ಬೆಂಗಳೂರಿನ ಮನೆಗೆ ಈಚೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭೇಟಿ ನೀಡಿದ ವೇಳೆ ಸಹ ಶಿಕ್ಷಕ ರಾಮು ಊಟ ಬಡಿಸುತ್ತಿದ್ದರು ಎಂದು ದೂರು ಬಂದಿತ್ತು. ಈ ಹಿನ್ನೆಲೆಯಲ್ಲಿ ನೋಡಲ್ ಅಧಿಕಾರಿಗಳು ಪರಿಶೀಲಿಸಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ಭಂಡಾರಿ ಅವರಿಂದ ಮಾಹಿತಿ ಪಡೆದಿದ್ದಾರೆ. ಪೂಜಾ ಕಾರ್ಯಕ್ರಮ ಎಂದು ಹೇಳಿ ಹೋದ ಶಿಕ್ಷಕ ರಾಜಕೀಯ ನಾಯಕರೊಂದಿಗೆ ಕಾಣಿಸಿಕೊಂಡಿದ್ದರು ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ. ಕೆಲಸದಲ್ಲಿ ನಿರ್ಲಕ್ಷ್ಯ, ಕೇಂದ್ರ ಸ್ಥಾನ ಬಿಡಲು ಅನುಮತಿ ಪಡೆಯದೆ ನೀತಿ ಸಂಹಿತೆ ಸಮಯದಲ್ಲಿ ರಾಜಕೀಯ ವ್ಯಕ್ತಿಗಳ ಜೊತೆಯಲ್ಲಿ ಕಾಣಿಸಿಕೊಂಡ ಅವರು ಕರ್ತವ್ಯಲೋಪವೆಸಗಿದ ಕಾರಣ ಅಮಾನತು ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಬೆಂಗಳೂರು ಕರಗೋತ್ಸವ: ಪೊಂಗಲು ಸೇವೆ (ಪುರಾಣ ಕಥನ) ರಾತ್ರಿ 12ಕ್ಕೆ, ದೇವರ ನಾಮ–ಭಜನೆ: ವಾಸವಿ ಮಹಿಳಾ ಸಂಘ, ಸಾಂಸ್ಕೃತಿಕ ಕಾರ್ಯಕ್ರಮಗಳು: ಮನಿಷಾ ಮಂಜುನಾಥ್, ರಕ್ಷಾ, ನಾಟ್ಯ ಸಂಕುಲ ಸ್ಕೂಲ್ ಆಫ್ ಭರತನಾಟ್ಯ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ–2024: ವಿಶೇಷ ಕರ್ನಾಟಕ ಸಂಗೀತ ಕಛೇರಿ: ಮಾಲಿನಿ ರಾಮಸುಬ್ರಮಣ್ಯಂ, ಎಸ್.ಆರ್. ಕಾರ್ತಿಕೇಯ, ಕೌಶಿಕ್ ಶ್ರೀಧರ್, ಶ್ರೀನಿಧಿ ಆರ್. ಕೌಂಡಿನ್ಯ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ವಿಜಯಾ ಶಂಕರ್, ವಿಶ್ವಜಿತ್ ಮತ್ತೂರು, ಫಣೀಂದ್ರ ಭಾಸ್ಕರ್, ಕಾರ್ತಿಕ್ ರವಿಕುಮಾರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 4.45ರಿಂದ

ಶ್ರೀರಾಮೋತ್ಸವ: ದೇವರನಾಮಗಳು ಗಾಯನ: ವಿದ್ಯಾಭೂಷಣ, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ರಸ್ತೆಯಲ್ಲೇ ಕಸದ ರಾಶಿ’

ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆ ಕಸದ ತೊಟ್ಟಿಯಾಗಿ ಮಾರ್ಪಡುತ್ತಿದೆ. ಕಸದ ಮೂಟೆಗಳು ವಾರಗಟ್ಟಲೆ ರಸ್ತೆಯಲ್ಲಿಯೇ ಕೊಳೆಯುತ್ತಿದ್ದು, ವಾಹನ ಸವಾರರು ಪರದಾಟ ನಡೆಸಬೇಕಾಗಿದೆ. ಮಾರ್ಸ್ ಮೌಂಟ್ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ದಿ ಪ್ರೊಮೊಂಟ್ ಟಾಟಾ ಹೌಸಿಂಗ್ ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶದ್ವಾರ ತಲುಪುವ ಸುಮಾರು 500 ಮೀ. ಉದ್ದಕ್ಕೂ ಎಲ್ಲೆಂದರಲ್ಲಿ ಕಸದ ರಾಶಿಗಳನ್ನು ಹಾಕಿರುತ್ತಾರೆ. ಇದರಿಂದ ಬೀದಿ ನಾಯಿಗಳ ಹಾವಳಿಯೂ ಹೆಚ್ಚಿದ್ದು, ಪಾದಚಾರಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಪ್ತಗಿರಿ ಲೇಔಟ್‌ಗೆ ಪೌರಕಾರ್ಮಿಕರು ವಾರಕ್ಕೊಮ್ಮೆ ಮಾತ್ರ ಬೆಳಿಗ್ಗೆ 7.30ರ ಸುಮಾರಿಗೆ ಬರುತ್ತಿದ್ದಾರೆ. ಕಸದ ವಾಹನವನ್ನು ಮನೆಗಳ ಬಳಿ ನಿಲ್ಲಿಸಿ, ಕಸ ಸಂಗ್ರಹಿಸುತ್ತಿಲ್ಲ. ಇದರಿಂದ ಈ ಲೇಔಟ್‌ನ ನಿವಾಸಿಗಳಿಗೆ ಕಸ ವಿಲೇವಾರಿ ಸಮಸ್ಯೆಯಾಗಿದೆ. ಬಿಬಿಎಂಪಿ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸಬೇಕು.

ಮಂಜುನಾಥ್, ಸಪ್ತಗಿರಿ ಲೇಔಟ್

‘ರಸ್ತೆ ಸರಿಪಡಿಸಿ’

ನಾಗರಬಾವಿ ಮಾರ್ಗವಾಗಿ ಎನ್‌ಜಿಇಎಫ್ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ಮಲ್ಲತ್ತಹಳ್ಳಿ ಲೇಕ್ ರಸ್ತೆಯಲ್ಲಿ ಒಳಚರಂಡಿ ಪೈಪ್‌ಗಳನ್ನು ಅಳವಡಿಸಲು ರಸ್ತೆಯನ್ನು ಅಗೆಯಲಾಗಿತ್ತು. ಪೈಪ್‌ಗಳನ್ನು ಹಾಕುವ ಕಾಮಗಾರಿ ಮುಗಿದರೂ ಇದುವರೆಗೂ ರಸ್ತೆಯನ್ನು ದುರಸ್ತಿಗೊಳಿಸಿಲ್ಲ. ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಲು ಜಲ್ಲಿಕಲ್ಲುಗಳನ್ನು ಹಾಕಲಾಗಿದೆ. ಆದರೆ, ಆ ಜಲ್ಲಿಕಲ್ಲುಗಳ ಮೇಲೆ ಡಾಂಬರ್ ಹಾಕಿಲ್ಲ. ಇದರಿಂದ, ವಾಹನ ಸವಾರರು ಪರದಾಡುತ್ತಿದ್ದಾರೆ. ಅದರಲ್ಲೂ ದ್ವಿಚಕ್ರ ವಾಹನ ಸವಾರರು ಸ್ಕಿಡ್ ಆಗಿ ಬೀಳುತ್ತಿದ್ದು, ಅಪಾಯ ಸಂಭವಿಸುವ ಮುನ್ನ ರಸ್ತೆ ದುರಸ್ತಿಗೊಳಿಸಬೇಕು.

ಶಿವಪ್ರಸಾದ್ ಎಸ್., ನಾಗರಬಾವಿ

‘ಕೆರೆ ಹೂಳು ತೆರವುಗೊಳಿಸಿ’

ಮಡಿವಾಳ ಕೆರೆಯಲ್ಲಿ ನೀರು ಕಡಿಮೆ ಆಗಿದ್ದು, ನೀರು ಖಾಲಿಯಾಗಿರುವ ಪ್ರದೇಶದಲ್ಲಿನ ಹೂಳು ತೆಗೆಯುವ ಕೆಲಸ ನಡೆಯುತ್ತಿದೆ. ಕೆರೆಯಲ್ಲಿನ ಹೂಳನ್ನು ತೆಗೆದು ಕೆರೆಯ ಏರಿಯ ಮೇಲೆಯೇ ಸುರಿಯಲಾಗಿದೆ. ಆದರೆ, ಈ ಹೂಳನ್ನು ತೆರವುಗೊಳಿಸುತ್ತಿಲ್ಲ. ಕಳೆದ ವರ್ಷ ತೆಗೆದು ಹಾಕಿರುವ ಹೂಳಿನಲ್ಲಿಯೇ ಹಾಕಲಾಗುತ್ತಿದೆ. ಇದರಿಂದ, ಜೋರು ಮಳೆ ಬಂದರೆ ಹೂಳು ಮತ್ತೆ ಕೆರೆ ಸೇರುವ ಸಾಧ್ಯತೆ ಇದೆ. ಆದ್ದರಿಂದ, ಬಿಬಿಎಂಪಿ ಕೂಡಲೇ ಇಲ್ಲಿ ಹಾಕಿರುವ ಹೂಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಎಸ್. ದೊಡ್ಡ ಮಾರಯ್ಯ
ಬಿಟಿಎಂ ಲೇಔಟ್

‘ಪಾದಚಾರಿ ಮಾರ್ಗದಲ್ಲಿ ವಾಹನಗಳ ಪಾರ್ಕಿಂಗ್’

ಜಯನಗರದ ರಾಣಿಸರಳಾ ದೇವಿ ಕಾಲೇಜು ಎದುರಿಗಿರುವ ರಿಲಯನ್ಸ್ ಡಿಜಿಟಲ್, ಪೈ ಮಳಿಗೆಗಳ ಸಿಬ್ಬಂದಿ ಪಾದಚಾರಿಗಳಿಗೆ ಮೀಸಲಿರುವ ಮಾರ್ಗವನ್ನು ಆಕ್ರಮಿಸಿಕೊಂಡು ದ್ವಿಚಕ್ರ ವಾಹನಗಳ ಪಾರ್ಕಿಂಗ್ ಮಾಡಿಕೊಂಡಿದ್ದಾರೆ. ರಸ್ತೆಯ ಪಕ್ಕದಲ್ಲಿಯೂ ಕಾರುಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ, ಸಾರ್ವಜನಿಕರು ನಡೆದುಕೊಂಡು ಹೋಗುವುದಕ್ಕೆ ಮುಖ್ಯರಸ್ತೆಯನ್ನು ಅವಲಂಬಿಸಬೇಕಿದೆ. 100 ಅಡಿ ರಸ್ತೆಯಲ್ಲಿ ವೇಗವಾಗಿ ಬರುವ ವಾಹನಗಳ ಮಧ್ಯದಲ್ಲಿಯೇ ನಡೆದುಕೊಂಡು ಹೋಗುವುದು ಕಷ್ಟ. ಬಿಬಿಎಂಪಿ ಕೂಡಲೇ ಈ ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆಯನ್ನು ತೆರವುಗೊಳಿಸಬೇಕು.

ಜಿ.ಆರ್.ಕೆ ನಾಯಕ್, ಜಯನಗರ

‘ಅತಿಕ್ರಮಣಗೊಂಡ ಪಾದಚಾರಿ ಮಾರ್ಗ’

ಜಯನಗರ 7ನೇ ಬಡಾವಣೆಯ ನ್ಯಾಷನಲ್ ಕಾಲೇಜು ಬಳಿ ಇರುವ ಮಸಾಲ ಲವ್ ಆ್ಯಂಡ್ ಹೋಟೆಲ್ ಪಾದಚಾರಿ ಮಾರ್ಗವನ್ನು ಆಕ್ರಮಿಸಿಕೊಂಡಿದೆ. ಇದರಿಂದ, ಈ ಭಾಗದಲ್ಲಿ ಓಡಾಡುವ ಮಹಿಳೆಯರಿಗೆ, ವೃದ್ಧರಿಗೆ ಹಾಗೂ ಮಕ್ಕಳಿಗೆ ತೊಂದರೆ ಆಗಿದೆ. ಪಾದಚಾರಿ ಮಾರ್ಗದಲ್ಲಿ ಹೋಟೆಲ್ ವ್ಯವಹಾರ ನಡೆಯುವುದರಿಂದ ಸಾರ್ವಜನಿಕರು ಮುಖ್ಯರಸ್ತೆಯ ಮೂಲಕವೇ ಹಾದು ಹೋಗಬೇಕಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪರಿಹಾರ ಸಿಕ್ಕಿಲ್ಲ. ಅತಿಕ್ರಮಿಸಿಕೊಂಡಿರುವ ಪಾದಚಾರಿ ಮಾರ್ಗವನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಕಲ್ಪಿಸಬೇಕು.

ಕೃಷ್ಣಪ್ಪ, ಜಯನಗರ ಬಡಾವಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Security & Detectives

OPENING FOR SECURITY FIELD OFFICERS, Experience a must. Competitive salary and benefits. Contact-8884000162, 9972416899.

Wanted

COMPUTER OPERATOR for reputed pharmaceutical company. Preferably in and around Tavarekere-Nelamangala road. PH: 9148006935, 9611969322

STORE MANAGER (Computer Knowledge) / Helper Required at Lalbagh, Bengaluru. Contact 91541-69263 or 70193-98454

RENTAL PROPERTIES

Accommodation Available

Commercial

3000SQFT COMMERCIAL space|14HP Power|Readily available for rent| Kaverinagar-80ft main road, Basaweshwaranagar| Contact:9060936155

PERSONAL

Change of Name

I, SHIVAKUMARA. A. Residing at #52, 25th cross, Muneshwara Block, Pipeline Road. T.Dasarahalli, Bengaluru-57 have changed my son name from BHARGAV S GOWDA to BHARGAVA. S. and my daughter name from KARUNYA SHIV KUMAR to KAARUNYAA. S, vide affidavit dated 19/4/2024before Notary V.Nagarajan, Bengaluru

ADMISSION CORNER

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2024-2025
COURSES OFFERED
B.Com BBA BCA B.Sc B.A.
ROUNAQH

CHANGE OF NAME
I, KANNAGI KALYANI, Residing at # 7th Cross Road, Maruthi Provision Store, Andrahalli, Bangalore- 560091, have changed my name to KIAAN MONI HAZARIKA, and change my gender from Female to Male, vide affidavit dt:19/04/2024 before notary Bhagya Kumari N, Bangalore. Henceforth I shall be called as KIAAN MONI HAZARIKA only

CHANGE OF NAME
I, SHABANABI NAVAJASA Residing at # 42, Papaiah Layout, Horamavu, Kalyan Nagar, Bangalore-560043, have changed our minor daughter's name from SANA to SANA SHANAYA vide affidavit dated 20/04/2024 before notary Y.R. Chandrasekar, Bangalore. Henceforth she shall be called as SANA SHANAYA only

CHANGE OF NAME
I, KUSHBOO JAIN RAKESH KUMAR, W/o Arpit Jain, Residing at # L 201,SNN Raj Lake View Apartment Phase-1, Munivenkatappa Layout, Bilekahalli, BTM 2nd Stage, Bangalore-76, have changed my name to KUSHBOO JAIN vide affidavit dated 20/04/2024 before notary Mohammed Hussain, Bangalore. Henceforth I shall be called as KUSHBOO JAIN only

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

ಹೆಚ್ಚಿನ ಲಾಭದ ಆಸೆ, ಹಣ ಕಳೆದುಕೊಂಡವರಿಂದ ದೂರು ದಾಖಲು

ಷೇರು ವ್ಯವಹಾರ: ₹5 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಗಳಿಸಬಹುದೆಂದು ಹೇಳಿ ವ್ಯಕ್ತಿಯೊಬ್ಬರಿಂದ ₹5.18 ಕೋಟಿ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ನಗರದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಗರದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರ ಮೊಬೈಲ್ ವಾಟ್ಸ್‌ಆ್ಯಪ್‌ಗೆ ಕೆಲ ದಿನಗಳ ಹಿಂದೆಯಷ್ಟೇ ಸಂದೇಶವೊಂದು ಬಂದಿತ್ತು. ‘ಷೇರು ವ್ಯವಹಾರದಲ್ಲಿ ಹಣ ತೊಡಗಿಸಿ, ದುಪ್ಪಟ್ಟು ಲಾಭ ಗಳಿಸಿ’ ಎಂಬುದು ಸಂದೇಶದಲ್ಲಿತ್ತು. ಜೊತೆಗೆ, ಜಾಲತಾಣವೊಂದರ ಲಿಂಕ್ ಸಹ ನಮೂದಿಸಲಾಗಿತ್ತು. ನೋಂದಣಿ ಮಾಡಿಕೊಳ್ಳುವಂತೆ ಬರೆಯಲಾಗಿತ್ತು.’

‘ಸಂದೇಶ ನಂಬಿದ್ದ ದೂರುದಾರ, ಪ್ರತಿಕ್ರಿಯೆ ನೀಡಿದ್ದರು. ಲಿಂಕ್ ಕ್ಲಿಕ್ ಮಾಡಿ ಜಾಲತಾಣ ತೆರೆದಿದ್ದರು. ಹೆಸರು ಹಾಗೂ ವೈಯಕ್ತಿಕ ಮಾಹಿತಿಯನ್ನು ದಾಖಲಿಸಿ ನೋಂದಣಿ ಮಾಡಿಕೊಂಡಿದ್ದರು. ಲಾಗಿನ್ ಐಡಿ ಹಾಗೂ ಪಾಸ್‌ವರ್ಡ್ ಸಹ ಸೃಷ್ಟಿಸಿಕೊಂಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ದೂರುದಾರ ಖಾತೆ ತೆರೆಯುತ್ತಿದ್ದಂತೆ ಆರೋಪಿಗಳು ಮತ್ತೊಂದು ಸಂದೇಶ ಕಳುಹಿಸಿದ್ದರು. ದುಪ್ಪಟ್ಟು ಲಾಭ ನೀಡುವ ಷೇರುಗಳನ್ನು ಖರೀದಿಸುವಂತೆ ಸಲಹೆ ನೀಡಿದ್ದರು. ಅದನ್ನು ನಂಬಿದ್ದ ದೂರುದಾರ, ಆರಂಭದಲ್ಲಿ ಕೆಲವು ಷೇರುಗಳನ್ನು ಖರೀದಿಸಿದ್ದರು. ಕೆಲ ದಿನಗಳ ನಂತರ ಯಾವುದೇ ಲಾಭ ಬಂದಿರಲಿಲ್ಲ’ ಎಂದು ಮೂಲಗಳು ಮಾಹಿತಿ ನೀಡಿವೆ.

‘ಲಾಭದ ಬಗ್ಗೆ ಪ್ರಶ್ನಿಸಿದಾಗ ಮತ್ತಷ್ಟು ಷೇರುಗಳನ್ನು ಖರೀದಿಸುವಂತೆ ಆರೋಪಿಗಳು ಹೇಳಿದ್ದರು. ಅದನ್ನೂ ನಂಬಿ, ಪುನಃ ಷೇರು ಖರೀದಿಸಿದ್ದರು. ಅವಾಗಲೂ ಲಾಭ ಬಂದಿರಲಿಲ್ಲ. ಒಂದೇ ಬಾರಿಗೆ ಷೇರಿನ ಮೊತ್ತ ಹಾಗೂ ಲಾಭದ ಹಣ ವಾಪಸು ನೀಡುವುದಾಗಿ ಹೇಳಿದ್ದ ಆರೋಪಿಗಳು, ಪುನಃ ಹೂಡಿಕೆ ಮಾಡುವಂತೆ ಪ್ರಚೋದಿಸಿದ್ದರು. ಇದಾದ ನಂತರ ದೂರುದಾರ, ಹಂತ ಹಂತವಾಗಿ ₹5.18 ಕೋಟಿ ಕಟ್ಟಿದ್ದರು. ಆರೋಪಿಗಳು, ಪುನಃ ಹಣ ಕೇಳಿದಾಗ ಅನುಮಾನಗೊಂಡು ಠಾಣೆಗೆ ದೂರು ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ದೂರುದಾರ, ಹೆಚ್ಚಿನ ಲಾಭ ಪಡೆಯುವ ಆಸೆಗಾಗಿ ಹಣ ಕಳೆದುಕೊಂಡಿದ್ದಾರೆ. ಚಿನ್ನಾಭರಣ ಮಾರಿ ಹಾಗೂ ಸಾಲ ಮಾಡಿ ಹಣ ನೀಡಿರುವ ಮಾಹಿತಿ ಇದೆ’ ಎಂದು ತಿಳಿಸಿವೆ.

ಡೆಲಿವರಿ ಬಾಯ್ ಕೊಲೆ: ಸ್ನೇಹಿತರ ಬಂಧನ

ಬೆಂಗಳೂರು: ಹಲಸೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸತೀಶ್ ಕುಮಾರ್ ಕೊಲೆ ಪ್ರಕರಣದಲ್ಲಿ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಶಿವಾಜಿನಗರದ ಸತೀಶ್ ಕುಮಾರ್, ಆಹಾರ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಏಪ್ರಿಲ್ 19ರಂದು ರಾತ್ರಿ ಇವರನ್ನು ಕೊಲೆ ಮಾಡಲಾಗಿತ್ತು. ಆರೋಪಿಗಳಾದ ದೊಮ್ಮಲೂರಿನ ಎಸ್. ಸಂತೋಷ್ (36), ಇಂದಿರಾನಗರದ ಎಂ. ಪವನ್ ಕುಮಾರ್ (26), ತಿಪ್ಪಸಂದ್ರದ ರಂಜಿತ್ ಕುಮಾರ್ (33), ದೊಮ್ಮಲೂರು ಲೇಔಟ್‌ನ ಜೆ. ವಿನೋದ್ ಮ್ಯಾಥ್ಯೂ (35) ಹಾಗೂ ರಂಗನಾಥ್‌ನನ್ನು (41) ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸತೀಶ್ ಕುಮಾರ್ ಹಾಗೂ ಆರೋಪಿಗಳು, ಹಲವು ವರ್ಷಗಳ ಸ್ನೇಹಿತರು. ಎಲ್ಲರೂ ದೊಮ್ಮಲೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮವೊಂದಕ್ಕೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಮದ್ಯದ ಪಾರ್ಟಿ ಮಾಡಲೆಂದು, ಸಮೀಪದ ಬಿಡಿಎ ಪಾರ್ಕ್‌ಗೆ ತೆರಳಿದ್ದರು. ಅಲ್ಲಿಯೇ ಎಲ್ಲರೂ ಮದ್ಯ ಕುಡಿದಿದ್ದರು.’

‘ಮದ್ಯದ ಅಮಲಿನಲ್ಲಿ ಸ್ನೇಹಿತರ ನಡುವೆ ಜಗಳ ಶುರುವಾಗಿತ್ತು. ಇದೇ ಸಂದರ್ಭದಲ್ಲಿ ಆರೋಪಿಗಳು, ಸತೀಶ್ ಕುಮಾರ್ ಮೇಲೆ ಹಲ್ಲೆ ಮಾಡಿದ್ದರು. ತಲೆ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿದ್ದರು. ತೀವ್ರ ರಕ್ತಸ್ರಾವದಿಂದ ಸತೀಶ್ ಮೃತಪಟ್ಟಿದ್ದರು. ಕೃತ್ಯದ ಬಳಿಕ ಪರಾರಿಯಾಗಿದ್ದ ಆರೋಪಿಗಳನ್ನು ಇತ್ತೀಚೆಗೆ ಸೆರೆ ಹಿಡಿಯಲಾಗಿದೆ’ ಎಂದು ತಿಳಿಸಿದರು.

ಮತ ಜಾಗೃತಿ ಮತದಾನದ ಜಾಗೃತಿಗಾಗಿ ಭಾನುವಾರ ಬೆಂಗಳೂರಿನಲ್ಲಿ ವಿಂಟೇಜ್ ಕಾರ್ ಮತ್ತು ಕ್ಲಾಸಿಕ್ ಬೈಕ್‌ಗಳ ರ‍್ಯಾಲಿ ನಡೆಯಿತು ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

ದಾಂಡೇಲಿ: ಒಂದೇ ಕುಟುಂಬದ ಆರು ಮಂದಿ ಸಾವು

ಪ್ರಜಾವಾಣಿ ವಾರ್ತೆ

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): ಕಾಳಿ ನದಿ ಹಿನ್ನೀರು ಪ್ರದೇಶವಾದ ಬೀರಂಪಾಲಿಯ ಅಕ್ವಾಡ ಗ್ರಾಮದ ಹತ್ತಿರ ನಾಲ್ವರು ಮಕ್ಕಳು ಸೇರಿದಂತೆ, ಒಂದೇ ಕುಟುಂಬದ ಆರು ಜನ ಪ್ರವಾಸಿಗರು ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಭಾನುವಾರ ಸಂಜೆ ಮೃತಪಟ್ಟಿದ್ದಾರೆ.

ಹುಬ್ಬಳ್ಳಿಯ ಈಶ್ವರ ನಗರದ ನಿವಾಸಿಗಳಾದ ನಜೀರ್ ಅಹ್ಮದ್ ಹೊಂಬಳ (40), ಅಲ್ಫಿಯಾ ಅಹ್ಮದ್ (10), ಮೋಹಿನ್ ಅಹ್ಮದ್ (6), ಬೆಂಗಳೂರಿನ ನಿವಾಸಿಗಳಾದ ರೇಷಾ ಉನ್ನಿಸಾ ತೋಸಿಫ್ ಅಹ್ಮದ್ (38), ಇಫ್ರಾ ತೋಸಿಫ್ ಅಹ್ಮದ್ (15), ಅಬೀದ್ ಅಹ್ಮದ್ (12) ಮೃತರು. ಪ್ರವಾಸಕ್ಕೆ ಬಂದಿದ್ದ ಎಂಟು ಮಂದಿಯಲ್ಲಿ ಇಬ್ಬರು ಅಪಾಯದಿಂದ ಪಾರಾಗಿದ್ದಾರೆ.

‘ಹುಬ್ಬಳ್ಳಿಯಿಂದ ದಾಂಡೇಲಿಯ ಪ್ರವಾಸಕ್ಕೆ ಕುಟುಂಬ ಸಮೇತರಾಗಿ ಎಂಟು ಜನರು ಬಂದಿದ್ದು ನದಿ ನೀರಿನಲ್ಲಿ ಆಟ ಆಡುತ್ತಿದ್ದಾಗ ಆಳ ನೀರಿಗೆ ಕಾಲು ಜಾರಿದ ಮಕ್ಕಳನ್ನು ರಕ್ಷಿಸಲು ಮುಂದಾದರು. ಒಬ್ಬರ ನಂತರ ಒಬ್ಬರು ಮುಳುಗಿ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಕುರಿತು ದಾಂಡೇಲಿ ಗ್ರಾಮೀಣ ಠಾಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಜಿ ಮೇಯರ್ ಮನೆಯಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಎಂ.ವಿ 2ನೇ ಹಂತದಲ್ಲಿರುವ ಮಾಜಿ ಮೇಯರ್ ಆರ್. ನಾರಾಯಣಸ್ವಾಮಿ ಅವರ ಮನೆಯಲ್ಲಿ ಕಳ್ಳತನ ನಡೆದಿದ್ದು, ಸಂಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಇತ್ತೀಚೆಗೆ ನಡೆದಿರುವ ಕಳ್ಳತನ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಭದ್ರತಾ ಸಿಬ್ಬಂದಿಯಾಗಿದ್ದ ನೇಪಾಳದ ವ್ಯಕ್ತಿಯೇ ಕಳ್ಳತನ ಮಾಡಿರುವ ಅನುಮಾನವಿದೆ. ಈತ ನಾಪತ್ತೆಯಾಗಿದ್ದು, ಹುಡುಕಾಟ ನಡೆದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲ ದಿನಗಳ ಹಿಂದೆಯಷ್ಟೇ ನೇಪಾಳದ ವ್ಯಕ್ತಿ ಕೆಲಸಕ್ಕೆ ಸೇರಿದ್ದ. ಮನೆಯಲ್ಲಿ ಚಿನ್ನಾಭರಣ, ನಗದು ಇರುವುದನ್ನು ನೋಡಿದ್ದ. ಹೀಗಾಗಿ, ಸಂಚು ರೂಪಿಸಿ ಕಳ್ಳತನ ಮಾಡಿರುವ ಶಂಕೆ ಇದೆ’ ಎಂದು ತಿಳಿಸಿವೆ.

‘ನಾರಾಯಣಸ್ವಾಮಿ ಮನೆಯವರೆಲ್ಲ ಇತ್ತೀಚೆಗೆ ಹೊರಗಡೆ ಹೋಗಿದ್ದರು. ಇದೇ ಸಂದರ್ಭದಲ್ಲಿಯೇ ಆರೋಪಿ, ಕಳ್ಳತನ ಮಾಡಿ ಪರಾರಿಯಾಗಿದ್ದಾನೆ. ₹99.75 ಲಕ್ಷ ಮೌಲ್ಯದ 1 ಕೆ.ಜಿ 425 ಗ್ರಾಂ ಚಿನ್ನಾಭರಣ, ₹ 18.92 ಲಕ್ಷ ಮೌಲ್ಯದ 22 ಕೆ.ಜಿ ಬೆಳ್ಳಿ ಸಾಮಗ್ರಿ, ₹ 6.50 ಲಕ್ಷ ಮೌಲ್ಯದ ಮೂರು ಕೈ ಗಡಿಯಾರಗಳು ಹಾಗೂ ₹ 1.29 ಲಕ್ಷ ನಗದು ಕಳ್ಳತನ ಆಗಿರುವುದಾಗಿ ದೂರುದಾರರು ತಿಳಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಹತ್ಯೆಗೆ ಕೋಮು ಬಣ್ಣ ಬೇಡ: ಎಸ್‌ಯುಸಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯ ನೇಹಾ ಹಿರೇಮಠ ಹತ್ಯೆಯು ಹೇಯ ಘಟನೆಯಾಗಿದ್ದು, ಆರೋಪಿಗೆ ಕಾನೂನಿನ ಪ್ರಕಾರ ಕಠಿಣ ಶಿಕ್ಷೆ ವಿಧಿಸಬೇಕು. ಆದರೆ, ಈ ಘಟನೆಗೆ ಕೋಮು ಬಣ್ಣ ಬಳಿಯಬಾರದು ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ತಿಳಿಸಿದೆ.

ರಾಜ್ಯ ಬಿಜೆಪಿಗೆ ಜನರ ಮುಂದೆ ಪರಿಣಾಮಕಾರಿಯಗಿ ಹೇಳಿಕೊಳ್ಳುವ ವಿಷಯ ಇಲ್ಲವಾಗಿತ್ತು. ಇಂತಹ ಸಂದರ್ಭದಲ್ಲಿ ನಡೆದ ಈ ದುರ್ಘಟನೆಯನ್ನು ಬಿಜೆಪಿ ಚುನಾವಣಾ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದೆ. ಇದನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಿ, ಇದು ಕೋಮು ದಳ್ಳುರಿಗೆ ದಾರಿ ಮಾಡದಂತೆ ಕ್ರಮ ಕೈಗೊಳ್ಳಬೇಕು ಎಂದು ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ ಒತ್ತಾಯಿಸಿದ್ದಾರೆ.

ವಿಮಾನದಲ್ಲಿ ಬಾರದ ಲಗೇಜ್: ಪರದಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಂಗಳೂರಿನಿಂದ ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಭಾನುವಾರ ರಾತ್ರಿ ಬಂದಿಳಿದ ಇಂಡಿಗೊ ಸಂಸ್ಥೆಯ ವಿಮಾನದಲ್ಲಿ ಪ್ರಯಾಣಿಸಿದ 20ಕ್ಕೂ ಅಧಿಕ ಪ್ರಯಾಣಿಕರ ಲಗೇಜ್‌ಗಳನ್ನು ಬೆಂಗಳೂರಿನಲ್ಲೇ ಬಿಟ್ಟುಬರಲಾಗಿತ್ತು.

ಬೆಂಗಳೂರಿನಿಂದ ಸಂಜೆ 5.55ಕ್ಕೆ ಹೊರಟ ವಿಮಾನ, ರಾತ್ರಿ 7.25ಕ್ಕೆ ಇಲ್ಲಿಗೆ ಬಂದು ತಲುಪಿತು. ಆದರೆ, ತಮ್ಮ ಲಗೇಜ್‌ಗಳು ಬಾರದ ಹಿನ್ನೆಲೆಯಲ್ಲಿ ಶಾಸಕ ಬಸವರಾಜ ಬೊಮ್ಮಾಯಿ ಸೇರಿದಂತೆ 20ಕ್ಕೂ ಅಧಿಕ ಪ್ರಯಾಣಿಕರು ಪರದಾಡಿದರು. ವಿಮಾನ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

‘ಈ ವಿಮಾನದಲ್ಲಿ ಮಲೇಷ್ಯಾ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸಿದ್ದರು. ಅವರ ಬ್ಯಾಗ್ ಹೆಚ್ಚಿನ ಭಾರವಿರುವ ಕಾರಣಕ್ಕೆ, ನಮ್ಮ ಬ್ಯಾಗ್ ಬಿಟ್ಟುಬರಲಾಗಿದೆ. ನಮ್ಮಲ್ಲಿ ಹಲವರು ಹಿರಿಯ ನಾಗರಿಕರಿದ್ದಾರೆ. ಅವರ ಔಷಧ, ಅಗತ್ಯ ವಸ್ತುಗಳು ಅದರಲ್ಲಿವೆ. ವಿಮಾನ ಸಿಬ್ಬಂದಿ ಬೇಜವಾಬ್ದಾರಿಯಿಂದ ನಾವು ತೊಂದರೆ ಅನುಭವಿಸುವಂತಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರಿನಿಂದ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕರು ತಮ್ಮ ಲಗೇಜ್‌ಗಳು ಇಲ್ಲದೆ ಪರದಾಡಿದರು

‘ವಿಮಾನ ಟೇಕಾಫ್ ಆಗುವ ಕೆಲವೇ ನಿಮಿಷ ಮುನ್ನ, ಪ್ರಯಾಣಿಕರ ಲಗೇಜ್‌ಗಳ ಭಾರ ಹೆಚ್ಚಾಗಿರುವುದು ಗೊತ್ತಾಗಿದೆ. ಹಾಗಾಗಿ ಹೆಚ್ಚುವರಿ ಲಗೇಜ್ ಬಿಟ್ಟುಬರಲಾಗಿದೆ. ಮುಂಚಿತವಾಗಿ ಮಾಹಿತಿ ನೀಡಿದರೆ ಪ್ರಯಾಣಿಕರು ಆತಂಕಗೊಳ್ಳುವ ಕಾರಣ, ಈಗ ಮಾಹಿತಿ ಕೊಡಲಾಗಿದೆ. ಸೋಮವಾರ ಬೆಳಿಗ್ಗೆ ಬರಲಿರುವ ಮೊದಲ ವಿಮಾನದಲ್ಲಿ ಎಲ್ಲ ಲಗೇಜ್‌ಗಳನ್ನು ತರಿಸಿ, ಪ್ರಯಾಣಿಕರ ಮನೆಗೇ ತಲುಪಿಸಲಾಗುವುದು’ ಎಂದು ಸಾಂಬ್ರಾ ವಿಮಾನ ನಿಲ್ದಾಣ ನಿರ್ದೇಶಕ ಎಸ್.ತ್ಯಾಗರಾಜನ್ ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಬಸ್ ಹರಿದು ವೃದ್ಧೆಯ ಕಾಲು ತುಂಡು ಸಹಾಯಕ್ಕೆ ಬಾರದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಇಲ್ಲಿನ ಬಸ್ ನಿಲ್ದಾಣದಲ್ಲಿ ನಗರದ ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಹರಿದು ವೃದ್ಧೆಯೊಬ್ಬರು ಕಾಲು ತುಂಡಾಯಿತು. ಆದರೆ ವೃದ್ಧೆ ನರಳುತ್ತಿದ್ದರೂ ಬಸ್ ನಿರ್ವಾಹಕ ಮತ್ತು ಚಾಲಕ ಸಹಾಯಕ್ಕೆ ಬಾರದೆ ವೃದ್ಧೆಯನ್ನು ಬಿಟ್ಟು ಪರಾರಿಯಾಗಿದ್ದರು.

ಭಾನುವಾರ ಪಟ್ಟಣಕ್ಕೆ ಬೆಣ್ಣೆಮಾರಲು ಬಂದ ತಾಲ್ಲೂಕಿನ ಮುದೇನೂರಿನ ಶಾಂತಮ್ಮ ಭರಮಪ್ಪ ಮಾಳನಾಯಕನಹಳ್ಳಿ (75) ಅವರ ಮೇಲೆ ನಿಲ್ದಾಣದೊಳಕ್ಕೆ ವೇಗವಾಗಿ ಬರುತ್ತಿದ್ದ ಬಸ್ ಹರಿದು ಬಲಗಾಲಿನ ಮೊಣಕಾಲಿನ ಕೆಳಭಾಗದಿಂದ ಪಾದವರೆಗೆ ಎಲುಬು, ಕೀಲುಗಳು ತುಂಡಾದವು.

‘ಅಪಘಾತ ಸಂಭವಿಸಿ ಅರ್ಧ ಗಂಟೆ ಕಳೆದರೂ ಸಾರಿಗೆ ಅಧಿಕಾರಿಗಳು ವೃದ್ಧೆಯ ಬಳಿ ಬರಲಿಲ್ಲ’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ನಿಲ್ದಾಣದಲ್ಲಿದ್ದ ಅನೇಕರು ಈ ಘಟನೆಯ ವಿಡಿಯೊ ಮಾಡಲು ಮುಂದಾದರೇ ಹೊರತು ಆಸ್ಪತ್ರೆಗೆ ಸಾಗಿಸಲು ಮುಂದಾಗಲಿಲ್ಲ.

ಕೊನೆಗೆ ಸಾರ್ವಜನಿಕರು, ಕುಟುಂಬದವರು ಆಂಬುಲೆನ್ಸ್‌ನಲ್ಲಿ ಶಾಂತಮ್ಮಳನ್ನು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಇನ್‌ಸ್ಟಾಗ್ರಾಂನಲ್ಲಿ ಫೋಟೊ: ಆರೋಪಿ ಬಂಧನ

ಧಾರವಾಡ: ಕೊಲೆಯಾದ ನೇಹಾ ಮತ್ತು ಆರೋಪಿ ಫಯಾಜ್ ಫೋಟೊ, ‘ನೇಹಾ–ಫಯಾಜ್ ಟ್ರೂ ಲವ್ ಜಸ್ಟಿಸ್ ಫಾರ್ ಲವ್’ ಎಂಬ ಸಂದೇಶವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಪ್ರಕರಣದಲ್ಲಿ ನಗರದ ಗೌಳಿಗಲ್ಲಿಯ ಸಾಧಿಕ್ ಇಮಾಮ್‌ಸಾಬ್ ತಡಕೊಡ ಎಂಬಾತನನ್ನು ಪೊಲೀಸರು ಭಾನುವಾರ ಬಂಧಿಸಿದ್ಧಾರೆ. ಸಾಧಿಕ್ ಪೋಸ್ಟ್ ಬಗ್ಗೆ ಗುರುಶಾಂತಯ್ಯ ಹಿರೇಮಠ ದೂರು ದಾಖಲಿಸಿದ್ದರು.

ಬಿಜೆಪಿಯಿಂದ ಡಿ.ಸಿ ಕಚೇರಿ ದಾಖಲೆ ಕಳವು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿಜಯನಗರ ಜಿಲ್ಲೆಯ ಅತಿಸೂಕ್ಷ್ಮ ಮತಗಟ್ಟೆಗಳ ಮಾಹಿತಿ ಇದ್ದ ದಾಖಲೆಯನ್ನು ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಿಂದ ಕಳವು ಮಾಡಲಾಗಿದ್ದು, ಈ ಸಂಬಂಧ ಬಿಜೆಪಿ ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಸಿ. ಶಿವಶಂಕರ್ ವಿರುದ್ಧ ಟಿ.ಬಿ.ಡ್ಯಾಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

‘ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ಅತಿಸೂಕ್ಷ್ಮ ಮತಗಟ್ಟೆಗಳ ಮಾಹಿತಿಯನ್ನು ಜಿಲ್ಲಾ ಪೊಲೀಸ್ ವರಿಷ್ಠರು ಇ–ಮೇಲ್ ಮೂಲಕ ಜಿಲ್ಲಾಡಳಿತಕ್ಕೆ ರವಾನಿಸಿದ್ದರು. ಅದರ ಪ್ರಿಂಟೌಟ್ ತೆಗೆದಿದ್ದ ಪ್ರಥಮ ದರ್ಜೆ ಸಹಾಯಕ ಹರಿಕುಮಾರ್ ಅವರು ಪರಿಶೀಲನೆಗಾಗಿ ಮತ್ತು ಮೇಲಧಿಕಾರಿಗಳ ಸಹಿಗಾಗಿ ಶಿರಸ್ತೇದಾರ್ ಮನೋಜ್ ಲಾಡೆ ಅವರಿಗೆ ತಿಳಿಸಿ, ಅವರ ಮೇಜಿನ ಮೇಲೆ ಇರಿಸಿದ್ದರು.

ಏಪ್ರಿಲ್ 15ರಂದು ಬೆಳಿಗ್ಗೆ 11.30ರ ವೇಳೆಗೆ ಕಚೇರಿಗೆ ಅಕ್ರಮ ಪ್ರವೇಶ ಮಾಡಿದ ಬಿಜೆಪಿ ಕಾರ್ಯದರ್ಶಿ ಈ ದಾಖಲೆಯನ್ನು ಕಳವು ಮಾಡಿ, ಅದನ್ನು ತಮ್ಮ ಮೊಬೈಲ್‌ನಲ್ಲಿ ಪಿಡಿಎಫ್ ಮಾಡಿಕೊಂಡು ಪಕ್ಷದ ಇತರ ಕಾರ್ಯಕರ್ತರಿಗೆ ರವಾನಿಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಶಿವಶಂಕರ್ ತಮ್ಮ ಮೊಬೈಲ್‌ನಿಂದ ಈ ಮಾಹಿತಿಯನ್ನು ಬೇರೆಯವರಿಗೆ ರವಾನಿಸಿದ ಕಾರಣ ಏಪ್ರಿಲ್ 17ರಂದು ಇಡೀ ಪ್ರಕರಣ ಬೆಳಕಿಗೆ ಬಂತು. ಮೇಲಧಿಕಾರಿಗಳೊಂದಿಗೆ ಚರ್ಚಿಸಲು ಸಮಯ ತೆಗೆದುಕೊಂಡಿದ್ದರಿಂದ ಇದೇ 19ರಂದು ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ತಿಳಿಸಲಾಗಿದೆ.

ಮುಖ್ಯಾಂಶಗಳು

- ಜಿಲ್ಲೆಯ ಅತಿಸೂಕ್ಷ್ಮ ಮತಗಟ್ಟೆಗಳ ಮಾಹಿತಿ ಕಳವು
- ಬಿಜೆಪಿ ಪದಾಧಿಕಾರಿ ವಿರುದ್ಧ ದೂರು
- ಸ್ಮಾರ್ಟ್‌ಫೋನ್ ಬಳಸಿ ದಾಖಲೆ ಕಳ್ಳತನ: ಆರೋಪ

ಲೋಪ ಮುಚ್ಚಿಕೊಳ್ಳಲು ದೂರು: ‘ಪ್ರಮುಖ ದಾಖಲೆಗಳು ಇರುವ ಕಡತಗಳನ್ನು ಸುರಕ್ಷಿತವಾಗಿ ಇಡಬೇಕಿರುವುದು ಜಿಲ್ಲಾಡಳಿತದ ಕರ್ತವ್ಯ. ಈ ವಿಚಾರದಲ್ಲಿ ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿಯನ್ನೂ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

ತಮ್ಮ ಪಾಲಿನ ಕರ್ತವ್ಯದಲ್ಲಿ ಆಗಿರುವ ಲೋಪವನ್ನು ಮುಚ್ಚಿಕೊಳ್ಳಲು ಕಳವು ದೂರು ನೀಡಿ ಎಫ್‌ಐಆರ್ ದಾಖಲಿಸಿದಂತೆ ಕಾಣುತ್ತಿದೆ ಎಂದು ಅವರು ಹೇಳಿದರು.

ಬೆಂಗಳೂರು ತಾಪಮಾನ ಪ್ರತಿ ವರ್ಷವೂ ಏರುಗತಿ

• ಸ್ನೇಹಾ ರಮೇಶ್

ಬೆಂಗಳೂರು: ನಗರದಲ್ಲಿ ಕೆಲವು ವರ್ಷಗಳಿಂದ ಬೇಸಿಗೆಯ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ ಗಣನೀಯವಾಗಿ ಏರಿಕೆ ಕಾಣುತ್ತಿದೆ. ಇದು ಜಾಗತಿಕ ತಾಪಮಾನದ ಪರಿಣಾಮದ ಮುನ್ಸೂಚನೆಯೆಂದು ವಿಶ್ಲೇಷಿಸಲಾಗಿದೆ.

ಈ ವರ್ಷ ಮಾರ್ಚ್‌ನಲ್ಲಿ ದಾಖಲಾದ ಗರಿಷ್ಠ ತಾಪಮಾನವನ್ನು 2011ರ ಮಾರ್ಚ್‌ನ ಗರಿಷ್ಠ ತಾಪಮಾನಕ್ಕೆ ಹೋಲಿಸಿದರೆ 1.8 ಡಿಗ್ರಿ ಸೆಲ್ಸಿಯಸ್ ಉಷ್ಣತೆ ಹೆಚ್ಚಾಗಿದೆ. 2011ರ ಏಪ್ರಿಲ್‌ನಲ್ಲಿ ಗರಿಷ್ಠ ತಾಪಮಾನ 34.6 ಡಿಗ್ರಿ ಸೆಲ್ಸಿಯಸ್ ವರದಿಯಾದರೆ, ಈ ವರ್ಷ 37.6 ಡಿಗ್ರಿ ಸೆಲ್ಸಿಯಸ್‌ಗೆ ಏರಿದೆ. 2016ರ ಏಪ್ರಿಲ್‌ನಲ್ಲಿ ಗರಿಷ್ಠ ಉಷ್ಣಾಂಶ 39.2 ಡಿಗ್ರಿ ಸೆಲ್ಸಿಯಸ್ ವರದಿಯಾಗಿತ್ತು. ಇದು ದಾಖಲೆಯ ಗರಿಷ್ಠ ಉಷ್ಣಾಂಶವಾಗಿದೆ.

'ಕೆಲ ವರ್ಷಗಳಿಂದ ತಾಪಮಾನದಲ್ಲಿ ಗಣನೀಯ ಏರಿಕೆಆಗುತ್ತಿದೆ' ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದರು.

ಈ ವರ್ಷ ಮಾರ್ಚ್‌ನಲ್ಲಿ ಮಳೆಯಾಗಿಲ್ಲ. ಏಪ್ರಿಲ್‌ನಲ್ಲಿಯೂ ನಿರೀಕ್ಷಿತ ಮಳೆ ಸುರಿಯಲಿಲ್ಲ. ಇದರಿಂದ ತಾಪಮಾನ ಏರಿಕೆಯಾಗಿದೆ. ನಗರದಲ್ಲಿ ಮಾರ್ಚ್‌ನಲ್ಲಿ ಸರಾಸರಿ 14.7 ಮಿ.ಮೀ. ಮತ್ತು ಏಪ್ರಿಲ್‌ನಲ್ಲಿ 61.77 ಮಿ.ಮೀ. ವಾಡಿಕೆ ಮಳೆ ಗುರುತಿಸಲಾಗಿದೆ. ಆದರೆ, ಈ ಬಾರಿ ಎರಡು ತಿಂಗಳಲ್ಲೂ 2 ಎಂಎಂ ಗಿಂತ ಕಡಿಮೆ ಮಳೆಯಾಗಿದೆ.

ಹಸಿರುಮನೆ ಅನಿಲಗಳ ಹೆಚ್ಚಿದ ಹೊರಸೂಸುವಿಕೆ, ಗಿಡ–ಮರಗಳ ನಾಶ ಹಾಗೂ ನಗರೀಕರಣದಿಂದ ಹವಾಮಾನದಲ್ಲಿ ಬದಲಾವಣೆ ಆಗುತ್ತಿದೆಯೆಂದು ತಜ್ಞರು ವಿಶ್ಲೇಷಿಸಿದ್ದಾರೆ.

'ಪ್ರತಿ ವಾರ್ಡ್‌ನಲ್ಲಿ ಕಿರು ಅರಣ್ಯವನ್ನು ನಿರ್ಮಿಸಬೇಕಿದೆ. ಸಸ್ಯ ವರ್ಗದ ಹೊದಿಕೆ ಇದ್ದಲ್ಲಿ ತಾಪಮಾನ ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಹಸಿರು ಹೊದಿಕೆಯ ನಷ್ಟವು ತಾಪಮಾನ ಹೆಚ್ಚಳಕ್ಕೆ ನೇರವಾಗಿ ಸಂಬಂಧಿಸಿದೆ. 1970ರ ದಶಕದಲ್ಲಿ ನಗರದಲ್ಲಿ ಸಸ್ಯವರ್ಗವು ಹೆಚ್ಚಾಗಿತ್ತು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆ ಪ್ರಾಧ್ಯಾಪಕ ಟಿ.ವಿ. ರಾಮಚಂದ್ರ ವಿವರಿಸಿದರು.



ನಗರದಲ್ಲಿ ಈವರೆಗೆ ಮಳೆಯಾಗದಿದ್ದರಿಂದ ತಾಪಮಾನ ಹೆಚ್ಚಳವಾಗಿದೆ. ಹಸಿರುಮನೆ ಅನಿಲಗಳ ಹೆಚ್ಚಳ ಮತ್ತು ನಗರೀಕರಣದಿಂದಾಗಿ ಗರಿಷ್ಠ ತಾಪಮಾನ ಏರಿಕೆಯಾಗುತ್ತಿದೆ

ಪ್ರೊ.ಜೆ. ಶ್ರೀನಿವಾಸನ್, ದಿವೇಚಾ ಸೆಂಟರ್ ಫಾರ್ ಕ್ಲೈಮೇಟ್ ಚೇಂಜ್‌ನ ವಿಜ್ಞಾನಿ

ನಿರೀಕ್ಷಿತ ಸರಾಸರಿ ಮಳೆ ಪ್ರಮಾಣ

14.7 ಮಿ.ಮೀ ಮಾರ್ಚ್

61.7 ಮಿ.ಮೀ ಏಪ್ರಿಲ್

ಮಳೆ ಬಿದ್ದ ಪ್ರಮಾಣ

ಮಾರ್ಚ್ 2024ರಲ್ಲಿ	ಏಪ್ರಿಲ್ 2024ರಲ್ಲಿ
ಮಳೆ ಬಿದ್ದಿಲ್ಲ	2ಮಿ.ಮೀ.ಗಿಂತಲೂ ಕಡಿಮೆ

ನಗರದ ವಿವಿಧೆಡೆ ಜನ್ಮ ಕಲ್ಯಾಣ ಮಹೋತ್ಸವ ಅಂಗವಾಗಿ ಕಾರ್ಯಕ್ರಮ

ಮಹಾವೀರರ ಸ್ಮರಣೆ, ಶಾಂತಿಗಾಗಿ ಕಾಲ್ನಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರ ಮಹಾವೀರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಸಮಸ್ತ ಜೈನ ಸಮಾಜದ ವತಿಯಿಂದ ಬೆಳಿಗ್ಗೆ 9 ಗಂಟೆಗೆ ಟೌನ್‌ಹಾಲ್‌ನಿಂದ ಸ್ವಾತಂತ್ರ್ಯ ಉದ್ಯಾನದವರೆಗೆ 'ವಿಶ್ವ ಶಾಂತಿಗಾಗಿ ಕಾಲ್ನಡಿಗೆ'ಯನ್ನು ಹಮ್ಮಿಕೊಳ್ಳಲಾಗಿತ್ತು.

ಜೈನ ಸಮಾಜ ಮತ್ತು ಜೈನ ಯುವ ಸಂಘಟನೆಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಹಾವೀರರ ಜನ್ಮ ಕಲ್ಯಾಣ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಸಂಘಟನೆಯ ಪದಾಧಿಕಾರಿಗಳು ಮಹಾವೀರರ ಮೂರ್ತಿಯನ್ನು ವಾದ್ಯಗೋಷ್ಠಿಯೊಂದಿಗೆ ವೇದಿಕೆಗೆ ಮೆರವಣಿಗೆಯಲ್ಲಿ ತಂದು, ಯತಿಗಳ ಸಮ್ಮುಖದಲ್ಲಿ ಅಭಿಷೇಕ ಮಾಡಿದರು.

ಇದಕ್ಕೂ ಮೊದಲು ಜೈನ ಸಮುದಾಯದವರು ವಿಶ್ವ ಶಾಂತಿ ಸಾರಲು ಪುರಭವನ ವೃತ್ತದಿಂದ ಜಾಥಾ ನಡೆಸಿದರು. ಸಮುದಾಯದ ಯುವತಿಯರು, ಮಹಿಳೆಯರು ಹಾಗೂ ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕಾಲ್ನಡಿಗೆ ವೇಳೆ ಭಗವಾನ್ ಮಹಾವೀರರ ಸಂದೇಶಗಳನ್ನು ಸಾರಲಾಯಿತು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ವೇಷಧಾರಿಗಳು ಸಾಮಾಜಿಕ ಜಾಲತಾಣಗಳು, ಕುಡಿಯುವ ನೀರಿನ ಬಳಕೆಯ ಬಗ್ಗೆ ಜಾಗೃತಿ ಮೂಡಿಸಿದರು. ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಕಣ್ಮನ ಸೆಳೆದವು.

ಬಳಿಕ ಜೈನ ಯುವ ಸಂಘಟನೆ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಬೆಂಗಳೂರಿನ ಜೈನ ಆಚಾರ್ಯ ಭಗವಂತರು, ಸಾಧುಗಳ ಸಾನಿಧ್ಯದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನ 2 ಗಂಟೆಗೆ ಜೈನ ಸನ್ಯಾಸಿಗಳು ಮಹಾಮಂಗಳೀಕವನ್ನು ನೆರವೇರಿಸಿದರು.

ಇದೇ ಸಂದರ್ಭದಲ್ಲಿ ರಕ್ತದಾನ ಶಿಬಿರ, ಉಚಿತ ಕಣ್ಣು ಪರೀಕ್ಷೆ, ಮಧುಮೇಹ ಪರೀಕ್ಷೆ ಶಿಬಿರಗಳನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಬಂದ ಜನರಿಗೆ ಮಜ್ಜಿಗೆ, ಹಾಲು ವಿತರಿಸಲಾಯಿತು. ಪ್ರಸಾದದ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಮಹಾವೀರ ಜಯಂತಿ ಪ್ರಯುಕ್ತ ಜೈನ ಯುವ ಸಂಘಟನೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಜೈನ ಸಮುದಾಯದ ಮಹಿಳೆಯರು ಹೆಜ್ಜೆ ಹಾಕಿದರು – ಪ್ರಜಾವಾಣಿ ಚಿತ್ರ

ವಹ್ನಿಕುಲ ಸಮಾಜಕ್ಕೆ ಸುಧಾಕರ್ ಅವಮಾನ: ಆರೋಪ

ಯಲಹಂಕ: ವಹ್ನಿಕುಲ ಕ್ಷತ್ರಿಯರ (ತಿಗಳ) ಮುಖಂಡ ವಿಜಯಕುಮಾರ್ ಮತ್ತು ಸಂಗಡಿಗರು ಬಿಜೆಪಿಗೆ ಸೇರಲು ಮುಂದಾಗಿದ್ದರೂ ಅದಕ್ಕೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಅಡ್ಡಗಾಲು ಹಾಕಿ ಅವಮಾನ ಮಾಡಿದ್ದಾರೆ ಎಂದು ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘದ ಮಾಜಿ ಅಧ್ಯಕ್ಷ ಸಿ.ಜಯರಾಜ್ ಆರೋಪಿಸಿದರು.

ಕೋಗಿಲು ಮುಖ್ಯರಸ್ತೆಯ ಮಾರುತಿ ನಗರದಲ್ಲಿ ಆಯೋಜಿಸಿದ್ದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವಹ್ನಿಕುಲ ಸಮಾಜದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಾಲೂರು ಕ್ಷೇತ್ರದಿಂದ ಸ್ಪರ್ಧಿಸಲು ಹೂಡಿ ವಿಜಯಕುಮಾರ್‌ಗೆ ಟಿಕೆಟ್ ನೀಡಬೇಕೆಂದು ಕೇಳಲು ಸಮಾಜದ ಮುಖಂಡರು ಮತ್ತು ಸ್ವಾಮೀಜಿಗಳು ಸುಧಾಕರ್ ನಿವಾಸಕ್ಕೆ ಹೋಗಿದ್ದರು. ಆಗ ಅವರನ್ನು ಮನೆಯೊಳಗೆ ಕರೆಯದೇ ಅವಮಾನ ಮಾಡಿದ್ದರು. ಬಿಜೆಪಿ ಟಿಕೆಟ್ ತಪ್ಪುವಂತೆ ಮಾಡಿದ್ದರು. ವಿಜಯಕುಮಾರ್ ಪಕ್ಷೇತರನಾಗಿ ಸ್ಪರ್ಧಿಸಿ ಕೆಲವೇ ಮತಗಳಿಂದ ಸೋಲನುಭವಿಸಿದ್ದರು. ಬಳಿಕವೂ ಸಮಾಜ ಸೇವೆಯಲ್ಲಿ ಅವರು ಸಕ್ರಿಯರಾಗಿದ್ದು, ಬಿಜೆಪಿಗೆ ಸೇರಬೇಕು ಎಂಬುದು ನಮ್ಮ ಆಶಯವಾಗಿತ್ತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಲ್ಲಿ ಮಾತನಾಡಿ ಏ.10ರಂದು ಬಿಜೆಪಿ ಸೇರ್ಪಡೆಗೆ ಕಾರ್ಯಕ್ರಮ ನಿಗದಿಯಾಗಿತ್ತು. ಅದನ್ನು ತಪ್ಪಿಸಿ ವಹ್ನಿಕುಲ ಕ್ಷತ್ರಿಯರನ್ನು ತುಳಿಯುವ ಕೆಲಸ ಮಾಡಿದ್ದಾರೆ ಎಂದು ದೂರಿದರು.

4 ವರ್ಷದ ಪದವಿ ವಿದ್ಯಾರ್ಥಿಗಳಿಗೆ ಎನ್‌ಇಟಿ, ಪಿಎಚ್‌.ಡಿಗೆ ಅವಕಾಶ

ನವದೆಹಲಿ(ಪಿಟಿಐ): ನಾಲ್ಕು ವರ್ಷದ ಪದವಿಯಲ್ಲಿ ಶೇ 75ರಷ್ಟು ಅಂಕಗಳು ಇಲ್ಲವೇ ಸಮಾನ ಗ್ರೇಡ್ ಪಡೆದ ವಿದ್ಯಾರ್ಥಿಗಳು ನೇರವಾಗಿ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಮತ್ತು ಪಿಎಚ್‌.ಡಿ ಅಧ್ಯಯನ ಕೈಗೊಳ್ಳಬಹುದು ಎಂದು ಯುಜಿಸಿ ಅಧ್ಯಕ್ಷ ಎಂ.ಜಗದೀಶ್ ಕುಮಾರ್ ಹೇಳಿದ್ದಾರೆ.

ಈವರೆಗಿನ ವ್ಯವಸ್ಥೆ ಪ್ರಕಾರ, ಎನ್‌ಇಟಿ ಅಧ್ಯಯನ ಮಾಡಲು ಇಚ್ಛಿಸುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ 55ರಷ್ಟು ಅಂಕಗಳನ್ನು ಪಡೆಯಬೇಕಿತ್ತು. ಜೆಆರ್‌ಎಫ್ ಜೊತೆ ಅಥವಾ ಜೆಆರ್‌ಎಫ್ ಇಲ್ಲದೆಯೇ ಪಿಎಚ್‌.ಡಿ ಅಧ್ಯಯನ ಕೈಗೊಳ್ಳಲು ಬಯಸುವ ಅಭ್ಯರ್ಥಿಗಳು ನಾಲ್ಕು ವರ್ಷದ ಪದವಿಯಲ್ಲಿ ಕನಿಷ್ಠ 75ರಷ್ಟು ಅಂಕಗಳು ಇಲ್ಲವೇ ಸಮಾನ ಗ್ರೇಡ್ ಪಡೆದಿರಬೇಕಾಗುತ್ತದೆ.

'ನಾಲ್ಕು ವರ್ಷದ ಪದವಿಯಲ್ಲಿ ಯಾವುದೇ ವಿಷಯಗಳನ್ನು ಅಧ್ಯಯನ ಮಾಡಿದ್ದರೂ, ನಿಗದಿಪಡಿಸಿದ ಅಂಕಗಳು/ಗ್ರೇಡ್ ಪಡೆದ ಅಭ್ಯರ್ಥಿಗಳು ತಾವು ಬಯಸಿದ ಯಾವುದೇ ವಿಷಯದಲ್ಲಿ ಪಿಎಚ್‌.ಡಿ ಅಧ್ಯಯನ ನಡೆಸಲು ಹಾಗೂ ಎನ್‌ಇಟಿ ಬರೆಯಲು ಅವಕಾಶ ನೀಡಲಾಗುತ್ತದೆ' ಎಂದಿದ್ದಾರೆ.

ಉಮಚಗಿ: ಟ್ಯಾಂಕರ್ ನೀರಿಗಾಗಿ ದಿನಪೂರ್ತಿ ಗ್ರಾಮಸ್ಥರ ಪಡಿಪಾಟಲು

ಕೆರೆ ಖಾಲಿ ಮಾಡಿ, ನೀರಿಗೆ ಪರಿತಪಿಸಿದರು

• ಶಿವರಾಯ ಪೂಜಾರಿ

ಹುಬ್ಬಳ್ಳಿ: ಹಲವು ಸಲ ಬರ ಆವರಿಸಿದ್ದರೂ ತಾಲ್ಲೂಕಿನ ಉಮಚಗಿ ಗ್ರಾಮದಲ್ಲಿ ನೀರಿನ ಸಮಸ್ಯೆ ಕಾಡಿರಲಿಲ್ಲ. ಎರಡು ಕೆರೆಗಳು ಆಸರೆ ಆಗಿದ್ದವು. ಆದರೆ, ಈಗ ಗ್ರಾಮಸ್ಥರಿಂದ ಒಂದು ಕೆರೆ ಬರಿದಾಗಿದ್ದರೆ, ಮತ್ತೊಂದು ಕೆರೆಯು ಮಳೆಯಿಲ್ಲದ ಕಾರಣ ಬತ್ತಿದೆ. ಇದರಿಂದ ಗ್ರಾಮಸ್ಥರಿಗೆ ಕುಡಿಯಲು ಮತ್ತು ಬಳಸಲು ನೀರು ಸಿಗದ ಪರಿಸ್ಥಿತಿ ತಲೆದೋರಿದೆ.

ಉಮಚಗಿ ಗ್ರಾಮದಲ್ಲಿ ನಾಲ್ಕು ತಿಂಗಳಿಂದ ನೀರಿನ ಸಮಸ್ಯೆ ತೀವ್ರವಾಗಿದೆ. ಗ್ರಾಮದಲ್ಲಿ ಎರಡು ಕೆರೆಗಳಿದ್ದು, ಮಳೆಗಾಲದಲ್ಲಿ ಒಮ್ಮೆ ಭರ್ತಿಯಾದರೆ ಕನಿಷ್ಠ ನಾಲ್ಕು ವರ್ಷದವರೆಗೆ ನೀರಿನ ಸಮಸ್ಯೆ ಕಾಡುತ್ತಿರಲಿಲ್ಲ. ಒಂದು ವರ್ಷದ ಹಿಂದೆ ಗ್ರಾಮಸ್ಥರೊಬ್ಬರು ಕೆರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಕಾರಣ ಒಂದು ಕೆರೆಯ ನೀರನ್ನು ಖಾಲಿ ಮಾಡಲಾಯಿತು.

'ಕೆರೆಯಲ್ಲಿ ತುಂಬಾ ನೀರಿತ್ತು. ಕೆರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯ ಕೊಳೆತ ಶವ ಮೂರು ದಿನಗಳ ಬಳಿಕ ಸಿಕ್ಕಿತು. ಇದರಿಂದ ಆ ಕೆರೆಯ ನೀರನ್ನು ಬಳಸಲು ಗ್ರಾಮಸ್ಥರು ಹಿಂಜರಿದರು. ಕೆರೆ ನೀರು ಕುಡಿಯಲು ಯೋಗ್ಯ ಎಂದು ಪ್ರಯೋಗಾಲಯದ ವರದಿ ಹೇಳಿದರೂ ಗ್ರಾಮಸ್ಥರು ಕೆರೆಯತ್ತ ಸುಳಿಯಲಿಲ್ಲ. ಹೀಗಾಗಿ ಗ್ರಾಮದ ಮುಖಂಡರ ನಿರ್ಧಾರದಂತೆ ಕೆರೆ ನೀರು ಖಾಲಿ ಮಾಡಲಾಯಿತು' ಎಂದು ಗ್ರಾಮಸ್ಥ ಪ್ರವೀಣ ನಾಗರಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಕೆರೆ ನೀರು ಖಾಲಿ ಮಾಡಿದ ಬಳಿಕ ಕುಡಿಯುವ ನೀರಿಗಾಗಿ ಗ್ರಾಮಸ್ಥರು ನೆಚ್ಚಿಕೊಂಡಿದ್ದ ಇನ್ನೊಂದು ಕೆರೆಯೂ ಮಳೆ ಕೊರತೆಯಿಂದ ಬರಿದಾಯಿತು. ಈಗ ಜನ, ಜಾನುವಾರುಗಳಿಗೆ ಕುಡಿಯಲು ನೀರಿನ ಅಭಾವ ಉಂಟಾಗಿದೆ.

'ಜಿಲ್ಲಾಡಳಿತದಿಂದ ಟ್ಯಾಂಕರ್ ಮೂಲಕ ಹುಬ್ಬಳ್ಳಿಯಿಂದ ಉಮಚಗಿ ಗ್ರಾಮಕ್ಕೆ ಪ್ರತಿದಿನ ಎರಡು ಬಾರಿ ಕುಡಿಯುವ ನೀರು ಪೂರೈಸಲಾಗುತ್ತಿದೆ. ಒಂದು ಮನೆಗೆ ಎರಡು ದಿನಕ್ಕೊಮ್ಮೆ ನಾಲ್ಕು ಕೊಡ ನೀರು ನಿಗದಿಗೊಳಿಸಲಾಗಿದೆ. ಒಂದೊಂದು ಮನೆಯಲ್ಲಿ ಹೆಚ್ಚು ಜನರು ಇರುವುದರಿಂದ ನಾಲ್ಕು ಕೊಡ ನೀರು ಸಾಲುತ್ತಿಲ್ಲ' ಎಂದು ಗ್ರಾಮಸ್ಥರು ಅಳಲು ತೋಡಿಕೊಂಡರು.

'ಟ್ಯಾಂಕರ್ ನೀರು ಬರುವ ದಿನ ಎಲ್ಲಾ ಕೆಲಸ ಬಿಟ್ಟು ಬೆಳಿಗ್ಗೆಯಿಂದ ಖಾಲಿ ಕೊಡಗಳನ್ನು ಹಿಡಿದು ಸರದಿಯಲ್ಲಿ ನಿಲ್ಲಬೇಕು. ಎರಡೇ ಟ್ಯಾಂಕರ್ ನೀರು ಪೂರೈಸುವ ಕಾರಣ ಇಡೀ ಗ್ರಾಮಕ್ಕೆ ನೀರು ಸಾಲುವುದಿಲ್ಲ. ಟ್ಯಾಂಕರ್ ನೀರು ಖಾಲಿಯಾದರೆ, ಖಾಲಿ ಕೊಡಗಳನ್ನು ಹಿಡಿದು ಮನೆಗೆ ಮರಳಬೇಕು' ಎಂದು ಗ್ರಾಮಸ್ಥೆ ದ್ರಾಕ್ಷಾಯಿಣಿ ಗುಳಪ್ಪಗೋಳ ತಿಳಿಸಿದರು.

'ಸದ್ಯ ಟ್ಯಾಂಕರ್ ಮೂಲಕ ಒದಗಿಸುತ್ತಿರುವ ನೀರು ಅರ್ಧ ಊರಿಗೂ ಸಾಲುತ್ತಿಲ್ಲ. ಟ್ಯಾಂಕರ್ ನೀರಿಗಾಗಿ ಹಲವು ಬಾರಿ ಗಲಾಟೆ ನಡೆದಿವೆ. ಗ್ರಾಮಕ್ಕೆ ಪ್ರತಿದಿನ ಎರಡು ಟ್ಯಾಂಕರ್ ಮೂಲಕ ಮೂರು ಬಾರಿ ನೀರು ಒದಗಿಸಬೇಕು. ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಇಲ್ಲದಿದ್ದರೆ, ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು' ಎಂದು ಗ್ರಾಮಸ್ಥರಾದ ರಮೇಶ ನಿಂಬಣ್ಣವರ ಎಚ್ಚರಿಕೆ ನೀಡಿದರು.

ಟ್ಯಾಂಕರ್ ನೀರಿಗಾಗಿ ಗ್ರಾಮಸ್ಥರು ಕೊಡ ಹಿಡಿದು ಕಾಯಬೇಕು

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಉಮಚಗಿ ಗ್ರಾಮಕ್ಕೆ ಸದ್ಯ ಟ್ಯಾಂಕರ್ ಮೂಲಕ ಕುಡಿಯುವ ನೀರು ಒದಗಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಆಗದಂತೆ ಶಾಶ್ವತ ಪರಿಹಾರ ಒದಗಿಸಲಾಗುವುದು

ದಿವ್ಯಪ್ರಭು ಜಿ.ಆರ್.ಜೆ, ಜಿಲ್ಲಾಧಿಕಾರಿ, ಧಾರವಾಡ

ಟ್ಯಾಂಕರ್ ನೀರಿನ ಜತೆಗೆ ಕೋಳಿವಾಡ ಗ್ರಾಮದಿಂದ ಕೊಳವೆಬಾವಿ ನೀರು ಪೂರೈಸಲಾಗುತ್ತಿದೆ. ಗ್ರಾಮದಲ್ಲಿ ನೀರಿನ ಸಮಸ್ಯೆ ಇದ್ದರೆ ಸರಿಪಡಿಸಲಾಗುವುದು

ಪ್ರಕಾಶ ನಾಶಿ, ತಹಶೀಲ್ದಾರ್, ಹುಬ್ಬಳ್ಳಿ ಗ್ರಾಮೀಣ

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ವಿಶ್ವಾಸ

‘ಅಭಿವೃದ್ಧಿಯ ‘ಗ್ಯಾರಂಟಿ’ ಕೈಹಿಡಿಯಲಿದೆ’

• ಬಾಲಕೃಷ್ಣ ಪಿ.ಎಚ್.

ರಾಜಕೀಯ ಹಿನ್ನೆಲೆ ಇರುವ ಕುಟುಂಬದಿಂದ ಬಂದಿರುವ ಎಂ.ವಿ. ರಾಜೀವ್ ಗೌಡ ಅವರು ಇದೇ ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿದ್ದಾರೆ. ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಕ್ಷೇತ್ರದ ಬಗೆಗಿನ ತಮ್ಮ ಅಭಿವೃದ್ಧಿಯ ಕಲ್ಪನೆ ಮತ್ತು ಕ್ಷೇತ್ರದ ಚಿತ್ರಣ ಬಗ್ಗೆ ‘ಪ್ರಜಾವಾಣಿ’ಯೊಂದಿಗೆ ಅವರು ಮಾತನಾಡಿದ್ದಾರೆ.



ಪ್ರಜಾವಾಣಿ ಸಂದರ್ಶನ

ಎಂ.ವಿ. ರಾಜೀವ್ ಗೌಡ

• ನಿಮ್ಮನ್ನು ಯಾಕೆ ಗೆಲ್ಲಿಸಬೇಕು?

ಹಿಂದಿನ ನಾಲ್ಕು ಚುನಾವಣೆಗಳಲ್ಲಿ ಇಲ್ಲಿಂದ ಗೆದ್ದ ಬಿಜೆಪಿಯ ಸಂಸದರು ಜನರ ಸಮಸ್ಯೆಗಳಿಗೆ ಸ್ಪಂದಿಸಿಲ್ಲ. ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಲ್ಲ. ಮತ್ತೊಮ್ಮೆ ಇಂಥವರನ್ನು ಆಯ್ಕೆ ಮಾಡಬಾರದೆಂದು ಜನ ತೀರ್ಮಾನ ಕೈಗೊಂಡಿದ್ದಾರೆ. ಕ್ಷೇತ್ರದ ಸಮಗ್ರ ಅಭಿವೃದ್ಧಿ ನನ್ನ ಕನಸು–ಗುರಿ.

• ನಿಮ್ಮ ಲೆಕ್ಕಾಚಾರಗಳು ಹೇಗಿವೆ?

ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳಷ್ಟೇ ಅಲ್ಲ, ಯಶವಂತಪುರದ ಬಿಜೆಪಿ ಶಾಸಕರ ಬೆಂಬಲವೂ ಇದೆ. ಜೆಡಿಎಸ್ ಕಾರ್ಯಕರ್ತರ ಬೆಂಬಲವೂ ಇದೆ.

• ಬಿಜೆಪಿ ಪಾರಮ್ಯದ ಕ್ಷೇತ್ರವಿದು. ಜೆಡಿಎಸ್ ಕೂಡ ಕೈಜೋಡಿಸಿದೆ. ನಿಮಗೆ ಗೆಲುವು ಕಷ್ಟ ಆಗುವುದಿಲ್ಲವೇ?

ಈ ಬಾರಿ ಮೋದಿ ಅಲೆ ಇಲ್ಲ. ಜೆಡಿಎಸ್–ಬಿಜೆಪಿ ಒಂದಾಗಿರುವುದು ಅವರಿಗೆ ಲಾಭಕ್ಕಿಂತ ನಷ್ಟ ಉಂಟು ಮಾಡಿದೆ. ಜೆಡಿಎಸ್ ಕಾರ್ಯಕರ್ತರಲ್ಲಿ ಇನ್ನೂ ಗೊಂದಲವಿದೆ. ಅವರೆಲ್ಲ ಜೆಡಿಎಸ್ ಬಿಟ್ಟು ಕಾಂಗ್ರೆಸ್‌ಗೆ ಬರುತ್ತಿದ್ದಾರೆ. ದಾಸರಹಳ್ಳಿಯ ಮಾಜಿ ಶಾಸಕರು ಕೂಡ ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದ್ದಾರೆ.

• ಕ್ಷೇತ್ರದ ಅಭಿವೃದ್ಧಿಗೆ ನಿಮ್ಮ ಕನಸುಗಳೇನು?

ಉತ್ತರ ಬೆಂಗಳೂರಿನ ಗೇಟ್‌ವೆ ಹೆಬ್ಬಾಳ ಫ್ಲೈಓವರ್. ಅಲ್ಲಿ ವಾಹನ ಸಂಚಾರ ಸರಾಗವಾಗಬೇಕು. ಉಪನಗರ ರೈಲು ಯೋಜನೆಗಾಗಿ 15 ವರ್ಷಗಳಿಂದ ನಾನು ಹೋರಾಟ ಮಾಡಿದ್ದೇನೆ. ಹೆಬ್ಬಾಳವನ್ನು ‘ಟ್ರಾನ್ಸಿಟ್ ಹಬ್’ ಮಾಡಲಾಗುವುದು. ಯೋಜನಾ ಆಯೋಗದ ಉಪಾಧ್ಯಕ್ಷನಾಗಿದ್ದಾಗ ನಾನೇ ನೀಡಿದ ಸಲಹೆಯಿಂದಾಗಿ ಇಂದು ಮೆಟ್ರೊ ಫೀಡರ್ ಬಸ್ ಕಾರ್ಯಾಚರಣೆ ನಡೆಸುತ್ತಿವೆ. ಕೆರೆಗಳನ್ನು ಸಂರಕ್ಷಿಸಬೇಕು. ಎಲ್ಲ ಅಪಾರ್ಟ್‌ಮೆಂಟ್‌ಗಳಲ್ಲಿ ಶುದ್ಧ ಕುಡಿಯುವ ನೀರಿಗೊಂದು, ಮರುಬಳಕೆಯ ನೀರಿಗೊಂದು ಪೈಪ್‌ಲೈನ್ ಆಗಬೇಕು. ಅಂತರ್ಜಲ ಹೆಚ್ಚಿಸಲು ಮಳೆ ನೀರು ಮರುಪೂರಣವಾಗಬೇಕು. ಉತ್ತಮ ಶಿಕ್ಷಣ, ಉತ್ತಮ ಆರೋಗ್ಯ ಸಿಗಬೇಕು. ಸಾಂಸ್ಕೃತಿಕವಾಗಿಯೂ ಗುಣಮಟ್ಟ ಹೆಚ್ಚಬೇಕು. ಕಲೆ, ಕ್ರೀಡೆಗಳಿಗೆ ಅವಕಾಶ ನೀಡಬೇಕು. ಹೀಗೆ ಹಲವು ಯೋಜನೆಗಳಿವೆ.

• ಬಿಜೆಪಿಯ ಹಿಂದುತ್ವಕ್ಕೆ ನಿಮ್ಮಲ್ಲಿ ಪರ್ಯಾಯವೇನಿದೆ?

ಅಭಿವೃದ್ಧಿ ಮತ್ತು ‘ಗ್ಯಾರಂಟಿ’ ಯೋಜನೆಗಳು ನಮ್ಮ ಪರ್ಯಾಯ. ಹಿಂದುತ್ವ ಈ ಬಾರಿ ನಡೆಯುವುದಿಲ್ಲ. ಧರ್ಮವನ್ನು ದುರುಪಯೋಗ ಮಾಡಿಕೊಂಡು ಎಷ್ಟು ದಿನ ಮತ ಪಡೆಯಲು ಸಾಧ್ಯ? ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿಯ ಕೆಟ್ಟ ಆಡಳಿತದಿಂದಾಗಿ ಜನರು ಸಂಕಷ್ಟಕ್ಕೆ ಸಿಲುಕಿದ್ದರು. ಅಂಥ ಸಂದರ್ಭದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದರಿಂದ ಅವರಿಗೊಂದು ಸಮಾಧಾನ ಸಿಕ್ಕಿತು. ಬದುಕಿನಲ್ಲಿ ಬದಲಾವಣೆಯನ್ನುಂಟು ಮಾಡಿತು.

• ಪ್ರೊಫೆಸರ್ ಆಗಿದ್ದವರು ನೀವು. ಗೆದ್ದಮೇಲೆ ಜನಸಾಮಾನ್ಯರ ಕೈಗೆ ಸಿಗುತ್ತೀರಾ?

ಎಲೈಟ್ ಎಂದು ಕರೆದ ಕೂಡಲೇ ನಾನು ಜನರಿಂದ ದೂರವಾಗುವುದಿಲ್ಲ. ನನಗೆ ರಾಜಕೀಯ ಹಿನ್ನೆಲೆ ಇದೆ. ನೇರ ಚುನಾವಣೆ ನನಗೆ ಮೊದಲನೆಯದ್ದಾಗಿರಬಹುದು. ಆದರೆ, ದೊಡ್ಡಪ್ಪ ಸ್ಪರ್ಧೆ ಮಾಡಿದ್ದಾಗ, ತಂದೆ ಸ್ಪರ್ಧೆ ಮಾಡಿದ್ದಾಗಲೆಲ್ಲ ಕೆಲಸ ಮಾಡಿದ್ದೆ. ಜನರ ಜೊತೆ ಬೆರೆದು ಅನುಭವವಿದೆ.

• ರಾಜಕೀಯ ಅನುಭವಿ ಶೋಭಾ ಕರಂದ್ಲಾಜೆ ಮುಂದೆ ಗೆಲುವು ಸುಲಭವೇ?

ಕರಂದ್ಲಾಜೆ ಅವರು ಎಲ್ಲಿಯಾದರೂ ಅಭಿವೃದ್ಧಿ ಮಾಡಿದ್ದು, ಅದರ ಬಗ್ಗೆ ಮಾತನಾಡಿದ್ದು ಕಂಡಿದ್ದೀರಾ? ಸಣ್ಣ ವಿಷಯ ಸಿಕ್ಕಿದರೆ ಗಲಭೆ ಎಬ್ಬಿಸಲು, ಜಗಳ ತಂದಿಡಲು ಮಾತ್ರ ಬರುತ್ತಾರೆ. ಕರಾವಳಿಯ ಪರಿಸ್ಥಿತಿ ತರಲು ನೋಡುತ್ತಾರೆ. ಕೋಮುಗಲಭೆ ಜನರಿಗೆ ಬೇಕಾಗಿಲ್ಲ. ಬದುಕು ಸುಟ್ಟು ಹೋಗುವುದನ್ನು ಜನ ಬಯಸುವುದಿಲ್ಲ. ನಾವು ನ್ಯಾಯಕ್ಕಾಗಿ ಹೋರಾಟ ಮಾಡುತ್ತೇವೆ. ಒಗ್ಗಟ್ಟಿನಿಂದ ಸಮಾಜವನ್ನು ಮುಂದಕ್ಕೆ ಒಯ್ಯುವುದು ನಮ್ಮ ಚಿಂತನೆ. ಅದು ನನ್ನ ಕೈಹಿಡಿಯುವ ವಿಶ್ವಾಸವಿದೆ.

ಕನ್ನಡಿಗರ ಬದುಕಿಗೇ ‘ಗ್ಯಾರಂಟಿ’ ಇಲ್ಲ: ಬಿಎಸ್‌ವೈ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ನೇತೃತ್ವದ ಆಡಳಿತದಲ್ಲಿ ಕನ್ನಡಿಗರಿಗೆ ಅದರಲ್ಲೂ ಹಿಂದೂಗಳ ಬದುಕಿಗೆ ಗ್ಯಾರಂಟಿ ಇಲ್ಲ. ಕಾಂಗ್ರೆಸ್ ಪಕ್ಷ ರಾಜ್ಯವನ್ನು ಮತಾಂಧರ ಯುದ್ಧಭೂಮಿಯನ್ನಾಗಿ ಮಾಡಿದೆ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಡಿ.ವಿ. ಸದಾನಂದಗೌಡ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಭಾನುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು, ‘ಬಿಜೆಪಿ ಮತ್ತು ಹಿಂದೂ ಕಾರ್ಯಕರ್ತರು, ರಾಮಭಕ್ತರು ಮತ್ತು ಇತರ ಸಾಮಾನ್ಯ ಹಿಂದೂಗಳ ಮೇಲೂ ಮತಾಂಧರಿಂದ ನಿತ್ಯ ದಾಳಿ ನಡೆಯುತ್ತಿದೆ. ಸರ್ಕಾರ ಅಂತಹ ಶಕ್ತಿಗಳನ್ನು ಮಟ್ಟ ಹಾಕುವುದರ ಬದಲಿಗೆ, ಅವರ ಬೆಂಬಲಕ್ಕೆ ನಿಂತಿದೆ’ ಎಂದು ಕಿಡಿಕಾರಿದರು.

ಯಡಿಯೂರಪ್ಪ ಮಾತನಾಡಿ, ರಾಜ್ಯದಲ್ಲಿ ಕೊಲೆ, ಹಲ್ಲೆ, ದೌರ್ಜನ್ಯ ಪ್ರಕರಣಗಳು ಮಿತಿಮೀರಿವೆ. ಸಾಮಾನ್ಯರು ನಿರ್ಭೀತಿಯಿಂದ ಓಡಾಡುವ ಸ್ಥಿತಿ ಇಲ್ಲ. ಇದೊಂದು ಕ್ರೂರ ಸರ್ಕಾರ. ಹುಬ್ಬಳ್ಳಿಯಲ್ಲಿ ನೇಹಾ ಹಿರೇಮಠ ಹತ್ಯೆಯಾಗಿದೆ. ಈಕೆ ಕಾಂಗ್ರೆಸ್ ಕಾರ್ಯಕರ್ತರೊಬ್ಬರ ಮಗಳು. ಇವರಿಗೇ ನ್ಯಾಯಕೊಡಿಸುವ ಕೆಲಸ ಮುಖ್ಯಮಂತ್ರಿಯಿಂದ ಆಗಿಲ್ಲ ಎಂದು ಹರಿಹಾಯ್ದರು.

ಬಿಜೆಪಿ ಕಾರ್ಯಕರ್ತರ ಮೇಲೆ ಮತಾಂಧರು ಕಾರು ಹರಿಸಿದ್ದಾರೆ. ರಾಮ ನವಮಿ ದಿನ ರಾಮ ಭಕ್ತರ ಮೇಲೆ ಹಲ್ಲೆ ನಡೆದಿದೆ. ಹಾವೇರಿ ಜಿಲ್ಲೆಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ, ಉಡುಪಿ ಹಾಸ್ಟೆಲ್‌ನಲ್ಲಿ ಯುವತಿಯ ವಿಡಿಯೊ ಚಿತ್ರೀಕರಣ, ಬೆಳಗಾವಿಯಲ್ಲಿ ದಲಿತ ಮಹಿಳೆಯ ವಿವಸ್ತ್ರ ಘಟನೆಗಳಿಂದ ರಾಜ್ಯದಲ್ಲಿ ಭಯ– ಭೀತಿಯ ವಾತಾವರಣ ಮೂಡಿದೆ ಎಂದರು.

ಕೋಲಾರ, ಶಿವಮೊಗ್ಗದಲ್ಲಿ ಔರಂಗಜೇಬ್ ಮತ್ತು ತಲ್ವಾರ್‌ಗಳ ಕಟೌಟ್ ಹಾಕಿದ್ದರು. ಮಂಡ್ಯದಲ್ಲಿ ಪೊಲೀಸ್ ಅಧಿಕಾರಿಗಳ ಮೂಲಕ ಹನುಮಧ್ವಜ ಇಳಿಸಿದ್ದಾರೆ. ಹನುಮ ಭಕ್ತರನ್ನು ಥಳಿಸಿದ ಕ್ರೂರ ಸರ್ಕಾರವಿದು. ಕಲಾವಿದೆ ಹರ್ಷಿಕಾ ಪೂಣಚ್ಚ ಮೇಲೆ ಹಲ್ಲೆ ನಡೆದಿದೆ. ವಂಟಮೂರಿಯಲ್ಲಿ ಮಹಿಳೆ ಬೆತ್ತಲೆಗೊಳಿಸಿ ಅಮಾನುಷವಾಗಿ ನಡೆದುಕೊಂಡರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಡಿ.ವಿ.ಸದಾನಂದಗೌಡ ಮಾತನಾಡಿ, ಕಾಂಗ್ರೆಸ್ ಸರ್ಕಾರದಲ್ಲಿ ಹಿಂದೂಗಳಿಗೆ ರಕ್ಷಣೆಯೇ ಇಲ್ಲ. ಹಿಂದೂಗಳನ್ನು ತೃತೀಯ ದರ್ಜೆ ನಾಗರಿಕರಂತೆ ನಡೆಸಿಕೊಳ್ಳುತ್ತಿದ್ದಾರೆ. ಪರಿಣಾಮ ಮುಸ್ಲಿಂ ಮತಾಂಧರ ಹಾವಳಿ ಮಿತಿ ಮೀರಿದೆ ಎಂದರು.

‘ದಕ್ಷಿಣ’ ಗೆಲ್ಲಲು ‘ಸೂರ್ಯ’ ಸಂಚಾರ

ಬಿಜೆಪಿ – ಜೆಡಿಎಸ್ ಮುಖಂಡರು, ಕಾರ್ಯಕರ್ತರ ಸಾಥ್ • ತೆರೆದ ವಾಹನದಲ್ಲಿ ಮತಯಾಚನೆ

• ಸಂತೋಷ ಜಿಗಳಿಕೊಪ್ಪ

ಚಂದ್ರಾಲೇಔಟ್‌ನಲ್ಲಿ ಭಾನುವಾರ ಆಯೋಜಿಸಿದ್ದ ಪ್ರಚಾರ ರ್‍ಯಾಲಿಯಲ್ಲಿ ತೆರೆದ ವಾಹನದಲ್ಲಿ ಸಾಗಿದ ತೇಜಸ್ವಿ ಸೂರ್ಯ ಜನರತ್ತ ಕೈ ಬೀಸಿ ಮತಯಾಚನೆ ಮಾಡಿದರು – ಪ್ರಜಾವಾಣಿ ಚಿತ್ರ / ರಂಜು ಪಿ

ಅಭ್ಯರ್ಥಿ ಜತೆ ಒಂದು ದಿನ

ಬೆಂಗಳೂರು: ಬೆಳ್ಳಂಬೆಳಿಗ್ಗೆ ಉದ್ಯಾನದಲ್ಲಿ ವಾಯುವಿಹಾರಿಗಳ ಜೊತೆ ಮಾತುಕತೆ. ನಂತರ, ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಸಮ್ಮುಖದಲ್ಲಿ ತೆರೆದ ವಾಹನದಲ್ಲಿ ‘ಮತಯಾಚನೆ’ ರ್‍ಯಾಲಿ. ರಸ್ತೆಯುದ್ದಕ್ಕೂ ಬಿಜೆಪಿ – ಜೆಡಿಎಸ್ ಪಕ್ಷದ ಪರ ಘೋಷಣೆಗಳು. ನರೇಂದ್ರ ಮೋದಿ ಪರ ಜೈಕಾರಗಳು...

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರು ಭಾನುವಾರ ನಡೆಸಿದ ಪ್ರಚಾರದ ವೈಖರಿ ಇದು.

2019ರ ಚುನಾವಣೆಯಲ್ಲಿ ವಿಜಯಶಾಲಿಯಾಗಿದ್ದ ತೇಜಸ್ವಿ ಸೂರ್ಯ, 28ನೇ ವಯಸ್ಸಿಗೆ ಲೋಕಸಭೆ ಪ್ರವೇಶಿಸಿದ್ದರು. ಈ ಬಾರಿಯೂ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದು, ಪುನರಾಯ್ಕೆ ಬಯಸಿ ಮತಯಾಚನೆ ಮಾಡುತ್ತಿದ್ದಾರೆ.

ಬಿಳಿ ಅಂಗಿ– ಪಂಚೆ ತೊಟ್ಟು ಗಿರಿನಗರ ಮನೆಯಿಂದ ಬೆಳಿಗ್ಗೆ 7 ಗಂಟೆಗೆ ಹೊರಟ ತೇಜಸ್ವಿ ಸೂರ್ಯ, ಚನ್ನಮ್ಮನ ಕೆರೆ ಉದ್ಯಾನದಲ್ಲಿ ವಾಯುವಿಹಾರಿಗಳನ್ನು ಭೇಟಿಯಾದರು. ಸಭೆ ನಡೆಸಿ, ‘ನಿಮ್ಮದೊಂದು ಮತ ನೀಡಿ, ಪ್ರಧಾನಿ ಮೋದಿ ಕೈ ಬಲಪಡಿಸಿ’ ಎಂದು ಕೋರಿದರು. 5 ವರ್ಷ ಅಧಿಕಾರ ಅವಧಿ ಯಲ್ಲಿ ಕೈಗೊಂಡ ಕೆಲಸಗಳ ಬಗ್ಗೆ ವಿವರಿಸಿದರು.

ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಬೈಕ್ ರ್‍ಯಾಲಿ ಸ್ಥಳಕ್ಕೆ ಬೆಳಿಗ್ಗೆ 8 ಗಂಟೆಗೆ ತೇಜಸ್ವಿ ಸೂರ್ಯ ಹಾಜರಾದರು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸಹ ಸಾಥ್ ನೀಡಿದರು. ಇಬ್ಬರೂ ಸ್ಥಳೀಯ ಮುಖಂಡರ ಜೊತೆ ಸೇರಿ ತೆರೆದ ವಾಹನ ಏರಿ ಮತಯಾಚನೆ ಮಾಡಿದರು. ಬಿಜೆಪಿ ಹಾಗೂ ಜೆಡಿಎಸ್ ಬಾವುಟ ಹಿಡಿದಿದ್ದ ಕಾರ್ಯಕರ್ತರು ಬೈಕ್‌ನಲ್ಲಿ ಹಿಂಬಾಲಿಸಿದರು. ‘ದೇಶಕ್ಕೆ ಮೋದಿ, ದಕ್ಷಿಣಕ್ಕೆ ಸೂರ್ಯ’ ಘೋಷಣೆ ಕೂಗಿದರು. ಗೋವಿಂದರಾಜನಗರ ಕ್ಷೇತ್ರ ವ್ಯಾಪ್ತಿಯ ಚಂದ್ರಾಲೇಔಟ್ ಪ್ರಸನ್ನ ಗಣಪತಿ ದೇವಸ್ಥಾನದಿಂದ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು. ತೇಜಸ್ವಿ ಸೂರ್ಯ ಹಾಗೂ ಎಚ್.ಡಿ.ಕುಮಾರಸ್ವಾಮಿ ಜೊತೆಯಾಗಿಯೇ ಬೆಳಿಗ್ಗೆ 10.45ಕ್ಕೆ ಸ್ಥಳಕ್ಕೆ ಆಗಮಿಸಿದರು. ತುರ್ತು ಕಾರ್ಯಕ್ರಮದ ನಿಮಿತ್ತ ಕುಮಾರಸ್ವಾಮಿ ಸ್ಥಳದಿಂದ ತೆರಳಿದರು. ತೇಜಸ್ವಿ ಸೂರ್ಯ ಹಾಗೂ ಸ್ಥಳೀಯ ಮುಖಂಡರು, ರ್‍ಯಾಲಿ ಮುಂದುವರಿಸಿದರು.

ನಾಗರಬಾವಿ ವೃತ್ತ, ನಾಯಂಡಹಳ್ಳಿ, ಚಂದ್ರಾ ಲೇಔಟ್‌ನಲ್ಲಿ ಸಂಚರಿಸಿದ ತೇಜಸ್ವಿ ಸೂರ್ಯ, ಮತದಾರರತ್ತ ಕೈ ಬೀಸಿ ಕೈ ಮುಗಿದು ಮತಯಾಚಿಸಿದರು. ಮುಖಂಡರಾದ ಅರುಣ್ ಸೋಮಣ್ಣ, ಕೆ. ಉಮೇಶ್ ಶೆಟ್ಟಿ, ಆರ್. ಪ್ರಕಾಶ್ ಜೊತೆಯಲ್ಲಿದ್ದರು. ರಸ್ತೆಯಲ್ಲಿ ನೆರೆದಿದ್ದ ಕೆಲವರು, ತೇಜಸ್ವಿ ಅವರಿಂದ ಹಸ್ತಾಕ್ಷರ ಪಡೆದರು. ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಬಿಟಿಎಂ ಕ್ಷೇತ್ರದಲ್ಲಿ ಮಧ್ಯಾಹ್ನ ಆಯೋಜಿಸಿದ್ದ ತಿಗಳರ ಜನಾಂಗದ ಸಮಾವೇಶದಲ್ಲಿ ಪಾಲ್ಗೊಂಡು ಮತ ಯಾಚಿ ಸಿದರು. ಬಿಡುವಿಲ್ಲದ ಕಾರ್ಯಕ್ರಮಗಳಿಂದಾಗಿ ಬೆಳಿಗ್ಗೆಯಿಂದ ತಿಂಡಿ ಸಹ ತಿನ್ನದ ತೇಜಸ್ವಿ ಸೂರ್ಯ, ಸಂಜೆ 5 ಗಂಟೆ ಸುಮಾರಿಗೆ ಜಯನಗರದ ಹೋಟೆಲ್‌ವೊಂದರಲ್ಲಿ ಉಪಾಹಾರ ಸೇವಿಸಿದರು.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ಸಂಜೆ ಹಾಗೂ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ರಾತ್ರಿ ಆಯೋಜಿಸಿದ್ದ ಬೈಕ್ ರ್‍ಯಾಲಿಯಲ್ಲೂ ಭಾಗವಹಿಸಿದರು. ನಂತರ, ಹಲವು ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳ ಬಳಿ ಮತಯಾಚಿಸಿ ತಡರಾತ್ರಿ ಮನೆಯತ್ತ ಹೊರಟರು.

‘ಮೋದಿ–ಬಿಜೆಪಿ ಮೇಲೆ ಜನರ ಅಭಿಮಾನ–ಪ್ರೀತಿ’

‘ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಬಗ್ಗೆ ಜನರಲ್ಲಿರುವ ಅಭಿಮಾನ–ಪ್ರೀತಿ, ಈ ಬಾರಿಯ ಚುನಾವಣೆಯಲ್ಲಿ ಮತಗಳಾಗಿ ಪರಿವರ್ತನೆ ಆಗಲಿವೆ. ಬೆಂಗಳೂರು ದಕ್ಷಿಣದಲ್ಲಿ ಬಿಜೆಪಿ ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಲಿದೆ’ ಎಂದು ತೇಜಸ್ವಿ ಸೂರ್ಯ ವಿಶ್ವಾಸ ವ್ಯಕ್ತಪಡಿಸಿದರು.

ಪ್ರಚಾರದ ವೇಳೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಸಂಸದನಾಗಿ ಆಯ್ಕೆಯಾದ ದಿನದಿಂದಲೂ ಜನರ ಜೊತೆಗಿದ್ದೇನೆ. ಸರ್ವ ಜನಾಂಗದ ಜನರು ಈ ಬಾರಿ ಬಿಜೆಪಿ ಬೆಂಬಲಿಸಲಿದ್ದಾರೆ. ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲ ಉತ್ತಮ ಸ್ಪಂದನೆ ಸಿಗುತ್ತಿದೆ’ ಎಂದರು.

‘ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರ್ಪಡೆ ಆಗಿರುವುದರಿಂದ ಹೆಚ್ಚಿನ ಬಲ ಬಂದಿದೆ. ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಒಟ್ಟಿಗೆ ಸೇರಿ, ‘ಮತ್ತೊಮ್ಮೆ ಮೋದಿ’ ಎಂಬ ಕೂಗು ಮೊಳಗಿಸುತ್ತಿದ್ದಾರೆ’ ಎಂದು ತಿಳಿಸಿದರು.

ಕಬ್ಬನ್ ಪಾರ್ಕ್ ಬಳಿ ಮತದಾನದ ಜಾಗೃತಿ ಜಾಥಾ ನಡೆಯಿತು

ಮತದಾನ ಜಾಗೃತಿಗೆ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಸಾರ್ವಜನಿಕರಲ್ಲಿ ಮತದಾನದ ಜಾಗೃತಿ ಮೂಡಿಸಲು ಭಾನುವಾರ ಕಾಲ್ನಡಿಗೆ ಜಾಥಾ ನಡೆಯಿತು.

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಮಾತನಾಡಿ, ‘ಬೆಂಗಳೂರು ನಗರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿದೆ. ಎಲ್ಲರೂ ಮತಗಟ್ಟೆಗೆ ಬಂದು ಕಡ್ಡಾಯವಾಗಿ ಮತ ಚಲಾಯಿಸಬೇಕು. ಮತದಾರರಿಗೆ ಯಾವುದೇ ತೊಂದರೆಯಾಗದಂತೆ ಬಂದೋಬಸ್ತು ಮಾಡಲಾಗಿದೆ’ ಎಂದು ತಿಳಿಸಿದರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಸ್ನೇಹಲ್ ಮಾತನಾಡಿ, ‘ಚುನಾವಣೆ, ದೇಶದ ಮುಂದಿನ ಐದು ವರ್ಷದ ಭವಿಷ್ಯವನ್ನು ರೂಪಿಸುವ ಕಾರ್ಯ’ ಎಂದು ಹೇಳಿದರು.

ಜಾಥಾ ಕಬ್ಬನ್ ಪಾರ್ಕ್ ಮುಖ್ಯದ್ವಾರದಿಂದ ಆರಂಭವಾಗಿ ಕಸ್ತೂರಬಾ ರಸ್ತೆ, ಕಂಠೀರವ ಒಳಾಂಗಣ ರಸ್ತೆ, ರಾಜಾರಾಂ ಮೋಹನ್ ರಾಯ್ ರಸ್ತೆ ಮೂಲಕ ಸಾಗಿ ಬಿಬಿಎಂಪಿ ಸಹಕಾರ ಸಂಘದ ಬಳಿ ಮುಕ್ತಾಯವಾಯಿತು.

ಬೆಂಗಳೂರು ಕೇಂದ್ರ ಚುನಾವಣಾಧಿಕಾರಿ ಡಾ.ಹರೀಶ್ ಕೆ., ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಪದಾಧಿಕಾರಿಗಳಾದ ಸಾಯಿಶಂಕರ್, ಎ.ಜಿ. ಬಾಬಣ್ಣ, ಮಂಜುನಾಥ್, ಎಚ್.ಬಿ. ಹರೀಶ್ ಕೆ. ನರಸಿಂಹ, ರೇಣುಕಾಂಬ, ಕೆ. ಮಂಜೇಗೌಡ, ಡಾ.ಶೋಭಾ, ಮಂಜುನಾಥ್, ಸಂತೋಷ್ ಕುಮಾರ್ ನಾಯ್ಕ್ ಉಪಸ್ಥಿತರಿದ್ದರು.

‘ಮೋದಿ ‘ಗ್ಯಾರಂಟಿ’– ಬೆಲೆ ಏರಿಕೆ, ಜಿಎಸ್‌ಟಿ ಹೊರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರು ಕ್ಷೇತ್ರದ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾನುವಾರ ಚುನಾವಣಾ ಪ್ರಚಾರ ನಡೆಸಿದರು. ಪಕ್ಷದ ಸ್ಥಳೀಯ ಮುಖಂಡರು ಜೊತೆಗಿದ್ದರು

ಬೆಂಗಳೂರು: ‘ಬೆಲೆ ಏರಿಕೆ, ಜಿಎಸ್‌ಟಿ ಹೊರೆ, ನಿರುದ್ಯೋಗ ಕೇಂದ್ರ ಬಿಜೆಪಿ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ನಿಜವಾದ ಗ್ಯಾರಂಟಿ’ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ವಾಗ್ದಾಳಿ ನಡೆಸಿದರು.

ಗ್ರಾಮಾಂತರ ಕ್ಷೇತ್ರ ವ್ಯಾಪ್ತಿಯ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾನುವಾರ ಪ್ರಚಾರ ನಡೆಸಿ ಮಾತನಾಡಿದ ಅವರು, ‘ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ನಿಮ್ಮೆಲ್ಲರ ಆಶೀರ್ವಾದ ಕೇಳಲು ನಾನು ಬಂದಿದ್ದೇನೆ. ಈ ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು 10 ವರ್ಷವಾಗಿದೆ. ರಾಜ್ಯದ ಜನರ ಆಶೀರ್ವಾದದಿಂದ ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದು 10 ತಿಂಗಳಾಗಿವೆ. ಕಾಂಗ್ರೆಸ್ ಸರ್ಕಾರದ ಈ ಹತ್ತು ತಿಂಗಳ ಸಾಧನೆ ಏನು, ಕೇಂದ್ರ ಬಿಜೆಪಿ ಸರ್ಕಾರ 10 ವರ್ಷಗಳ ಸಾಧನೆ ಏನು ಎಂಬುದನ್ನು ಈ ಚುನಾವಣೆಯಲ್ಲಿ ಚರ್ಚೆ ಮಾಡಬೇಕು’ ಎಂದರು.

ಮೋದಿ ಗ್ಯಾರಂಟಿ ಯಾರ ಕೈಗೂ ತಲುಪಲ್ಲ. ಯಾರ ಖಾತೆಗೆ 15 ಲಕ್ಷ ಬಂದಿದೆ? ಮೋದಿ ಬಹಳ ಒಳ್ಳೆಯವರು, ಅವರು ₹15 ಲಕ್ಷ ಕೊಟ್ಟಿರಬೇಕು. ಇಲ್ಲೇ ಯಾರೋ ಮಧ್ಯದಲ್ಲಿ ಅದನ್ನು ತಿಂದಿರಬೇಕು’ ಎಂದು ಅವರು ವ್ಯಂಗ್ಯವಾಡಿದರು.

‘ಬೆಲೆ ಏರಿಕೆ ಕಡಿಮೆ ಆಗಿದೆಯೇ? ಅಡುಗೆ ಎಣ್ಣೆ, ಅಕ್ಕಿ, ಸಕ್ಕರೆ, ಚಿನ್ನದ ಬೆಲೆ ಕಮ್ಮಿ ಆಗಿದೆಯೇ? ಚಿನ್ನ ಕೊಳ್ಳುವುದು ಇರಲಿ, ಚಿನ್ನದ ಅಂಗಡಿ ಕಡೆ ನೋಡುವಂತೆಯೇ ಇಲ್ಲ. ನಮ್ಮ ಸರ್ಕಾರ ಬೆಲೆ ಏರಿಸಿದೆ ಎಂದು ನೀವೆಲ್ಲ ಟೀಕೆ ಮಾಡುತ್ತಿದ್ದಿರಿ. ಕೇಂದ್ರದಲ್ಲಿ ನಮ್ಮ ಸರ್ಕಾರ ಇದ್ದಾಗ 10 ಗ್ರಾಂಗೆ ₹ 27 ಸಾವಿರದಿಂದ ₹ 28 ಸಾವಿರ ಇದ್ದ ಚಿನ್ನ, ಈಗ ₹75 ಸಾವಿರ ಆಗಿದೆ. ಇನ್ನು ಒಂದು ಟನ್ ಕಬ್ಬಿಣದ ದರ ₹30 ಸಾವಿರದಿಂದ ₹75 ಸಾವಿರ ಮಾಡಿದ್ದಾರೆ. ಇದನ್ನೆಲ್ಲ ಯಾರಿಗೆ ಹೇಳಬೇಕು’ ಎಂದು ಪ್ರಶ್ನಿಸಿದರು.

ಚುನಾವಣಾ ವೆಚ್ಚಕ್ಕೆ ಒಯ್ಯುತ್ತಿದ್ದ ಹಣ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಅಧಿಕಾರಿಗಳು ವಶಕ್ಕೆ ಪಡೆದ ಸುಮಾರು ₹2 ಕೋಟಿ ಹಣವನ್ನು ಮೈಸೂರು ಮತ್ತು ಮೈಸೂರು ಗ್ರಾಮಾಂತರದ ಚುನಾವಣಾ ಕಾರ್ಯಾಲಯ, ಚುನಾವಣಾ ವೆಚ್ಚಕ್ಕಾಗಿ ತೆಗೆದುಕೊಂಡು ಹೋಗಲಾಗುತ್ತಿತ್ತು ಎಂದು ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣಗೌಡ ಹೇಳಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಬ್ಯಾಂಕಿನಿಂದ ಹಣ ತೆಗೆದಿದ್ದಕ್ಕೆ ಎಲ್ಲ ದಾಖಲೆಗಳನ್ನು ಹೊಂದಿದೆ. ಕಂದಾಯ ಸಚಿವ ಕೃಷ್ಣಬೈರೇಗೌಡರ ಕುಮ್ಮಕ್ಕಿನಿಂದ ಈ ಹಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಗ್ಯಾರಂಟಿ’ಗಳಿಂದ ರಾಜ್ಯದ ಬೊಕ್ಕಸ ಖಾಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಬಾಗಲಗುಂಟೆಯಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಸಂಸದ ಡಿ.ವಿ. ಸದಾನಂದ ಗೌಡ, ಶಾಸಕ ಎಸ್.ಮುನಿರಾಜು ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಪೀಣ್ಯ ದಾಸರಹಳ್ಳಿ: ‘ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಾಗಿಲ್ಲ. 5 ಗ್ಯಾರಂಟಿಗಳ ಹೆಸರಿನಲ್ಲಿ ರಾಜ್ಯದ ಬೊಕ್ಕಸವನ್ನು ಸಂಪೂರ್ಣ ಬರಿದು ಮಾಡಿ ಮುಂದಿನ ದಿನಗಳಲ್ಲಿ ನಿಮ್ಮನ್ನು ಸಾಲಗಾರರನ್ನಾಗಿ ಮಾಡುವುದೇ ರಾಜ್ಯ ಸರ್ಕಾರದ ಸಾಧನೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಪರ ಭಾನುವಾರ ಹಮ್ಮಿಕೊಂಡಿದ್ದ ಪ್ರಚಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ಗ್ಯಾರಂಟಿ ಕಾರ್ಯಕ್ರಮಕ್ಕಾಗಿ ರಾಜ್ಯ ಸರ್ಕಾರ ಇದುವರೆಗೂ ಸಾವಿರಾರು ಕೋಟಿ ಸಾಲ ಮಾಡಿದೆ. ಈ ಸಾಲವನ್ನು ತೀರಿಸುವವರು ಯಾರು? ಅದನ್ನು ನೀವೇ (ಜನರು) ತೀರಿಸಬೇಕಾಗುತ್ತದೆ. ಆದ್ದರಿಂದ ಎಚ್ಚರಿಕೆಯಿಂದ ತೀರ್ಮಾನ ಮಾಡಿ ಮತ ಚಲಾಯಿಸಿ’ ಎಂದು ಕೋರಿದರು.

ಸಂಸದ ಡಿ.ವಿ. ಸದಾನಂದ ಗೌಡ, ‘ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಒಂದೂವರೆ ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಶೋಭಾ ಕರಂದ್ಲಾಜೆ ಅವರು ವಿಜಯಶಾಲಿ ಆಗಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಶೋಭಾ ಕರಂದ್ಲಾಜೆ ಮಾತನಾಡಿ, ‘ಎಚ್.ಡಿ. ದೇವೇಗೌಡ ಅವರು ದೇಶದ ಭದ್ರತೆಗಾಗಿ ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಮೈತ್ರಿಕೂಟದ ಕಾರ್ಯಕರ್ತರು, ‘ಮತ್ತೊಮ್ಮೆ ದೇಶಕ್ಕೆ ಮೋದಿ’ ಎಂಬ ಸಂದೇಶವನ್ನು ಮನೆ ಮನೆಗೆ ತಲುಪಿಸುತ್ತಿದ್ದಾರೆ. ಈ ಬಾರಿಯೂ ಹೆಚ್ಚಿನ ಮತಗಳಿಂದ ಗೆಲುವು ನಮ್ಮದಾಗಲಿದೆ’ ಎಂದರು

‘ಮಹಿಳೆಯರಿಗೆ ರಕ್ಷಣೆ ನೀಡದವರಿಗೆ ಮತ ಬೇಡ’

ಬೆಂಗಳೂರು: ಮಹಿಳೆಯರಿಗೆ ಘನತೆಯ ಬದುಕನ್ನು ಖಾತ್ರಿ ಪಡಿಸುವ ಸಂವಿಧಾನದ ಅಡಿಯಲ್ಲಿಯೇ ಮಹಿಳೆಯರನ್ನು ಹುರಿದು ಮುಕ್ಕುವ ಕೃತ್ಯಗಳು ರಾಜಾರೋಷವಾಗಿ ನಡೆಯುತ್ತಿವೆ. ಇದನ್ನು ಪರೋಕ್ಷವಾಗಿ ಸಮರ್ಥನೆ ಮಾಡುವ, ಮಹಿಳೆಯರಿಗೆ ರಕ್ಷಣೆ ನೀಡದವರಿಗೆ ಮತ ಚಲಾಯಿಸಬಾರದು ಎಂದು ‘ಸಮಾನ ಮನಸ್ಕ ಮಹಿಳೆಯರು ಕರ್ನಾಟಕ’ ಸಂಘಟನೆ ಒತ್ತಾಯಿಸಿದೆ.

ಸಂಘಟನೆಯ ಡಾ. ವಸುಂಧರಾ ಭೂಪತಿ, ವಿಮಲಾ ಕೆ.ಎಸ್, ಎಚ್. ಎಲ್. ಪುಷ್ಪಾ, ಇಂದಿರಾ ಕೃಷ್ಣಪ್ಪ, ಎನ್. ಗಾಯತ್ರಿ, ವಿಜಯಾ, ಗೀತಾ ಸುರತ್ಕಲ್, ಕೆ. ನೀಲಾ, ಬಸಮ್ಮ, ಪಾರ್ವತಮ್ಮ ಎಸ್.ಎಂ, ಸುಮತಿ. ಕೆ.ಆರ್, ಆರ್.ಕೆ. ಸರೋಜಾ, ಲಕ್ಷ್ಮಿ ಚಂದ್ರಶೇಖರ್, ಮೀನಾಕ್ಷಿ ಬಾಳಿ, ಎನ್. ಮಂಗಳಾ, ಕೆ. ಷರೀಫಾ, ಕೆ.ಎಸ್. ಲಕ್ಷ್ಮಿ, ಗೌರಮ್ಮ, ಸುಶೀಲಾ, ಎಚ್.ಜಿ. ಜಯಲಕ್ಷ್ಮಿ, ಕೆ.ಶಾಂತಕುಮಾರಿ, ಸಬೀಹಾ ಭೂಮಿಗೌಡ, ಡಾ.ರತಿ ರಾವ್ ಈ ಬಗ್ಗೆ ಪ್ರಕಟಣೆ ನೀಡಿದ್ದಾರೆ.

ಕ್ರೀಡಾಪಟುಗಳು ದೇಶಕ್ಕೆ ಕೀರ್ತಿ ತಂದಾಗ ಸಂಭ್ರಮಿಸಿ, ಲೈಂಗಿಕ ಕಿರುಕುಳಕ್ಕೆ ಒಳಗಾದವರು ನ್ಯಾಯ ಕೇಳಿದಾಗ ಕಡೆಗಣಿಸಿ, ಆರೋಪಿಗಳ ರಕ್ಷಣೆಗೆ ನಿಂತವರು ಸಂವಿಧಾನದ ಘನತೆಯನ್ನು ಉಳಿಸಿಯಾರೇ? ದೇಶದ ಪ್ರಥಮ ಪ್ರಜೆಯಾಗಿದ್ದರೂ ಮಹಿಳೆ, ಆದಿವಾಸಿ ಮತ್ತು ಗಂಡ ಸತ್ತ ಮಹಿಳೆ ಎನ್ನುವ ಕಾರಣಕ್ಕೆ ಸಂಸತ್ ಭವನದ ಉದ್ಘಾಟನೆಗೆ ರಾಷ್ಟ್ರಪತಿಯನ್ನೇ ಆಹ್ವಾನಿಸದವರು ದೇಶದ ಸಾಮಾನ್ಯ ಮಹಿಳೆಯರಿಗೆ ಇನ್ನೇನು ಗೌರವ ನೀಡಬಲ್ಲರು ಎಂದು ಪ್ರಶ್ನಿಸಿದ್ದಾರೆ.

ಸಂವಿಧಾನ ಉಳಿಸಲು ಬಿಜೆಪಿ ಮತ್ತದರ ಮಿತ್ರಪಕ್ಷಗಳನ್ನು ಸೋಲಿಸಬೇಕು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ

ನಿಮ್ಮ ಮತ ಅತೀ ಮುಖ್ಯ

ಚುನಾವಣೆಯ ಪ್ರಯುಕ್ತ ಪ್ರಜಾವಾಣಿಯು ರಾಷ್ಟ್ರಾದ್ಯಂತ ತನ್ನ ವರದಿಗಾರರನ್ನು ನೇಮಿಸಿ, “ಪ್ರಜಾಮತ” ವಿಶೇಷ ಪುಟದಲ್ಲಿ ಸಮಗ್ರ ಚುನಾವಣಾ ಮಾಹಿತಿಯನ್ನು ಪ್ರಸ್ತುತಪಡಿಸುತ್ತಿದೆ. ಆಳವಾದ ವರದಿಗಳು, ವಿಶ್ಲೇಷಣೆಗಳು, ಸಂದರ್ಶನಗಳೊಂದಿಗೆ ಭಾರತದ ರಾಜಕೀಯ ಕ್ಷೇತ್ರದ ಪಕ್ಷಿನೋಟವು ಇದರಲ್ಲಿದ್ದು, ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಲು ನಿಮಗಿದು ನೆರವಾಗಲಿದೆ.

ನಮ್ಮ ಮತ ನಮ್ಮ ಹಕ್ಕು

#INFORMED VOTE

ಚಂದಾದಾರರಾಗಲು ಸಂಪರ್ಕಿಸಿ
ವಾಟ್ಸಾಪ್/ ಐ.ವಿ.ಆರ್. - 9008366666
ಅಥವಾ
QR ಕೋಡ್ ಸ್ಕ್ಯಾನ್ ಮಾಡಿ

Follow Us

ದೇವಿಗೆ ಅರ್ಪಿಸಿದ ಬಳಿಕ ಭಕ್ತರಿಗೆ ವಿತರಣೆ: ಭಕ್ತರ ಭಾವನೆಗಳಿಗೆ ಧಕ್ಕೆ ಎಂಬ ದೂರು–ಆಕ್ಷೇಪಗಳೇನೂ ಇಲ್ಲ

ಕೇರಳದ ದೇಗುಲದಲ್ಲಿ ಕೋಳಿ 'ಪ್ರಸಾದ'

• ಅರ್ಜುನ್ ರಘುನಾಥ್

ಕಣ್ಣೂರು (ಕೇರಳ): ಕೇರಳದ ಕಣ್ಣೂರು ಜಿಲ್ಲೆಯ ಪಯ್ಯನೂರು ಬಳಿ ಇರುವ ಶ್ರೀ ತಿರುವರ್ಕಾಟ್ಟು ಕಾವು ಭಗವತಿ ದೇವಸ್ಥಾನದಲ್ಲಿ ಭಕ್ತರಿಗೆ 'ಪ್ರಸಾದ'ವಾಗಿ ಕೋಳಿ ಮಾಂಸದ ಖಾದ್ಯಗಳನ್ನು ವಿತರಿಸುವುದು ರೂಢಿಯಲ್ಲಿದೆ.

ವಿರೋಧ ಪಕ್ಷಗಳ ಕೆಲ ನಾಯಕರು ಹಿಂದೂಗಳ ಹಬ್ಬಗಳ ಸಂದರ್ಭದಲ್ಲಿ ಮಾಂಸಾಹಾರ ಸೇವಿಸುವ ಮೂಲಕ ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುತ್ತಿದ್ದಾರೆ ಎಂದು ಈಚೆಗೆ ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದು ಸದ್ದು ಮಾಡಿತ್ತು. ಆದರೆ, ಕೇರಳದ ಈ ದೇವಸ್ಥಾನದಲ್ಲಿ, ದೇವಿಯ ಭಕ್ತರಿಗೆ ಪ್ರಸಾದವಾಗಿ ಕೋಳಿ ಮಾಂಸದ ಖಾದ್ಯ ವಿತರಿಸಲಾಗುತ್ತಿದ್ದು, ಇದಕ್ಕೆ ಯಾವ ದೂರು–ಆಕ್ಷೇಪಗಳೂ ವ್ಯಕ್ತವಾಗುತ್ತಿಲ್ಲ.

ಮಾಂಸಾಹಾರ ಕುರಿತು ಮೋದಿ ಅವರು ಹೇಳಿಕೆ ನೀಡಿದ ನಂತರ ಈ ದೇವಸ್ಥಾನದಲ್ಲಿನ ಸಂಪ್ರದಾಯ ಹೆಚ್ಚು ಗಮನ ಸೆಳೆಯುತ್ತಿದೆ.

ಈ ದೇವಸ್ಥಾನಕ್ಕೆ ಭೇಟಿ ನೀಡುವಂತೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಗಮನಾರ್ಹ ಸಂಗತಿ ಎಂದರೆ, ಬಿಜೆಪಿಯ ನಾಯಕ ಬಿ.ಎಸ್. ಯಡಿಯೂರಪ್ಪ ಈ ದೇವಸ್ಥಾನದ ಭಕ್ತರಾಗಿದ್ದಾರೆ. ಆಗಾಗ್ಗೆ ಈ ದೇವಸ್ಥಾನಕ್ಕೆ ಭೇಟಿ ನೀಡುವ ಯಡಿಯೂರಪ್ಪ, ಭಕ್ತರ ಅನುಕೂಲಕ್ಕಾಗಿ ಭೋಜನಶಾಲೆಯೊಂದನ್ನು ನಿರ್ಮಿಸಿಕೊಟ್ಟಿದ್ದಾರೆ.

'ಅಮೃತದಾಯಿನಿ ಊಟುಪುರ ಎಂದು ಕರೆಯಲಾಗುವ ಈ ಕಟ್ಟಡವನ್ನು ಸ್ವತಃ ಯಡಿಯೂರಪ್ಪ ಅವರು 2009ರ ಡಿಸೆಂಬರ್ 26ರಂದು ಉದ್ಘಾಟಿಸಿದ್ದಾರೆ. 2016ರಲ್ಲಿ ಅವರು ದೇಗುಲಕ್ಕೆ ಭೇಟಿ ನೀಡಿದ್ದರು' ಎಂದು ದೇವಸ್ಥಾನದ ಅಧಿಕಾರಿಗಳು ಹೇಳುತ್ತಾರೆ.

'ಅನೇಕ ವರ್ಷಗಳ ಹಿಂದೆ ಈ ದೇವಸ್ಥಾನದಲ್ಲಿ ಪ್ರಾಣಿ ಬಲಿ ಪದ್ಧತಿಯೂ ಇತ್ತು. ಈ ಪದ್ಧತಿ ಮೇಲೆ ನಿಷೇಧ ಹೇರಿದ ನಂತರ ಆ ಸಂಪ್ರದಾಯಕ್ಕೆ ಕೊನೆ ಹಾಡಲಾಗಿದೆ. ಆದರೆ, ಈಗಲೂ ದೇವಸ್ಥಾನದಲ್ಲಿ ಕೋಳಿ ಅಡುಗೆ ತಯಾರಿಸಿ, ನಿತ್ಯವೂ ದೇವಿಗೆ ಅರ್ಪಿಸಿ, ನಂತರ ಭಕ್ತರಿಗೆ ವಿತರಿಸಲಾಗುತ್ತದೆ' ಎಂದೂ ಹೇಳುತ್ತಾರೆ.

ಕೇರಳದ ಉತ್ತರದಲ್ಲಿರುವ ಎಲ್ಲ ಭದ್ರಕಾಳಿ ದೇವಸ್ಥಾನಗಳ ತಾಯಿ ಎಂದು ಈ ದೇಗುಲವನ್ನು ಪರಿಗಣಿಸಲಾಗುತ್ತದೆ. ರಾಜಕಾರಣಿಗಳು, ಗಣ್ಯರಲ್ಲದೇ, ರಾಜ್ಯ ಬಿಜೆಪಿಯ ಅನೇಕ ನಾಯಕರು ಕೂಡ ಈ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ.

ಈ ಭಾಗದಲ್ಲಿರುವ ಕನಿಷ್ಠ ಇತರ 3 ದೇವಸ್ಥಾನಗಳಲ್ಲಿ ಸಹ ಭಕ್ತರಿಗೆ ಪ್ರಸಾದ ರೂಪದಲ್ಲಿ ಕೋಳಿ ಖಾದ್ಯಗಳನ್ನು ವಿತರಿಸುತ್ತಿರುವುದು ಗಮನಾರ್ಹ.

ಮುಖ್ಯಾಂಶಗಳು
- ಮಲಯಾಳಿಗಳು ಮತ್ತು ಕನ್ನಡಿಗರು ಈ ದೇವಾಲಯದ ಭಕ್ತರು
- ಮಲಬಾರ್ ದೇವಸ್ವಂನಿಂದ ದೇವಾಲಯದ ನಿರ್ವಹಣೆ
- ಅರ್ಚಕರಿಂದಲೇ ಕೋಳಿ ಖಾದ್ಯ ತಯಾರಿ

ಕೇರಳದ ಕಣ್ಣೂರು ಜಿಲ್ಲೆಯ ಪಯ್ಯನೂರು ಬಳಿ ಇರುವ ಶ್ರೀ ತಿರುವರ್ಕಾಟ್ಟು ಕಾವು ಭಗವತಿ ದೇವಸ್ಥಾನ


ಭಕ್ತರೊಬ್ಬರು ಪ್ರಸಾದವಾಗಿ ನೀಡಿರುವ ಕೋಳಿ ಮಾಂಸದ ಖಾದ್ಯವನ್ನು ಸೇವಿಸಿದರು

ಸುದ್ದಿ 2 ನಿಮಿಷ

ಶ್ರೀನಗರ: 16 ತಿಂಗಳಲ್ಲಿ ಉಗ್ರರ ಹತ್ಯೆಯಾಗಿಲ್ಲ

ಶ್ರೀನಗರ: ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿ 2019ರ ನಂತರ ಏರುಗತಿಯಲ್ಲಿದ್ದ ಭಯೋತ್ಪಾದಕ ಚಟುವಟಿಕೆಗಳ ಸಂಖ್ಯೆ ಸದ್ಯ ತೀವ್ರ ಕಡಿಮೆಯಾಗಿದ್ದು, ಜಿಲ್ಲೆಯಲ್ಲಿ ಕಳೆದ 16 ತಿಂಗಳಲ್ಲಿ ಯಾವುದೇ ಉಗ್ರರ ಹತ್ಯೆಯಾಗಿಲ್ಲ.

2019ರ ಆರಂಭದಿಂದ 2022ರ ಅಂತ್ಯದವರೆಗೆ ಜಿಲ್ಲೆಯಲ್ಲಿ 69 ಉಗ್ರರನ್ನು ಹತ್ಯೆ ಮಾಡಲಾಗಿದೆ. 200ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ ಎಂದು ಅಧಿಕೃತ ಅಂಕಿಅಂಶಗಳು ತಿಳಿಸಿವೆ.

2023 ಮತ್ತು 2024ರ ಮೊದಲ ನಾಲ್ಕು ತಿಂಗಳಲ್ಲಿ ಯಾವುದೇ ಉಗ್ರರ ಹತ್ಯೆಯಾಗಿಲ್ಲ. ಆದರೆ 2023 ಮತ್ತು 2024ರಲ್ಲಿ ಕೆಲ ಭದ್ರತಾ

ಸಿಬ್ಬಂದಿ ಮತ್ತು ನಾಗರಿಕರ ಹತ್ಯೆಯಾಗಿದೆ ಎಂದು ಪೊಲೀಸ್ ಅಧಿಕಾರಿ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಬ್ಬರು ಸ್ಥಳೀಯ ಉಗ್ರರಾದ ಮೊಮಿನ್ ಗುಲ್ಜಾರ್ ಮಿರ್ ಮತ್ತು ಬಾಸಿತ್ ದಾರ್ ಶ್ರೀನಗರದಲ್ಲಿ ಸಕ್ರಿಯರಾಗಿದ್ದರು. ಆದರೆ ಪೊಲೀಸ್ ಮತ್ತು ಭದ್ರತಾ ಪಡೆಗಳ ಅವಿರತ ಕಾರ್ಯಾಚರಣೆಯಿಂದಾಗಿ ಅವರು ಪಲಾಯನ ಮಾಡಿದ್ದಾರೆ' ಎಂದು ಅವರು ತಿಳಿಸಿದರು.

ಈ ಉಗ್ರರೇ ಪೊಲೀಸ್ ಇನ್‌ಸ್ಪೆಕ್ಟರ್ ಮಸ್ರೂರ್ ಅಹ್ಮದ್ ವಾನಿ ಅವರ ಹತ್ಯೆಯಲ್ಲಿ ಭಾಗಿಯಾಗಿದ್ದರು ಎಂದು ಪೊಲೀಸರು ಶಂಕಿಸಿದ್ದಾರೆ.

ಶ್ರೀನಗರವು 2014ರಿಂದ 2019ರ ಆರಂಭದವರೆಗೆ ಉಗ್ರವಾದದಿಂದ ಮುಕ್ತವಾಗಿತ್ತು. ಆದರೆ ನಂತರದ ಮೂರು ವರ್ಷ ಕಾಶ್ಮೀರದ ಉಗ್ರ ಚಟುವಟಿಕೆಯ ಕೇಂದ್ರ ಸ್ಥಾನವಾಗಿ ಮಾರ್ಪಟ್ಟಿತ್ತು. ಭದ್ರತಾ ಪಡೆಗಳು ದಕ್ಷಿಣ ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧ ಕ್ರಮ ಕೈಗೊಂಡ ನಂತರ ಉಗ್ರರು ಶ್ರೀನಗರ ಮತ್ತು ಅದರ ಹೊರವಲಯಗಳಲ್ಲಿ ನೆಲೆ ಸ್ಥಾಪಿಸಲು ಯತ್ನಿಸಿದರು.

ರಥೋತ್ಸವ: ಚಕ್ರದಡಿಗೆ ಸಿಲುಕಿ ವ್ಯಕ್ತಿ ಸಾವು

ಹೊಸಪೇಟೆ (ವಿಜಯನಗರ): ಇಲ್ಲಿನ ಜಂಬುನಾಥ ಗುಡ್ಡದ ಜಂಬುನಾಥೇಶ್ವರ ಸ್ವಾಮಿಯ ರಥೋತ್ಸವ ಭಾನುವಾರ ಸಂಜೆ ನಡೆದಿದ್ದು, ರಥದ ಚಕ್ರದಡಿಗೆ ಸಿಲುಕಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

'ರಥ ಕಟ್ಟುವ ಕಾಯಕ ನಡೆಸುತ್ತಿದ್ದ ಇಲ್ಲಿನ ಪಾರ್ವತಿ ನಗರದ ನಿವಾಸಿ ಸಿ.ಕೆ.ರಾಮು (45) ಮೃತರು' ಎಂದು ಪೊಲೀಸರು ತಿಳಿಸಿದ್ದಾರೆ.

'ಮೋದಿ ದೇಶಕ್ಕೆ ಹಿಡಿದ ಶನಿ'

ಒಂದನೇ ಪುಟದಿಂದ...

'ರಮೇಶ್‌ಕುಮಾರ್ ಎಷ್ಟು ಸತ್ಯವಂತರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಮೋದಿಯವರು ರಮೇಶ್ ಕುಮಾರ್ ಮತ್ತು ಕಾಂಗ್ರೆಸ್‌ಗೆ ಶನಿಯಾಗಿದ್ದಾರೆ' ಎಂದು ಅವರು ಹೇಳಿದರು.

'ಇಂದಿರಾ ಗಾಂಧಿ ಕುಳಿತಿದ್ದ ಸೀಟಲ್ಲಿ ಬಂದು ಕೂತುಬಿಟ್ಟ. ಎಲ್ಲಾ ಜಾತಿ ಜನಾಂಗದವರಿಗೆ, ಬಡವರಿಗೆ, ಹೆಣ್ಣು ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಿದವರು ಇಂದಿರಾ ಗಾಂಧಿ. ಎಂಥವರ ಜಾಗಕ್ಕೆ ಎಂಥವನು ಬಂದು ಕೂತುಬಿಟ್ಟೆಯಪ್ಪಾ' ಎಂದು ರಮೇಶ್ ಕುಮಾರ್ ಟೀಕಿಸಿದರು.

'ಸಣ್ಣಪುಟ್ಟವರು ಸುಳ್ಳು ಹೇಳುವುದನ್ನು ನೋಡಿದ್ದೇವೆ. ಸಂತೆಯಲ್ಲಿ ಹಾವಾಡಿಗರು ಏನೋ ಒಂದು ಸುಳ್ಳು ಹೇಳುವುದನ್ನು ಕೇಳಿದ್ದೇವೆ. ಆದರೆ, ದೇಶದ ಪ್ರಧಾನಮಂತ್ರಿಯಾದವರು ಈ ಪಾಟಿ ಸುಳ್ಳು ಹೇಳುವುದನ್ನು ಈ ಪ್ರಪಂಚದ ಇತಿಹಾಸದಲ್ಲಿ ಎಲ್ಲೂ ಕೇಳಿರಲಿಲ್ಲ' ಎಂದರು.

ಮೈಸೂರಿನಲ್ಲಿ ನಡೆದ ವೀರಶೈವ–ಲಿಂಗಾಯತ ಸಮಾಜದ ಮುಖಂಡರ ಸಭೆಯಲ್ಲಿ ಮನವಿ

ತಲೆ ತಗ್ಗಿಸುವಂತೆ ಮಾಡಬೇಡಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಮೈಸೂರು: 'ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಡಬೇಕು. ನಾನು ತಲೆ ತಗ್ಗಿಸುವಂತೆ ಮಾಡಬೇಡಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕೋರಿದರು.

ಇಲ್ಲಿನ ನರಸಿಂಹರಾಜ ಕಂಠೀರವ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಭಾನುವಾರ ಆಯೋಜಿಸಿದ್ದ ವೀರಶೈವ–ಲಿಂಗಾಯತ ಸಮಾಜದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

'ಸಮಾಜದವರು ತಲೆ ತಗ್ಗಿಸುವಂತೆ ನಾನು ನಡೆದುಕೊಳ್ಳುವುದಿಲ್ಲ. ವಿಜಯೇಂದ್ರ ಬೆಂಬಲಿಸಿದ್ದು ಸಾರ್ಥಕವಾಯಿತು ಎಂದು ಎಲ್ಲರೂ ಹೆಮ್ಮೆಯಿಂದ ಮಾತನಾಡುವಂತೆ ರಾಜಕಾರಣ ಮಾಡುತ್ತೇನೆ. ಮೈಸೂರು, ಚಾಮರಾಜನಗರ ಸೇರಿದಂತೆ ರಾಜ್ಯದಾದ್ಯಂತ ಸಮಾಜಕ್ಕೆ ಶಕ್ತಿ ತುಂಬುತ್ತೇನೆ' ಎಂದು ಭರವಸೆ ನೀಡಿದರು.

'ಸಮಾಜದವರು ಮತ್ತೊಬ್ಬರ ಕಾಲೆಳೆಯುವ ಕೆಲಸ ಮಾಡುತ್ತಿದ್ದೇವೆ. ಪರಿಣಾಮ, ಕವಲು ದಾರಿಯಲ್ಲಿದ್ದೇವೆ. ಹುಬ್ಬಳ್ಳಿಯಲ್ಲಿ ನಡೆದಂತಹ ಘಟನೆ ಕಂಡಾಗ ನಮ್ಮೆಲ್ಲರಿಗೂ ದುಃಖವಾಗಬೇಕು, ಸಿಟ್ಟು ಬರಬೇಕು. ಬೆಂಕಿ ಬಿದ್ದಿರುವುದು ಪಕ್ಕದ ಮನೆಗಲ್ಲವೇ ಎಂದು ಸುಮ್ಮನಿದ್ದರೆ, ಸಮಯ ಮೀರಿದರೆ ಬೆಂಕಿಯನ್ನು ನಂದಿಸಲಾಗದು. ಹೀಗಾಗಿ ಎಚ್ಚೆತ್ತುಕೊಂಡು ಜಾಗೃತರಾಗಬೇಕು' ಎಂದು ತಿಳಿಸಿದರು.

'ತಂದೆ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ನಡೆದಿದ್ದ ಷಡ್ಯಂತ್ರಗಳ ಬಗ್ಗೆ ಪುಸ್ತಕ ಬರೆಯಲಿದ್ದೇನೆ' ಎಂದು ವಿಜಯೇಂದ್ರ ಅವರು ಸಭೆಯಲ್ಲಿ ಹೇಳಿದರು.

ಎಸ್‌ಟಿ ಪಟ್ಟಿಗೆ ಗಂಗಾಮತಸ್ಥರು: ಎಚ್‌ಡಿಕೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಪ್ರಧಾನಿ ನರೇಂದ್ರ ಮೋದಿ ಅವರ ಮನವೊಲಿಸಿ ಗಂಗಾಮತಸ್ಥ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಗಂಭೀರ ಪ್ರಯತ್ನ ಮಾಡುತ್ತೇನೆ' ಎಂದು ಮೈತ್ರಿ ಅಭ್ಯರ್ಥಿ ಎಚ್‌.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಇಲ್ಲಿ ಭಾನುವಾರ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಗಂಗಾಮತಸ್ಥ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಬೇಡಿಕೆ ಹಲವು ದಶಕಗಳಿಂದಲೂ ಇದೆ. ಸುದೀರ್ಘ ಕಾಲ ಅಧಿಕಾರ ನಡೆಸಿರುವ ಕಾಂಗ್ರೆಸ್ ಈ ಜನಾಂಗವನ್ನು ನಿರ್ಲಕ್ಷಿಸುತ್ತಲೇ ಬಂದಿದೆ' ಆರೋಪಿಸಿದರು.

'ಮಂಡ್ಯ ಜಿಲ್ಲೆಗೆ ನೀರು ಕೊಡದೆ ಮರಳುಗಾಡು ಮಾಡಿದವರು ಜಿಲ್ಲೆಯ ಅಭಿವೃದ್ಧಿಗೆ ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ ಮಾಡಿರುವುದು ಹಾಸ್ಯಾಸ್ಪದ. ಈಗಾಗಲೇ ರಾಜ್ಯ ಸರ್ಕಾರದ ಬೊಕ್ಕಸ ಬರಿದಾಗಿದೆ. ನಿಮ್ಮ ಪ್ರಣಾಳಿಕೆಯ ಅಂಶಗಳನ್ನು ಅನುಷ್ಠಾನಕ್ಕೆ ತರಲು ಎಲ್ಲಿಂದ ದುಡ್ಡು ತರುತ್ತೀರಿ' ಎಂದು ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದರು.

'ರಾಹುಲ್ ಪ್ರಧಾನಿಯಾಗುವುದನ್ನು ಹುಚ್ಚನೂ ಒಪ್ಪಲು ಸಾಧ್ಯವಿಲ್ಲ'

ಭರಮಸಾಗರ (ಚಿತ್ರದುರ್ಗ): 'ನರೇಂದ್ರ ಮೋದಿ ಪ್ರಧಾನಿಯಾಗಬೇಕು ಎಂದು ದೇಶದ ಜನರು ಬಯಸುತ್ತಿದ್ದಾರೆ. ರಾಹುಲ್ ಗಾಂಧಿ ಪ್ರಧಾನಿಯಾಗುವುದನ್ನು ಹುಚ್ಚ ಕೂಡ ಒಪ್ಪಲು ಸಾಧ್ಯವಿಲ್ಲ' ಎಂದು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ಟೀಕಿಸಿದರು.

ಬಿಜೆಪಿಯಿಂದ ಭಾನುವಾರ ಇಲ್ಲಿ ಹಮ್ಮಿಕೊಂಡಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಕಾಂಗ್ರೆಸ್ ಹಾಗೂ ರಾಹುಲ್ ಗಾಂಧಿ ದೇಶಕ್ಕೆ ಅಂಟಿದ ಶನಿಗಳೇ ಹೊರತು ಪ್ರಧಾನಿ ನರೇಂದ್ರ ಮೋದಿ ಅವರಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಹೇಳಿದರು.

'ಅಕ್ಷಯಪಾತ್ರೆ ಅಲ್ಲ, ಸಾಲದ ಪಾತ್ರೆ'

ಒಂದನೇ ಪುಟದಿಂದ...

'ಶ್ರೀಮಂತರ, ಉದ್ಯಮಿಗಳ ₹16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ ಪ್ರಧಾನಿ, ರೈತರ ಸಾಲಮನ್ನಾ ಮಾಡಿ ಎಂದರೆ ದುಡ್ಡು ಇಲ್ಲ ಎನ್ನುತ್ತಾರೆ. ದೇವೇಗೌಡರೇ, ಆಗ ಎಲ್ಲಿ ಹೋಗಿತ್ತು ತಾವು ಹೇಳಿದ ಅಕ್ಷಯಪಾತ್ರೆ? ಮಾಜಿ ಪ್ರಧಾನಿಯಾಗಿ ಇಷ್ಟೊಂದು ಸುಳ್ಳು ಹೇಳಬಾರದು' ಎಂದರು.

'ಹಾಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರು ಒಂದೇ ವೇದಿಕೆಯಲ್ಲಿ ಪೈಪೋಟಿ ಮೇಲೆ ಸುಳ್ಳು ಹೇಳಿದ್ದಾರೆ. ಬೆಂಗಳೂರನ್ನು ಟ್ಯಾಂಕರ್ ಸಿಟಿ ಎಂದು ಮೋದಿ ಜರೆದಿದ್ದಾರೆ. ಬೆಂಗಳೂರಿನ ಮೇಲೆ ಕಾಳಜಿ ಇದ್ದರೆ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಿ. ನಾಳೆಯೇ ಕೆಲಸ ಆರಂಭಿಸುತ್ತೇವೆ' ಎಂದೂ ಸವಾಲು ಹಾಕಿದರು.

'ಮೋದಿ ಪ್ರಧಾನಿ ಆದ ಮೇಲೆ ರೈತರು, ಮಹಿಳೆಯರು, ಬಡವರು, ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರಿಗೆ ಏನೂ ಕೊಡಲಿಲ್ಲ. ರಾಜ್ಯಕ್ಕೆ ಭಾರಿ ಅನ್ಯಾಯ ಮಾಡಿ ಖಾಲಿ ಚೊಂಬು ಕೊಟ್ಟಿದ್ದಾರೆ. ಆದರೆ, ದೇವೇಗೌಡರು ಮಾತನಾಡುತ್ತಾ ಮನಮೋಹನ್ ಸಿಂಗ್ ಖಾಲಿ ಚೊಂಬು ಕೊಟ್ಟಿದ್ದರು, ಮೋದಿ ಅಕ್ಷಯಪಾತ್ರೆ ಮಾಡಿದ್ದಾರೆ ಎಂಬುದಾಗಿ ಹೇಳಿದ್ದಾರೆ. ದೇಶದ ಸಾಲವನ್ನು ₹187 ಲಕ್ಷ ಕೋಟಿಗೆ ಏರಿಸಿರುವುದು ಅಕ್ಷಯಪಾತ್ರೆಯೋ, ಖಾಲಿ ಚೊಂಬೋ' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು.

ದೇವೇಗೌಡರ ಅಕ್ಷಯಪಾತ್ರೆ ತುಂಬಿಲ್ಲವೇ?; ಸಚಿವ ರಾಜಣ್ಣ

ತುಮಕೂರು ವರದಿ: ದೇವೇಗೌಡರ ಕುಟುಂಬಕ್ಕೆ 1966ರಲ್ಲಿ ಕೇವಲ 12 ಎಕರೆ ಭೂಮಿ ಇತ್ತು. ಇವತ್ತು ಎಷ್ಟು ಎಕರೆ ಇದೆ? ದೇವೇಗೌಡರ ಅಕ್ಷಯಪಾತ್ರೆ ಇನ್ನೂ ತುಂಬಿಲ್ಲವೇ ಎಂದು ಸಹಕಾರ ಕೆ.ಎನ್.ರಾಜಣ್ಣ ಪ್ರಶ್ನಿಸಿದ್ದಾರೆ.

ಭಾನುವಾರ ಇಲ್ಲಿ ಜಾತ್ಯತೀತ ಯುವ ವೇದಿಕೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್‌ನ ಖಾಲಿ ಚೊಂಬನ್ನು ಮೋದಿಯವರು ಅಕ್ಷಯಪಾತ್ರೆ ಮಾಡಿದ್ದಾರೆ' ಎಂಬ ದೇವೇಗೌಡರ ಹೇಳಿಕೆಗೆ ತಿರುಗೇಟು ನೀಡಿದರು.

ದೇವೇಗೌಡರು ಜಾತಿವಾದಿ ಅಲ್ಲ, ಕುಟುಂಬವಾದಿ. ಜೆಡಿಎಸ್ ಪಕ್ಷವು ಗೌಡರ ಅಳಿಯ, ಮಗ, ಮೊಮ್ಮಗ... ಹೀಗೆ ಒಂದು ಕುಟುಂಬಕ್ಕೆ ಸೀಮಿತವಾಗಿದೆ. ಕಳೆದ ಚುನಾವಣೆಯಲ್ಲಿ ತುಮಕೂರಿನಲ್ಲಿ ಮುದ್ದಹನುಮೇಗೌಡರಿಗೆ ಟಿಕೆಟ್ ತಪ್ಪಿಸಿ ಅವರೇ ಚುನಾವಣೆಗೆ ನಿಂತರು. ಮುದ್ದಹನುಮೇಗೌಡ ಒಕ್ಕಲಿಗರಲ್ಲವೇ? ಎಂದು ಪ್ರಶ್ನಿಸಿದರು.

'ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುತ್ತೇನೆ ಎಂದು ದೇವೇಗೌಡರು ಈ ಹಿಂದೆ ಹೇಳಿದ್ದರು. ಈಗ ಮೋದಿಯೇ ದೇಶ ಉಳಿಸಿದ್ದಾರೆ ಎನ್ನುತ್ತಿದ್ದಾರೆ. ಅವರು ಅವಕಾಶವಾದಿ ರಾಜಕಾರಣ ಮಾಡುತ್ತಿದ್ದಾರೆ' ಎಂದರು.

ಗ್ಯಾರಂಟಿ ಹೆಸರಿನಲ್ಲಿ ದಿವಾಳಿ ಮಾಡಿದ್ದೇ ಹೆಗ್ಗಳಿಕೆ –ಬೊಮ್ಮಾಯಿ

ಬೆಂಗಳೂರು: 'ಗ್ಯಾರಂಟಿ ಹೆಸರಿನಲ್ಲಿ ರಾಜ್ಯವನ್ನು ದಿವಾಳಿ ಮಾಡಿದ್ದೂ ಅಲ್ಲದೇ, ಬಿಜೆಪಿ ಸರ್ಕಾರದ ರೈತ, ವಿದ್ಯಾರ್ಥಿ ಮತ್ತು ದಲಿತರ ಯೋಜನೆಗಳನ್ನು ಕಡಿತ ಮಾಡಿ ಜನರಿಗೆ ಚೊಂಬು ಕೊಟ್ಟಿರುವುದು ಕಾಂಗ್ರೆಸ್ ಸರ್ಕಾರದ ಹೆಗ್ಗಳಿಕೆ' ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ ಕ್ಷೇತ್ರದ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ಜನರಿಗೆ ಶಾಶ್ವತ ಯೋಜನೆಗಳನ್ನು ಕೊಟ್ಟಿದ್ದಾರೆ. ಈ ಮೂಲಕ ಮೋದಿಯವರು ಚೊಂಬನ್ನು ಅಕ್ಷಯ ಪಾತ್ರೆ ಮಾಡಿದ್ದಾರೆ ಎಂದರು.

'ಮೋದಿಯವರು ಶಾಶ್ವತ ಯೋಜನೆಗಳ ಮೂಲಕ ಚೊಂಬನ್ನು ಅಕ್ಷಯಪಾತ್ರೆ ಮಾಡಿದ್ದಾರೆ. ಆರು ಲಕ್ಷ ಬೀದಿ ಬದಿ ವ್ಯಾಪಾರಸ್ಥರಿಗೆ ಅನುದಾನ, 9 ಲಕ್ಷ ಮನೆಗಳಿಗೆ ಉಜ್ವಲ ಗ್ಯಾಸ್ ಸಂಪರ್ಕ, ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 4 ಲಕ್ಷ ಮನೆ, 12 ಲಕ್ಷ ಶೌಚಾಲಯ ನಿರ್ಮಿಸಿದೆ. ಕೋವಿಡ್ ವೇಳೆ ಉಚಿತವಾಗಿ 10 ಕೆ.ಜಿ.ಅಕ್ಕಿ ಕೊಟ್ಟಿದ್ದು ಮೋದಿ. ಕಾಂಗ್ರೆಸ್ ಸರ್ಕಾರ ಒಂದು ಕಾಳೂ ಕೊಟ್ಟಿಲ್ಲ. ಇದನ್ನು ಕಾಂಗ್ರೆಸ್ ಚೊಂಬಿಗೆ ಸೇರಿಸಿಕೊಳ್ಳಲಿ' ಎಂದರು.

ಯುಪಿಎ ಅವಧಿಗಿಂತಲೂ ಎನ್‌ಡಿಎ ಅವಧಿಯಲ್ಲಿ ರಾಜ್ಯಕ್ಕೆ ತೆರಿಗೆ ಪಾಲಿನ ಹಣ ಹಾಗೂ ಕೇಂದ್ರದ ಅನುದಾನ ರಾಜ್ಯಕ್ಕೆ ಹೆಚ್ಚು ಬಂದಿದೆ. ಹಾಗಿದ್ದರೆ ಚೊಂಬು ಕೊಟ್ಟಿದ್ದು ಯಾರು? ಕಾಂಗ್ರೆಸ್ಸಾ? ಬಿಜೆಪಿಯಾ ಎಂದು ಪ್ರಶ್ನಿಸಿದರು.

ಬಿಜೆಪಿಯಿಂದ 'ಚಿಪ್ಪು' ಚಳವಳಿ

ಒಂದನೇ ಪುಟದಿಂದ...

'ಬಿಜೆಪಿ ಸರ್ಕಾರವಿದ್ದಾಗ ಕಿಸಾನ್ ಸಮ್ಮಾನ್ ಯೋಜನೆಯಡಿ ನೀಡುತ್ತಿದ್ದ ₹4,000 ರದ್ದು ಮಾಡಿ ರೈತರಿಗೆ ಚಿಪ್ಪು ನೀಡಿದೆ. ವಿದ್ಯಾರ್ಥಿವೇತನ ರದ್ದತಿ ಮೂಲಕ ವಿದ್ಯಾರ್ಥಿಗಳಿಗೆ, ಹಾಲಿನ ಪ್ರೋತ್ಸಾಹಧನ ರದ್ದು ಮಾಡಿ ಹಾಲು ಉತ್ಪಾದಕರಿಗೆ, ಪರಿಶಿಷ್ಟರಿಗೆ ಮೀಸಲಿಟ್ಟಿದ್ದ ₹11,146 ಕೋಟಿಯನ್ನು ಬೇರೆ ಯೋಜನೆಗಳಿಗೆ ವರ್ಗಾಯಿಸಿ ಮೂಲಕ ಪರಿಶಿಷ್ಟರ ಕೈಗೂ ಈ ಸರ್ಕಾರ ಚಿಪ್ಪು ನೀಡಿದೆ. ಇದನ್ನು ಖಂಡಿಸಿ ದಾವಣಗೆರೆಯಲ್ಲಿ ಬೃಹತ್ ಚಳವಳಿ ಹಮ್ಮಿಕೊಳ್ಳಲಾಗುವುದು ಎಂದು ಅವರು ಹೇಳಿದರು.

'ಮೈ ಬ್ರದರ್' ನೀತಿಯಿಂದ ದುಷ್ಕೃತ್ಯ ಹೆಚ್ಚಳ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಭಯೋತ್ಪಾದಕರು ಹಾಗೂ ಉಗ್ರಗಾಮಿಗಳ ಓಲೈಸುತ್ತಿದೆ. ಸರ್ಕಾರದ 'ಮೈ ಬ್ರದರ್' ಪಾಲಿಸಿಯಿಂದ ದುಷ್ಕೃತ್ಯಗಳು ಹೆಚ್ಚಾಗಿವೆ. ಮಂಗಳೂರಿನಲ್ಲಿ ಕುಕ್ಕರ್ ಸ್ಫೋಟ ಮಾಡಿದವರಿಗೆ ಕ್ಲೀನ್ ಚಿಟ್ ನೀಡಲಾಗಿದೆ. ಎಸ್‌ಡಿಪಿಐ, ಪಿಎಫ್‌ಐ, ಕೆಎಫ್‌ಡಿ ಮೇಲಿದ್ದ 175 ಪ್ರಕರಣಗಳನ್ನು ರದ್ದುಪಡಿಸಿ 1,600 ಜನರನ್ನು ಬಿಡುಗಡೆ ಮಾಡಲಾಗಿದೆ. ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಸೈಬರ್ ಅಪರಾಧ ಶೇ 41ರಷ್ಟು ಜಾಸ್ತಿ ಆಗಿದೆ' ಎಂದು ಆರೋಪಿಸಿದರು.

'ಪ್ರಧಾನಿಯಾಗಲು ಮೋದಿ ನಾಲಾಯಕ್ಕು'

ಶಿಡ್ಲಘಟ್ಟ, ಚಿಕ್ಕಬಳ್ಳಾಪುರ: 'ದೇವೇಗೌಡರು ಏಕೆ ಇಷ್ಟು ಕೀಳುಮಟ್ಟಕ್ಕೆ, ಕೆಳಮಟ್ಟಕ್ಕೆ ಇಳಿದಿದ್ದಾರೆ? ನಿಮ್ಮ ಜಾತ್ಯತೀತ ಸಿದ್ಧಾಂತ ಏನಾಯಿತು' ಎಂದು ಸಿದ್ದರಾಮಯ್ಯ ಶಿಡ್ಲಘಟ್ಟದ ರೋಡ್ ಶೋ ವೇಳೆ ಪ್ರಶ್ನಿಸಿದರು.

'ಖಾಲಿ ಚೊಂಬನ್ನು ಅಕ್ಷಯಪಾತ್ರೆ ಎಂದು ದೇವೇಗೌಡರು ರೈಲು ಬಿಡುತ್ತಿದ್ದಾರೆ. ಗೌಡರೇ, ನಿಮಗೆ ನಾಚಿಕೆ ಆಗಬೇಕು. ಕುಟುಂಬದ ಸ್ವಾರ್ಥಕ್ಕಾಗಿ ಕೋಮುವಾದಿಗಳೊಂದಿಗೆ ಕೈಜೋಡಿಸಿಬಿಟ್ಟಿರಾ' ಎಂದು ಕೇಳಿದರು.

ದೇವೇಗೌಡರೇ, ರಾಜ್ಯಸಭೆ ಸದಸ್ಯರಾಗಿ ತಾವು ಏಕೆ ರಾಜ್ಯಕ್ಕೆ ಅಕ್ಕಿ ಕೊಡಿಸಲಿಲ್ಲ. 10 ಕೆ.ಜಿ ಅಕ್ಕಿ ಕೊಟ್ಟರೆ ಬಡವರು ಸಿದ್ದರಾಮಯ್ಯ ಪರ ನಿಲ್ಲುತ್ತಾರೆ ಎಂಬ ಭಯವೇ?
ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೋದಿ, ಮೋದಿ ಎಂದು ಕಿರುಚಾಡುವ ಯುವಜನರು ಮನೆಯಲ್ಲಿ ತಂದೆ, ತಾಯಿಗೆ ಸರಿಯಾಗಿ ಊಟ ಹಾಕಲ್ಲ
ಎಸ್.ಎನ್.ನಾರಾಯಣಸ್ವಾಮಿ, ಶಾಸಕ

ಬಾಲೆಯರ ರಕ್ಷಣೆಗೆ ಕಾರ್ಯಪಡೆ

ಒಂದನೇ ಪುಟದಿಂದ...

ಅದಕ್ಕಾಗಿ ಅವರು ಇಲಾಖೆಗಳು ಕೈಗೊಳ್ಳಬೇಕಾದ ಕಾರ್ಯಸೂಚಿ ರೂಪಿಸಿದ್ದಾರೆ. ಈ ಕುರಿತ ನಿರ್ದೇಶನಗಳ ಪತ್ರದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ವಸತಿ ಶಾಲೆ, ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿನಿಯರ ಚಟುವಟಿಕೆಯ ಮೇಲೆ ನಿಗಾ ವಹಿಸಬೇಕು ಎಂದು ಸೂಚಿಸಲಾಗಿದೆ.

'ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣದ ಜೊತೆಗೆ ಸಂತ್ರಸ್ತರಿಗೆ ರಕ್ಷಣೆ ನೀಡಲು, ಅವರ ಮನೋಸ್ಥೈರ್ಯ ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಕಾರ್ಯಪಡೆ ರಚಿಸಲಾಗುತ್ತಿದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಯುವ ಪುರಸ್ಕಾರ... ಕವಿ ಹಾಗೂ ಬಾಗಲಕೋಟೆ ಜಿಲ್ಲೆ ಇಳಕಲ್‌ನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಆರಿಫ್ ರಾಜಾ ಅವರಿಗೆ ಕೋಲ್ಕತ್ತದ ಭಾರತೀಯ ಭಾಷಾ ಪರಿಷತ್ ನೀಡುವ 'ಯುವ ಪುರಸ್ಕಾರ' ಪ್ರಶಸ್ತಿಯನ್ನು ಬಂಗಾಲಿ ಲೇಖಕ ರಾಮಕುಮಾರ್ ಮುಖ್ಯೋಪಾಧ್ಯಾಯ ಅವರು ಕೋಲ್ಕತ್ತದಲ್ಲಿ ಶನಿವಾರ ಪ್ರದಾನ ಮಾಡಿದರು. ಮಲಯಾಳದ ಹಿರಿಯ ಲೇಖಕ ಎಂ. ಮುಕುಂದನ್, ಭಾರತೀಯ ಭಾಷಾ ಪರಿಷದ್‌ನ ಸದಸ್ಯರಾದ ಪೂಜಾ ಪಾಲ್ಗೊಂಡಿದ್ದರು

ಮುನವಳ್ಳಿಯಲ್ಲಿ ವಿವಾಹಿತ ಮಹಿಳೆ ಮತಾಂತರಕ್ಕೆ ಯತ್ನ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಸವದತ್ತಿ(ಬೆಳಗಾವಿ ಜಿಲ್ಲೆ): ವಿವಾಹಿತ ಮಹಿಳೆಯನ್ನು ಮತಾಂತರ ಮಾಡಲು ಯತ್ನಿಸಿದ ಘಟನೆ ತಾಲ್ಲೂಕಿನ ಮುನವಳ್ಳಿಯಲ್ಲಿ ಇತ್ತೀಚೆಗೆ ನಡೆದಿದ್ದು ಈ ಘಟನೆ ಸಂಬಂಧ ಆರೋಪಿ ರಫೀಕ್ ಬೇಪಾರಿ ಹಾಗೂ ಅವರ ಪತ್ನಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

'ಮುನವಳ್ಳಿಯ ಸಿದ್ಧೇಶ್ವರ ನಗರದಲ್ಲಿ ಮಹಿಳೆಯೊಬ್ಬರು ಕಿರಾಣಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. ಅವರ ಪತಿ ಇಲ್ಲದಿರುವ ವೇಳೆ, ರಫೀಕ್ ಬಂದು ಅಸಭ್ಯವಾಗಿ ವರ್ತಿಸುತ್ತಿದ್ದ. ಇದರಿಂದ ಮಹಿಳೆ ಆಕ್ರೋಶಗೊಂಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಮೊಬೈಲ್ ಮೂಲಕ ನನ್ನೊಂದಿಗೆ ಸಂಪರ್ಕ ಸಾಧಿಸಿದ ರಫೀಕ್, ವಿವಿಧ ಆಮಿಷವೊಡ್ಡಿ ಪುಸಲಾಯಿಸಿದ್ದ. ನನ್ನೊಂದಿಗೆ ಸಲುಗೆ ಬೆಳಸಿದ ವಿಷಯ ಪತಿಗೆ ತಿಳಿಯಿತು. ಆಗ ಪತಿ ನನ್ನನ್ನು ಮನೆಯಿಂದ ಹೊರಹಾಕಿದ್ದರು. 11 ತಿಂಗಳುಗಳಿಂದ ರಫೀಕ್ ಜತೆಗೆ ವಾಸಿಸುತ್ತಿದ್ದೆ. ಬೆಳಗಾವಿಯ ಶಾಹು ನಗರದಲ್ಲಿರುವ ಹಾಸ್ಟೆಲ್‌ನಲ್ಲಿ ಆತ ನನ್ನನ್ನು ಇರಿಸಿದ್ದ. ಕೆಲಸ ಕೊಡಿಸುವುದಾಗಿ ನಂಬಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಆತನ ಜತೆಗೆ ಐವರು ಸೇರಿಕೊಂಡು ನನ್ನ ಖಾಸಗಿ ಫೋಟೊ ಸೆರೆಹಿಡಿದು, ಮಾನಸಿಕ ಕಿರುಕುಳ ನೀಡುತ್ತಿದ್ದರು. ಹಿಂದೂ ಧರ್ಮದಿಂದ ಮುಸ್ಲಿಂ ಧರ್ಮಕ್ಕೆ ಮತಾಂತರಗೊಳ್ಳುವಂತೆ ಬೆದರಿಕೆ ಹಾಕಿ ಪೀಡಿಸುತ್ತಿದ್ದರು. ಹಣೆಗೆ ಕುಂಕುಮ ಹಚ್ಚಿಕೊಳ್ಳುವುದನ್ನು ನಿಲ್ಲಿಸಿ, ಬುರ್ಖಾ ಧರಿಸುವಂತೆ ಮತ್ತು ನಿತ್ಯ ಐದು ಬಾರಿ ಪ್ರಾರ್ಥನೆ ಮಾಡುವಂತೆ ಒತ್ತಡ ಹೇರುತ್ತಿದ್ದರು. ನನಗೆ ಒತ್ತಾಯಪೂರ್ವಕವಾಗಿ ಬುರ್ಖಾ ಧರಿಸಿದ್ದರು' ಎಂದು ಸಂತ್ರಸ್ತೆ ಸವದತ್ತಿ ಪೊಲೀಸ್ ಠಾಣೆಯಲ್ಲಿ ಏ.18ರಂದು ದೂರು ದಾಖಲಿಸಿದ್ದಾರೆ.

'ನನ್ನ ಮದುವೆಯಾಗಿ 10 ವರ್ಷವಾಯಿತು. ನನ್ನ ಸಂಸಾರ ನೆಮ್ಮದಿಯಿಂದ ಸಾಗುತ್ತಿತ್ತು. ಆದರೆ,ರಫೀಕ್ ನನ್ನ ದಾರಿ ತಪ್ಪಿಸಿದ್ದಾನೆ. ನನ್ನ ಪತಿ, ಮಕ್ಕಳಿಗೆ ಜೀವ ಬೆದರಿಕೆ ಹಾಕಿದ ಆತ, ಹೊರಜಗತ್ತಿನ ಸಂಪರ್ಕ ಕಡಿತಗೊಳಿಸಿ ಕೋಣೆಯಲ್ಲಿ ಕೂಡಿಹಾಕಿ ಕಿರುಕುಳ ಕೊಟ್ಟಿದ್ದಾನೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಎಲ್ಲ ಆಯಾಮಗಳಲ್ಲಿ ತನಿಖೆ–ಎಸ್‌ಪಿ: 'ಮತಾಂತರಕ್ಕೆ ಯತ್ನ ಪ್ರಕರಣಕ್ಕೆ ಸಂಬಂಧಿಸಿ, ರಫೀಕ್ ಬೇಪಾರಿ, ಆದಿಲ್, ಸೋಹೆಲ್, ಮಕ್ತುಮ್, ಉಮರ್ ಸೇರಿದಂತೆ ಸಂತ್ರಸ್ತೆ ಏಳು ಮಂದಿ ವಿರುದ್ಧ ದೂರು ದಾಖಲಿಸಿದ್ದಾರೆ. ಈಗಾಗಲೇ ಇಬ್ಬರು ಆರೋಪಿಗಳನ್ನು ಬಂಧಿಸಿದ್ದೇವೆ. ಎಲ್ಲ ಆಯಾಮಗಳಲ್ಲಿ ತನಿಖೆ ನಡೆಯುತ್ತಿದ್ದು, ಈ ಪ್ರಕರಣ ದಲ್ಲಿ ಭಾಗಿಯಾದ ಎಲ್ಲರನ್ನೂ ಬಂಧಿಸಲಾಗುವುದು' ಎಂದು ಬೆಳಗಾವಿ ಎಸ್‌ಪಿ ಡಾ.ಭೀಮಾಶಂಕರ ಗುಳೇದ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ರೈತರ ಪ್ರತಿಭಟನೆ 73 ರೈಲುಗಳ ಸಂಚಾರ ರದ್ದು

ಅಂಬಾಲಾ (ಪಿಟಿಐ): ಹರಿಯಾಣ ಪೊಲೀಸರು ಬಂಧಿಸಿದ ಮೂವರು ರೈತರ ಬಿಡುಗಡೆಗೆ ಒತ್ತಾಯಿಸಿ ಪಂಜಾಬ್‌ನ ಪಟಿಯಾಲಾ ಜಿಲ್ಲೆಯ ಶಂಭು ರೈಲ್ವೆ ನಿಲ್ದಾಣದ ಹಳಿಗಳ ಮೇಲೆ ನಡೆಸುತ್ತಿರುವ ಪ್ರತಿಭಟನೆಯು ಭಾನುವಾರ ಐದನೇ ದಿನಕ್ಕೆ ಕಾಲಿಟ್ಟಿದೆ. ಇದರಿಂದಾಗಿ ಅಂಬಾಲಾ–ಅಮೃತಸರ ಮಾರ್ಗದ 73 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈತರ ಪ್ರತಿಭಟನೆಯು ಉತ್ತರ ಭಾರತದಲ್ಲಿ 159 ರೈಲುಗಳ ಸಂಚಾರದ ಮೇಲೆ ಪರಿಣಾಮ ಬೀರಿದೆ. ಐದು ದಿನಗಳಿಂದ ರೈತರು ನಡೆಸುತ್ತಿರುವ ರೈಲು ರೋಕೊ ಚಳವಳಿಯಿಂದಾಗಿ 600 ರೈಲು ಸಂಚಾರಕ್ಕೆ ಅಡ್ಡಿಯಾಗಿದ್ದು, ಅಂಬಾಲಾ ಮತ್ತು ಫಿರೋಜ್‌ಪುರ ವಿಭಾಗಗಳಲ್ಲಿ 89 ರೈಲು ಸಂಚಾರ ರದ್ದುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, ಹಲವು ರೈಲುಗಳ ಮಾರ್ಗವನ್ನು ಬದಲಾವಣೆ ಮಾಡಲಾಗಿದೆ. ಐದು ದಿನಗಳಿಂದ ರೈಲುಗಳ ಸಂಚಾರ ರದ್ದುಗೊಳಿಸಿದ್ದರಿಂದಾಗಿ ರೈಲ್ವೆ ಇಲಾಖೆಗೆ ಹಣಕಾಸಿನ ನಷ್ಟದ ಜೊತೆಗೆ ಪ್ರಯಾಣಿಕರ ಸಂಚಾರಕ್ಕೆ ದೊಡ್ಡ ಅಡಚಣೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದೋಣಿ ದುರಂತ ಇಬ್ಬರ ಬಂಧನ

ಭುವನೇಶ್ವರ (ಪಿಟಿಐ): ಒಡಿಶಾದ ಝಾರ್‌ಸುಗುಡ ಜಿಲ್ಲೆಯ ಮಹಾ ನದಿಯಲ್ಲಿ ದೋಣಿ ಮಗುಚಿಬಿದ್ದು, 8 ಜನರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಘಟನೆ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ನಡೆಸುತ್ತಿದ್ದು, ಇಬ್ಬರು ಆರೋಪಿಗಳನ್ನು ಶನಿವಾರ ಬಂಧಿಸಿದ್ದಾರೆ. 'ಇಬ್ಬರು ಬಂಧಿತ ಆರೋಪಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ' ಎಂದು ಝಾರ್‌ಸುಗುಡ ಎಸ್.ಪಿ ತಿಳಿಸಿದ್ದಾರೆ.

ನಿಯಮಗಳನ್ನು ಅನುಸರಣೆಯ ನಂತರ ಘಟನೆಯಲ್ಲಿ ಮೃತಪಟ್ಟವರ ಶವಗಳನ್ನು ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ. ಗಾಯಾಳುಗಳನ್ನು ಮನೆಗೆ ಕಳುಹಿಸಿಕೊಡಲಾಗಿದೆ ಎಂದು ಹೇಳಿದರು.

ಮುಳುಗಡೆಯಾದ ದೋಣಿಯು ನೋಂದಣಿಯಾಗಿರಲಿಲ್ಲ ಮತ್ತು ಅದು ಕಾರ್ಯಾಚರಣೆಗೆ ಅನರ್ಹವಾಗಿದೆ ಎಂದು ಪರಿಗಣಿಸಲಾಗಿದೆ ಎಂದು ಝಾರ್‌ಸುಗುಡ ಜಿಲ್ಲೆಯ ಮೋಟರು ವಾಹನ ನಿರೀಕ್ಷಕ ಲೋಕನಾಥ್ ಮೆಹರ್ ತಿಳಿಸಿದ್ದಾರೆ.

ಅಲ್ಲದೇ ದೋಣಿಯಲ್ಲಿ ಲೈಫ್ ಜಾಕೆಟ್‌ಗಳೂ (ಜೀವ ರಕ್ಷಕ ಕವಚ) ಇರಲಿಲ್ಲ ಎಂದಿದ್ದಾರೆ. ದೋಣಿಯು ಕೇವಲ 20 ಜನರನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದ್ದರೂ 50ಕ್ಕೂ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯಲಾಗಿತ್ತು. ಹೀಗಾಗಿ ಶುಕ್ರವಾರ ಮಧ್ಯಾಹ್ನ ಅಪಘಾತ ಸಂಭವಿಸಿತ್ತು ಎಂದು ಹೇಳಿದರು.

ಒಡಿಶಾ: ಕಾಳ್ಗಿಚ್ಚು ನಿಗ್ರಹಕ್ಕೆ ಯತ್ನ

ಬಾರಿಪದಾ (ಪಿಟಿಐ): ಒಡಿಶಾದ ಸಿಂಪ್ಲಿಪಾಲ್ ಹುಲಿ ಸಂರಕ್ಷಿತಾರಣ್ಯದಲ್ಲಿ (ಎಸ್‌ಟಿಆರ್) ಕಾಳ್ಗಿಚ್ಚು ಸಂಭವಿಸಿದ್ದು, ಬೆಂಕಿ ನಂದಿಸಲು ವಿಪತ್ತು ನಿರ್ವಹಣೆ ತುರ್ತು ಕಾರ್ಯಪಡೆಯನ್ನು (ಒಡಿಆರ್‌ಎಎಫ್) ರಾಜ್ಯ ಸರ್ಕಾರ ನಿಯೋಜಿಸಿದೆ.

ಅಲ್ಲಲ್ಲಿ ಬೆಂಕಿ ಹೊತ್ತಿಕೊಂಡಿರುವುದನ್ನು ಅಧಿಕಾರಿಗಳು ಕೆಲವು ದಿನಗಳಿಂದ ಗುರುತಿಸಿದ್ದರು. ಶನಿವಾರ 13 ಕಡೆಗಳಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಭಾನುವಾರ 31 ಕಡೆ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೋವು ಅಕ್ರಮ ಸಾಗಣೆ ಆರೋಪ ಲಾರಿ ಚಾಲಕನಿಗೆ ಥಳಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಲಾರಿಯೊಂದರಲ್ಲಿ ಗೋವುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ' ಎಂದು ಆರೋಪಿಸಿ, ಇಲ್ಲಿನ ಸುವರ್ಣ ವಿಧಾನಸೌಧ ಬಳಿ ಭಾನುವಾರ ರಾತ್ರಿ ಭಜರಂಗದಳ ಹಾಗೂ ಶ್ರೀರಾಮಸೇನೆ ಹಿಂದೂಸ್ತಾನ್ ಸಂಘಟನೆಗಳ ಕಾರ್ಯಕರ್ತರು, ಚಾಲಕನನ್ನು ಮನಬಂದಂತೆ ಥಳಿಸಿದ್ದಾರೆ. ಈ ಘಟನೆಯ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಬೆಳಗಾವಿಯಿಂದ ಹುಬ್ಬಳ್ಳಿ ಕಡೆಗೆ ಗೋವುಗಳನ್ನು ಸಾಗಿಸಲಾಗುತ್ತಿತ್ತು. ಮಾರ್ಗಮಧ್ಯೆ ತಡೆದ ಕಾರ್ಯಕರ್ತರು, ಲಾರಿಯ ಗಾಜುಗಳನ್ನು ಒಡೆದು ಚಾಲಕನ ಮೇಲೆ ಹಲ್ಲೆ ಮಾಡಿದರು. ಇದರಿಂದಾಗಿ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು. ಅಪಾರ ಸಂಖ್ಯೆಯಲ್ಲಿ ಜನರು ಸೇರಿದರು. ಘಟನಾ ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಬೆಳಗಾವಿ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಗದೀಶ ಶೆಟ್ಟರ್, 'ಪೊಲೀಸರು ಈ ಬಗ್ಗೆ ಪರಿಶೀಲಿಸಿ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು.

ತನಿಖೆ ನಡೆಸುತ್ತಿದ್ದೇವೆ: 'ಲಾರಿ ತಡೆದ ಯುವಕರು ಚಾಲಕನ ಮೇಲೆ ಹಲ್ಲೆ ನಡೆಸಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ, ಅದರಲ್ಲಿ 10ರಿಂದ 15 ಆಕಳು ಇದ್ದವು ಎಂದು ಗೊತ್ತಾಗಿದೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗಿದ್ದು, ತನಿಖೆ ನಡೆಸುತ್ತಿದ್ದೇವೆ' ಎಂದು ನಗರ ಪೊಲೀಸ್ ಉಪ ಆಯುಕ್ತ(ಕಾನೂನು ಮತ್ತು ಸುವ್ಯವಸ್ಥೆ ವಿಭಾಗ) ರೋಹನ ಜಗದೀಶ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಗರ್ಭಿಣಿ ಪತ್ನಿಗೆ ಬೆಂಕಿ ಹಚ್ಚಿ ಕೊಂದ

ಅಮೃತಸರ (ಪಿಟಿಐ): ಪಂಜಾಬ್‌ನ ಅಮೃತಸರ ಜಿಲ್ಲೆಯ ಬುಲೆ ನಂಗಲ್ ಎಂಬ ಗ್ರಾಮದಲ್ಲಿ ವ್ಯಕ್ತಿಯೊಬ್ಬ ಆರು ತಿಂಗಳ ಗರ್ಭ ಧರಿಸಿದ್ದ ತನ್ನ ಪತ್ನಿಯನ್ನು ಮಂಚಕ್ಕೆ ಕಟ್ಟಿಹಾಕಿ, ಬೆಂಕಿ ಹಚ್ಚಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಭಾನುವಾರ ಆರೋಪಿಸಿದ್ದಾರೆ.

ಈ ಕೃತ್ಯವೆಸಗಿ ಪರಾರಿಯಾಗಿದ್ದ ಆರೋಪಿ ಸುಖದೇವ್ ಸಿಂಗ್‌ನನ್ನು ಬಂಧಿಸಿರುವ ಪೊಲೀಸರು, ಆತನ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ತೂಟೆದಾರ' ಸೇವೆ ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಪಂಜುಗಳನ್ನು ಪರಸ್ಪರ ಎಸೆದುಕೊಳ್ಳುವ 'ತೂಟೆದಾರ' ಸೇವೆ ಭಾನುವಾರ ಮುಂಜಾನೆ ನಡೆಯಿತು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್, ಎಚ್.

ನೇರ ತೆರಿಗೆ ಸಂಗ್ರಹ ಏರಿಕೆ

₹19.58 ಲಕ್ಷ ಕೋಟಿ ಸಂಗ್ರಹ: ಬಜೆಟ್ ಗುರಿ ಮೀರಿ ಸಾಧನೆ



ನವದೆಹಲಿ (ಪಿಟಿಐ): ದೇಶದಲ್ಲಿ 2023–24ನೇ ಆರ್ಥಿಕ ಸಾಲಿನಲ್ಲಿ ನೇರ ತೆರಿಗೆ ನಿವ್ವಳ ಸಂಗ್ರಹವು ₹19.58 ಲಕ್ಷ ಕೋಟಿ ಆಗಿದೆ ಎಂದು ಆದಾಯ ತೆರಿಗೆ ಇಲಾಖೆಯು ಭಾನುವಾರ ತಿಳಿಸಿದೆ.

2022–23ನೇ ಆರ್ಥಿಕ ವರ್ಷದಲ್ಲಿ ₹16.64 ಲಕ್ಷ ಕೋಟಿ ತೆರಿಗೆ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇ 17.7ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

2023–24ನೇ ಸಾಲಿನ ಬಜೆಟ್‌ನಲ್ಲಿ ಒಟ್ಟು ₹18.23 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಫೆಬ್ರುವರಿ 1ರಂದು ಮಂಡಿಸಿದ್ದ ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿ ಇದನ್ನು ಪರಿಷ್ಕರಿಸಿ ₹19.45 ಲಕ್ಷ ಕೋಟಿ ಸಂಗ್ರಹಕ್ಕೆ ಗುರಿ ನಿಗದಿ ಪಡಿಸಲಾಗಿತ್ತು. ಇದನ್ನು ಮೀರಿ ಗುರಿ ಸಾಧನೆಯಾಗಿದೆ.

ಬಜೆಟ್ ಗುರಿಯನ್ನು ಮೀರಿ ₹1.35 ಲಕ್ಷ ಕೋಟಿ ಸಂಗ್ರಹಿಸಲಾಗಿದೆ (ಶೇ 7.40ರಷ್ಟು). ಅಲ್ಲದೆ, ಮಧ್ಯಂತರ ಬಜೆಟ್‌ನಲ್ಲಿ ಪರಿಷ್ಕರಿಸಿದ್ದಕ್ಕಿಂತಲೂ ಹೆಚ್ಚುವರಿಯಾಗಿ ₹13 ಸಾವಿರ ಕೋಟಿಗೂ ಹೆಚ್ಚು ಸಂಗ್ರಹವಾಗಿದೆ ಎಂದು ವಿವರಿಸಿದೆ.

2023–24ರಲ್ಲಿ ನೇರ ತೆರಿಗೆಯ ಸರಾಸರಿ ಸಂಗ್ರಹವು ₹19.72 ಲಕ್ಷ ಕೋಟಿಯಿಂದ ₹23.37 ಲಕ್ಷ ಕೋಟಿಗೆ ಏರಿಕೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 18.48ರಷ್ಟು ಏರಿಕೆಯಾಗಿದೆ. ತೆರಿಗೆ ಮರುಪಾವತಿ (ರೀಫಂಡ್) ಮೊತ್ತ ₹3.79 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

ತೆರಿಗೆ ಸಂಗ್ರಹದ ಹೆಚ್ಚಳವು ಆರ್ಥಿಕತೆಯ ಚೇತರಿಕೆಗೆ ಕನ್ನಡಿ ಹಿಡಿದಿದೆ. ಅಲ್ಲದೆ ವೈಯಕ್ತಿಕ ಆದಾಯ ಹಾಗೂ ಕಾರ್ಪೊರೇಟ್ ಕಂಪನಿಗಳ ಆದಾಯದ ಮಟ್ಟ ಏರಿಕೆಯಾಗಿರುವ ಸೂಚಕವಾಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ತಿಳಿಸಿದೆ.

ಕಾರ್ಪೊರೇಟ್ ತೆರಿಗೆಯ ನಿವ್ವಳ ಸಂಗ್ರಹವು ಶೇ 10.26ರಷ್ಟು ಹಾಗೂ ವೈಯಕ್ತಿಕ ಆದಾಯ ತೆರಿಗೆ ಸಂಗ್ರಹವು ಶೇ 25.23ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಹಾರ್ಮುಜ್ ಜಲಸಂಧಿ: ಸಂಚಾರ ತಡೆದರೆ ಸಮಸ್ಯೆ ಸೃಷ್ಟಿ

ಕಚ್ಚಾ ತೈಲ, ಎಲ್‌ಎನ್‌ಜಿ ದರ ಏರಿಕೆ?

ನವದೆಹಲಿ (ಪಿಟಿಐ): ಇಸ್ರೇಲ್ ಮೇಲೆ ದಾಳಿ ನಡೆಸುತ್ತಿರುವ ಇರಾನ್, ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ತಡೆಯೊಡ್ಡಿದರೆ ಕಚ್ಚಾ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

ಹಾರ್ಮುಜ್ ಜಲಸಂಧಿ ಮೂಲಕ ಸೌದಿ ಅರೇಬಿಯಾ, ಇರಾಕ್, ಯುಎಇಯಿಂದ ಭಾರತಕ್ಕೆ ಕಚ್ಚಾ ತೈಲ ಮತ್ತು ಎಲ್‌ಎನ್‌ಜಿ ಪೂರೈಕೆಯಾಗುತ್ತಿದೆ. ಈ ಮಾರ್ಗದಲ್ಲಿ ಹಡಗುಗಳ ಸಂಚಾರ ಸ್ಥಗಿತಗೊಂಡರೆ ಕಚ್ಚಾ ತೈಲದ ಬೆಲೆ ಏರಿಕೆಯಾಗಲಿದೆ. ಇದು ಹಣದುಬ್ಬರದ ಹೆಚ್ಚಳಕ್ಕೂ ಕಾರಣವಾಗಲಿದೆ ಎಂದಿದ್ದಾರೆ.

ಕಳೆದ ಕೆಲವು ದಿನಗಳಿಂದ ಉಭಯ ರಾಷ್ಟ್ರಗಳ ನಡುವೆ ಸಂಘರ್ಷ ಉಲ್ಬಣಿಸಿದೆ. ಸದ್ಯ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 90 ಡಾಲರ್‌ನ ಆಸುಪಾಸಿನಲ್ಲಿದೆ. 'ಈ ಜಲಸಂಧಿಯನ್ನು ಸಂಪೂರ್ಣ ಅಥವಾ ಭಾಗಶಃ ಬಂದ್ ಮಾಡಿದರೂ ಕಚ್ಚಾ ತೈಲ, ಎಲ್‌ಎನ್‌ಜಿ ಬೆಲೆ ಏರಿಕೆಯಾಗಲಿದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಇರಾನ್ ಮತ್ತು ಒಮನ್ ನಡುವೆ ಇರುವ ಈ ಜಲಸಂಧಿಯು ಕಿರಿದಾದ ಸಮುದ್ರ ಮಾರ್ಗವಾಗಿದ್ದು, 40 ಕಿ.ಮೀನಷ್ಟು ವಿಸ್ತಾರ ಹೊಂದಿದೆ. ಈ ಪೈಕಿ 2 ಕಿ.ಮೀ. ವ್ಯಾಪ್ತಿ ಪ್ರದೇಶವು ಸರಕು ಸಾಗಣೆ ಹಡಗುಗಳು ಸಂಚಾರಕ್ಕೆ ಯೋಗ್ಯವಾಗಿದೆ. ಈ ಮಾರ್ಗವಾಗಿಯೇ ಭಾರತಕ್ಕೆ ಕಚ್ಚಾ ತೈಲ ಪೂರೈಕೆಯಾಗುತ್ತದೆ ಎಂದು ತಿಳಿಸಿದೆ.

ಪ್ರತಿದಿನ ಈ ಮಾರ್ಗವಾಗಿ 2.1 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾತೈಲ ಪೂರೈಕೆಯಾಗುತ್ತದೆ. ಜಾಗತಿಕಮಟ್ಟದಲ್ಲಿನ ಒಟ್ಟು ಎಲ್‌ಎನ್‌ಜಿ ರಫ್ತಿನ ಪೈಕಿ ಶೇ 20ರಷ್ಟನ್ನು ಈ ಮಾರ್ಗದಿಂದ ಪೂರೈಸಲಾಗುತ್ತದೆ. ಕತಾರ್, ಯುಎಇ ದ್ರವೀಕೃತ ನೈಸರ್ಗಿಕ ಅನಿಲದ ರಫ್ತಿಗೆ ಈ ಜಲಸಂಧಿಯನ್ನೇ ಅವಲಂಬಿಸಿವೆ ಎಂದು ತಿಳಿಸಿದೆ.

'ಭಾರತದ ಕಚ್ಚಾ ತೈಲದ ಬೇಡಿಕೆಯ ಪೈಕಿ ಶೇ 85ರಷ್ಟು ಪೂರೈಕೆಯು ಸಾಗರೋತ್ತರದ ಆಮದಿನ ಮೇಲೆ ಅವಲಂಬಿತವಾಗಿದೆ. ಒಂದು ವೇಳೆ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ದಿಗ್ಬಂಧನ ಹೇರಿದರೆ ಪೂರೈಕೆ ಸರಪಳಿಯಲ್ಲಿ ವ್ಯತ್ಯಯವಾಗಲಿದೆ' ಎಂದು ಹೇಳಿದೆ.

ಷೇರು ಹೂಡಿಕೆ: ತೆರಿಗೆ ಹೊರೆ ಎಷ್ಟು?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ತೆರಿಗೆ ಕಟ್ಟಲು ಯಾರಿಗೂ ಇಷ್ಟವಿರುವುದಿಲ್ಲ. ಆದರೆ, ಷೇರು ಹೂಡಿಕೆ ಮಾಡುವಾಗ ತೆರಿಗೆ ಕಟ್ಟುವುದು ಅನಿವಾರ್ಯ. ತೆರಿಗೆ ನಿಯಮಗಳ ಬಗ್ಗೆ ಸರಿಯಾದ ಅರಿವಿದ್ದಾಗ ಷೇರುಪೇಟೆಯಲ್ಲಿ ಹೂಡಿಕೆಯನ್ನು ಸರಿಯಾಗಿ ಯೋಜಿಸಿಕೊಳ್ಳಬಹುದು.

ಷೇರು ಖರೀದಿ ಮತ್ತು ಮಾರಾಟಕ್ಕೆ ಕೆಲ ತೆರಿಗೆಗಳು ಅನ್ವಯಿಸಿದರೆ, ಷೇರು ಹೂಡಿಕೆ ಮೇಲಿನ ಗಳಿಕೆಗೂ ಕೆಲವು ತೆರಿಗೆ ಕಟ್ಟಬೇಕಾಗುತ್ತದೆ. ಬನ್ನಿ, ಷೇರು ಹೂಡಿಕೆಯಲ್ಲಿ ಬರುವ ಐದು ಮಾದರಿಯ ತೆರಿಗೆ ಬಗ್ಗೆ ವಿವರವಾಗಿ ತಿಳಿಯೋಣ.

ಷೇರುಗಳ ವಹಿವಾಟು ತೆರಿಗೆ: ಷೇರುಪೇಟೆಯಲ್ಲಿ ಷೇರು ಖರೀದಿಸುವಾಗ ಮತ್ತು ಮಾರಾಟ ಮಾಡುವಾಗ ಒಂದು ತೆರಿಗೆ ಕಟ್ಟುತ್ತೇವೆ. ಆದರೆ, ಷೇರುಗಳ ವಹಿವಾಟು ತೆರಿಗೆ ಬಗ್ಗೆ ಬಹುಪಾಲು ಮಂದಿಗೆ ತಿಳಿದಿರುವುದಿಲ್ಲ. ಸದ್ಯ ಷೇರುಗಳ ವಹಿವಾಟು ತೆರಿಗೆ ಶೇ 0.01ರಷ್ಟಿದ್ದು, ಒಟ್ಟು ವಹಿವಾಟು ಮೊತ್ತದ ಮೇಲೆ ಈ ತೆರಿಗೆ ಅನ್ವಯಿಸುತ್ತದೆ.

ಉದಾಹರಣೆಗೆ 'ಬಿ' ಎನ್ನುವ ಕಂಪನಿಯ 100 ಷೇರುಗಳನ್ನು ಪ್ರತಿ ಷೇರಿಗೆ ₹1,650ರಂತೆ ₹1.65 ಲಕ್ಷ ಕೊಟ್ಟು ಖರೀದಿಸಿದ್ದೀರಿ ಎಂದುಕೊಳ್ಳಿ. ಈ ವೇಳೆ ಒಟ್ಟು ₹1.65 ಲಕ್ಷದ ಮೇಲೆ ಶೇ 0.01ರಷ್ಟು ತೆರಿಗೆ ಅಂದರೆ, ₹165 ತೆರಿಗೆ ಅನ್ವಯಿಸುತ್ತದೆ. ಇದೇ ಲೆಕ್ಕಾಚಾರದಲ್ಲಿ ಷೇರು ಮಾರಾಟ ಮಾಡುವಾಗಲೂ ತೆರಿಗೆ ಕಟ್ಟಬೇಕಾಗುತ್ತದೆ.

ಡೇ ಟ್ರೇಡಿಂಗ್ ಅಂದರೆ ಅದೇ ದಿನ ಷೇರು ಖರೀದಿಸಿ, ಅದೇ ದಿನ ಮಾರಾಟ ಮಾಡಿದರೆ ಮಾರಾಟ ಮಾಡುವಾಗ ಮಾತ್ರ ಒಟ್ಟು ಮೌಲ್ಯದ ಮೇಲೆ ಶೇ 0.025ರಷ್ಟು ತೆರಿಗೆ ಬರುತ್ತದೆ.

ಸರಕು ಮತ್ತು ಸೇವಾ ತೆರಿಗೆ: ಷೇರುಗಳ ಖರೀದಿ ಮತ್ತು ಮಾರಾಟ ಮಾಡುವ ಸ್ಥಳವೇ ಷೇರುಪೇಟೆ. ಷೇರುಗಳ ಖರೀದಿ ಮತ್ತು ಮಾರಾಟ ಸೇವೆಯನ್ನು ಷೇರು ಬ್ರೋಕರೇಜ್ ಸಂಸ್ಥೆಗಳು ಒದಗಿಸುವುದರಿಂದ ಸರಕು ಮತ್ತು ಸೇವಾ ತೆರಿಗೆ ಅನ್ವಯಿಸುತ್ತದೆ.

ಷೇರು ವಹಿವಾಟಿನಲ್ಲಿ ಒಟ್ಟು ಮೂರು ವೆಚ್ಚಗಳನ್ನು ಆಧರಿಸಿ ಸರಕು ಮತ್ತು ಸೇವಾ ತೆರಿಗೆಯನ್ನು ವಿಧಿಸಲಾಗುತ್ತದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಶುಲ್ಕ, ಬ್ರೋಕರೇಜ್ ಶುಲ್ಕ ಮತ್ತು ವಹಿವಾಟು ಶುಲ್ಕದ ಮೇಲೆ ಸರಕು ಮತ್ತು ಸೇವಾ ತೆರಿಗೆ ವಿಧಿಸುತ್ತದೆ. ಸದ್ಯ ಷೇರು ಹೂಡಿಕೆಯ ಮೇಲೆ ಶೇ 18ರಷ್ಟು ಜಿಎಸ್‌ಟಿ ಇದೆ.

ಮುದ್ರಾಂಕ ಶುಲ್ಕ: ಷೇರುಗಳ ಮಾರಾಟ ಮತ್ತು ವರ್ಗಾವಣೆಗೆ ಮುದ್ರಾಂಕ ಶುಲ್ಕ ಅನ್ವಯಿಸುತ್ತದೆ. ಕೇಂದ್ರ ಸರ್ಕಾರವು ಷೇರು ಖರೀದಿದಾರನಿಂದ ಮುದ್ರಾಂಕ ಶುಲ್ಕ ಪಡೆಯುತ್ತದೆ. ಸದ್ಯ ಷೇರಿನ ಮಾರುಕಟ್ಟೆ ಮೌಲ್ಯದ ಶೇ 0.015ರಷ್ಟು ಮುದ್ರಾಂಕ ಶುಲ್ಕ ಪಡೆಯಲಾಗುತ್ತಿದೆ.

ಅಂದರೆ ಪ್ರತಿ ₹10 ಸಾವಿರದ ವಹಿವಾಟಿಗೆ ₹1.5 ಮುದ್ರಾಂಕ ಶುಲ್ಕ ಕಟ್ಟಬೇಕಾಗುತ್ತದೆ. ಇಂಟ್ರಾ ಡೇ ಅಂದರೆ ಅಂದೇ ಷೇರು ಖರೀದಿಸಿ ಅಂದೇ ಮಾರಾಟ ಮಾಡಿದರೆ ಶೇ 0.003ರಷ್ಟು ಮುದ್ರಾಂಕ ಶುಲ್ಕ ಅನ್ವಯಿಸುತ್ತದೆ.

ಬಂಡವಾಳ ಗಳಿಕೆ ತೆರಿಗೆ: ಷೇರು ಹೂಡಿಕೆ ಮೇಲಿನ ಗಳಿಕೆಗೆ ಕಟ್ಟಬೇಕಾಗಿ ಬರುವ ತೆರಿಗೆಯನ್ನು ಬಂಡವಾಳ ಗಳಿಕೆ ತೆರಿಗೆ ಎನ್ನಲಾಗುತ್ತದೆ. ಎಷ್ಟು ಅವಧಿಗೆ ಷೇರುಗಳಲ್ಲಿ ಹೂಡಿಕೆ ಮಾಡಿದ್ದೀರಿ ಎನ್ನುವುದನ್ನು ಆಧರಿಸಿ ಬಂಡವಾಳ ಗಳಿಕೆ ತೆರಿಗೆಯನ್ನು ನಿಗದಿ ಮಾಡಲಾಗುತ್ತದೆ. ಬಂಡವಾಳ ಗಳಿಕೆ ತೆರಿಗೆಯಲ್ಲಿ ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ (ಎಸ್‌ಟಿಸಿಜಿ) ಮತ್ತು ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ (ಎಲ್‌ಟಿಸಿಜಿ) ಎಂಬ ಎರಡು ವಿಧಗಳಿವೆ.

ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ: ಷೇರು ಹೂಡಿಕೆ ಮಾಡಿದ ಒಂದು ವರ್ಷದ ಒಳಗಾಗಿ ಷೇರುಗಳನ್ನು ಮಾರಾಟ ಮಾಡಿ ಲಾಭ ಗಳಿಸಿದರೆ ಶೇ 15ರಷ್ಟು ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ ಕಟ್ಟಬೇಕಾಗುತ್ತದೆ. ಉದಾಹರಣೆಗೆ 2024ರ ಜನವರಿಯಲ್ಲಿ 'ಎ' ಎನ್ನುವ ಷೇರಿನ ಮೇಲೆ ರಾಜು ₹50 ಸಾವಿರ ಹೂಡಿಕೆ ಮಾಡಿದ್ದಾರೆ ಎಂದು ಭಾವಿಸಿ. ಆ 'ಎ' ಷೇರಿನ ಮೇಲೆ ಹೂಡಿಕೆ ಮಾಡಿರುವ ₹50 ಸಾವಿರದ ಮೇಲೆ ಅದೇ ವರ್ಷದ ಏಪ್ರಿಲ್‌ನಲ್ಲಿ ರಾಜು ಅವರು ₹10 ಸಾವಿರ ಲಾಭ ಗಳಿಸಿದ್ದಾರೆ ಎಂದುಕೊಳ್ಳಿ. ಇಂತಹ ಸಂದರ್ಭದಲ್ಲಿ ₹10 ಸಾವಿರ ಗಳಿಕೆ ಮೇಲೆ ರಾಜು, ಶೇ 15ರಷ್ಟು ತೆರಿಗೆ ಅಂದರೆ ₹1,500 ಕಟ್ಟಬೇಕಾಗುತ್ತದೆ.

ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ: ಷೇರು ಹೂಡಿಕೆ ಮಾಡಿದ ಒಂದು ವರ್ಷದ ನಂತರ ಷೇರುಗಳನ್ನು ಮಾರಾಟ ಮಾಡಿ ₹1 ಲಕ್ಷಕ್ಕಿಂತ ಹೆಚ್ಚಿನ ಲಾಭ ಗಳಿಸಿದರೆ ಶೇ 10ರಷ್ಟು ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ ಅನ್ವಯಿಸುತ್ತದೆ. ಅಂದರೆ ಮೊದಲ ₹1 ಲಕ್ಷಕ್ಕೆ ತೆರಿಗೆ ಕಟ್ಟಬೇಕಾಗಿ ಬರುವುದಿಲ್ಲ.

ಉದಾಹರಣೆಗೆ 2023ರ ಏಪ್ರಿಲ್‌ನಲ್ಲಿ ₹5 ಲಕ್ಷವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ್ದೀರಿ ಎಂದು ಭಾವಿಸಿ. 2024ರ ಮೇ ತಿಂಗಳಿನಲ್ಲಿ ₹5 ಲಕ್ಷದ ಹೂಡಿಕೆ ಮೇಲೆ ₹1.5 ಲಕ್ಷ ಲಾಭ ಬಂದಿದೆ ಎಂದುಕೊಳ್ಳಿ. ಹೀಗಿರುವಾಗ ₹1 ಲಕ್ಷದ ವರೆಗಿನ ಗಳಿಕೆಗೆ ಯಾವುದೇ ತೆರಿಗೆ ಬರುವುದಿಲ್ಲ. ನಂತರದ ₹50 ಸಾವಿರ ಗಳಿಕೆಗೆ ಶೇ 10ರ ದರದಲ್ಲಿ ಅಂದರೆ ₹5 ಸಾವಿರ ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ ಕಟ್ಟಬೇಕಾಗುತ್ತದೆ.

ಲಾಭಾಂಶ ಗಳಿಕೆ ಮೇಲಿನ ತೆರಿಗೆ: ಕಂಪನಿಯು ಈಗಾಗಲೇ ಷೇರು ಹೂಂದಿರುವ ಹೂಡಿಕೆದಾರರಿಗೆ ತನ್ನ ಲಾಭದ ಪಾಲನ್ನು ಹಂಚುವಾಗ ಅನ್ವಯಿಸುವ ತೆರಿಗೆಗೆ ಲಾಭಾಂಶ ಗಳಿಕೆ ಮೇಲಿನ ತೆರಿಗೆ ಎನ್ನಲಾಗುತ್ತದೆ. ನೀವು ಹೂಡಿಕೆ ಮಾಡಿರುವ ಷೇರು ಕಂಪನಿಗಳು ನಿಮಗೆ ಡಿವಿಡೆಂಡ್ ಕೊಟ್ಟಾಗ ಈ ತೆರಿಗೆ ಕಟ್ಟಬೇಕಾಗುತ್ತದೆ.

ನಿಮ್ಮ ಆದಾಯ ತೆರಿಗೆ ವ್ಯಾಪ್ತಿಗೆ (ಸ್ಲ್ಯಾಬ್) ಅನುಗುಣವಾಗಿ ಲಾಭಾಂಶ ಮೇಲಿನ ತೆರಿಗೆ ಬರುತ್ತದೆ. ಉದಾಹರಣೆಗೆ ಶೇ10ರ ತೆರಿಗೆ ವ್ಯಾಪ್ತಿಯಲ್ಲಿ ಬಂದರೆ ಶೇ10ರಷ್ಟು ತೆರಿಗೆ, ಹಾಗೆಯೇ ಶೇ 20ರ ವ್ಯಾಪ್ತಿಯಲ್ಲಿ ಬಂದರೆ ಶೇ 20 ಮತ್ತು ಶೇ 30ರ ವ್ಯಾಪ್ತಿಯಲ್ಲಿ ಬಂದರೆ ಶೇ 30ರಷ್ಟು ತೆರಿಗೆ ಬರುತ್ತದೆ.

ಒಂದೇ ಕಂಪನಿಯ ಲಾಭಾಂಶ ಹಂಚಿಕೆಯು ₹5 ಸಾವಿರ ಮೀರಿದರೆ ನಿರ್ದಿಷ್ಟ ಕಂಪನಿಯು ಮೂಲದಲ್ಲೇ ಶೇ 10ರಷ್ಟು ತೆರಿಗೆಯನ್ನು ಕಡಿತ ಮಾಡುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಭಾರಿ ಕುಸಿತ ಕಂಡ ಸೂಚ್ಯಂಕಗಳು



ಏಪ್ರಿಲ್ 19ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ದಾಖಲಿಸಿವೆ. 73,088 ಅಂಶಗಳಲ್ಲಿ ವಹಿವಾಟನ್ನು ಮುಗಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.56ರಷ್ಟು ಇಳಿಕೆ ಕಂಡಿದೆ.

22,147 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.65ರಷ್ಟು ಕುಗ್ಗಿದೆ. ಮಾರ್ಚ್ 15ರ ನಂತರ ಕಂಡಿರುವ ವಾರದ ಅತಿ ದೊಡ್ಡ ಕುಸಿತ ಇದಾಗಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಹಿಂಜರಿಕೆ, ಇಸ್ರೇಲ್–ಇರಾನ್ ಬಿಕ್ಕಟ್ಟು ಸೇರಿ ಹಲವು ಅಂಶಗಳು ಷೇರುಪೇಟೆಯ ಕುಸಿತಕ್ಕೆ ಕಾರಣವಾಗಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹20 ಸಾವಿರ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ವಲಯವಾರು ಪ್ರಗತಿಯಲ್ಲಿ ಎಲ್ಲ 12 ಸೂಚ್ಯಂಕಗಳು ಕುಸಿತ ದಾಖಲಿಸಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಶೇ 5.45, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.9, ಫಾರ್ಮಾ ಶೇ 3.73, ರಿಯಲ್ ಎಸ್ಟೇಟ್ ಶೇ 3.61, ನಿಫ್ಟಿ ಬ್ಯಾಂಕ್ ಶೇ 2.88ರಷ್ಟು ಕುಸಿತ ಕಂಡಿವೆ.

ನಿಫ್ಟಿಯಲ್ಲಿ ಏರ್‌ಟೆಲ್ ಶೇ 5.23, ಒಎನ್‌ಜಿಸಿ ಶೇ 3.76, ಮಾರುತಿ ಸುಜುಕಿ ಶೇ 3.22, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 2.84, ಪವರ್ ಗ್ರಿಡ್ ಶೇ 2.36, ಐಷರ್ ಮೋಟರ್ಸ್ ಶೇ 0.82 ಮತ್ತು ಎಚ್‌ಡಿಎಫ್‌ಸಿ ಶೇ 0.82ರಷ್ಟು ಗಳಿಸಿಕೊಂಡಿವೆ.

ಅದಾನಿ ಎಂಟರ್‌ಪ್ರೈಸಸ್ ಶೇ 5.7, ಟಾಟಾ ಮೋಟರ್ಸ್ ಶೇ 5.42, ಹೀರೊ ಮೋಟೊಕಾರ್ಪ್ ಶೇ 5.18, ಇನ್ಫೊಸಿಸ್ ಶೇ 4.95, ಎಚ್‌ಸಿಎಲ್ ಶೇ 4.66, ಬಜಾಜ್ ಫಿನ್‌ಸರ್ವ್ ಶೇ 4.62, ಶ್ರೀರಾಮ್ ಫೈನಾನ್ಸ್ ಶೇ 4.61, ಕೋಲ್ ಇಂಡಿಯಾ ಶೇ 4.47, ಟಿಸಿಎಸ್ ಶೇ 4.32 ಮತ್ತು ಎಲ್ ಆ್ಯಂಡ್ ಟಿ ಶೇ 4.32ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ರಿಲಯನ್ಸ್, ಹಿಂದುಸ್ಥಾನ್ ಯೂನಿಲಿವರ್, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಮಾರುತಿ ಸುಜುಕಿ, ಎಚ್‌ಸಿಎಲ್ ಟೆಕ್, ಬಜಾಜ್ ಫಿನ್‌ಸರ್ವ್, ನೆಸ್ಲೆ ಇಂಡಿಯಾ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಉಳಿದಂತೆ ಇಸ್ರೇಲ್–ಇರಾನ್ ಬಿಕ್ಕಟ್ಟು, ಜಾಗತಿಕ ವಿದ್ಯಮಾನಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹62
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹247-448
ದ್ವಿತಳಿ (ಬಿ.ವಿ)	₹322-572

ಎಂ–ಕ್ಯಾಪ್: ₹1.40 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,156 ಅಂಶಗಳಷ್ಟು ಕುಸಿತವಾಗಿದೆ. ಇದರಿಂದ ಪ್ರಮುಖ ಆರು ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹1.40 ಲಕ್ಷ ಕೋಟಿ ಕರಗಿದ್ದರೆ, ಉಳಿದ ನಾಲ್ಕು ಕಂಪನಿಗಳ ಮೌಲ್ಯವು ಏರಿಕೆಯಾಗಿದೆ.

2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಟಿಸಿಎಸ್ ಮತ್ತು ಇನ್ಫೊಸಿಸ್‌ನ ನಿವ್ವಳ ಲಾಭದಲ್ಲಿ ಏರಿಕೆಯಾಗಿದೆ. ಆದರೆ, 2024–25ನೇ ಆರ್ಥಿಕ ವರ್ಷದ ಮಾರುಕಟ್ಟೆಯ ನಿರೀಕ್ಷೆಗೆ ತಕ್ಕಂತೆ ಲಾಭದಲ್ಲಿ ಏರಿಕೆಯಾಗಿಲ್ಲ. ಹಾಗಾಗಿ, ಈ ಕಂಪನಿಗಳ ಷೇರಿನ ಮೌಲ್ಯ ಕುಸಿದಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ₹62,538 ಕೋಟಿ, ಇನ್ಫೊಸಿಸ್ ₹30,488 ಕೋಟಿ, ಐಸಿಐಸಿಐ ಬ್ಯಾಂಕ್ ₹26,423 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹14,234 ಕೋಟಿ, ಐಟಿಸಿ ₹6,616 ಕೋಟಿ ಮತ್ತು ಹಿಂದುಸ್ತಾನ್ ಯೂನಿಲಿವರ್‌ನ ಮಾರುಕಟ್ಟೆ ಮೌಲ್ಯವು ₹176 ಕೋಟಿ ಕಡಿಮೆಯಾಗಿದೆ.

ಭಾರ್ತಿ ಏರ್‌ಟೆಲ್ ₹37,797 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹9,420 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹4,397 ಕೋಟಿ ಮತ್ತು ಎಲ್‌ಐಸಿಯ ಎಂ–ಕ್ಯಾಪ್‌ಗೆ ₹1,201 ಕೋಟಿ ಸೇರ್ಪಡೆಯಾಗಿದೆ.

65 ವರ್ಷದ ನಂತರವೂ ವಿಮೆ ಲಭ್ಯ

ವಯೋಮಿತಿ ರದ್ದುಪಡಿಸಿದ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ

ನವದೆಹಲಿ (ಪಿಟಿಐ): ಹೊಸದಾಗಿ ವಿಮಾ ಸೌಲಭ್ಯ ಪಡೆಯಲು ನಿಗದಿಪಡಿಸಿದ್ದ ಗರಿಷ್ಠ ವಯೋಮಿತಿಯನ್ನು ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ರದ್ದುಪಡಿಸಿದೆ.

ಸದ್ಯ ವಯಸ್ಸಿನ ಮಿತಿಯನ್ನು ತೆಗೆದು ಹಾಕಿರುವುದರಿಂದ 65 ವರ್ಷ ದಾಟಿದವರಿಗೂ ಇನ್ನು ಮುಂದೆ ಆರೋಗ್ಯ ವಿಮಾ ಸೌಲಭ್ಯ ಲಭಿಸಲಿದೆ. ವಿಮಾ ಕ್ಷೇತ್ರದ ವಿಸ್ತರಣೆ ಹಾಗೂ ಹೆಚ್ಚುತ್ತಿರುವ ಆರೋಗ್ಯ ವೆಚ್ಚದ ದೃಷ್ಟಿಯಿಂದ ಪ್ರಾಧಿಕಾರವು ಈ ನಿರ್ಧಾರ ಕೈಗೊಂಡಿದೆ.

ವಿಮಾ ವಲಯದಲ್ಲಿ ಹೆಚ್ಚು ಜನರ ಸೇರ್ಪಡೆ ಹಾಗೂ ಆರೋಗ್ಯ ರಕ್ಷಣಾ ಸೌಲಭ್ಯವನ್ನು ಎಲ್ಲರಿಗೂ ಕೈಗೆಟಕುವಂತೆ ಮಾಡುವುದೇ ಇದರ ಹಿಂದಿರುವ ಉದ್ದೇಶವಾಗಿದೆ. ಅನಿರೀಕ್ಷಿತವಾಗಿ ಹೆಚ್ಚಳವಾಗುವ ವೈದ್ಯಕೀಯ ವೆಚ್ಚದಿಂದಾಗಿ ಬಾಳಿನ ಮುಸ್ಸಂಜೆಯಲ್ಲಿರುವ ವೃದ್ಧರು ತೀವ್ರ ತೊಂದರೆಗೆ ಸಿಲುಕುತ್ತಿದ್ದರು. ಇಂತಹ ತೊಂದರೆ ತಪ್ಪಿಸಲು ಈ ತೀರ್ಮಾನ ಕೈಗೊಂಡಿದೆ.

'ಹಳೆಯ ಮಾರ್ಗಸೂಚಿ ಅನ್ವಯ ಹೊಸ ವಿಮಾ ಪಾಲಿಸಿ ಖರೀದಿಗೆ ಗರಿಷ್ಠ ವಯೋಮಿತಿ ನಿಗದಿಪಡಿಸಲಾಗಿತ್ತು. ಇತ್ತೀಚೆಗೆ ವಿಮಾ ಕಾಯ್ದೆಗೆ ತಂದಿರುವ ತಿದ್ದುಪಡಿ ಅನ್ವಯ ಇದನ್ನು ರದ್ದುಪಡಿಸಲಾಗಿದೆ. ಏಪ್ರಿಲ್ 1ರಿಂದಲೇ ಈ ಹೊಸ ನಿಯಮಾವಳಿಯು ಜಾರಿಗೆ ಬಂದಿದೆ. ಯಾವುದೇ ವಯಸ್ಸನ್ನು ಲೆಕ್ಕಿಸದೆ ಹೊಸದಾಗಿ ವಿಮೆಯನ್ನು ಖರೀದಿಸಬಹುದಾಗಿದೆ' ಎಂದು ಐಆರ್‌ಡಿಎಐ ತಿಳಿಸಿದೆ.

'ವಿಮಾ ಕಂಪನಿಗಳು ಎಲ್ಲಾ ವಯೋಮಾನದವರಿಗೂ ವಿಮಾ ಸೌಲಭ್ಯವನ್ನು ಒದಗಿಸುತ್ತವೆಯೇ ಎಂಬ ಬಗ್ಗೆ ಪಾಲಿಸಿದಾರರು ಖಚಿತಪಡಿಸಿಕೊಳ್ಳಬೇಕು. ಅಲ್ಲದೆ ಹಿರಿಯ ನಾಗರಿಕರು, ವಿದ್ಯಾರ್ಥಿಗಳು, ಮಕ್ಕಳು, ಹೆರಿಗೆ ಹಾಗೂ ಸಕ್ಷಮ ಪ್ರಾಧಿಕಾರ ಸೂಚಿಸಿರುವ ಇತರೆ ಗುಂಪಿನ ಸದಸ್ಯರಿಗೂ ಕಂಪನಿಗಳು ವಿಮಾ ಸೌಲಭ್ಯವನ್ನು ನೀಡಬಹುದಾಗಿದೆ' ಎಂದು ಇತ್ತೀಚೆಗೆ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಇದರ ಹೊರತಾಗಿ ಪಾಲಿಸಿದಾರರಲ್ಲಿ ಪೂರ್ವ ಅಸ್ತಿತ್ವದಲ್ಲಿ ಇಲ್ಲದ ಆರೋಗ್ಯ ಸಮಸ್ಯೆಗಳಿಗೂ ಕಂಪನಿಗಳು ಪಾಲಿಸಿಗಳನ್ನು ನೀಡಬಹುದಾಗಿದೆ ಎಂದು ಹೇಳಿದೆ.

ಕ್ಯಾನ್ಸರ್, ಹೃದ್ರೋಗ, ಮೂತ್ರಪಿಂಡ ಸಮಸ್ಯೆ ಮತ್ತು ಏಡ್ಸ್ ರೋಗದಿಂದ ಬಳಲುತ್ತಿರುವವರಿಗೂ ವಿಮಾ ಪಾಲಿಸಿ ನೀಡುವುದನ್ನು ಕಂಪನಿಗಳು ನಿರಾಕರಿಸುವಂತಿಲ್ಲ ಎಂದು ಸೂಚಿಸಿದೆ.

ಕಂತುಗಳ ರೂಪದಲ್ಲಿ ಪ್ರೀಮಿಯಂ ಮೊತ್ತ ಪಾವತಿಸಲು ಪಾಲಿಸಿದಾರರಿಗೆ ಕಂಪನಿಗಳು ಅವಕಾಶ ನೀಡಬೇಕಿದೆ ಎಂದು ತಿಳಿಸಿದೆ.

ಆಯುಷ್ ಚಿಕಿತ್ಸಾ ವೆಚ್ಚಕ್ಕೆ ಯಾವುದೇ ಮಿತಿ ಇಲ್ಲ. ಆಯುರ್ವೇದ, ಯೋಗ, ನ್ಯಾಚುರೋಪಥಿ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ ಪದ್ಧತಿ ಅಡಿಯಲ್ಲಿ ನೀಡುವ ಚಿಕಿತ್ಸೆಗಳಿಗೆ ಯಾವುದೇ ಮಿತಿ ನಿಗದಿಪಡಿಸುವಂತಿಲ್ಲ. ಸಂಪೂರ್ಣ ವಿಮಾ ಕವರೇಜ್ ಅನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದೆ.

ಆ್ಯಪಲ್: ಮುಂದಿನ ಮೂರು ವರ್ಷದಲ್ಲಿ 5 ಲಕ್ಷ ಮಂದಿ ನೇಮಕ?

ನವದೆಹಲಿ (ಪಿಟಿಐ): ಐಫೋನ್ ತಯಾರಿಕಾ ಕಂಪನಿ ಆ್ಯಪಲ್, ತನ್ನ ಬಿಡಿಭಾಗಗಳನ್ನು ತಯಾರಿಸಿ ಪೂರೈಸುವ ಕಂಪನಿಗಳ ಮೂಲಕ ಮುಂದಿನ ಮೂರು ವರ್ಷಗಳಲ್ಲಿ 5 ಲಕ್ಷ ಉದ್ಯೋಗಿಗಳ ನೇಮಕಕ್ಕೆ ನಿರ್ಧರಿಸಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಪ್ರಸ್ತುತ ದೇಶದಲ್ಲಿ ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿಯು ಐಫೋನ್ ತಯಾರಿಕೆಯ ಎರಡು ಘಟಕಗಳನ್ನು ಹೊಂದಿದೆ. ಇಲ್ಲಿ ಆ್ಯಪಲ್‌ನ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಸದ್ಯ ಭಾರತದಲ್ಲಿ ಆ್ಯಪಲ್ ಉತ್ಪನ್ನಗಳ ತಯಾರಿಕೆ ಮತ್ತು ಪೂರೈಕೆಯಲ್ಲಿ 1.5 ಲಕ್ಷ ಉದ್ಯೋಗಿಗಳು ಇದ್ದಾರೆ.

ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಆ್ಯಪಲ್, ಭಾರತದಲ್ಲಿ 5 ಪಟ್ಟು ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ನಿರ್ಧರಿಸಿದೆ. ಇದಕ್ಕಾಗಿ ₹3.32 ಲಕ್ಷ ಕೋಟಿ ಬಂಡವಾಳ ಹೂಡಲು ನಿರ್ಧರಿಸಿದೆ. ಇದಕ್ಕೆ ಅನುಗುಣವಾಗಿ ಹೊಸದಾಗಿ ಉದ್ಯೋಗಿಗಳ ನೇಮಕಕ್ಕೆ ತೀರ್ಮಾನಿಸಿದೆ ಎಂದು ಸರ್ಕಾರದ ಅಧಿಕಾರಿಯೊಬ್ಬರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

2023–24ನೇ ಆರ್ಥಿಕ ವರ್ಷದಲ್ಲಿ ಭಾರತದಿಂದ ₹1 ಲಕ್ಷ ಕೋಟಿ ಮೌಲ್ಯದ ಆ್ಯಪಲ್ ಐಫೋನ್‌ಗಳನ್ನು ರಫ್ತು ಮಾಡಲಾಗಿದೆ. 2022–23ರಲ್ಲಿ ₹52,273 ಕೋಟಿ ಮೌಲ್ಯದ ಐಫೋನ್‌ಗಳನ್ನು ರಫ್ತು ಮಾಡಲಾಗಿತ್ತು. ರಫ್ತು ಪ್ರಮಾಣದಲ್ಲಿ ಗಣನೀಯವಾಗಿ ಏರಿಕೆಯಾಗಿದೆ ಎಂದು ಟ್ರೇಡ್ ಇಂಟೆಲಿಜೆನ್ಸ್ ವೇದಿಕೆಯಾದ ದಿ ಟ್ರೇಡ್ ವಿಷನ್ ವರದಿ ತಿಳಿಸಿದೆ.

ಪಾಕ್: 21 ಕ್ಷೇತ್ರಗಳಿಗೆ ಉಪ ಚುನಾವಣೆ ವಿವಿಧೆಡೆ ಹಿಂಸಾಚಾರ, ಒಂದು ಸಾವು

ಇಸ್ಲಾಮಾಬಾದ್/ಲಾಹೋರ್ (ಪಿಟಿಐ): ಪಾಕಿಸ್ತಾನದಲ್ಲಿ ಒಟ್ಟು 21 ರಾಷ್ಟ್ರೀಯ, ಪ್ರಾಂತ್ಯವಾರು ಕ್ಷೇತ್ರಗಳಿಗೆ ಭಾನುವಾರ ಬಿಗಿ ಭದ್ರತೆಯಲ್ಲಿ ಉಪ ಚುನಾವಣೆ ನಡೆಯಿತು. ಪಂಜಾಬ್, ಬಲೂಚಿಸ್ತಾನದ ಕೆಲವೆಡೆ ಮುಂಜಾಗ್ರತಾ ಕ್ರಮವಾಗಿ ಇಂಟರ್‌ನೆಟ್ ಸಂಪರ್ಕ ಸ್ಥಗಿತಗೊಳಿಸಲಾಗಿತ್ತು.

ಬೆಳಿಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಿತು. ಮತದಾನದ ಬಳಿಕ ಎಣಿಕೆ ಪ್ರಕ್ರಿಯೆ ಆರಂಭವಾಗಿದೆ. ಮಧ್ಯರಾತ್ರಿ ವೇಳೆಗೆ ಪೂರ್ಣ ಫಲಿತಾಂಶ ಪ್ರಕಟವಾಗುವ ನಿರೀಕ್ಷೆಯಿದೆ ಎಂದು ಚುನಾವಣಾ ಆಯೋಗವು ತಿಳಿಸಿದೆ. ಬಿಗಿ ಭದ್ರತೆ ನಡುವೆಯೂ ಅಲ್ಲಲ್ಲಿ ಹಿಂಸಾಚಾರ ಘಟನೆಗಳು ನಡೆದಿವೆ. ಪಂಜಾಬ್ ಪ್ರಾಂತ್ಯದಲ್ಲಿ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ. ನರೋವಲ್, ಶೇಖ್‌ಪುರ, ರಹೀಂ ಯಾರ್ ಖಾನ್‌ನ ವಿವಿಧೆಡೆ ಘರ್ಷಣೆಗಳು ನಡೆದಿವೆ ಎಂದು ತಿಳಿಸಿದೆ.

ಫೆಬ್ರುವರಿ 8ರಂದು ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆದಿತ್ತು. ಆಗ, ಒಂದು ರಾಷ್ಟ್ರೀಯ ಮತ್ತು ಎರಡು ಪ್ರಾಂತ್ಯವಾರು ಕ್ಷೇತ್ರಗಳಲ್ಲಿ ಚುನಾವಣೆ ರದ್ದುಪಡಿಸಲಾಗಿತ್ತು. ಕೆಲವರು ರಾಷ್ಟ್ರೀಯ ಮತ್ತು ಪ್ರಾಂತ್ಯ ಕ್ಷೇತ್ರಗಳಲ್ಲಿ ಜಯಗಳಿಸಿದ್ದು, ಒಂದು ಕ್ಷೇತ್ರ ಉಳಿಸಿಕೊಂಡು ಇನ್ನೊಂದಕ್ಕೆ ರಾಜೀನಾಮೆ ನೀಡಿದ್ದರು. ತೆರವಾದ ಸ್ಥಾನಗಳು ಸೇರಿ ಈ 21 ಕ್ಷೇತ್ರಗಳಿಗೆ ಚುನಾವಣೆ ನಡೆಯಿತು ಎಂದು ತಿಳಿಸಿದೆ.

ರಫಾ: ಇಸ್ರೇಲ್ ವಾಯುದಾಳಿ 14 ಮಕ್ಕಳು ಸೇರಿ 18 ಸಾವು

ರಫಾ, ಗಾಜಾ ಪಟ್ಟಿ (ಎ.ಪಿ): ಗಾಜಾ ನಗರದ ದಕ್ಷಿಣ ಪ್ರಾಂತ್ಯವನ್ನು ಗುರಿಯಾಗಿಸಿ ಇಸ್ರೇಲ್‌ನ ಸೇನೆ ಶನಿವಾರ ರಾತ್ರಿ ಬಾಂಬ್ ದಾಳಿ ನಡೆಸಿದೆ. 14 ಮಕ್ಕಳು ಸೇರಿ 18 ಜನರು ಮೃತಪಟ್ಟಿದ್ದಾರೆ.

ಇಸ್ರೇಲ್ ಸೇನೆಯು ಬಹುತೇಕ ನಿತ್ಯವೂ ರಫಾ ನಗರವನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದೆ. ಇಲ್ಲಿ ಗಾಜಾ ನಗರದ ಸುಮಾರು 23 ಲಕ್ಷ ನಿರಾಶ್ರಿತರು ಆಶ್ರಯ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿಯಿಂದ ಹಿಂದೆ ಸರಿಯಬೇಕು ಎಂಬ ಅಂತರರಾಷ್ಟ್ರೀಯ ಮಟ್ಟದ ಒತ್ತಡದ ನಡುವೆಯೂ ಇಸ್ರೇಲ್‌ನ ಸೇನೆ ದಾಳಿ ಮುಂದುವರಿಸಿದ್ದು, ಈಗ ಈಜಿಪ್ಟ್‌ಗೆ ಗಡಿಯನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದೆ. ಆಸ್ಪತ್ರೆಯ ಮೂಲಗಳ ಪ್ರಕಾರ, ಮೊದಲು ನಡೆದ ದಾಳಿಯಲ್ಲಿ ವ್ಯಕ್ತಿ, ಆತನ ಪತ್ನಿ, 3 ವರ್ಷದ ಮಗ ಮೃತಪಟ್ಟರು. ಮಹಿಳೆ ಗರ್ಭಿಣಿಯಾಗಿದ್ದು, ಶಿಶುವನ್ನು ರಕ್ಷಿಸುವಲ್ಲಿ ವೈದ್ಯರು ಯಶಸ್ವಿಯಾಗಿದ್ದಾರೆ.

ಹಿಂದೆಯೇ ನಡೆದ ಮತ್ತೊಂದು ದಾಳಿಯಲ್ಲಿ ಒಂದೇ ಕುಟುಂಬದ 13 ಮಕ್ಕಳು ಮತ್ತು ಇಬ್ಬರು ಮಹಿಳೆಯರು ಮೃತಪಟ್ಟರು ಎಂದು ಮೂಲಗಳು ವಿವರಿಸಿವೆ. ಅದಕ್ಕೂ ಹಿಂದಿನ ರಾತ್ರಿ ನಡೆದಿದ್ದ ವಾಯುದಾಳಿಯಲ್ಲಿ ಆರು ಮಂದಿ ಮಕ್ಕಳು ಸೇರಿ 9 ಜನರು ಮೃತಪಟ್ಟಿದ್ದರು.

ಇಸ್ರೇಲ್–ಹಮಾಸ್ ಸಂಘರ್ಷ ಆರಂಭವಾಗಿ ಏಳಕ್ಕೂ ಹೆಚ್ಚು ತಿಂಗಳಾಗಿದೆ. ಇದು, ಇಲ್ಲಿ ಬಿಗುವಿನ ಸ್ಥಿತಿಗೆ ಕಾರಣವಾಗಿದೆ. ಸಂಘರ್ಷದಿಂದಾಗಿ ಈವರೆಗೆ ಸುಮಾರು 34 ಸಾವಿರ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ. ಗಾಜಾ ನಗರದ ಶೇ 80ರಷ್ಟು ಜನರು ಮನೆಬಿಟ್ಟು ಸುರಕ್ಷಿತ ಸ್ಥಳಗಳತ್ತ ವಲಸೆ ಹೋಗಿದ್ದಾರೆ.

ಅಮೆರಿಕ ನೆರವು: ಈ ಮಧ್ಯೆ, ಇಸ್ರೇಲ್‌ಗೆ ಸುಮಾರು ₹ 216 ಕೋಟಿ ಮೌಲ್ಯದ ನೆರವು ನೀಡುವ ಪ್ರಸ್ತಾವಕ್ಕೆ ಅಮೆರಿಕದ ಸಂಸತ್ತು ಅನುಮೋದನೆ ನೀಡಿದೆ.

ರಫಾ ನಗರದ ಮೇಲೆ ಇಸ್ರೇಲ್‌ನ ಸೇನೆಯು ಶನಿವಾರ ರಾತ್ರಿ ನಡೆಸಿದ ವಾಯುದಾಳಿಯಲ್ಲಿ ಕಟ್ಟಡವೊಂದು ಸಂಪೂರ್ಣವಾಗಿ ನೆಲಸಮವಾಯಿತು —ಎಎಫ್‌ಪಿ ಚಿತ್ರ

ನೆಲಬಾಂಬ್ ಸಿಡಿದು ಇಬ್ಬರು ಸಾವು

ಪೇಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ನೆಲಬಾಂಬ್ ಸಿಡಿದು ಇಬ್ಬರು ಬಾಲಕರು ಮೃತಪಟ್ಟಿದ್ದು, ಮತ್ತೊಬ್ಬ ಬಾಲಕ ಗಾಯಗೊಂಡಿದ್ದಾನೆ.

ತಿರಾಹ್ ಕಣಿವೆ ಪ್ರದೇಶದಲ್ಲಿ ಬಾಲಕರು ಅಣಬೆಯ ಹುಡುಕಾಟದಲ್ಲಿ ತೊಡಗಿದ್ದರು. ಬಾಲಕನೊಬ್ಬ ಹುದುಗಿಸಿಟ್ಟಿದ್ದ ನೆಲಬಾಂಬ್ ಅನ್ನು ಆಕಸ್ಮಿಕವಾಗಿ ತುಳಿದಾಗ ಸಿಡಿದಿದೆ.

ತೀವ್ರ ಗಾಯಗೊಂಡ ಒಬ್ಬ ಬಾಲಕ ಸ್ಥಳದಲ್ಲಿ ಹಾಗೂ ಮತ್ತೊಬ್ಬ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಅಫ್ಗಾನಿಸ್ತಾನದ ಗಡಿಯಲ್ಲಿ ಈ ಘಟನೆ ನಡೆದಿದ್ದು, ಇದು ಸೂಕ್ಷ್ಮ ಪ್ರದೇಶವಾಗಿದೆ ಎಂದು ಹೇಳಿದ್ದಾರೆ.

ವೈಕುಂಠ ಸಮಾರಾಧನೆ

ಶ್ರೀಯುತ ಕೆ.ಎಂ.ಮುನಿರಾಮ್

ಇವರು ದಿನಾಂಕ: 12-04-2024 ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಬಂಧ ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ: 22-04-2024 ರಂದು ಬೆಳಿಗ್ಗೆ 10.00 ರಿಂದ 12.00 ಗಂಟೆಗೆ ಮೃತರ ಸ್ವಗೃಹ ಬನಶಂಕರಿ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕೆಂದು ವಿನಂತಿಸುತ್ತೇವೆ.

ಇಂತಿ ದುಃಖತಪ್ತರು:
ಪತ್ನಿ: ಶ್ರೀಮತಿ ನಾರಾಯಣಮ್ಮ
ಮತ್ತು ಕುಟುಂಬವರ್ಗದವರು
ನಂದಾ ಶೆಲ್ಟರ್ಸ್ ಬಿಲ್ಡರ್ ಅಂಡ್ ಡೆವಲಪರ್ಸ್
ಜಯನಗರ, ಬೆಂಗಳೂರು
ಮೊ: 98450 64043

ತಿಹಾರ್ ಜೈಲಿನಲ್ಲಿ ಅರವಿಂದ ಕೇಜ್ರಿವಾಲ್‌ಗೆ ಮಧುಮೇಹ ತಜ್ಞರಿಂದ ಸಮಾಲೋಚನೆ ವಿಚಾರ

ಇನ್ಸುಲಿನ್‌ಗೆ ವೈದ್ಯರು ಸೂಚಿಸಿಲ್ಲ: ಅಧಿಕಾರಿ

ನವದೆಹಲಿ (ಪಿಟಿಐ): ಜೈಲಿನಲ್ಲಿರುವ ಮಧುಮೇಹಿಗಳಿಗೆ ತಮ್ಮಲ್ಲಿ ಸಾಕಷ್ಟು ವೈದ್ಯಕೀಯ ಸೌಲಭ್ಯ ಇರುವುದಾಗಿ ಹೇಳಿದ್ದ ತಿಹಾರ್ ಜೈಲಿನ ಅಧಿಕಾರಿಗಳು, ಈಗ ನೋಡಿದರೆ ಏಮ್ಸ್‌ನಿಂದ ಮಧುಮೇಹ ತಜ್ಞರಿಗಾಗಿ ಕೋರಿಕೆ ಸಲ್ಲಿಸಿದ್ದಾರೆ ಎಂದು ದೆಹಲಿಯ ಸಚಿವ ಸೌರಭ್ ಭಾರದ್ವಾಜ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಅರವಿಂದ ಕೇಜ್ರಿವಾಲ್

ಭಾರದ್ವಾಜ್ ಅವರು ಆರೋಪಿಸಿದ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ತಿಹಾರ್ ಜೈಲು ಆಡಳಿತ, 'ದೆಹಲಿ ಮುಖ್ಯಮಂತ್ರಿ ಅವರ ಪತ್ನಿ ಸುನೀತಾ ಕೇಜ್ರಿವಾಲ್ ಅವರ ಕೋರಿಕೆಯ ಮೇರೆಗೆ ಏಮ್ಸ್‌ನ ಹಿರಿಯ ತಜ್ಞರ ಜತೆ ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಕೇಜ್ರಿವಾಲ್ ಅವರಿಗೆ ಸಮಾಲೋಚನೆ ನಡೆಸಲಾಯಿತು. 40 ನಿಮಿಷಗಳ ಕಾಲ ಈ ಸಮಾಲೋಚನೆ ನಡೆಯಿತು. ಗಾಬರಿ ಪಡುವಂತಹದ್ದೇನೂ ಇಲ್ಲ ಎಂದು ತಜ್ಞರು ಕೇಜ್ರಿವಾಲ್ ಅವರಿಗೆ ತಿಳಿಸಿದ್ದಾರೆ. ಅಲ್ಲದೆ ಸೂಚಿಸಲಾದ ಔಷಧಗಳನ್ನು ಮುಂದುವರಿಸಲು ಸಲಹೆ ನೀಡಿದ್ದಾರೆ. ಈ ಕುರಿತು ನಿಯಮಿತವಾಗಿ ಪರಿಶೀಲನೆ ಮಾಡಲಾಗುವುದು' ಎಂದು ತಿಳಿಸಿದೆ.

'ಏಮ್ಸ್‌ನ ತಜ್ಞರಿಗೆ ಅರವಿಂದ ಕೇಜ್ರಿವಾಲ್ ಅವರ ಸಿಜಿಎಂ (ಗ್ಲುಕೋಸ್ ಪ್ರಮಾಣ ತಿಳಿಸುವ ಸೆನ್ಸರ್) ವರದಿ ಹಾಗೂ ಅವರು ತೆಗೆದು ಕೊಳ್ಳುತ್ತಿರುವ ಆಹಾರ, ಔಷಧಗಳ ವಿವರಗಳನ್ನು ಒದಗಿಸಲಾಯಿತು. ಇನ್ಸುಲಿನ್ ಕುರಿತು ಕೇಜ್ರಿವಾಲ್ ಅವರೂ ಪ್ರಸ್ತಾಪಿಸಲಿಲ್ಲ, ವೈದ್ಯರೂ ಅದು ಬೇಕೆಂದು ಸೂಚಿಸಲಿಲ್ಲ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಮಹಾ ನಿರ್ದೇಶಕರು (ಕಾರಾಗೃಹ) ಶನಿವಾರ ಏಮ್ಸ್‌ಗೆ ಪತ್ರ ಬರೆದು, ತಿಹಾರ್‌ಗೆ ಮಧುಮೇಹ ತಜ್ಞರನ್ನು ನಿಯೋಜಿಸುವಂತೆ ಕೋರಿದ್ದಾರೆ. 20 ದಿನಗಳಿಂದ ಅರವಿಂದ ಕೇಜ್ರಿವಾಲ್ ಅವರು ಈ ಜೈಲಿನಲ್ಲಿದ್ದಾರೆ. ಆದರೆ, ಈಗ ಅವರಿಗಾಗಿ ಮಧುಮೇಹ ತಜ್ಞರನ್ನು ಕೇಳುತ್ತಿದ್ದಾರೆ' ಎಂದು ಸೌರವ್ ಭಾರದ್ವಾಜ್ ಹೇಳಿದರು.

'ನ್ಯಾಯಾಂಗ ಬಂಧನದಲ್ಲಿರುವ ಕೇಜ್ರಿವಾಲ್ ಅವರಿಗೆ ತೊಂದರೆ ನೀಡಲು ಸಂಚು ರೂಪಿಸಲಾಗುತ್ತಿದೆ' ಎಂಬ ಆರೋಪವನ್ನು ಭಾರದ್ವಾಜ್ ಅವರು ಪುನರುಚ್ಚರಿಸಿದರು.

ತಿಹಾರ್ ಜೈಲಿನ ಎದುರು ಎಎಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಕೇಜ್ರಿವಾಲ್ ಅವರಿಗೆ ಇನ್ಸುಲಿನ್ ಕೊಡಿ ಎಂದು ಆಗ್ರಹಿಸಿದರು.

'ಪತಿಯನ್ನು ಕೊಲ್ಲಲಾಗುತ್ತಿದೆ'

ರಾಂಚಿ (ಪಿಟಿಐ): 'ಜೈಲಿನಲ್ಲಿರುವ ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್ ಅವರಿಗೆ ಇನ್ಸುಲಿನ್ ನಿರಾಕರಿಸುವ ಮೂಲಕ ಅವರನ್ನು ಕೊಲ್ಲಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಬಯಸಿದೆ' ಎಂದು ಅವರ ಪತ್ನಿ ಸುನೀತಾ ಕೇಜ್ರಿವಾಲ್ ಭಾನುವಾರ ಆರೋಪಿಸಿದರು.

ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ರಾಂಚಿಯಲ್ಲಿ ಏರ್ಪಡಿಸಿದ್ದ ರ್‍ಯಾಲಿಯಲ್ಲಿ ಮಾತನಾಡಿದ ಅವರು, ಬಿಜೆಪಿಯ ಸರ್ವಾಧಿಕಾರದ ವಿರುದ್ಧ 'ಇಂಡಿಯಾ' ಮೈತ್ರಿಕೂಟವು ಹೋರಾಡಿ ಗೆಲ್ಲಲಿದೆ ಎಂದರು.

'ನನ್ನ ಪತಿಗೆ ನೀಡುವ ಆಹಾರವು ಕ್ಯಾಮೆರಾ ನಿಗಾದಲ್ಲಿದೆ; ಅವರಿಗೆ ಇನ್ಸುಲಿನ್ ನಿರಾಕರಿಸಲಾಗಿದೆ. ಅವರು ಮಧುಮೇಹಿ ಆಗಿದ್ದು, 12 ವರ್ಷಗಳಿಂದ ಇನ್ಸುಲಿನ್ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ನಿತ್ಯ 50 ಯೂನಿಟ್ ಇನ್ಸುಲಿನ್ ಅಗತ್ಯವಿದೆ' ಎಂದು ಸುನೀತಾ ಹೇಳಿದರು.

ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು 'ಇಂಡಿಯಾ' ಮೈತ್ರಿಕೂಟ ತೊರೆಯಲು ಒಪ್ಪದ ಕಾರಣ ಅವರನ್ನು ಜೈಲಿಗೆ ಕಳುಹಿಸಲಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುನರುಚ್ಚರಿಸಿದರು.

ಹೇಮಂತ್ ಸೊರೇನ್ ಅವರು ಜೈಲಿನಿಂದಲೇ ಕಳುಹಿಸಿದ್ದ ಸಂದೇಶವನ್ನು ಅವರ ಪತ್ನಿ ಕಲ್ಪನಾ ಸೊರೇನ್ ಓದಿದರು. 'ಪ್ರಜಾಪ್ರಭುತ್ವ ನಾಶ ಮಾಡಲು ಬಿಜೆಪಿಗೆ ಬಿಡುವುದಿಲ್ಲ' ಎಂದು ಹೇಮಂತ್ ಬರೆದಿದ್ದರು.

ಕುರ್ಚಿ ಮೀಸಲು: ಜೈಲಿನಲ್ಲಿರುವ ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್ ಮತ್ತು ಹೇಮಂತ್ ಸೊರೇನ್ ಅವರ ಹೆಸರು ಅಂಟಿಸಿರುವ ಎರಡು ಖಾಲಿ ಕುರ್ಚಿಗಳನ್ನು ವೇದಿಕೆಯಲ್ಲಿ ಇರಿಸಲಾಗಿತ್ತು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಅನಾರೋಗ್ಯದಿಂದಾಗಿ ರ್‍ಯಾಲಿಯಲ್ಲಿ ಭಾಗವಹಿಸಲಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು. ಜೆಎಂಎಂ ಮುಖಂಡ ಶಿಬು ಸೊರೇನ್, ಎನ್‌ಸಿ ಮುಖ್ಯಸ್ಥ ಫಾರೂಖ್ ಅಬ್ದುಲ್ಲಾ ರ್‍ಯಾಲಿಯಲ್ಲಿ ಇದ್ದರು.

ಸೋಮವಾರ ಅರ್ಜಿ ವಿಚಾರಣೆ

ದೆಹಲಿ ಅಬಕಾರಿ ನೀತಿ ಸಂಬಂಧಿತ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಗೆ ಕುರಿತು ಜಾರಿ ನಿರ್ದೇಶನಾಲಯ ನೀಡಿರುವ ಸಮನ್ಸ್‌ಗಳನ್ನು ಪ್ರಶ್ನಿಸಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಸೋಮವಾರ ನಡೆಸಲಿದೆ.

ಕಾಂಗ್ರೆಸ್–ಆರ್‌ಜೆಡಿ ಕಾರ್ಯಕರ್ತರ ಘರ್ಷಣೆ

ರಾಂಚಿಯಲ್ಲಿ ನಡೆದ 'ಇಂಡಿಯಾ' ಕೂಟದ 'ಉಲ್ಗುಲನ್ ನ್ಯಾಯ್' ರ್‍ಯಾಲಿಯ ವೇಳೆ ಕಾಂಗ್ರೆಸ್ ಮತ್ತು ಆರ್‌ಜೆಡಿ ಕಾರ್ಯಕರ್ತರು ಪರಸ್ಪರ ಹೊಡೆದಾಡಿದರು–ಪಿಟಿಐ ಚಿತ್ರ

ರಾಂಚಿ/ನವದೆಹಲಿ (ಪಿಟಿಐ): ರಾಂಚಿಯಲ್ಲಿ ಭಾನುವಾರ ನಡೆದ 'ಇಂಡಿಯಾ' ಮೈತ್ರಿಕೂಟದ ರ್‍ಯಾಲಿಯಲ್ಲಿ ಕಾಂಗ್ರೆಸ್ ಮತ್ತು ಆರ್‌ಜೆಡಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ. ಎರಡೂ ಪಕ್ಷಗಳ ಕಾರ್ಯಕರ್ತರು ಪರಸ್ಪರ ಕುರ್ಚಿಗಳನ್ನು ಎಸೆದು ಜಗಳ ಮಾಡಿದ್ದಾರೆ. ಕಾರ್ಯಕರ್ತರೊಬ್ಬರ ತಲೆಗೆ ಗಾಯವಾಗಿದ್ದು, ರಕ್ತ ಸುರಿದಿದೆ.

ಚತ್ರಾ ಲೋಕಸಭಾ ಕ್ಷೇತ್ರದಿಂದ ಕೆ.ಎನ್.ತ್ರಿಪಾಠಿ ಅವರ ಉಮೇದುವಾರಿಕೆಗೆ ಸಂಬಂಧಿಸಿದಂತೆ ಆರ್‌ಜೆಡಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘರ್ಷಣೆ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ.

ವಿರೋಧ ಪಕ್ಷಗಳ ಕಾರ್ಯಕರ್ತರ ಘರ್ಷಣೆಯನ್ನು ಟೀಕಿಸಿರುವ ಬಿಜೆಪಿ, ಇದು 'ಜಂಗಲ್ ರಾಜ್'ನ ಪ್ರದರ್ಶನ ಎಂದು ಜರಿದಿದೆ.

'ಇದು ಎಂಥ ಮೈತ್ರಿ?': ರಾಂಚಿಯ ರ್‍ಯಾಲಿಯಲ್ಲಿ ಅವರ ಪಕ್ಷಗಳ ಕಾರ್ಯಕರ್ತರು ಒಬ್ಬರ ಮೇಲೊಬ್ಬರಂತೆ ಕುರ್ಚಿ, ಟೇಬಲ್, ಸ್ಟೂಲ್‌ಗಳನ್ನು ಎಸೆದಾಡಿದ್ದಾರೆ. ಅಲ್ಲದೆ ಪರಸ್ಪರರ ತಲೆ ಒಡೆಯುತ್ತಿದ್ದಾರೆ. ಒಂದು ವೇಳೆ ಅವರು ತಪ್ಪಾಗಿ ಅಧಿಕಾರಕ್ಕೆ ಬಂದರೆ ಏನು ಗತಿ? ರ್‍ಯಾಲಿ ಜಾಗದಲ್ಲಿಯೇ ಈ ಜಂಗಲ್ ರಾಜ್‌ನ ಪ್ರದರ್ಶನವಾಗಿದೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಪ್ರತಿಕ್ರಿಯಿಸಿದ್ದಾರೆ.

ಇವು ಜಂಗಲ್ ರಾಜ್ ಮತ್ತು ಭ್ರಷ್ಟಾಚಾರದ ಪಕ್ಷಗಳು. ಆದ್ದರಿಂದ ಮತದಾರರು ಬಹಳ ಎಚ್ಚರಿಕೆ ಮತ್ತು ಜಾಗರೂಕತೆಯಿಂದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಎಂದು ಅವರು ಕೋರಿದ್ದಾರೆ.

ಸುದ್ದಿ 2 ನಿಮಿಷ

ಮತ ಚಲಾಯಿಸಿದ ಕೂಡಲೇ ಮೃತಪಟ್ಟ 99ರ ವ್ಯಕ್ತಿ

ಕೊಟ್ಟಾಯಂ (ಪಿಟಿಐ): ಲೋಕಸಭೆ ಚುನಾವಣೆಗೆ ಮತಚಲಾಯಿಸಿದ್ದ 99 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು, ಕೆಲವೇ ನಿಮಿಷಗಳಲ್ಲಿ ಮೃತಪಟ್ಟಿರುವ ಘಟನೆ ಕೇರಳದ ಶನಿವಾರ ನಡೆದಿದೆ.

ಕೊಟ್ಟಯಂ ಜಿಲ್ಲೆಯ

ಮನಕುನ್ನು ನಿವಾಸಿಯಾದ ಎ.ಕೆ. ರಾಮನ್ ನಾಯರ್ ಅವರು ಮೃತ ವ್ಯಕ್ತಿ. ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದ ಇವರು, ಎರಡು ದಿನಗಳ ಹಿಂದೆಯಷ್ಟೇ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರು.

ಚುನಾವಣಾ ಆಯೋಗ ಜಾರಿ ಮಾಡಿರುವ ಮನೆಯಿಂದಲೇ ಮತದಾನದ ವ್ಯವಸ್ಥೆಯ ಭಾಗವಾಗಿ ಅಧಿಕಾರಿಗಳು ಮತಪತ್ರವನ್ನು ಅವರ ಮನೆಗೇ ಕೊಂಡೊಯ್ದು ನಾಯರ್ ಅವರಿಗೆ ಮತದಾನ ಮಾಡಲು ಅವಕಾಶ ಮಾಡಿಕೊಟ್ಟಿದ್ದರು. ಆರೋಗ್ಯ ಹದಗೆಟ್ಟಿದ್ದರೂ ಉತ್ಸಾಹದಲ್ಲಿ ಮತದಾನ ಮಾಡಿದ್ದ ಅವರು, ಕೆಲ ನಿಮಿಷಗಳಲ್ಲೇ ಕೊನೆಯುಸಿರೆಳೆದರು.

ಎನ್‌ಕೌಂಟರ್: ನಕ್ಸಲ್ ಹತ್ಯೆ

ಬಿಜಾಪುರ, ಛತ್ತೀಸಗಢ (ಪಿಟಿಐ): ಭಾನುವಾರ ಇಲ್ಲಿ ಭದ್ರತಾ ಸಿಬ್ಬಂದಿ ನಡೆಸಿದ ಎನ್‌ಕೌಂಟರ್‌ನಲ್ಲಿ ನಕ್ಸಲ್‌ನನ್ನು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇಶಕುತುಲ್–ಕೇಶಮುಂಡಿ ಅರಣ್ಯಗಳಲ್ಲಿ ಮಾವೋವಾದಿಗಳ ಮುಖಂಡ ಕವಾಸಿ ಪಂಡಾರು ಹಾಗೂ 15–20 ನಕ್ಸಲರು ಬೀಡುಬಿಟ್ಟಿದ್ದಾರೆ ಎಂಬ ಖಚಿತ ಮಾಹಿತಿ ಲಭ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಭಾನುವಾರ ಬೆಳ್ಳಂಬೆಳಿಗ್ಗೆ 5.30ರ ಸುಮಾರಿಗೆ ಜಿಲ್ಲಾ ಮೀಸಲು ಪಡೆಯ (ಡಿಆರ್‌ಜಿ) ತಂಡವು ಭೈರಂಗಢ ಪೊಲೀಸ್ ಠಾಣಾ ವ್ಯಾಪ್ತಿಯ ಕೇಶಕುತುಲ್ ಗ್ರಾಮದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ಕೈಗೊಂಡಿತ್ತು. ಆಗ ನಕ್ಸಲರು ಮತ್ತು ಭದ್ರತಾ ಪಡೆಗಳ ಮಧ್ಯೆ ಗುಂಡಿನ ಚಕಮಕಿ ನಡೆಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಒಬ್ಬ ನಕ್ಸಲನ ಮೃತದೇಹ, ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

ಈ ಮೂಲಕ ಛತ್ತೀಸಗಢದ ಬಸ್ತರ್ ಪ್ರಾಂತ್ಯದಲ್ಲಿ ಈ ವರ್ಷದಲ್ಲಿ 80 ನಕ್ಸಲರನ್ನು ಹತ್ಯೆ ಮಾಡಿದಂತಾಗಿದೆ.

ಭಗವಾನ್ ಮಹಾವೀರರ 2,550ನೇ ನಿರ್ವಾಣ ಮಹೋತ್ಸವದಲ್ಲಿ ಪ್ರಧಾನಿ

'ಸಮಸ್ಯೆಗಳಿಗೆ ಅಹಿಂಸೆಯೇ ಪರಿಹಾರ'

ನವದೆಹಲಿ: 'ಜಗತ್ತಿನ ಹಲವು ರಾಷ್ಟ್ರಗಳು ಯುದ್ಧದ ಮನಸ್ಥಿತಿಗೆ ವಾಲುತ್ತಿರುವ ಈಗಿನ ಸಂದರ್ಭದಲ್ಲಿ ಭಾರತದ ತೀರ್ಥಂಕರರ ಬೋಧನೆಗಳು ಮತ್ತು ಅಹಿಂಸೆಯ ತತ್ವವು ಹೆಚ್ಚು ಪ್ರಸ್ತುತ ವಾಗುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ಭಾನುವಾರ ಇಲ್ಲಿ ಭಗವಾನ್ ಮಹಾವೀರರ 2,550ನೇ ನಿರ್ವಾಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರತ್ಯೇಕತಾ ಭಾವನೆಯು ಬೇರೂರುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ಭಾರತವು ವಿಶ್ವಬಂಧುವಿನ ಸ್ಥಾನದಲ್ಲಿದೆ' ಎಂದು ಪ್ರತಿಪಾದಿಸಿದರು.

'ಜಗತ್ತು ಇಂದು ಎದುರಿಸುತ್ತಿರುವ ಹಲವು ಸಮಸ್ಯೆಗಳಿಗೆ ಸತ್ಯ ಮತ್ತು ಅಹಿಂಸೆಯ ತತ್ವಗಳೇ ಪರಿಹಾರ ಎಂದು ಭಾರತವು ಈಗ ಜಾಗತಿಕ ವೇದಿಕೆಯಲ್ಲಿ ಬಿಂಬಿಸುತ್ತಿದೆ. ಭಾರತಕ್ಕಿರುವ ಸಾಂಸ್ಕೃತಿಕ ವರ್ಚಸ್ಸು ನಿರ್ಣಾಯಕ ಪಾತ್ರ ವಹಿಸುತ್ತಿದೆ' ಎಂದು ಅಭಿಪ್ರಾಯಪಟ್ಟರು.

ನವದೆಹಲಿಯಲ್ಲಿ ಭಾನುವಾರ ನಡೆದ ಭಗವಾನ್ ಮಹಾವೀರರ 2550ನೇ ನಿರ್ವಾಣ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಜೈನ ಮುನಿ ಅವರಿಗೆ ನಮಸ್ಕರಿಸಿದರು —ಪಿಟಿಐ ಚಿತ್ರ

ಇದೇ ಸಂದರ್ಭದಲ್ಲಿ ಅವರು ನಿರ್ವಾಣ ಮಹೋತ್ಸವದ ನಿಮಿತ್ತ ತರಲಾದ ಅಂಚೆ ಚೀಟಿ ಮತ್ತು ನಾಣ್ಯವನ್ನು ಬಿಡುಗಡೆ ಮಾಡಿದರು.

'2014ರಲ್ಲಿ ನಾವು ಅಧಿಕಾರಕ್ಕೆ ಬಂದಾಗ ದೇಶವು ಹತಾಶ ಭಾವನೆಯಲ್ಲಿ ಮುಳುಗಿತ್ತು' ಎಂದು ಹಿಂದಿನ ಯುಪಿಎ ಸರ್ಕಾರದ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

'ನಾವು ದೇಶದಲ್ಲಿ ಸಂಸ್ಕೃತಿ, ಪರಂಪರೆಗೆ ಹೆಚ್ಚು ಉತ್ತೇಜನ ನೀಡುತ್ತಿದ್ದೇವೆ. ಯೋಗ ಮತ್ತು ಆಯುರ್ವೇದ ಚಿಕಿತ್ಸೆಗೆ ಪ್ರೋತ್ಸಾಹ ನೀಡಲಾಗುತ್ತಿದೆ' ಎಂದು ಹೇಳಿದರು.

'ಲೋಕಸಭೆ ಚುನಾವಣೆಯನ್ನು ಉಲ್ಲೇಖಿಸಿ, ಇದು ಪ್ರಜಾಪ್ರಭುತ್ವದ ಅತಿದೊಡ್ಡ ಹಬ್ಬ. ಈ ಚುನಾವಣೆಯೊಂದಿಗೆ ಭವಿಷ್ಯದತ್ತ ಹೊಸ ಪಯಣ ಆರಂಭವಾಗಲಿದೆ ಎಂದು ರಾಷ್ಟ್ರ ವಿಶ್ವಾಸವಿಟ್ಟಿದೆ' ಎಂದು ಹೇಳಿದರು.

'ಹಿಂದೂ, ಜೈಭವಾನಿ' ತೆಗೆಯಲಾಗದು'

ಈ ಎರಡೂ ಪದ ತೆಗೆದುಹಾಕಲು ಸೂಚಿಸಿದ ಇ.ಸಿಗೆ ಉದ್ಧವ್ ಠಾಕ್ರೆ ಸಡ್ಡು

ಮುಂಬೈ (ಪಿಟಿಐ): 'ನಮ್ಮ ಪಕ್ಷದ ಹೊಸ ಪ್ರಚಾರ ಗೀತೆಯಿಂದ 'ಹಿಂದೂ' ಮತ್ತು 'ಜೈ ಭವಾನಿ' ಪದಗಳನ್ನು ಕೈಬಿಡಬೇಕು ಎಂದು ಭಾರತದ ಚುನಾವಣಾ ಆಯೋಗ ನೋಟಿಸ್ ನೀಡಿದೆ. ಆದರೆ, ಯಾವುದೇ ಕಾರಣಕ್ಕೂ ಆಯೋಗದ ಈ ಸೂಚನೆ ಪಾಲಿಸುವುದಿಲ್ಲ' ಎಂದು ಶಿವಸೇನಾ (ಉದ್ಧವ್ ಠಾಕ್ರೆ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಭಾನುವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಕ್ಷದ ಗೀತೆಯಿಂದ 'ಜೈ ಭವಾನಿ' ತೆಗೆದು ಹಾಕುವುದು ಮಹಾರಾಷ್ಟ್ರಕ್ಕೆ ಮಾಡುವ ಅವಮಾನವಾಗಿದೆ' ಎಂದರು.

'ತುಳಜಾ ಭವಾನಿ ದೇವಿಯ ಆಶೀರ್ವಾದದೊಂದಿಗೆ ಛತ್ರಪತಿ ಶಿವಾಜಿ ಮಹಾರಾಜ ಹಿಂದವಿ ಸ್ವರಾಜ್ ಅನ್ನು ಸ್ಥಾಪಿಸಿದ್ದರು. ನಾವು ಹಿಂದೂ ಧರ್ಮ ಅಥವಾ ದೇವತೆ ಹೆಸರಿನಲ್ಲಿ ಮತ ಕೇಳುತ್ತಿಲ್ಲ. ಸಾರ್ವಜನಿಕ ಸಭೆ ಮತ್ತು ಸಮಾರಂಭಗಳಲ್ಲಿ 'ಜೈ ಭವಾನಿ' ಮತ್ತು 'ಜೈ ಶಿವಾಜಿ' ಎಂದು ಹಾಡುವುದನ್ನು ಮುಂದುವರಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಉದ್ಧವ್ ಠಾಕ್ರೆ

ಅಲ್ಲದೆ, ಈ ಕುರಿತು ಆಯೋಗಕ್ಕೆ ಪತ್ರ ಬರೆದಿರುವ ಶಿವಸೇನಾ (ಉದ್ಧವ್ ಠಾಕ್ರೆ ಬಣ), ಕಾನೂನು ಬದಲಿಸಲಾಗಿದೆಯೇ ಎಂದು ಪ್ರಶ್ನಿಸಿದೆ. 'ನಮ್ಮ ಈ ಜ್ಞಾಪನಾಪತ್ರಕ್ಕೆ ಆಯೋಗ ಉತ್ತರಿಸಿಲ್ಲ. ಒಂದು ವೇಳೆ ಕಾನೂನುಗಳು ಬದಲಾಗಿದ್ದರೆ, ಚುನಾವಣಾ ರ್‍ಯಾಲಿಗಳಲ್ಲಿ ಹರಹರ ಮಹದೇವ್ ಎಂಬ ಘೋಷಣೆಗಳನ್ನು ಮೊಳಗಿಸುವೆವು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದೇವೆ' ಎಂದಿದ್ದಾರೆ.

'ಒಂದು ವೇಳೆ ನಮ್ಮ ವಿರುದ್ಧ ಆಯೋಗ ಕ್ರಮ ಕೈಗೊಂಡರೆ, ಕರ್ನಾಟಕ ವಿಧಾನಸಭೆ ಚುನಾವಣೆ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯುನ್ಮಾನ ಮತಯಂತ್ರದಲ್ಲಿ ಮತ ಚಲಾಯಿಸುವ ವೇಳೆ ಜೈ ಬಜರಂಗಬಲಿ ಎಂದು ಹೇಳುವಂತೆ ಮತದಾರರಿಗೆ ಹೇಳಿದ್ದರು. ಅಲ್ಲದೆ, ಅಯೋಧ್ಯೆಯಲ್ಲಿನ ಬಾಲರಾಮನ ಉಚಿತ ದರ್ಶನಕ್ಕಾಗಿ ಜನರು ಬಿಜೆಪಿಗೆ ಮತ ನೀಡಬೇಕು ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದರು. ಆಗ ಆಯೋಗ ಏನು ಮಾಡುತ್ತಿತ್ತು ಎಂಬುದನ್ನು ಹೇಳಬೇಕು' ಎಂದರು.

ಉದ್ಧವ್ ಬಣದ ಶಿವಸೇನಾ ಪಕ್ಷಕ್ಕೆ ಪಂಜು ಚಿಹ್ನೆ ನೀಡಲಾಗಿದ್ದು, ಅದನ್ನು ಜನಪ್ರಿಯಗೊಳಿಸಲು ಪಕ್ಷವು ಗೀತೆ ರಚಿಸಿದೆ. ಆ ಗೀತೆಯಿಂದ 'ಹಿಂದೂ' ಮತ್ತು 'ಜೈ ಭವಾನಿ' ಪದಗಳನ್ನು ತೆಗೆಯುವಂತೆ ಚುನಾವಣಾ ಆಯೋಗ ಸೂಚಿಸಿತ್ತು.

ಹಿಂದೂ ನವ ವರ್ಷ

ದೆಹಲಿಯಲ್ಲಿ ಭಾನುವಾರ ನಡೆದ 'ಹಿಂದೂ ನವ ವರ್ಷ' ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕರ್ತರು, ಬೆಂಬಲಿಗರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಪಟ್ನಾ: ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಮತ್ತೆ ಐವರ ಬಂಧನ

ಪಟ್ನಾ (ಪಿಟಿಐ): 'ಶಿಕ್ಷಕರ ನೇಮಕಾತಿ ಪರೀಕ್ಷೆ (ಟಿಆರ್‌ಇ) –3'ರ ಪ್ರಶ್ನೆಪತ್ರಿಕೆಗಳ ಸೋರಿಕೆ ಪ್ರಕರಣದ ಸಂಬಂಧ ಬಿಹಾರ ಪೊಲೀಸರು ಮಧ್ಯಪ್ರದೇಶದ ಮಹಿಳೆ ಸೇರಿದಂತೆ ಮತ್ತೆ ಐವರನ್ನು ಬಂಧಿಸಿದ್ದಾರೆ.

ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧ ಘಟಕ (ಇಒಯು) ಈ ಕುರಿತು ಹೇಳಿಕೆ ನೀಡಿದ್ದು, 'ಬಂಧಿತರು ಕೃತ್ಯ ನಡೆಸಿದ ತಂಡದ ಭಾಗವಾಗಿದ್ದರು. ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಬಂಧಿಸಲಾಗಿದೆ' ಎಂದು ತಿಳಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಟುಟೇಜಾ ಬಂಧನ

ರಾಯಪುರ (ಪಿಟಿಐ): ಛತ್ತೀಸಗಢದಲ್ಲಿ ನಡೆದಿದೆ ಎನ್ನಲಾದ ₹2,000 ಕೋಟಿ ಮೌಲ್ಯದ ಅಬಕಾರಿ ಹಗರಣದಲ್ಲಿ ನಡೆದ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ಟುಟೇಜಾ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

ಅನಿಲ್ ಟುಟೇಜಾ

ಈ ಸಂಬಂಧ ಜಾರಿ ನಿರ್ದೇಶನಾಲಯವು ಹೊಸ ಪ್ರಕರಣ ದಾಖಲಿಸಿದ ಬೆನ್ನಲ್ಲೇ, ಟುಟೇಜಾ ಅವರ ಬಂಧನವಾಗಿದೆ.

ಈ ಪ್ರಕರಣದ ಸಂಬಂಧ ಹೇಳಿಕೆ ದಾಖಲಿಸಲು ಅನಿಲ್ ಟುಟೇಜಾ ಮತ್ತು ಅವರ ಪುತ್ರ ಯಶ್ ಟುಟೇಜಾ ಅವರು ಶನಿವಾರ ರಾಯಪುರದಲ್ಲಿರುವ ಆರ್ಥಿಕ ಅಪರಾಧಗಳ ಘಟಕ/ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಕಚೇರಿಗೆ ಭೇಟಿ ನೀಡಿದ್ದರು. ಅಲ್ಲಿಂದಲೇ 2003ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಟುಟೇಜಾ ಅವರನ್ನು ಇ.ಡಿ ವಶಕ್ಕೆ ಪಡೆದಿದೆ ಎಂದು ತಿಳಿದುಬಂದಿದೆ.

ಅನಿಲ್ ಟುಟೇಜಾ ಅವರನ್ನು ವಿಚಾರಣೆ ನಡೆಸಿದ ಬಳಿಕ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಬಂಧಿಸಲಾಗಿದೆ. ಅಲ್ಲದೆ, ಅವರ ಪುತ್ರ ಯಶ್ ಟುಟೇಜಾ ಅವರನ್ನು ಬಿಟ್ಟು ಕಳುಹಿಸಲಾಗಿದೆ.

ಅಬಕಾರಿ ಹಗರಣಕ್ಕೆ ಸಂಬಂಧಿಸಿ ಆದಾಯ ತೆರಿಗೆ ಇಲಾಖೆ ನೀಡಿದ ದೂರಿನ ಮೇರೆಗೆ ದಾಖಲಾಗಿದ್ದ ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು. ಈ ಪ್ರಕರಣವು ಹಣ ಅಕ್ರಮ ವರ್ಗಾವಣೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಪ್ರತಿಪಾದಿಸಿತ್ತು. ಆ ಬಳಿಕ ಇ.ಡಿ ಹೊಸ ಪ್ರಕರಣ ದಾಖಲಿಸಿತ್ತು.

'ಜೆಎನ್‌ಯು: ಪುಕ್ಕಟೆ ನೆಲೆಸಿದವರಿಂದ ಸಮಸ್ಯೆ'

ನವದೆಹಲಿ (ಪಿಟಿಐ): 'ಕೆಲವರು ಪುಕ್ಕಟೆಯಾಗಿ ಕ್ಯಾಂಪಸ್‌ನಲ್ಲಿ ಉಳಿದುಕೊಳ್ಳುತ್ತಿರುವುದು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ಸಮಸ್ಯೆಗಳಲ್ಲಿ ಒಂದು' ಎಂದು ವಿ.ವಿ ಕುಲಪತಿ ಶಾಂತಿಶ್ರೀ ಡಿ. ಪಂಡಿತ್ ಹೇಳಿದ್ದಾರೆ.

ದೀರ್ಘಕಾಲದವರೆಗೆ ಉಳಿಯುವ ವಿದ್ಯಾರ್ಥಿಗಳು ಮತ್ತು ಅಕ್ರಮವಾಗಿ ನೆಲೆಸುವ ಅತಿಥಿಗಳ ವಿರುದ್ಧ ಈಗ ವಿಶ್ವವಿದ್ಯಾಲಯದ ಆಡಳಿತವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ಈ ರೀತಿ ತಿಳಿಸಿದರು.

ತೆರಿಗೆದಾರರ ಹಣದಲ್ಲಿ ಜೆಎನ್‌ಯು ಕ್ಯಾಂಪಸ್‌ನಲ್ಲಿ ಕೆಲವರು ಪುಕ್ಕಟೆ ನೆಲೆಸಿದ್ದಾರೆಯೇ ಎಂಬ ಪ್ರಶ್ನೆಗೆ, 'ಕ್ಯಾಂಪಸ್‌ನಲ್ಲಿ ಆ ಸಮಸ್ಯೆ ಇರುವುದು ನಿಜ. ಐದು ವರ್ಷಗಳಿಗೂ ಮೇಲ್ಪಟ್ಟು ಹಾಸ್ಟೆಲ್‌ನಲ್ಲಿ ಉಳಿದುಕೊಳ್ಳಲು ಯಾವ ವಿದ್ಯಾರ್ಥಿಗೂ ಅವಕಾಶ ನೀಡಬಾರದು ಎಂದು ಹಾಸ್ಟೆಲ್ ಆಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ' ಎಂದು ಅವರು ಉತ್ತರಿಸಿದರು.

ಜೆಎನ್‌ಯುವಿನ ಮಾಜಿ ವಿದ್ಯಾರ್ಥಿಯೂ ಆಗಿರುವ ಅವರು, 'ನಾವು ವಿದ್ಯಾರ್ಥಿಯಾಗಿದ್ದಾಗಲೂ ಈ ಸಮಸ್ಯೆ ಇತ್ತು. ಆದರೆ ಈಗ ಹೆಚ್ಚಾಗಿದೆ. ನಮ್ಮ ಸಮಯದಲ್ಲಿ ಪ್ರಾಧ್ಯಾಪಕರು ನಿಷ್ಠುರವಾಗಿರುತ್ತಿದ್ದರು. ನಾಲ್ಕೂವರೆ ವರ್ಷದೊಳಗೆ ಸಂಶೋಧನೆ ಪೂರ್ಣಸದಿದ್ದರೆ ವಿಶ್ವವಿದ್ಯಾಲಯದಿಂದ ಹೊರಹಾಕುವುದಾಗಿ ನನ್ನ ಮಾರ್ಗದರ್ಶಿ ಎಚ್ಚರಿಕೆ ನೀಡಿದ್ದರು. ಕಾಲಕ್ರಮೇಣ ಪ್ರಾಧ್ಯಾಪಕರು ಮೃದು ಧೋರಣೆ ತಳೆಯಲಾರಂಭಿಸಿದರು. ವಿದ್ಯಾರ್ಥಿಗಳ ಅಧ್ಯಯನದ ಕಾಲಾವಧಿ ವಿಸ್ತರಿಸಲಾರಂಭಿಸಿದರು' ಎಂದರು.

'ಜೆಎನ್‌ಯು ವಿದ್ಯಾರ್ಥಿಗಳಲ್ಲದವರೂ ಕ್ಯಾಂಪಸ್‌ನಲ್ಲಿ ಉಳಿದುಕೊಂಡಿರುತ್ತಾರೆ. ಅವರಲ್ಲಿ ಬಹುತೇಕರು ಯುಪಿಎಸ್‌ಸಿ ಅಥವಾ ಇನ್ನಿತರ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುತ್ತಾರೆ. ಅವರಿಗೆ ಜೆಎನ್‌ಯು ದೆಹಲಿಯಲ್ಲಿ ಅಗ್ಗವಾಗಿ ದೊರೆಯುವ ವಸತಿ ಸ್ಥಳವಾಗಿದೆ' ಎಂದರು.

ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠದ ಆದೇಶ

ಸಾಪೇಕ್ಷ ನಪುಂಸಕತ್ವ: ವಿವಾಹ ಸಂಬಂಧ ಕೊನೆ

ಮುಂಬೈ (ಪಿಟಿಐ): ಪುರುಷನ 'ಸಾಪೇಕ್ಷವಾದ ನಪುಂಸಕತ್ವ'ದ ಕಾರಣಕ್ಕೆ ಮದುವೆಯ ನಂತರ ಪ್ರಸ್ತ ಆಗಿಲ್ಲ ಎಂಬ ಆಧಾರದಲ್ಲಿ ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠವು ವಿವಾಹ ಸಂಬಂಧವೊಂದನ್ನು ಕೊನೆಗೊಳಿಸಿದೆ.

ನ್ಯಾಯಮೂರ್ತಿಗಳಾದ ವಿಭಾ ಕಂಕನವಾಡಿ ಮತ್ತು ಎಸ್.ಜಿ. ಚಪಲಗಾಂವಕರ್ ಅವರು ಇದ್ದ ವಿಭಾಗೀಯ ಪೀಠವು ಏಪ್ರಿಲ್ 15ರಂದು ಈ ಸಂಬಂಧ ಆದೇಶ ಹೊರಡಿಸಿದೆ. ಒಬ್ಬರನ್ನೊಬ್ಬರು ಮಾನಸಿಕವಾಗಿ, ಭಾವನಾತ್ಮಕವಾಗಿ ಅಥವಾ ದೈಹಿಕವಾಗಿ ಸೇರಲು ಸಾಧ್ಯವಿಲ್ಲದಿದ್ದ 'ವಿವಾಹ ಬಂಧನದ ಸಂತ್ರಸ್ತರಿಗೆ' ನೆರವಾಗಲು ಇದು ಸೂಕ್ತವಾದ ಪ್ರಕರಣ ಎಂದು ಆದೇಶದಲ್ಲಿ ಹೇಳಲಾಗಿದೆ.

ವಿವಾಹವನ್ನು ರದ್ದುಪಡಿಸುವಂತೆ ಕೋರಿ ಪತ್ನಿಯು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಕೌಟುಂಬಿಕ ನ್ಯಾಯಾಲಯವು ಫೆಬ್ರುವರಿಯಲ್ಲಿ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ 27 ವರ್ಷ ವಯಸ್ಸಿನ ಪತಿಯು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಮುಖ್ಯಾಂಶಗಳು

- 'ವಿವಾಹ ಬಂಧನದ ಸಂತ್ರಸ್ತರಿಗೆ' ನೆರವಾಗಲು ಇದು ಸೂಕ್ತ ಪ್ರಕರಣ– ಹೈಕೋರ್ಟ್
- 'ಸಾಪೇಕ್ಷವಾದ ನಪುಂಸಕತ್ವವು' ಮಾಮೂಲಿ ನಪುಂಸಕತ್ವಕ್ಕಿಂತ ಭಿನ್ನ– ಆದೇಶದಲ್ಲಿ ಉಲ್ಲೇಖ

'ಸಾಪೇಕ್ಷವಾದ ನಪುಂಸಕತ್ವವು' ಮಾಮೂಲಿ ನಪುಂಸಕತ್ವಕ್ಕಿಂತ ಭಿನ್ನ ಎಂದು ಪೀಠವು ಆದೇಶದಲ್ಲಿ ಉಲ್ಲೇಖಿಸಿದೆ. ವ್ಯಕ್ತಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವ ಸಾಮರ್ಥ್ಯ ಇದ್ದರೂ, ನಿರ್ದಿಷ್ಟ ವ್ಯಕ್ತಿಯ ಜೊತೆ ಅಥವಾ ಸಂಗಾತಿಯ ಜೊತೆ ಮಾತ್ರ ಲೈಂಗಿಕ ಕ್ರಿಯೆ ನಡೆಸಲು ಸಾಧ್ಯವಿಲ್ಲದಿರುವ ಸ್ಥಿತಿಯನ್ನು 'ಸಾಪೇಕ್ಷವಾದ ನಪುಂಸಕತ್ವ' ಎಂದು ಗುರುತಿಸಲಾಗುತ್ತದೆ.

ಹೀಗೆ ಆಗುವುದಕ್ಕೆ ಹಲವು ಬಗೆಯ ಮಾನಸಿಕ ಹಾಗೂ ದೈಹಿಕ ಕಾರಣಗಳು ಇದ್ದಿರಬಹುದು ಎಂದು ಪೀಠವು ಹೇಳಿದೆ.

'ಈ ಪ್ರಕರಣದಲ್ಲಿ ಪತಿಗೆ ತನ್ನ ಪತ್ನಿಯ ಜೊತೆ ಲೈಂಗಿಕ ಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಮದುವೆಯ ನಂತರ ಪ್ರಸ್ತ ನಡೆದಿಲ್ಲ ಎಂದು ಅನ್ನಿಸುತ್ತದೆ' ಎಂದು ಪೀಠ ಹೇಳಿದೆ.

ಪ್ರಸ್ತ ಆಗದೆ ಇದ್ದುದಕ್ಕೆ ಪತಿಯು ಆರಂಭದಲ್ಲಿ ಪತ್ನಿಯನ್ನು ದೂಷಿಸಿರಬಹುದು, ತನಗೆ ಆಕೆಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಒಪ್ಪಿಕೊಳ್ಳಲು ಆತ ಹಿಂಜರಿದಿರಬಹುದು ಎಂದು ಪೀಠವು ಹೇಳಿದೆ.

'ಆದರೆ ನಂತರದಲ್ಲಿ, ಇದು ತನ್ನ ಮೇಲೆ ಜೀವನಪರ್ಯಂತ ಕಳಂಕವೊಂದನ್ನು ಹೊರಿಸುವುದಿಲ್ಲ ಎಂಬ ಕಾರಣಕ್ಕೆ ಅವರು ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಸಾಪೇಕ್ಷವಾದ ನಪುಂಸಕತ್ವವು ಸಾಮಾನ್ಯ ನಪುಂಸಕತ್ವಕ್ಕಿಂತ ಭಿನ್ನವಾದುದು. ಸಾಪೇಕ್ಷವಾದ ನಪುಂಸಕತ್ವವನ್ನು ಒಪ್ಪಿಕೊಳ್ಳುವುದರಿಂದ, ಆ ವ್ಯಕ್ತಿಯು ಸಾಮಾನ್ಯ ಅರ್ಥದ ನಪುಂಸಕ ಎಂದಾಗುವುದಿಲ್ಲ' ಎಂದು ಪೀಠವು ವಿವರಿಸಿದೆ.

ಈ ಇಬ್ಬರು 2023ರ ಮಾರ್ಚ್‌ನಲ್ಲಿ ಮದುವೆಯಾಗಿದ್ದರು. ಮದುವೆಯಾದ 17 ದಿನಗಳ ನಂತರದಲ್ಲಿ ಅವರು ಬೇರೆಯಾಗಿದ್ದರು. ಮದುವೆಯ ನಂತರ ಪ್ರಸ್ತ ಆಗಿರಲಿಲ್ಲ ಎಂದು ದಂಪತಿ ಹೇಳಿದ್ದರು. ಪತಿಯು ತನ್ನೊಂದಿಗೆ ದೈಹಿಕ ಸಂಪರ್ಕಕ್ಕೆ ಒಪ್ಪುತ್ತಿಲ್ಲ ಎಂದು ಪತ್ನಿ ಹೇಳಿದ್ದರು.

ಕೌಟುಂಬಿಕ ನ್ಯಾಯಾಲಯಕ್ಕೆ ಆರಂಭದಲ್ಲಿ ಪ್ರಮಾಣಪತ್ರವೊಂದನ್ನು ಸಲ್ಲಿಸಿದ್ದ ಪತಿಯು, ಪ್ರಸ್ತ ಆಗಿಲ್ಲದಿರುವುದಕ್ಕೆ ಪತ್ನಿ ಕಾರಣ ಎಂದು ದೂರಿದ್ದರು. ಆದರೆ ನಂತರದಲ್ಲಿ, ಸಾಪೇಕ್ಷವಾದ ನಪುಂಸಕತ್ವವನ್ನು ಒಪ್ಪಿಕೊಂಡು ಲಿಖಿತ ಹೇಳಿಕೆ ಸಲ್ಲಿಸಿದರು.

ಅಪಘಾತ: 9 ಜನರ ಸಾವು

ಕೋಟಾ (ಪಿಟಿಐ): ಮದುವೆ ಮುಗಿಸಿಕೊಂಡು ಮರಳುತ್ತಿದ್ದ 9 ಜನರು ಭೀಕರ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿರುವ ಘಟನೆ ರಾಜಸ್ಥಾನದ ಝಾಲಾವಾಢದಲ್ಲಿ ನಡೆದಿದೆ.

16ರಿಂದ 30 ವರ್ಷ ವಯಸ್ಸಿನ 9 ಜನ ಪುರುಷರು ಮಧ್ಯಪ್ರದೇಶದ ಡೂಂಗರಿ ಗ್ರಾಮದಲ್ಲಿ ಮದುವೆ ಮುಗಿಸಿಕೊಂಡು ಮರಳುತ್ತಿದ್ದರು. ಇವರು ಪ್ರಯಾಣಿಸುತ್ತಿದ್ದ ಕಾರು ಹಾಗೂ ಟ್ರಕ್ ಮುಖಾಮುಖಿ ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ. ಮೃತರ ಪೈಕಿ ರೋಹಿತ್ (16), ಸೋನು (22) ಮತ್ತು ದೀಪಕ್ (24) ಸಹೋದರರು ಎಂದು ಪೊಲೀಸರು ತಿಳಿಸಿದ್ದಾರೆ.

ಅಶೋಕ್ (24), ಹೇಮರಾಜ್ (33) ರವಿಶಂಕರ್ (25) ಮತ್ತು ರಾಹುಲ್ (20) ರೋಹಿತ್ (22) ಮತ್ತು ರಾಮ್‌ಕಿಶನ್ (20) ಮೃತಪಟ್ಟಿರುವ ಇನ್ನಿತರರು. ಗಂಭೀರವಾಗಿ ಗಾಯಗೊಂಡಿರುವ ಮನೀಶ್ ಬಗಾರಿ (18) ಎಂಬುವವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಟ್ರಕ್ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9606385001

Part-Time Jobs

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516, ಶಿಮ್ಮೋಗ 8095555517

ಪ್ರವಾಸ

Travel

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ 13.05.2024 08.06.2024 ರಿಂದ 14 ದಿನಗಳು. ಸ್ವಯಂಭೂ ಅಮರನಾಥ್ ವೈಷ್ಣೋದೇವಿ ದೆಹಲಿ ಅಮೃತಸರ್ 28.06.2024 03.07.2024 ರಿಂದ 14,7 ದಿನಗಳು. ಅಯೋಧ್ಯ. ಪ್ರಯಾಗ್ ಕಾಶಿ,ಗಯಾ,ಬೈಧ್ಯನಾಥ. 03.05.2024 06.05.2024 ರಿಂದ 8 ದಿನಗಳು. ಕಾಶ್ಮೀರ್ ಗುಲ್ಮಾರ್ಗ್ ಪಹಲ್‌ಗಾಂ ಸೋನಾಮಾರ್ಗ್ 12.05.2024 18.05.2024 ರಿಂದ 8 ದಿನಗಳು. ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

★ಶ್ರೀಶ್ರೇಯಸ್ ಟೂರ್ಸ್★ 19.05.2024 12/15/20ದಿನಗಳು ಈಶಾನ್ಯರಾಜ್ಯಗಳ (ಸೆವೆನ್ ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ, ಅರುಣಾಚಲ,ಮೇಘಾಲಯ, ನಾಗಲ್ಯಾಂಡ್,ತ್ರಿಪುರ, ಮಿಝೋರಾಂ.20.05.2024, 20.06.2024 10ದಿನಗಳು ನೇಪಾಳ ರಾಷ್ಟ್ರ(ಮುಕ್ತಿನಾಥ ಸಹಿತ)ಪ್ರವಾಸ.28.06.2024, 15.07.2024 5/12ದಿನಗಳು ಅಮರನಾಥಯಾತ್ರಾ ಹಾಗೂ ಲೇಲಡಾಕ್ ಪ್ರವಾಸ. 20.07.2024 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.15.08.2024 22ದಿನಗಳು ದ್ವಾದಶ ಜ್ಯೋತಿರ್ಲಿಂಗ ಪ್ರವಾಸ. 09.09.2024,21.09.2024 12ದಿನಗಳು ಚಾರ್‌ದಾಮ್ ಯಾತ್ರಾ ವಿಶೇಷ. 8073824856/ 9206979202

7.5.2024ರಿಂದ 6ದಿನಗಳು ರಾಮೇಶ್ವರ, ತ್ರಿವೇಂಡ್ರಂ,ಜಟಾಯು, ಅಲಪಿಬೋಟಿಂಗ್, ಕೋವಲಂಬೀಚ್. 11.5.2024ರಿಂದ 5ದಿನಗಳು ಕಾಶಿ, ಅಯೋಧ್ಯ,ಗಯಾ, ಬುದ್ಧಗಯಾ, ಅಲಹಾಬಾದ್,18.5.2024ರಿಂದ 9ದಿನಗಳು ಕಾಶಿ,ನೇಪಾಳ, ಅಯೋಧ್ಯ, ಸೀತಾಮುಡಿ,ಗಯಾ, ಮನೋಕಾಮ. 25.5.2024ರಿಂದ 3ದಿನಗಳು. ಊಟಿ, ಇಶಾ ಫೌಡೇಶನ್, ಕುಡುಮುಡಿ, ಮರದಮಲ್ಯೆ, 12.6.2024ರಿಂದ 13ದಿನಗಳು ಚಾರಧಾಮಯಾತ್ರೆ, ಕೇದಾರನಾಥ, ಬದರಿನಾಥ, ದೆಹಲಿ, ಯಮನೋತ್ರಿ, ಗಂಗೋತ್ರಿ. ಶ್ರೀಗುರುರಾಜ ಟ್ರಾವೆಲ್ಸ್. ಕೋಲಾರ: 9611082432, 9449652555, 8123099913

DH DECCAN HERALD Classifieds More value, more impact
NAME CHANGE
ಪ್ರಜಾವಾಣಿ
@50/-* PER WORDS
Book your Name Change Ad in DH All Karnataka + Prajavani Bengaluru City All Days
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಿಕ್ಷಣ

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

NEET BIOLOGY

33) There are various types of reproduction. The type of reproduction adopted by an organism depends on:
a) The habitat and morphology of the organism
b) Morphology of the organism
c) Morphology and physiology of the organism
d) The organism's habitat, physiology and genetic makeup
Ans:- d

34) Given below are two statements: One is labelled as Assertion A and the other isIabeled as Reason R
Assertion A: A flower is defined as modified shoot wherein the shoot apical meristem changes to floral meristem.
Reason R: Internode of the shoot gets condensed to produce different floral appendages laterally at successive nodes instead of leaves. In the light of the above statements,
choose the correct answer from the options given below:
a) A is false but R is true.
b) Both A and R are true and R is the correct explanation of A.
c) Both A and R are true but R is NOT the correct explanation of A.
d) A is true but R is false.
Ans:- (b) A flower is a modified shoot wherein the shoot apical meristem changes to floral meristem. Internodes do not elongate and the axis gets condensed. The apex produces different kinds of floral appendages laterally at successive nodes instead of leaves.

35) Identify the incorrect statement.
a) In asexual reproduction, the offspring produced are morphologically and genetically identical to the parent
b) Zoospores are sexual reproductive structures
c) In asexual reproduction, a single parent produces offspring with or without the formation of gametes
d) Conidia are asexual structures in Penicillium
Ans:- b

36) Which of the following is a post-fertilization event in flowering plants?
a) Transfer of pollen grains
b) Embryo development **c)** Formation of flower
d) Formation of pollen grains
Ans:- b

37) The number of chromosomes in the shoot tip cells of a maize plant is 20. The number of chromosomes in the microspore mother cells of the same plant shall be:
a) 20 b) 10
c) 40 d) 15
Ans:- a

38) Among the terms listed below, those that of are not technically correct names for a floral whorl are –
i. Androecium ii. Carpel
iii. Corolla iv. Sepal
a) i and iv **b) iii and iv**
c) ii and iv **d) i and ii**
Ans:- c

39) Embryo sac is to ovule as …………….. is to an anther.
a) Stamen b) Filament
c) Pollen grain d) Androecium
Ans:- c

40) A dicotyledonous plant bears flowers but never produces fruits and seeds. The most probable cause for the above situation is -
a) Plant is dioecious and bears only pistillate flowers
b) Plant is dioecious and bears both pistillate and staminate flowers
c) Plant is monoecious
d) Plant is dioecious and bears only staminate flowers
Ans:- d

41) Which of the following statements are correct about Klinefelter's Syndrome?
A.This disorder was first described by Langdon Down (1866).
B. Such an individual has overall masculine development. However, the feminine development is also expressed.
C. The affected individual is short stature.
D.Physical, psychomotor and mental development is retarded.
E. Such individuals are sterile.
Choose the correct answer from the options given below:
a) A and E only b) A and B only
c) C and D only d) B and E only
Ans:- (d) Klinefelter's Syndrome is a genetic disorder that also caused due to the presence of an additional copy of X chromosome resulting into a karyotype of 47, XXY. Such an individual has overall masculine development, however, the feminine development (development of breast, i.e., Gynaecomastia) is also expressed. Such individuals are sterile. Down syndrome was first described by Langdon down (1866). In this disorder affected individual is physically, psychomotorly and mentally retarded.

(Contd…..)

II PUC MATHS

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Chapter: 5

DIFFERENTIABILITY

1) What is the derivative of a constant?
Ans:- The Derivative of a constant is zero.

$$\left[\frac{d}{dy}(\text{constant})=0\right]$$

2) What is the Derivative of a product of a constant and a function?
Ans:- Derivative of a product of a constant and a function is given by -

$$\left[\frac{d}{dy}(\text{constant}\times\text{function}) = \text{constant}\times\frac{d}{dx}(\text{function})\right]$$

3) What is the Derivative of the sum of two functions?
Ans:- Derivative of the sum of 2 functions is -

$$\frac{d}{dx}(u+v)=\frac{du}{dx}+\frac{dv}{dx}$$

4) What is the Derivative of the difference of two functions?
Ans:- Derivative of difference of 2 functions is-

$$\frac{d}{dx}(u-v)=\frac{du}{dx}-\frac{dv}{dx}$$

5) What is the Derivative of the product of two functions?
Ans:-Derivative of the product of 2 functions is-

$$\left[(1^{st}\text{ function}).\frac{d}{dx}(2^{nd}\text{ function})+(2^{nd}\text{ function}).\frac{d}{dx}(1^{st}\text{ function})\right]$$

$$\frac{d}{dx}(uv)=u.\frac{du}{dx}+v.\frac{dv}{dx}$$

6) What is the Derivative of the quotient of two functions?
Ans:- Derivative of the quotient of two functions is given by (Quotient formula) -

$$\frac{d}{dx}\left(\frac{u}{v}\right)=\frac{v.\frac{du}{dx}-u.\frac{dv}{dx}}{v^2}$$

$$\Rightarrow\frac{\left[(\text{Dino min ator})\frac{du}{dx}(\text{Numerator})-(\text{Numerator})\frac{dv}{dx}(\text{Dino min ator})\right]}{(\text{Dino min ator})^2}$$

7) Differentiate $\sqrt{\log x}$ w.r.t 'x'.
Soln: - Let $y=\sqrt{\log x}$

$$\frac{dy}{dx}=\frac{d}{dx}\frac{1}{2\sqrt{\log x}}.\frac{d}{dx}(\log x)$$

$$=\frac{1}{2\sqrt{\log x}}.\frac{1}{x}=\frac{1}{2x\sqrt{\log x}}$$

8) Differentiate $\cos(2x^{o})$ w.r.t x
Soln: - Let $y=\cos(2x^{\circ})$

we have $(2x^{\circ})=\left(\frac{\pi x}{90}\right)^{c}$

$$\frac{dy}{dx}=-\sin\left(\frac{\pi x}{90}\right).\frac{d}{dx}\left(\frac{\pi x}{90}\right)=-\frac{\pi}{90}\sin\left(\frac{\pi x}{90}\right)$$

9) Differentiate $\sqrt{\cos ec^{-1}x}$ w.r.t 'x'.
Soln: - Let $y=\sqrt{\cos ec^{-1}x}$

$$\frac{dy}{dx}=\frac{1}{2\sqrt{\operatorname{cosec}^{-1}x}}.\frac{d}{dx}(\operatorname{cosec}^{-1}x)$$

$$=\frac{1}{2\sqrt{\operatorname{cosec}^{-1}x}}.\frac{-1}{x\sqrt{x^2-1}}$$

$$=\frac{-1}{2x\sqrt{x^2-1}\sqrt{\operatorname{cosec}^{-1}x}}$$

10) Differentiate 10^x w.r.t 'x'.
Soln: - Let $y=10^x$
Taking logarithms on both sides

$$\log_e y=\log_e(10^x)=x\log_e 10$$

$$\frac{d}{dx}(\log_e y)=\frac{d}{dx}(x\log_e 10)$$

$$\frac{1}{y}.\frac{dy}{dx}=\log_e 10.1$$

$$\frac{dy}{dx}=y\log_e 10.1$$

$$\therefore\frac{dy}{dx}=10^x.\log_e 10$$

11) $\mathbf{x^2+y^2=a^2}$
Soln: - **Given that** $x^2+y^2=a^2$
differentiating both sides w.r.t x, we have

$$\frac{d}{dx}(x^2)+\frac{d}{dx}(y^2)=\frac{d}{dx}(a^2)$$

$$2x+2y\frac{dy}{dx}=0$$

$$2y\frac{dy}{dx}=-2x$$

$$\therefore\frac{dy}{dx}=-\frac{x}{y}$$

12) $\mathbf{x=\cos t;\quad y=\sin 2t}$
Soln: - $x=\cos t$ **and** $y=\sin 2t$

$$\frac{dx}{dt}=-\sin t \text{ and } \frac{dy}{dt}=2\cos 2t$$

$$\therefore\frac{dy}{dx}=\frac{2\cos 2t}{-\sin t}$$

13) **If** $\mathbf{y=x^2(2x^3-1)}$**; find** $\mathbf{y_2}$
Soln:-Given that $y=x^2(2x^3-1)$

$$y=2x^5-x^2$$

$$y_1=10x^4-2x \;\&\; y_2=40x^3-2$$

ಸಮಾಜ ವಿಜ್ಞಾನ ಎಂದರೆ ಬರೀ ಸಿದ್ಧಾಂತ ಎನ್ನುವುದು ಒಂದು ಮಿಥ್ಯೆ. ಮಾಹಿತಿ ತಂತ್ರಜ್ಞಾನವನ್ನು ಸಮಾಜಮುಖಿಯಾಗಿ ಮಾಡಲು ಸಮಾಜ ವಿಜ್ಞಾನಗಳ ಜ್ಞಾನ ಅಗತ್ಯ ಎಂಬ ತತ್ವವನ್ನು ಅಳವಡಿಸಿ ಕೊಂಡಿರುವ ಈ ಕೋರ್ಸು ಹೊಸ ಉದ್ಯೋಗಾವಕಾಶಗಳನ್ನು ತೆರೆದಿಡುತ್ತದೆ

ಕಂಪ್ಯೂಟೇಷನಲ್ ಸಮಾಜವಿಜ್ಞಾನ ಕೋರ್ಸ್

ಪ್ರೊ ಇಂದಿರಾ ರಾಮರಾವ್

ಹೊಸತು

ಕಂಪ್ಯೂಟೇಷನಲ್ ಸಮಾಜ ವಿಜ್ಞಾನಗಳಲ್ಲಿನ ಬಿಎಸ್ಸಿ ಆನರ್ಸ್, ಸಮಾಜ ವಿಜ್ಞಾನಗಳ ಅರಿವಿನೊಂದಿಗೆ ಸಂಖ್ಯಾ ಶಾಸ್ತ್ರ ಮತ್ತು ದತ್ತಾಂಶಗಳನ್ನು ಬಳಸಿ ಸಾಮಾಜಿಕ ಅಭಿವೃದ್ಧಿಗೆ ಪೂರಕವಾದ ಹೆಜ್ಜೆಗಳನಿಡುವಲ್ಲಿ ಬೇಕಿರುವ ತರಬೇತಿಯನ್ನು ನೀಡಲಾಗುತ್ತದೆ.

ನಾಲ್ಕು ವರ್ಷಗಳ ಎಂಟು ಸೆಮೆಸ್ಟರ್ ಗಳಿರುವ ಈ ಕೋರ್ಸ್‌ನಲ್ಲಿ ಮೊದಲನೆಯ ಸೆಮಿಸ್ಟರ್‌ನಲ್ಲಿ, ಗಣಿತ, ಸಂಖ್ಯಾಶಾಸ್ತ್ರ, ಸಮಾಜಶಾಸ್ತ್ರ ಸಾರ್ವಜನಿಕ ನೀತಿ, ಸಮುದಾಯಗಳ ರಚನೆ, ಸಾಮಾಜಿಕ ಬದಲಾವಣೆಗೆ ಸ್ಪಂದಿಸುವ ವಿಧಗಳ ಬಗ್ಗೆ ಅರಿವು ನೀಡಲಾಗುತ್ತದೆ

ಎರಡನೆಯ ಸೆಮಿಸ್ಟರ್‌ನಲ್ಲಿ ದತ್ತಾಂಶ ವಿಜ್ಞಾನ, ಗಣಕವಿಜ್ಞಾನ, ಅರ್ಥಶಾಸ್ತ್ರ, ಲಿಂಗ ವ್ಯವಸ್ಥೆ, ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನೆ, ಗುಣಾತ್ಮಕ ಸಂಶೋಧನಾ ವಿಧಾನಗಲ್ಲಿ ಕಂಪ್ಯೂಟರ್ ಬಳಕೆಯ ಬಗ್ಗೆ ಪ್ರಾತ್ಯಕ್ಷಿಕ ಅನುಭವ, ಕಂಪ್ಯೂಟರ್ ಭಾಷೆಯಾದ ಪೈತಾನ್ ಕಲಿಕೆ, ಕಂಪ್ಯೂಟರ್ನಲ್ಲಿ ಸಂಖ್ಯಾಶಾಸ್ತ್ರದ ದತ್ತಾಂಶ ಅನ್ವಯಿಸಲು ಅನುಕೂಲವಾದ 'ಆರ್' ಬಳಕೆ, ಸಮಾನತೆ ಮತ್ತು ಸಮತೆಯ ಪರಿಕಲ್ಪನೆಗಳ ಪರಿಚಯ ಮತ್ತು ಸಾರ್ವಜನಿಕ ನೀತಿ ಅಭಿವೃದ್ಧಿ ಪಡಿಸುವ ಬಗ್ಗೆ ತರಬೇತಿ ನೀಡಲಾಗುತ್ತದೆ.

ಮೂರನೇ ಸೆಮಿಸ್ಟರ್‌ನಲ್ಲಿ ಕೃತಕ ಬುದ್ದಿ (artificial intelligence)ಮತ್ತು ಅದರ ಅಭಿವೃದ್ಧಿ ಮತ್ತು ಬಳಕೆ ಯ ಬಗ್ಗೆ ಅರಿವು, ಸಾಮಾಜಿಕ ಅಂತರ್ ಸಂಬಂಧಗಳನ್ನು ಅರಿಯುವಲ್ಲಿ 'ಗ್ರಾಫ್' ಸಿದ್ಧಾಂತದ ಬಳಕೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮಾನವಶಾಸ್ತ್ರ, ಕಂಪ್ಯೂಟರ್ ತಂತ್ರಾಂಶಗಳಲ್ಲಿ ಯಾವ ಕ್ರಮದಲ್ಲಿ ವಿಷಯಗಳು ಲಭ್ಯವಾಗುತ್ತವೆ (algorithm) ಮತ್ತು ಇವುಗಳ ಸಾಮಾಜಿಕ ಪರಿಣಾಮಗಳ ಬಗ್ಗೆಯ ಚರ್ಚೆಗಳು, ಇದಲ್ಲದೆ ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ತಂತ್ರಜ್ಞಾನದ ಸಂಬಂಧಗಳ ಬಗ್ಗೆ ಚರ್ಚೆ ಇದೆ.

ನಾಲ್ಕನೇ ಸೆಮಿಸ್ಟರ್‌ನಲ್ಲಿ ಕೃತಕ ಬುದ್ಧಿಮತ್ತೆಯ ಭಾಗವಾದ ಯಂತ್ರಗಳನ್ನು ಬಳಸಿ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ತರಬೇತಿ ನೀಡಲಾಗುತ್ತದೆ. ಸಾಮಾಜಿಕ ಮತ್ತು ಮಾಹಿತಿ ವಿಜ್ಞಾನಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಬಗ್ಗೆ ವಿದ್ಯಾರ್ಥಿಗಳನ್ನು ಟ್ರೈನ್ ಮಾಡಲಾಗುತ್ತದೆ. ಅದರ ಜೊತೆಯಲ್ಲಿ, ಸಾಮಾಜಿಕ ನಡವಳಿಕೆ ಮತ್ತು ಕಂಪ್ಯೂಟೇಶನಲ್ ವ್ಯವಸ್ಥೆಗಳ ಬಳಕೆಗೆ ಸಂಬಂಧಿಸಿದ ಮಾಹಿತಿ ಮತ್ತು ತರಪೇತಿ ವಿದ್ಯಾರ್ಥಿಗಳಿಗೆ ಸಿಗುತ್ತದೆ. ವ್ಯಕ್ತಿಗಳು ಕಂಪ್ಯೂಟರ್ ಯುಗದಲ್ಲಿ ಸಾಮಾಜಿಕವಾಗಿ, ಲಿಂಗಾಧಾರಿತವಾಗಿ ತಮ್ಮನ್ನು ಗುರುತಿಸಿಕೊಳ್ಳುವ ವ್ಯವಸ್ಥೆಯ ಬಗೆಗಿನ ಸಿದ್ಧಾಂತಗಳು, ದತ್ತಾಂಶಗಳನ್ನು ಅನೇಕ ಜಾಲತಾಣಗಳಿಂದ ಆಯ್ದು ತೆಗೆದು ಬಳಸುವ ಮಾದರಿಗಳ ಬಗ್ಗೆಯೂ ಪರಿಚಯವನ್ನು ನೀಡಲಾಗುತ್ತದೆ. ಐದನೆಯ ಸೆಮೆಸ್ಟರಿನಲ್ಲಿ ಆಧುನಿಕೋತ್ತರ ಸಂಸ್ಕೃತಿಗಳು, ನವ ವರ್ಗಗಳ ಪರಿಚಯ, ಮನುಷ್ಯ ಕೇಂದ್ರಿತ ವ್ಯವಸ್ಥೆಗಳು, ಸಮಾಜ ವಿಜ್ಞಾನ ಗಳಲ್ಲಿ ವಿವಿಧತೆ ಮತ್ತು ಒಳಗೊಳ್ಳುವಿಕೆಯ ಅಂಶಗಳ ಬಗ್ಗೆಯ ಚರ್ಚೆಗಳಿರುತ್ತವೆ.

ದತ್ತಾಂಶಗಳ ಮೇಲ್ವಿಚಾರಣೆ ಮಾಡುವುದು ಹೇಗೆ ಎಂಬುದರ ಬಗ್ಗೆ ತರಬೇತಿ ನೀಡಲಾಗುತ್ತದೆ. ಆರೋಗ್ಯವನ್ನು ಸಮಾಜಶಾಸ್ತ್ರೀಯ ದೃಷ್ಟಿ ಕೋನದಿಂದ ವಿಶ್ಲೇಷಿಸುವ ತರಬೇತಿ ನೀಡಲಾಗುತ್ತದೆ . ಚಲನೆ ಮತ್ತು ವಲಸೆಯ ಸಾಮಾಜಿಕ, ಆರ್ಥಿಕ, ರಾಜಕೀಯ ಹಿನ್ನೆಲೆಗಳನ್ನು ಚರ್ಚಿಸಲಾಗುತ್ತದೆ. ಸಾಂಸ್ಕೃತಿಕ ಮಾದರಿಗಳ ಪರಿಚಯ, ಆಡಳಿತಾತ್ಮಕತೆ ಹಾಗು ಕಾನೂನಿನ ನಡುವಣ ಸಂಬಂಧದ ಅರಿವು ನೀಡಲಾಗುತ್ತದೆ. ಸಮ್ಮರ್ ಇಂಟರ್ನ್ಶಿಪ್ ನಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ತೊಡಗಿಕೊಂಡು ವರದಿಯನ್ನು ತಯಾರಿಸಬೇಕು.

ಅಂತಿಮವರ್ಷದ ಮೊದಲ ಸೆಮಿಸ್ಟರ್‌ನಲ್ಲಿ ಆರೋಗ್ಯದ ಬಗ್ಗೆ, ಚಾಲನೆ ಮತ್ತು ವಲಸೆಯ ಬಗ್ಗೆ ಲಭ್ಯವಿರುವ ಸಾಮಾಜಿಕ ಅರಿವನ್ನು ತಂತ್ರಜ್ಞಾನ ಬಳಕೆಯಲ್ಲಿ ಸೇರಿಸಿಕೊಂಡು ಸಾಮಾಜಿಕ ಮತ್ತು ಆರೋಗ್ಯ ವ್ಯವಸ್ಥೆಯ ರೂಪಿಸುವ ದಿಕ್ಕಿನಲ್ಲಿ ತರಬೇತಿ ನೀಡಲಾಗುತ್ತದೆ. ತಂತ್ರಜ್ಞಾನದ ಸಾಮಾಜಿಕ ಪರಿಣಾಮಗಳ ಬಗ್ಗೆ ಆಳವಾದ ಜ್ಞಾನ ನೀಡಲಾಗುತ್ತದೆ.

ಕೊನೆಯ ಭಾಗದಲ್ಲಿ ಸೂಕ್ಷ್ಮ(micro) ಅರ್ಥಶಾಸ್ತ್ರದ ಬಗ್ಗೆ ಪರಿಚಯ ನೀಡುವುದರ ಜೊತೆಗೆ, ಜೀವನೋಪಾಯಕ್ಕೆ ಸಂಬಂಧಿಸಿದಂತೆ ಜೀವನ ಹಾಗು ಉದ್ಯಮಶೀಲತಾ ಕೌಶಲಗಳ ಅಭಿವೃದ್ಧಿಗೆ ಸಂಭಂದಿಸಿದ ಅಭಿವೃದ್ಧಿಯ ರಾಜಕೀಯ ಅರ್ಥಶಾಸ್ತ್ರದ ಚರ್ಚೆಗಳ ಪರಿಚಯ ನೀಡಲಾಗುತ್ತದೆ. ಆರ್ಥಿಕ ವಿಶ್ಲೇಷಣೆಯ ಮೂಲಕ ಲಭ್ಯವಾದ ದತ್ತಾಂಶಗಳನ್ನು ಗಣಿತ ಶಾಸ್ತ್ರ ಹಾಗೂ ಸಂಖ್ಯಾ ಶಾಸ್ತ್ರಗಳ ವಿಶ್ಲೇಷಣೆಗೆ ಒಡ್ಡುವ ವಿಧಾನಗಳ ಪರಿಚಯ ನೀಡಲಾಗುತ್ತದೆ. ಇದರ ಜೊತೆಗೆ ಈಗಾಗಲೇ ಕಲಿತ ವಿಷಯಗಳ ಆಧಾರದ ಮೇಲೆ ವಿದ್ಯಾರ್ಥಿಗಳು ಬೇಸಿಗೆ ಇಂಟರ್ನ್ಶಿಪ್ ಕಡ್ಡಾಯವಾಗಿ ಕೈಗೊಳ್ಳಬೇಕು. ಅಂತಿಮ ಸೆಮಿಸ್ಟರ್ ನಲ್ಲಿ ಕ್ಷೇತ್ರಾಧ್ಯಯನ ಆಧಾರಿತ ಸಂಶೋಧನೆಯನ್ನು ಕೈಗೊಂಡು ವರದಿಯನ್ನು ಸಲ್ಲಿಸಬೇಕು.

ಸಮಕಾಲೀನ ಜಗತ್ತಿನಲ್ಲಿ ಅಗಾಧ ಪ್ರಮಾಣದಲ್ಲಿ ಲಭ್ಯವಿರುವ ಪರಿಮಾಣ ತ್ಮಕ ಮಾಹಿತಿಯನ್ನು ಸಾಮಾಜಿಕ ವಾಸ್ತವಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಕೌಶಲಗಳನ್ನು ಈ ಕೋರ್ಸು ನೀಡಲಿದೆ. ಮೂಲತಃ ಈ ವಿಶಿಷ್ಟ ಕೋರ್ಸು ಬಹುಶಿಸ್ತೀಯ ಅಧ್ಯಯನ ವಿಧಾನವನ್ನು ಅಳವಡಿಸಿ ಕೊಂಡು, ಅತ್ಯಾಧುನಿಕ ಕಂಪ್ಯೂಟರ್ ತಂತ್ರಜ್ಞಾನವನ್ನು ಸಾಮಾಜಿಕ ವಾಸ್ತವಗಳನ್ನು ಅರ್ಹ ಮಾಡಿಕೊಳ್ಳಲು ತರಬೇತಿಯನ್ನು ನೀಡುತ್ತದೆ.

ಕಲೆ, ವಿಜ್ಞಾನ ಮತ್ತು ವಾಣಿಜ್ಯದ ವಿದ್ಯಾರ್ಥಿಗಳು ಈ ಕೋರ್ಸ್‌ಗೆ ಸೇರಬಹುದಾಗಿದೆ. ಪಿಯುಸಿ ಅಥವಾ ತತ್ಸಮಾನ ಪರೀಕ್ಷೆ ಪಾಸಾಗಿರಬೇಕು. ತರಗತಿ ಆರಂಭವಾಗುವ ಮುನ್ನ bridge course ನೀಡಲಾಗುತ್ತದೆ. ಸಮಾಜ ವಿಜ್ಞಾನಗಳ ಮೂಲ ಪರಿಕಲ್ಪನೆಗಳ ಬಗ್ಗೆ 8-10 ಗಂಟೆಗಳ ಅವಧಿಯಲ್ಲಿ ಪರಿಚಯಾತ್ಮಕ ನೋಟವನ್ನು ನೀಡಲಾಗುತ್ತದೆ. ಸದ್ಯ ಈ ಕೋರ್ಸ್ ರಾಮಯ್ಯ ವಿಶ್ವವಿದ್ಯಾಲಯದಲ್ಲಿ ಪರಿಚಯಿಸಲಾಗಿದೆ.

ಕಂಪ್ಯೂಟರ್ ಆಧಾರಿತ ಉದ್ಯೋಗ ಗಳನ್ನು ಸಮಾಜ ವಿಜ್ಞಾನ ಕ್ಷೇತ್ರಕ್ಕೆ ಈ ಕೋರ್ಸು ತೆರೆಯು ತ್ತದೆ. ಈ ಕೋರ್ಸು ಬರುವ ದಿನಗಳಲ್ಲಿ ಕಾರ್ಪೊರೇಟ್ ವಲಯ, ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು, multi-speciality ಆಸ್ಪತ್ರೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಬೃಹತ್ ಸಂಖ್ಯಾತ್ಮಕ ಮಾಹಿತಿಯ ವಿಶ್ಲೇಷಣೆಯಲ್ಲಿ ತೊಡಗಿರುವ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳನ್ನು ತೆರೆಯಲಿದೆ.

INTERNATIONAL INSTITUTE OF BUSINESS STUDIES
Redefining Leading Talents
IIBS
BENGALURU
(AICTE Approved)
16 YEARS OF ACADEMIC EXCELLENCE
NAAC A GRADE
Highest CGPA 3.20 in 4-Point Scale



Campus Placement :
PGDM 51 LPA
MBA 48 LPA
ADMISSIONS 2024 OPEN NOW

UG Courses
- BBA + Business Analytics
- BCA + Data science
- BA+ IAS/ IPS
- B.Com+ ACCA (United Kingdom)
- UG+ MBA (5 year integrated program)

MBA / PGDM Dual Specialization
- Marketing Management (MM)
- Finance Management (FM)
- Human Resource Management (HRM)
- Business Analytics
- Production & Operations Management
- Entrepreneurship & Startups
- Agri-Business Management
- Supply Chain Management
- Data Science
- Fashion Designing
- Tourism Management
- International Business (Import-Export)
- Information Technology
- Healthcare Management
- Hospitality Management

Free laptop and Free International tour
admission@iibsonline.com www.iibs.edu.in | www.iibsonline.com
99864 15333 / 96202 48214
Near International Airport, Bengaluru-562 157.



ಸುಭಾಷಿತ

ಬದಲಾವಣೆ ಮಾಡುವ ಇಚ್ಛಾಶಕ್ತಿ ನಿಮಗೆ ಇಲ್ಲದೇ ಹೋದರೆ, ಟೀಕಿಸುವ ಹಕ್ಕು ನಿಮಗೆ ಇರುವುದಿಲ್ಲ.

- ಮಾರ್ಕ್ ಟ್ವೈನ್

ಮಾವೊವಾದ ಒಡ್ಡಿರುವ ಸವಾಲು ಅಭಿವೃದ್ಧಿಯೇ ಉತ್ತರವಾಗಲಿ

ಛತ್ತೀಸಗಢದಲ್ಲಿ ಭದ್ರತಾ ಪಡೆಗಳ ಜೊತೆ ನಡೆದ ಗುಂಡಿನ ಚಕಮಕಿಯಲ್ಲಿ 29 ಮಂದಿ ನಕ್ಸಲೀಯರು ಹತರಾಗಿರುವುದು ಅಲ್ಲಿ ಅವರ ಚಟುವಟಿಕೆಗಳಿಗೆ ದೊಡ್ಡ ಪೆಟ್ಟು. ಈ 29 ಮಂದಿಯಲ್ಲಿ ಮಾವೊವಾದಿಗಳ ಕೆಲವು ಪ್ರಮುಖ ಕಮಾಂಡರ್‌ಗಳೂ ಸೇರಿದ್ದಾರೆ. ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮತ್ತು ಜಿಲ್ಲಾ ಮೀಸಲು ಪಡೆಯ ಸಿಬ್ಬಂದಿ ನಡೆಸಿದ ಕಾರ್ಯಾಚರಣೆಯಲ್ಲಿ ನಕ್ಸಲೀಯರು ಹತರಾಗಿದ್ದಾರೆ. ಖಚಿತ ಗುಪ್ತಚರ ಮಾಹಿತಿ ಆಧರಿಸಿ ಈ ಕಾರ್ಯಾಚರಣೆಯನ್ನು ನಡೆಸಲಾಗಿದೆ ಎಂದು ವರದಿಗಳು ಹೇಳಿವೆ. ಮಾವೊವಾದಿಗಳಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಪಡಿಸಿಕೊಳ್ಳಲಾಗಿದೆ. ಹೀಗೆ ವಶಪಡಿಸಿಕೊಂಡವುಗಳಲ್ಲಿ ಆಧುನಿಕ ಶಸ್ತ್ರಾಸ್ತ್ರಗಳೂ ಸೇರಿವೆ. ಈ ಕಾರ್ಯಾಚರಣೆಯನ್ನು 'ಎನ್‌ಕೌಂಟರ್' ಎಂದು ಕರೆಯಲಾಗಿದೆ. ಆದರೆ ಮಾಮೂಲಿ 'ಎನ್‌ಕೌಂಟರ್'ಗಳಿಗೆ ಇರುವ ನಕಾರಾತ್ಮಕ ಅರ್ಥವನ್ನು ಇದು ಧ್ವನಿಸುತ್ತದೆಯೇ ಎಂಬುದು ಖಚಿತವಾಗಿಲ್ಲ. ನಕ್ಸಲೀಯರು ಭಾರಿ ಸಂಖ್ಯೆಯಲ್ಲಿ ಹತರಾಗಿರುವುದನ್ನು ಗಮನಿಸಿದರೆ ಭದ್ರತಾ ಪಡೆಗಳಿಂದ ದಾಳಿ ಎದುರಾಗುವ ಮುನ್ಸೂಚನೆ ಅವರಿಗೆ ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಭದ್ರತಾ ಪಡೆಯ ಸಿಬ್ಬಂದಿಗೆ ಗಾಯಗಳಾಗಿವೆ. ಮಾವೊವಾದಿಗಳು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಒಂದೆಡೆ ಸೇರಿದ್ದು ಹಾಗೂ ಭದ್ರತಾ ಪಡೆಯ ಸಿಬ್ಬಂದಿಗೆ ಸುಲಭದ ತುತ್ತಾಗಿದ್ದು ಮಾಮೂಲಿ ಸಂಗತಿ ಅಲ್ಲ. ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಯ ಸಿಬ್ಬಂದಿ ಯಶಸ್ಸು ಸಾಧಿಸಿದ್ದಾರೆ.



ಸಮಾಜದ ಕೆಲವು ವರ್ಗಗಳಿಗೆ ಮಾವೊವಾದವು ಆಕರ್ಷಕ ಅನ್ನಿಸುವಂತೆ ಮಾಡುವ ಕಾರಣಗಳನ್ನು ಸರ್ಕಾರ ನಿರ್ಮೂಲಗೊಳಿಸಬೇಕು

ಈ ಕಾರ್ಯಾಚರಣೆಯ ಯಶಸ್ಸಿನ ಶ್ರೇಯವನ್ನು ಸರ್ಕಾರವು ತನ್ನದಾಗಿಸಿಕೊಂಡಿದೆ. ಈಚಿನ ನೂರು ದಿನಗಳ ಅವಧಿಯಲ್ಲಿ 87 ಮಂದಿ ಮಾವೊವಾದಿಗಳ ಹತ್ಯೆ ಆಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಮುಂದಿನ ಎರಡು ವರ್ಷಗಳಲ್ಲಿ ನಕ್ಸಲ್‌ವಾದವನ್ನು ದೇಶದಿಂದ ಸಂಪೂರ್ಣವಾಗಿ ನಿರ್ಮೂಲಗೊಳಿಸಲಾಗುತ್ತದೆ ಎಂದು ಅವರು ಘೋಷಿಸಿದ್ದಾರೆ. ಎಡಪಂಥೀಯ ತೀವ್ರವಾದವು ಭದ್ರತೆಗೆ ಗಂಭೀರ ಸವಾಲನ್ನು ಒಡ್ಡಿರುವ ರಾಜ್ಯದಲ್ಲಿ, ಲೋಕಸಭಾ ಚುನಾವಣೆಗೆ ಮೊದಲು ನಡೆದ ಈ ಕಾರ್ಯಾಚರಣೆಯು ಸರ್ಕಾರಕ್ಕೆ ಬಲ ತುಂಬುವ ಕೆಲಸ ಮಾಡುತ್ತದೆ. ಸರ್ಕಾರ ತಳೆದ ಆಕ್ರಮಣಶೀಲ ಧೋರಣೆಯ ಪರಿಣಾಮವಾಗಿ ಛತ್ತೀಸಗಢದಲ್ಲಿ ನಕ್ಸಲೀಯರು ಒಂದು ಸಣ್ಣ ಪ್ರದೇಶಕ್ಕೆ ಈಗ ಸೀಮಿತಗೊಂಡಿದ್ದಾರೆ ಎಂದು ಶಾ ಅವರು ಹೇಳಿದ್ದಾರೆ. ಆದರೆ ಇದು ಸಂಪೂರ್ಣ ಸತ್ಯವಲ್ಲ. ಮಹಾರಾಷ್ಟ್ರ, ಆಂಧ್ರಪ್ರದೇಶ, ಛತ್ತೀಸಗಢ, ಜಾರ್ಖಂಡ್, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಕೆಲವು ಪ್ರದೇಶಗಳಲ್ಲಿ ನಕ್ಸಲೀಯರು ಇಂದಿಗೂ ಗಣನೀಯ ಪ್ರಮಾಣದಲ್ಲಿ ಪ್ರಭಾವ ಹೊಂದಿದ್ದಾರೆ. ಕೆಲವು ಪ್ರದೇಶಗಳಲ್ಲಿ ಸರ್ಕಾರದ ಮಾತಿಗಿಂತ ನಕ್ಸಲೀಯರ ಮಾತು ನಡೆಯುತ್ತಿದೆ. ಭದ್ರತಾ ಸಿಬ್ಬಂದಿಯನ್ನು ಕೊಲ್ಲುವ ಮೂಲಕ ಹಾಗೂ ಆಸ್ತಿಯನ್ನು ಲೂಟಿ ಮಾಡುವ ಮೂಲಕ ನಕ್ಸಲೀಯರು ಪ್ರಭುತ್ವಕ್ಕೆ ನಷ್ಟ ಉಂಟುಮಾಡಿದ್ದಾರೆ.

ದೇಶದ ಮಧ್ಯ ಭಾಗದಲ್ಲಿ ಹಾಗೂ ಪೂರ್ವ ಭಾಗದಲ್ಲಿ ನಕ್ಸಲೀಯರು ತಮ್ಮ ಚಟುವಟಿಕೆಗಳನ್ನು ಕೇಂದ್ರೀಕರಿಸಿದ್ದಾರೆ. ಈ ಭಾಗಗಳಲ್ಲಿ ಬುಡಕಟ್ಟು ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ನೆಲೆ ಕಂಡುಕೊಂಡಿವೆ. ದೇಶದಲ್ಲಿ ಅತ್ಯಂತ ಹೆಚ್ಚು ದೌರ್ಜನ್ಯಕ್ಕೆ ಒಳಗಾಗಿರುವ ಬುಡಕಟ್ಟು ಸಮುದಾಯಗಳ ಬೆಂಬಲಕ್ಕೆ ನಿಲ್ಲುವ ಮೂಲಕ, ಅವರ ಪರವಾಗಿ ಮಾತನಾಡುವ ಮೂಲಕ ನಕ್ಸಲೀಯರು ಆ ಸಮುದಾಯಗಳ ಅನುಕಂಪ ಪಡೆದುಕೊಳ್ಳುವ ಯತ್ನ ನಡೆಸಿದ್ದಾರೆ. ಆದರೆ ಸರ್ಕಾರವು ಅಭಿವೃದ್ಧಿ, ಒಳ್ಳೆಯ ಆಡಳಿತ ಹಾಗೂ ಒಳ್ಳೆಯ ಮನಸ್ಸಿನಿಂದ ಈ ಸಮುದಾಯಗಳಿಗೆ ಹತ್ತಿರವಾಗಲು ಯತ್ನಿಸಿದ ಸಂದರ್ಭಗಳಲ್ಲಿ ನಕ್ಸಲೀಯರು ಇದೇ ಸಮುದಾಯಗಳ ಬೆಂಬಲವನ್ನು ಕಳೆದುಕೊಂಡಿದ್ದೂ ಇದೆ. ಇದು ಒಂದು ಪಾಠವನ್ನು ಹೇಳುತ್ತಿದೆ. ಅಂದರೆ, ಮಾವೊವಾದಿಗಳನ್ನು ಇಲ್ಲವಾಗಿಸುವ ಮೂಲಕ ಮಾವೊವಾದವನ್ನು ಇಲ್ಲವಾಗಿಸಲು ಆಗದು; ಬದಲಿಗೆ, ಸಮಾಜದ ಕೆಲವು ವರ್ಗಗಳಿಗೆ ಮಾವೊವಾದವು ಆಕರ್ಷಕ ಅನ್ನಿಸುವಂತೆ ಮಾಡುವ ಕಾರಣಗಳನ್ನು ನಿರ್ಮೂಲಗೊಳಿಸಬೇಕು. ಮಾವೊವಾದಿಗಳು ತಮ್ಮಲ್ಲಿ ವಿಕೇಂದ್ರೀಕರಣದ ಮಾದರಿಯನ್ನು ಅಳವಡಿಸಿಕೊಂಡು, ದೇಶದ ಬೇರೆ ಬೇರೆ ಭಾಗಗಳಲ್ಲಿ ಸಣ್ಣ ಸಣ್ಣ ಗುಂಪುಗಳಲ್ಲಿ ಹಂಚಿಹೋಗಿದ್ದಾರೆ. ಇದು ಅವರನ್ನು ಭೌತಿಕವಾಗಿ ಇಲ್ಲವಾಗಿಸುವುದನ್ನು ಬಹಳ ಕಷ್ಟಕರವಾಗಿಸಿದೆ. ಹೀಗಾಗಿ, ಮಾವೊವಾದವನ್ನು ವಿರೋಧಿಸುವ ಕಾರ್ಯತಂತ್ರವು ಬಲಪ್ರಯೋಗಕ್ಕಿಂತ ಮಿಗಿಲಾಗಿ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನ ನೀಡಬೇಕು.

ದಿನದ ಟ್ವೀಟ್

ಶಿಶು ಆಹಾರದ ಕಹಿಸತ್ಯ

ಎಂತಹ ಮುಖ್ಯವಾದ ಸಂಗತಿ. ನಮ್ಮಲ್ಲಿ ಹಲವರು ಅಧಿಕ ಸಕ್ಕರೆ ಅಂಶವಿರುವ ಸೆರೆಲಾಕ್ ಅಥವಾ ಇತರ ಶಿಶು ಆಹಾರವನ್ನು ತಿನ್ನುತ್ತಾ ಬೆಳೆದವರು! ಕಂಪನಿಗಳು ಬಾಲ್ಯದಿಂದಲೇ ನಮ್ಮನ್ನು ಮಧುಮೇಹಕ್ಕೆ ತುತ್ತಾಗಿಸುತ್ತಾ ಬಂದವು ಅನ್ನಿಸುತ್ತದೆ. ಶಿಶು ಆಹಾರ ಸೂತ್ರದ ಕಹಿ ಸತ್ಯವೆಂದರೆ 'ಹೆಚ್ಚುವರಿಯಾಗಿ ಸೇರಿಸಿದ ಸಕ್ಕರೆ'.

ಸೂರಜ್ ಯೆಂಗ್ಡೆ, ಲೇಖಕ

ಕಿಡಿನುಡಿ

ನಿನ್ನೆ ಮಾನ್ಯ ದೇವೇಗೌಡರ ಭಾಷಣ ಕೇಳಿದೆ. ಕೆಲವು ತಿಂಗಳುಗಳ ಹಿಂದೆ ಗೌಡರು ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿ ಮತ್ತು ಮೋದಿ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದರು ಎಂಬುದು ಯೂಟ್ಯೂಬ್‌ನಲ್ಲಿ ಸಿಗುತ್ತದೆ. ಇವರಿಗೆ ಅನುಕೂಲವಾದರೆ ಯಾರನ್ನು ಬೇಕಾದರೂ ಮೇಲೆತ್ತುತ್ತಾರೆ ಇಲ್ಲವಾದರೆ ಯಾರನ್ನು ಬೇಕಾದರೂ ಟೀಕಿಸುತ್ತಾರೆ. ಅಡ್ಯಾಪ್ಟಬಿಲಿಟಿ ಎಂಬುದನ್ನು ಇವರಿಂದ ಕಲಿಯಬೇಕು.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಗುರುವಾರ, 22-4-1999

- **ಪರ್ಯಾಯ ಸರ್ಕಾರ: ವಿವರಕ್ಕೆ ರಾಷ್ಟ್ರಪತಿ ಸೂಚನೆ**

ನವದೆಹಲಿ, ಏ. 21 (ಪಿಟಿಐ): ಪರ್ಯಾಯ ಸರ್ಕಾರ ರಚನೆಯ ಬಗ್ಗೆ ವಿವರ ನೀಡುವಂತೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಇಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಕೇಳಿದ್ದಾರೆ.

- **ಮರುಜನ್ಮ ಪಡೆಯುತ್ತಿರುವ 3 ಕೆರೆಗಳು**

ಬೆಂಗಳೂರು, ಏ. 21– ಜಲಮಾಲಿನ್ಯದಿಂದ ಕಲುಷಿತಗೊಂಡಿರುವ ನಗರದ ಮೂರು ಕೆರೆಗಳು ಸದ್ಯದಲ್ಲೇ ಮರುಜನ್ಮ ಪಡೆದು ಸ್ವಚ್ಛತೆಯ ತಾಣಗಳಾಗಿ ಕಂಗೊಳಿಸಲಿವೆ.

ಇಂಡೊ–ನಾರ್ವೆ ಯೋಜನೆ ಅಡಿಯಲ್ಲಿ ಅರಣ್ಯ ಇಲಾಖೆ ಈಗಾಗಲೇ ಕೈಗೆತ್ತಿಕೊಂಡಿರುವ ಕೆರೆಗಳ ಸ್ವಚ್ಛತೆ ಕಾಮಗಾರಿಯಿಂದ ಹೆಬ್ಬಾಳ, ಮಡಿವಾಳ ಹಾಗೂ ಅಗರಂ ಕೆರೆಗಳು ಕೆಲವೇ ದಿನಗಳಲ್ಲಿ ಶುದ್ಧ ನೀರನ್ನು ಹೊಂದಲಿವೆ. ಅಷ್ಟೇ ಅಲ್ಲದೆ, ಪ್ರವಾಸಿಗರನ್ನು ಆಕರ್ಷಿಸುವ ಹಲವು ಚಟುವಟಿಕೆಗಳನ್ನು ಒಳಗೊಂಡ ಸುಂದರ ತಾಣಗಳಾಗಿ ಪರಿವರ್ತನೆಯನ್ನು ಕಾಣಲಿವೆ.

50 ವರ್ಷಗಳ ಹಿಂದೆ

ಸೋಮವಾರ, 22-4-1974

- **ಯೋಜನೆ: ಬರೀ ಕಾಗದದ ಮೇಲಿನ ಅಟಾಟೋಪ**

ಮುಂಬೈ, ಏ. 21– 'ಕಾಗದದ ಮೇಲಿನ ಗುರಿಗಳ ಬೂಟಾಟಿಕೆ' ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಯೋಜನಾ ಆಯೋಗದ ಮಾಜಿ ಸದಸ್ಯ ಡಾ. ಬಿ.ಎಸ್. ಮಿನ್ಹಾಸ್ ಅವರು ಐದನೇ ಯೋಜನೆಯನ್ನು ಇಂದು ಟೀಕಿಸಿ, ಅದರ ಎರಡು ಪ್ರಮುಖ ಉದ್ದೇಶಗಳಾದ ದಾರಿದ್ರ್ಯ ನಿವಾರಣೆ ಹಾಗೂ ಸ್ವಪರಿಪೂರ್ಣತೆಗಳಿಗೆ ಈಗಾಗಲೇ ಪೆಟ್ಟಿನ ಮೇಲೆ ಪೆಟ್ಟು ಬೀಳುತ್ತಿದೆ ಎಂದರು.

ಸ್ವಾವಲಂಬನೆ ಹೆಸರಿನಲ್ಲಿ ಸದಾಕಾಲವೂ ವಿದೇಶಿಯರ ಅವಲಂಬನೆಗೆ ಸಿಕ್ಕಿಬೀಳುವ ಅಪಾಯವನ್ನು ಭಾರತ ಎದುರಿಸುತ್ತಿದೆ. ಅಂಥ ವಿದೇಶಿ ಶಕ್ತಿಗಳು ಭಾರತದ ಪುರೋಭಿವೃದ್ಧಿ ಬಯಸುವ ರಾಷ್ಟ್ರಗಳಾಗಿರಬಹುದು ಅಥವಾ ಭಾರತವನ್ನು ನುಂಗಲೆಳಸುವ ತಿಮಿಂಗಿಲಗಳಾಗಿರಬಹುದು ಎಂದು ಅವರು 'ಭಾರತದಲ್ಲಿ ಆರ್ಥಿಕ ಧೋರಣೆ' ವಿಷಯವಾಗಿ ಪ್ರಥಮ ರಾಷ್ಟ್ರೀಯ ಸಮ್ಮೇಳನದ ಭಾಷಣದಲ್ಲಿ ತಿಳಿಸಿದರು.

- **ಇಡೀ ಸಮಾಜದ ಉನ್ನತಿಗೆ ವಿವಿಧ ಜಾತಿಗಳ ಪ್ರತ್ಯೇಕ ಸಂಘಟನೆ ಅನುಕೂಲಕರ**

ಮಂಗಳೂರು, ಏ. 21– 'ಸ್ವಾತಂತ್ರ್ಯಪೂರ್ವದಲ್ಲಿ ಸ್ವಜನ, ಸ್ವಭಾಷ, ಸ್ವಧರ್ಮ, ಸ್ವದೇಶ ಪ್ರಚಾರದಲ್ಲಿ ಬ್ರಾಹ್ಮಣ ಬಹಳ ದೊಡ್ಡ ಕೆಲಸ ಮಾಡಿದ್ದರಿಂದ ರಾಜಕೀಯ ಮುಕ್ತಿಯನ್ನು ದೇಶ ಕಂಡುಕೊಂಡಿತು. ಆದರೆ ಸ್ವಾತಂತ್ರ್ಯ ನಂತರ ರಾಜಕೀಯ ಮತ್ತು ಅಧಿಕಾರದಾಹ ಹೆಚ್ಚಿ ಗೊಂದಲಮಯ ಜೀವನದಲ್ಲಿ ಸಿಲುಕಿಕೊಂಡಿದ್ದೇವೆ' ಎಂದು ಮಂಗಳ ಗಂಗೋತ್ರಿ ಡೈರೆಕ್ಟರ್ ಪ್ರೊ. ಎಸ್.ವಿ. ಪರಮೇಶ್ವರ ಭಟ್ಟ ಅವರು ಇಂದು ಹೇಳಿದರು.

ಅವರು ಇಲ್ಲಿ ಜಿಲ್ಲಾ ಬ್ರಾಹ್ಮಣರ ಪರಿಷತ್ತನ್ನು ಉದ್ಘಾಟಿಸಿ ಮಾತನಾಡಿದರು.

ಜಾತೀಯ ಸಂಘವನ್ನು ಕಟ್ಟುವುದರಲ್ಲಿ ತಪ್ಪಿಲ್ಲ ಎಂದು ಹೇಳಿದ ಅವರು, 'ಪ್ರತಿ ಜಾತಿಯವರೂ ತಮ್ಮ ತಮ್ಮ ಸಂಘಟನೆಯಿಂದ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಂಡರೆ, ಇಡೀ ಸಮಾಜವೇ ಉನ್ನತಿಯನ್ನು ಹೊಂದುತ್ತದೆ' ಎಂದು ಅಭಿಪ್ರಾಯಪಟ್ಟರು.

ನಮ್ಮಲ್ಲೇ ಟನ್‌ಗಟ್ಟಲೆ ಪ್ಲಾಸ್ಟಿಕ್ ತ್ಯಾಜ್ಯ ಇರುವಾಗ ಅದನ್ನು ಆಮದು ಮಾಡಿಕೊಳ್ಳುವುದೇಕೆ?

ಪ್ಲಾಸ್ಟಿಕ್ ವಿರುದ್ಧ ವಸುಂಧರೆಯ ಸಮರ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

**'ಹೇಳು ಭೂಮಿತಾಯೆ ನೀನು
ಯಾರ ಪಗಡೆಯ ದಾಳ?
ನಿನ್ನ ಮಕ್ಕಳೆಲ್ಲ ನಿನಗೆ
ಬರಿಯ ಶೋಕಮೇಳ'**

ಭೂಮಿಯನ್ನು ಇನ್ನಿಲ್ಲದಂತೆ ಶೋಷಿಸುವ ಮನುಕುಲದ ವಿವೇಚನಾರಹಿತ ನಡೆಯ ಬಗ್ಗೆ ಕವಿ ಗೋಪಾಲಕೃಷ್ಣ ಅಡಿಗರು ಹೀಗೆ ನಮ್ಮನ್ನೆಲ್ಲ ಬಹಳ ಹಿಂದೆಯೇ ಎಚ್ಚರಿಸಿದ್ದರು. ಈಗ ಭೂಮಿಯ ಕ್ಷೇಮದ ಬಗ್ಗೆ ಚಿಂತಿಸುವ 'ವಿಶ್ವ ಭೂಮಿ ದಿನ'ವು (ಏ. 22) ಪ್ಲಾಸ್ಟಿಕ್ ವರ್ಸಸ್ ಭೂಗ್ರಹ ಎಂಬ ತಿರುಳಿನೊಂದಿಗೆ ಮತ್ತೆ ಬಂದಿದೆ. ಇದರ ಬಗ್ಗೆ ವಿದ್ಯಾರ್ಥಿಗಳಿಗೆ ಹೇಳುವಾಗ 'ಸರ್, ಮನುಷ್ಯನ ರಕ್ತದಲ್ಲಿ ಪ್ಲಾಸ್ಟಿಕ್‌ನ ಅಂಶ ದೊರಕಿದೆ, ಇದು ಡೇಂಜರಸ್ ಅಲ್ವಾ?' ಎಂಬ ವಿದ್ಯಾರ್ಥಿಯೊಬ್ಬನ ಗಾಬರಿಯ ಪ್ರಶ್ನೆಗೆ ನನ್ನಲ್ಲಿ ಉತ್ತರವಿತ್ತಾದರೂ ನಮಗೆ ಬೇಕಾದ ಹಾಗೆ ಬಳಸಿ ಬಿಸಾಡುತ್ತಿರುವ ಪ್ಲಾಸ್ಟಿಕ್‌ನಿಂದ ದೊಡ್ಡ ರೀತಿಯ ಪಾರಿಸರಿಕ ಅನನುಕೂಲವಾಗುತ್ತಿದೆ ಮತ್ತು ಅದರ ವಿರುದ್ಧ ನಾವು ಸಾರಿರುವ ವಿಶ್ವಸಮರ ದೊಡ್ಡ ರೀತಿಯಲ್ಲಿ ವಿಫಲವಾಗಿದೆ ಎಂದು ವಿವರಿಸಲು ತುಸು ಹೊತ್ತು ಬೇಕಾಯಿತು.

ಮಾನವರ ರಕ್ತದಲ್ಲಿ ಮೈಕ್ರೊ ಪ್ಲಾಸ್ಟಿಕ್ ಕಣಗಳು ಇರುವುದು ಪತ್ತೆಯಾಗಿ ವರ್ಷವೇ ಆಯಿತು. ಸೃಷ್ಟಿಯ ಎಲ್ಲ ಜಾಗಗಳಲ್ಲಿ ನುಗ್ಗುತ್ತಿರುವ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸುವ ಮತ್ತು ಅದರ ಕಸವನ್ನು ಸರಿಯಾಗಿ ನಿರ್ವಹಿಸುವ ಬಗ್ಗೆ ಎರಡು ದಶಕಗಳಿಂದ ವಿಶ್ವ ವೇದಿಕೆಗಳಲ್ಲಿ ಚರ್ಚೆ, ಒಪ್ಪಂದಗಳು ಆಗುತ್ತಲೇ ಇವೆ. ಭೂಮಿಯನ್ನು ರತ್ನಗರ್ಭ ವಸುಂಧರ ಎನ್ನುತ್ತೇವೆ. ಭೂಮಿಯ ಗರ್ಭದ ಒಳಗೆ ರತ್ನಮುತ್ತುಗಳೇ ತುಂಬಿವೆ ಎಂಬುದು ಇದರ ಅರ್ಥ. ಈಗ ಕೈ ಹಾಕಿದಲ್ಲೆಲ್ಲ ಪ್ಲಾಸ್ಟಿಕ್ ಕಸ ದೊರಕುತ್ತಿದೆ.

ಮೂವತ್ತು ವರ್ಷಗಳಿಂದ ಭಾರಿ ಪ್ರಮಾಣದ ಪ್ಲಾಸ್ಟಿಕ್ ಅನ್ನು ಭೂಮಿಯೊಳಗೆ ತುಂಬಿದ್ದೇವೆ. ಕಸವನ್ನು ಸರಿಯಾಗಿ ವಿಲೇವಾರಿ ಮಾಡದಿರುವ ದೇಶಗಳ ಸೂಚ್ಯಂಕ ಪಟ್ಟಿಯಲ್ಲಿ ನಾವು ನಾಲ್ಕನೆಯ ಸ್ಥಾನದಲ್ಲಿದ್ದೇವೆ. ಹೋದ ವರ್ಷ ನಮ್ಮಲ್ಲಿ ಸರಿಯಾಗಿ ವಿಲೇವಾರಿಯಾಗದ ಪ್ಲಾಸ್ಟಿಕ್ ಕಸದ ಪ್ರಮಾಣ 70 ಲಕ್ಷ ಟನ್‌ಗಳಷ್ಟಿತ್ತು. ಅಂಕಿ ಅಂಶಗಳ ಪ್ರಕಾರ, ನಮ್ಮಲ್ಲಿ ರೀಸೈಕಲ್ ಆಗುತ್ತಿರುವ ಪ್ಲಾಸ್ಟಿಕ್ ಕಸದ ಪ್ರಮಾಣ ಶೇಕಡ 12ರಷ್ಟು ಮಾತ್ರ. ಭಾರತೀಯ ಪ್ರಜೆಯೊಬ್ಬ ವಾರ್ಷಿಕ 5.3 ಕೆ.ಜಿ. ಪ್ಲಾಸ್ಟಿಕ್ ಬಳಸುತ್ತಾನೆ. ವಿಶ್ವದ ಪ್ರಜೆಯ ಸರಾಸರಿ ಪ್ಲಾಸ್ಟಿಕ್‌ನ ಬಳಕೆ 21 ಕೆ.ಜಿ. ಇದೆ.

ಎರಡು ವರ್ಷಗಳ ಹಿಂದೆ ನೈರೋಬಿಯಲ್ಲಿ ನಡೆದ ಯುನೈಟೆಡ್ ನೇಷನ್ಸ್ ಎನ್ವಿರಾನ್‌ಮೆಂಟ್ ಅಸೆಂಬ್ಲಿಯ 5ನೇ ಅಧಿವೇಶನದಲ್ಲಿ ರಾಸಾಯನಿಕಗಳು ಮತ್ತು ತ್ಯಾಜ್ಯ ನಿರ್ವಹಣೆಗಾಗಿ ವೈಜ್ಞಾನಿಕ ನೀತಿಯನ್ನು ರೂಪಿಸಲು 14 ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಅದರಲ್ಲಿ ಪ್ಲಾಸ್ಟಿಕ್ ಮಾಲಿನ್ಯವನ್ನು ಸಂಪೂರ್ಣವಾಗಿ ತಡೆಯುವ ಅಂಶವೂ ಇತ್ತು ಮತ್ತು ಅದನ್ನು ವಿಶ್ವದ ಎಲ್ಲ ದೇಶಗಳು ಕಾನೂನಾತ್ಮಕವಾಗಿ ಪಾಲಿಸಲೇಬೇಕೆಂಬ ಸ್ಪಷ್ಟ ಉಲ್ಲೇಖವಿತ್ತು. ಸಭೆಯಲ್ಲಿ ಭಾಗವಹಿಸಿದ ಎಲ್ಲ ದೇಶಗಳು 2024ರ ವೇಳೆಗೆ ಸಿದ್ಧವಾಗುವ 'ಪ್ಲಾಸ್ಟಿಕ್ ಮಾಲಿನ್ಯ ತಡೆ ನಿರ್ಣಯ'ಕ್ಕೆ ಬದ್ಧರಾಗುತ್ತೇವೆ ಎಂಬ ವಚನ ನೀಡಿವೆ.

ನಾವೆಲ್ಲ ಪ್ಲಾಸ್ಟಿಕ್ ಬಳಸಲು ಶುರು ಮಾಡಿ ಸುಮಾರು ಒಂದು ಶತಮಾನವೇ ಕಳೆದಿದೆ. ಆಳದ ಸಮುದ್ರಗಳಿಂದ ಹಿಡಿದು ಎತ್ತೆತ್ತರದ ಪರ್ವತಗಳಲ್ಲೂ ಪ್ಲಾಸ್ಟಿಕ್ ವಿರಾಜಿಸುತ್ತಿದೆ. ವಿಶ್ವದಲ್ಲಿ ಪ್ರತಿವರ್ಷ 46 ಕೋಟಿ ಟನ್ ಪ್ಲಾಸ್ಟಿಕ್ ಉತ್ಪಾದನೆಯಾಗುತ್ತದೆ. 14 ಲಕ್ಷ ಟನ್ ಪ್ಲಾಸ್ಟಿಕ್ ತ್ಯಾಜ್ಯವು ಸಾಗರದ ತಳ ಸೇರುತ್ತದೆ. ಉತ್ಪಾದನೆಯ ಶೇಕಡ 50ರಷ್ಟು ಪ್ಲಾಸ್ಟಿಕ್ ಏಕಬಳಕೆಯದಾಗಿರುತ್ತದೆ.

ಏಕಬಳಕೆಯ ಪ್ಲಾಸ್ಟಿಕ್ ಲೋಟ, ಕೈಚೀಲ, ಪ್ಯಾಕೇಜಿಂಗ್ ಹಾಳೆಗಳು ಪೃಥ್ವಿಯನ್ನು ಇಂಚಿಂಚಾಗಿ ಕೊಲ್ಲುತ್ತಿವೆ. ನಮ್ಮಲ್ಲಿ ಏಕಬಳಕೆಯ ಪ್ಲಾಸ್ಟಿಕ್ ನಿಷೇಧವನ್ನು ಮೂರು ವರ್ಷಗಳ ಹಿಂದೆಯೇ ಜಾರಿಗೆ ತರಲಾಗಿದೆ. ಒಟ್ಟು ಕಸದಲ್ಲಿ ಕಾಲು ಭಾಗವನ್ನು ದಹಿಸುತ್ತೇವೆ. ಉಳಿದದ್ದರಲ್ಲಿ ಅರ್ಧ ಭೂಭರ್ತಿಯಾದರೆ ಇನ್ನರ್ಧವು ಸಾಗರಗಳ ಪಾಲಾಗುತ್ತದೆ.

ರೀಸೈಕಲ್ ಮಾಡಿಬಿಟ್ಟರೆ ಸಮಸ್ಯೆ ಬಗೆಹರಿಯುತ್ತದೆ ಎನ್ನುವವರಿಗೆ ಅದು ಅಷ್ಟು ಸುಲಭವಲ್ಲ ಎಂದು 'ಕ್ಲೈಮೇಟ್ ಇಂಟೆಗ್ರಿಟಿ' ಎಂಬ ಅಂತರರಾಷ್ಟ್ರೀಯ ಸಂಸ್ಥೆ ಇತ್ತೀಚೆಗೆ ತೀಕ್ಷ್ಣ ಹೇಳಿಕೆ ನೀಡಿದೆ. ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ತ್ಯಾಜ್ಯದ ಸಂಪೂರ್ಣ ರೀಸೈಕ್ಲಿಂಗ್ ಸಾಧ್ಯವಿಲ್ಲ ಎಂಬುದು ತಿಳಿದಿದ್ದರೂ ರೀಸೈಕಲ್ ಮಾಡಬಹುದು ಎಂಬ ಸುಳ್ಳನ್ನು ಸರ್ಕಾರಗಳು ಮೂವತ್ತು ವರ್ಷಗಳಿಂದ ಹೇಳುತ್ತಲೇ ಬಂದಿವೆ. ತಮ್ಮ ವ್ಯವಹಾರ ವೃದ್ಧಿಸಿಕೊಳ್ಳಲು ಕಂಪನಿಗಳು ಸುಳ್ಳು ಹೇಳಬಹುದು. ಅದರ ಬಗ್ಗೆ ಚಕಾರವೆತ್ತದ ಸರ್ಕಾರಗಳಿಗೆ ಏನು ಹೇಳುವುದು? ಉತ್ಪಾದನೆಗೆ ಖರ್ಚಾಗುವುದಕ್ಕಿಂತ ಹೆಚ್ಚಿನ ವಿದ್ಯುತ್ತು ಮತ್ತು ಇತರ ಸಂಪನ್ಮೂಲಗಳು ರೀಸೈಕ್ಲಿಂಗ್‌ಗೆ ಬೇಕು ಎಂದು ಗೊತ್ತಿದ್ದ ಮೇಲೂ ತಜ್ಞರು ಏಕೆ ಸುಮ್ಮನಿದ್ದಾರೆ?

ಬಳಸಿ ಬಿಸಾಡಿರುವ ಪ್ಲಾಸ್ಟಿಕ್‌ನಲ್ಲಿ ಬರೀ ಶೇಕಡ 10ರಷ್ಟನ್ನು ರೀಸೈಕಲ್ ಮಾಡಬಹುದು. ಕಸ ವಿಲೇವಾರಿಯ ಸಮರ್ಥ ವ್ಯವಸ್ಥೆಗಳಿಲ್ಲದ ಊರುಗಳಲ್ಲಿ ಜನರು ಮನೆಯ ಮುಂದೆ, ರಸ್ತೆಯ ಪಕ್ಕದಲ್ಲಿ ಎಸೆದು ಬೆಂಕಿ ಹಚ್ಚಿ ವಿಷಗಾಳಿಯನ್ನು ಉಸಿರಾಡುತ್ತಾರೆ. ಪ್ಲಾಸ್ಟಿಕ್ ಉತ್ಪಾದನೆ ಮತ್ತು ರೀಸೈಕಲ್‌ವರೆಗಿನ ಅವಧಿಯಲ್ಲಿ ಹೊಮ್ಮುವ 200 ಕೋಟಿ ಟನ್ ಶಾಖವರ್ಧಕ ಅನಿಲಗಳು ಭೂಮಿಯ ಬಿಸಿಯನ್ನು ತ್ವರಿತವಾಗಿ ಏರಿಸುತ್ತವೆ. ಇದರ ತಡೆಗಾಗಿ 300 ಶತಕೋಟಿ ಡಾಲರ್ ಹಣ ವ್ಯಯವಾಗುತ್ತಿದೆ. ಪ್ರತಿವರ್ಷ 'ಪ್ಲಾಸ್ಟಿಕ್ ಓವರ್‌ಶೂಟ್ ಡೇ' ಎಂಬ ದಿನ ಸದ್ದಿಲ್ಲದೇ ಬಂದು ಹೋಗುತ್ತದೆ. ನಿರ್ವಹಿಸಲಾಗದಷ್ಟು ಪ್ಲಾಸ್ಟಿಕ್ ಕಸ ಉತ್ಪಾದನೆಯಾಗುವ ದಿನವನ್ನು ಹಾಗೆ ಕರೆಯಲಾಗುತ್ತದೆ. ಹಿಂದಿನ ಜನವರಿ ಆರರಂದು ನಮ್ಮ ದೇಶ ಆ ದಿನಕ್ಕೆ ಸಾಕ್ಷಿಯಾಗಿತ್ತು.

ಶೇಕಡ 99ರಷ್ಟು ಪ್ಲಾಸ್ಟಿಕ್ ಅನ್ನು ಪೆಟ್ರೊ ರಾಸಾಯನಿಕಗಳಿಂದ ಉತ್ಪಾದಿಸಲಾಗುತ್ತದೆ. ಪ್ಲಾಸ್ಟಿಕ್ ಮಾಲಿನ್ಯ ತಡೆ ನಿರ್ಣಯಕ್ಕೆ ದೇಶಗಳು ಒಪ್ಪಿಗೆ ನೀಡುವುದನ್ನು ಪೆಟ್ರೊ ಕೆಮಿಕಲ್ ಕಂಪನಿಗಳು ಒಪ್ಪುತ್ತಿಲ್ಲ. ನೈರೋಬಿಯ ಸಭೆಯ ನಿರ್ಣಯ ಭೂಮಿಯ ಸ್ವಾಸ್ಥ್ಯಕ್ಕಾಗಿ ನಾವು ಮಾಡುವ ತ್ಯಾಗ ಎಂದು ಗೊತ್ತಿದ್ದರೂ ಉತ್ಪಾದನೆಗೆ ಕಚ್ಚಾ ಸಾಮಗ್ರಿ ಒದಗಿಸುವ ತೈಲ, ಅನಿಲ ಮತ್ತು ಕಲ್ಲಿದ್ದಲು ಕ್ಷೇತ್ರಗಳು ಒಲವು ತೋರಿಸುತ್ತಿಲ್ಲ.

ಹೇಗಾದರೂ ಮಾಡಿ ಇದನ್ನು ನಿತ್ರಾಣಗೊಳಿಸಬೇಕಲ್ಲ ಎಂದು ಚಿಂತಿಸುವ ಉದ್ಯಮ ಮುಂದಾಳುಗಳು, ನಾವು ಪ್ಲಾಸ್ಟಿಕ್ ಅನ್ನು ಇಂಧನವನ್ನಾಗಿ ಪರಿವರ್ತಿಸುತ್ತೇವೆ ಅಂತಲೋ ವಾತಾವರಣಕ್ಕೆ ಹಾನಿಯಾಗದಂತೆ ದಹಿಸುತ್ತೇವೆ ಅಂತಲೋ ಅರೆಬೆಂದ ಪರಿಹಾರ ಸೂಚಿಸುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ಯೂನಿಲಿವರ್ ಕಂಪನಿಯವರು ಪ್ಲಾಸ್ಟಿಕ್ ಚೀಲದ ಪೊಟ್ಟಣಗಳನ್ನು ಸುರಕ್ಷಿತವಾದ ರೀತಿಯಲ್ಲಿ ತೈಲವನ್ನಾಗಿ ಪರಿವರ್ತಿಸುತ್ತೇವೆ ಎಂದು ಇಂಡೊನೇಷ್ಯಾದಲ್ಲಿ ಭಾರಿ ಉಮೇದಿನಿಂದ ಕಂಪನಿ ಪ್ರಾರಂಭಿಸಿದ್ದರು. ಈಗ ಅದು ಕೆಲಸ ನಿಲ್ಲಿಸಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಿಸಲು ನಮ್ಮಲ್ಲಿ 'ಎಕ್ಸ್‌ಟೆಂಡೆಡ್ ಪ್ರೊಡ್ಯೂಸರ್ ರೆಸ್ಪಾನ್ಸಿಬಿಲಿಟಿ' (ಇಪಿಆರ್) ನೀತಿಯನ್ನು ಜಾರಿಗೊಳಿಸಲಾಗಿದೆ. ಇದರ ಪ್ರಕಾರ, ಯಾವುದೇ ಕಂಪನಿಯು ಒಂದು ವರ್ಷದಲ್ಲಿ ಎಷ್ಟು ಪ್ಲಾಸ್ಟಿಕ್ ಉತ್ಪಾದಿಸುತ್ತದೆಯೋ ಅಷ್ಟೇ ಪ್ರಮಾಣದ ಕಸವನ್ನು ಹಿಂಪಡೆಯಬೇಕು. ಸರಿಯಾಗಿ ಪಾಲಿಸುವ ಕಂಪನಿಗಳಿಗೆ 'ಇನಾಮು' ನೀಡಲಾಗುತ್ತದೆ. ಒಂದುವೇಳೆ ಉತ್ಪಾದಿಸಿದ್ದಕ್ಕಿಂತ ಹೆಚ್ಚು ಕಸ ಸಂಗ್ರಹಿಸುವ ಕಂಪನಿಗಳು ತಮಗೆ ಸಿಗುವ ಇನಾಮನ್ನು ಅಷ್ಟಾಗಿ ಕಸ ಸಂಗ್ರಹಿಸದ ಕಂಪನಿಗಳಿಗೆ ವರ್ಗಾಯಿಸಿ ಹಣ ಸಂಪಾದಿಸಬಹುದು.

2015ರಲ್ಲಿ ಪ್ಲಾಸ್ಟಿಕ್ ಕಸದ ಆಮದನ್ನು ನಿಷೇಧಿಸಿದ್ದ ಕೇಂದ್ರ ಸರ್ಕಾರವು ನಾಲ್ಕು ವರ್ಷಗಳ ನಂತರ ನಿಷೇಧವನ್ನು ತೆಗೆದುಹಾಕಿದೆ. 2022ರಲ್ಲಿ 80 ಸಾವಿರ ಟನ್‌ನಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ನಾವು ಮರುಬಳಕೆಗಾಗಿ, ಅದು ಸೋವಿ ಎಂಬ ಕಾರಣಕ್ಕೆ, ಬೇರೆ ದೇಶಗಳಿಂದ ಆಮದು ಮಾಡಿಕೊಂಡಿದ್ದೆವು. ನಾವೇ ಪ್ರತಿನಿತ್ಯ 26 ಸಾವಿರ ಟನ್ ಪ್ಲಾಸ್ಟಿಕ್ ಕಸ ಉತ್ಪಾದಿಸುತ್ತೇವೆ. ವಾಸ್ತವ ಹೀಗಿರುವಾಗ ಹೊರಗಿನಿಂದ ಏಕೆ ಆಮದು ಮಾಡಿಕೊಳ್ಳಬೇಕು?

ಪುನರ್‌ಬಳಕೆ ಮಾಡಲಾಗದ ಪ್ಲಾಸ್ಟಿಕ್ ಉತ್ಪಾದನೆಯನ್ನು ತತ್‌ಕ್ಷಣದಿಂದ ನಿಲ್ಲಿಸಬೇಕು. ಇಪಿಆರ್ ಅನ್ನು ಮತ್ತಷ್ಟು ಬಿಗಿಗೊಳಿಸಬೇಕು. ಅಂತರರಾಷ್ಟ್ರೀಯ ಒಪ್ಪಂದಗಳನ್ನು ಚಾಚೂತಪ್ಪದೆ ಪಾಲಿಸಬೇಕು. ವಿಶ್ವದೆಲ್ಲೆಡೆ ಏಕಬಳಕೆಯ ಪ್ಲಾಸ್ಟಿಕ್‌ನ ಸಂಪೂರ್ಣ ನಿಷೇಧ ಆಗಬೇಕು. ಅನಗತ್ಯ ಉತ್ಪನ್ನಗಳ ತಯಾರಿಕೆ ಮತ್ತು ಅತಿಯಾಗಿ ಪ್ಯಾಕ್ ಮಾಡುವುದನ್ನು ನಿಲ್ಲಿಸಬೇಕು. ಕಡಿಮೆ ಸಂಪನ್ಮೂಲ ಬಳಸುವ ವಸ್ತುವಿನ್ಯಾಸವನ್ನು ರೂಪಿಸಬೇಕು.

ಚುರುಮುರಿ

ದುಡ್ಡಿನ ಗಿಡ ನೆಟ್ಟವರು

• ಸುಮಂಗಲಾ

'ನಿನ್ ಹತ್ರ ಎಷ್ಟ್ ಕೋಟಿ ದುಡ್ಡು ಐತಿ?' ಬೆಕ್ಕಣ್ಣ ಬಲು ಗಂಭೀರವಾಗಿ ಕೇಳಿದಾಗ ನಾನು ಕಕ್ಕಾಬಿಕ್ಕಿಯಾದೆ.

'ಕೋಟಿ... ನನ್ ಹತ್ರ? ತಿಂಗಳ ಕೊನಿಗೆ ಸಾವಿರ ಉಳಿದ್ರೆ ಹೆಚ್ಚು' ಎಂದು ತಡವರಿಸಿದೆ.

'ನೀ ವಯಸ್ಸಿನಾಗೆ ಅರ್ಧಶತಕ ಬಾರಿಸಿದಿ... ಇನಾ ತನಾ ಒಂದ್ ಕೋಟಿ ರೂಪಾಯಿ ದುಡಿದಿಲ್ಲ. ನೋಡು... ಐದು ತಿಂಗಳ ಕೂಸು ಕೋಟ್ಯಾಧಿಪತಿ ಆಗೈತಿ. 240 ಕೋಟಿ ರೂಪಾಯಿ ಆಸ್ತಿ ಮಾಡೈತಿ!' ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

'ಇನ್ನೂ ನೆಟ್ಟಗೆ ನಿಲ್ಲಕ್ಕೂ ಬರದ ಐದು ತಿಂಗಳ ಕೂಸು 240 ಕೋಟಿ ಹೆಂಗೆ ದುಡಿತಲೇ?' ನನಗೆ ನಂಬಿಕೆಯೇ ಆಗಲಿಲ್ಲ.

'ನಮ್ ಮೂರ್ತಿ ಅಜ್ಜಾರು ಅವರ ಮೊಮ್ಮಗನಿಗೆ 15 ಲಕ್ಷ ಇನ್ಫೊಸಿಸ್ ಷೇರು ಕೊಟ್ಟಾರಂತೆ. ಅದರ ಬೆಲೆ 240 ಕೋಟಿ ರೂಪಾಯಿ ಅಂತೆ. ಆ ಕೂಸು ಈಗ ಅತ್ಯಂತ ಕಿರಿಯ ಭಾರತೀಯ ಮಿಲಿಯನೇರ್!' ಬೆಕ್ಕಣ್ಣ ಸುದ್ದಿ ತೋರಿಸಿತು.

'ಅಬ್ಬಬ್ಬಾ... ಈ ಕೂಸು ಆಗಲೇ ವಾರಕ್ಕೆ 70 ತಾಸು ದುಡಿಲಾಕೆ ಶುರುಮಾಡೈತಿ ನೋಡು!' ಎಂದು ನಾ ಮೂಗಿನ ಮೇಲೆ ಬೆರಳಿಟ್ಟೆ.

'ಈ ಕೂಸಿಗೇನೋ ಅಜ್ಜಾರು ಷೇರು ಕೊಟ್ಟಾರೆ, ಕೋಟ್ಯಾಧಿಪತಿ ಆಗೈತಿ. ನಮ್ ಸಂಸದರು, ಶಾಸಕರ ಆಸ್ತಿ ಚುನಾವಣೆ ಗೆದ್ದ ಐದು ವರ್ಷದಾಗೆ ಕೋಟಿಗಟ್ಟಲೆ ಹೆಚ್ಚಾಗತೈತಲ್ಲ, ಅದೆಂಗೆ ಅಂತ?!' ಬೆಕ್ಕಣ್ಣನೂ ಮೂಗಿನ ಮೇಲೆ ಬೆರಳಿಟ್ಟು ಕೇಳಿತು.

'ಅದೇ ನನಗೂ ತಿಳಿವಲ್ದು. 2019ರ ಚುನಾವಣೆಯಲ್ಲಿ 430 ಕೋಟ್ಯಾಧಿಪತಿ ಅಭ್ಯರ್ಥಿಗಳು ಇದ್ದರಂತೆ. ಈ ಸಲ 450 ಅದಾರಂತೆ. ಈ ಎಲ್ಲಾ ಕೋಟ್ಯಾಧಿಪತಿ ಅಭ್ಯರ್ಥಿಗಳ ಆಸ್ತಿ ಕಳೆದ ಚುನಾವಣೆಯಲ್ಲಿ ಘೋಷಣೆ ಮಾಡಿದ್ದಕ್ಕಿಂತ ಡಬಲ್, ಟ್ರಿಪಲ್ ಆಗೈತಂತೆ'.

'ಯಾವ ಪಕ್ಷದವರೇ ಆದರೂ, ಗೆದ್ದ ಕೂಡಲೇ ದುಡ್ಡಿನ ಗಿಡ ನೆಡಾಕೆ ಶುರು ಮಾಡ್ತಾರೆ. ನಮ್ ರೈತರಿಗೂ ಒಂದಾದರೂ ದುಡ್ಡಿನ ಗಿಡದ ಸಸಿ ಕೊಟ್ಟಿದ್ರ ಛಲೋ ಇತ್ತು!' ಎಂದಿತು ಬೆಕ್ಕಣ್ಣ.

ಸಂಗತ

ಸಂತ್ರಸ್ತರ ಸುತ್ತ ಮೇಲಾಟದ ಹುತ್ತ

ದೇಶದ ರಾಜಕಾರಣವನ್ನು ನಿರ್ದೇಶಿಸುವ ಪುರುಷಾಧಿಪತ್ಯದ ನೆಲೆಗಳಲ್ಲಿ ಸಂತ್ರಸ್ತೆಯರು ವಸ್ತುಗಳಾಗಿ ಕಾಣುತ್ತಾರೆಯೇ ವಿನಾ ಸಂತ್ರಸ್ತ ಜೀವಗಳಾಗಿ ಅಲ್ಲ

• ನಾ.ದಿವಾಕರ

ಹುಬ್ಬಳ್ಳಿಯ ಕಾಲೇಜೊಂದರ ಕ್ಯಾಂಪಸ್‌ನಲ್ಲಿ ನೇಹಾ ಹಿರೇಮಠ ಎಂಬ ವಿದ್ಯಾರ್ಥಿನಿಯ ಘೋರ ಹತ್ಯೆ ನಡೆದಿರುವುದು ನಮ್ಮ ಸಮಾಜದ ಎರಡು ಕ್ರೂರ ಚಹರೆಗಳನ್ನು ತೋರಿಸುತ್ತದೆ. ಮೊದಲನೆಯದು, ಪಿತೃಪ್ರಧಾನ ಮನಸ್ಥಿತಿಯನ್ನು ಮೈಗೂಡಿಸಿಕೊಂಡಿರುವ ಆಧುನಿಕ ಸಮಾಜದಲ್ಲೂ ಮಹಿಳೆಗೆ ಪ್ರೀತಿಯನ್ನು ನಿರಾಕರಿಸುವ ಹಕ್ಕು ಇಲ್ಲದಿರುವುದು. ಹಾಗೊಮ್ಮೆ ನಿರಾಕರಿಸಿದರೂ ಪರಿಸ್ಥಿತಿಯ ವಿಕೋಪಕ್ಕೆ ತುತ್ತಾಗಬೇಕಾಗಿರುವ ವಾಸ್ತವ. ಎರಡನೆಯದು, ದೇಶದ ಭವಿಷ್ಯದ ಬುನಾದಿ ಎಂದು ಭಾವಿಸಲಾಗುವ ಈ ಕಾಲದ ಗಂಡುಮಕ್ಕಳಲ್ಲಿ ಆಳವಾಗಿ ಬೇರೂರಿರುವ ಅಸಹನೆ, ಕ್ರೌರ್ಯ ಮತ್ತು ಹಿಂಸಾಪ್ರವೃತ್ತಿ.

ಹತ್ಯೆಗೀಡಾಗಿರುವ ನತದೃಷ್ಟೆ ನೇಹಾ, ಕ್ರೂರವಾಗಿ ಹತ್ಯೆ ಮಾಡಿರುವ ಫಯಾಜ್ ಇಬ್ಬರೂ ಸುಶಿಕ್ಷಿತ ಕುಟುಂಬಗಳ ಸದಸ್ಯರಾಗಿರುವುದು, ಈ ಎರಡೂ ಆಯಾಮಗಳಿಗೆ ಮತ್ತೊಂದು ಮಜಲನ್ನು ಸೃಷ್ಟಿಸುತ್ತದೆ.

ಈ ತ್ರಿಕೋನ ದೃಷ್ಟಿಕೋನಗಳ ನಡುವೆ ನಾವು ಗುರುತಿಸಬೇಕಾಗಿರುವುದು, ಪ್ರಕರಣ ನಡೆದ ಕೂಡಲೇ ಅದನ್ನು 'ಲವ್ ಜಿಹಾದ್' ಎಂದು ಬಣ್ಣಿಸುವ ಮೂಲಕ ಇಡೀ ಪ್ರಕರಣಕ್ಕೆ ರಾಜಕೀಯ ಸ್ವರೂಪ ನೀಡುವ ಮಹತ್ವಾಕಾಂಕ್ಷಿ ರಾಜಕಾರಣ. ಎಂತಹ ಅಮಾನುಷ ಘಟನೆಯಾದರೂ ಸಂತ್ರಸ್ತೆ, ಹಂತಕ ಅಥವಾ ಅತ್ಯಾಚಾರಿಯ ಧಾರ್ಮಿಕ, ಜಾತಿ ಅಸ್ಮಿತೆಯನ್ನಾಧರಿಸಿ ಪ್ರತಿಭಟನೆ ನಡೆಸುವ, ನ್ಯಾಯಕ್ಕಾಗಿ ಆಗ್ರಹಿಸುವ ಒಂದು ಕೆಟ್ಟ ರಾಜಕೀಯ ಪರಂಪರೆಗೆ ಭಾರತೀಯ ಸಮಾಜ ಎಡೆಮಾಡಿಕೊಟ್ಟಿರುವುದು ನೇಹಾ ಪ್ರಕರಣದಲ್ಲಿ ಮತ್ತೊಮ್ಮೆ ಸಾಬೀತಾಗಿದೆ.

ಮಥುರಾದಿಂದ ಹುಬ್ಬಳ್ಳಿಯವರೆಗೆ ಸಮಕಾಲೀನ ಭಾರತದ ಚರಿತ್ರೆಯನ್ನು ಗಮನಿಸಿದಾಗ, ಅಮಾಯಕ ಮಹಿಳೆ ಹೀಗೆ ಒಬ್ಬ ವಿಕೃತ ಪುರುಷನ ಅಥವಾ ಮತಾಂಧ-ಪುಂಡ ಗುಂಪಿನ ಕಾಮತೃಷೆಗೆ, ದ್ವೇಷಕ್ಕೆ, ಅಸಹನೆಗೆ ಬಲಿಯಾಗಿರುವ ಪ್ರಕರಣಗಳು ಹೇರಳವಾಗಿ ಕಾಣುತ್ತವೆ.

ಒಂದು ಆರೋಗ್ಯಕರ ಸಮಾಜವನ್ನು ಕಾಡಬೇಕಿರುವ ಪ್ರಶ್ನೆಗಳೆಂದರೆ, ನೇಹಾ ಏಕೆ ಹತ್ಯೆಗೀಡಾಗಿದ್ದಾಳೆ? ಅವಳು ಮಾಡಿದ ಅಪರಾಧವಾದರೂ ಏನು? ಕಾಲೇಜಿನಲ್ಲಿ ಓದುತ್ತಿದ್ದ ಒಬ್ಬ ಯುವತಿ ಏಕೆ ಈ ಬಗೆಯ ಕ್ರೌರ್ಯಕ್ಕೆ ಬಲಿಯಾಗಿದ್ದಾಳೆ? ಏನೂ ಅರಿಯದ ವಯಸ್ಸಲ್ಲದಿದ್ದರೂ ಬದುಕಿಗೆ ಇನ್ನೂ ಕಣ್ತೆರೆಯದ ಹರೆಯದಲ್ಲಿ ಏಕೆ ಹೆಣ್ಣುಮಕ್ಕಳು ವಿಶಾಲ ಸಮಾಜದ ಪುರುಷ ಅಹಮಿಕೆಗೆ ತುತ್ತಾಗುತ್ತಾರೆ? ಇವೆಲ್ಲವೂ ಸಮಾಜಶಾಸ್ತ್ರಜ್ಞರು ಆಳವಾಗಿ ವಿಶ್ಲೇಷಿಸಬೇಕಾದ ವಿಚಾರಗಳು.

'ನಾಗರಿಕ' ಎಂದು ಗುರುತಿಸಿಕೊಳ್ಳುವ ಒಂದು ಆಧುನಿಕ, ಸುಶಿಕ್ಷಿತ, ಹಿತವಲಯದ ಸಮಾಜವು ಇಂತಹ ಅಮಾನುಷ ಕೃತ್ಯಕ್ಕೆ ಏಕೆ ಅವಕಾಶ ಕಲ್ಪಿಸುತ್ತದೆ? ನಿರ್ಭಯಾಳಿಂದ ನೇಹಾವರೆಗೂ ಇಂತಹ ಭೀಕರ ಪ್ರಕರಣಗಳು ಸಂಭವಿಸಿದಾಗ ಇದೇ ಸಮಾಜದ ಸಂಯಮ, ಸೌಜನ್ಯ ಮತ್ತು ಸಂವೇದನೆ ಏಕೆ ಮುನ್ನೆಲೆಗೆ ಬರುವುದಿಲ್ಲ? ಸಂತ್ರಸ್ತೆಯಲ್ಲೇ ತಪ್ಪು ಹುಡುಕುವುದರಿಂದ ಹಿಡಿದು ಆರೋಪಿಯನ್ನು ಯಾವುದೋ ಒಂದು ಸಮುದಾಯದ ನಡುವೆ ನಿಲ್ಲಿಸುವ ಕೆಟ್ಟ ಮನಃಸ್ಥಿತಿಗೆ ಸಮಾಜ ಏಕೆ ಹೊರಳುತ್ತದೆ? ಇವೆಲ್ಲವೂ ನಾಗರಿಕರು ಯೋಚಿಸಬೇಕಾದ ವಿಚಾರಗಳು.

ನೇಹಾ, ಸೌಜನ್ಯ, ದಾನಮ್ಮ, ನಿರ್ಭಯಾಳಂತಹ ಅಮಾಯಕರು ಏಕೆ ಸುಲಭದ ತುತ್ತಾಗುತ್ತಾರೆ? ಜಾತಿ, ಅಂತಸ್ತು, ಧರ್ಮದ ಚೌಕಟ್ಟುಗಳನ್ನು ಮೀರಿ ವಿಶಾಲ ಸಮಾಜದ ನಡುವೆ ನಿಂತು ನೋಡಿದಾಗ, ಈ ಮಹಿಳೆಯರ ಸುತ್ತ ನಾವು ಕಟ್ಟಿರುವ ಸಾಂಸ್ಕೃತಿಕ ಬದುಕಿನಲ್ಲಿ ಎದ್ದುಕಾಣುವಂತಹ ಕೆಲವು ಅವಲಕ್ಷಣಗಳನ್ನು ಗುರುತಿಸಲು ಸಾಧ್ಯ. ಮಹಿಳೆಗೆ ಯಾವುದೇ ವಿಚಾರದಲ್ಲಾದರೂ ಆಯ್ಕೆಯ ಸ್ವಾತಂತ್ರ್ಯವನ್ನು ನಿರಾಕರಿಸುವ ಸಾಂಪ್ರದಾಯಿಕ ಮನಸ್ಥಿತಿ, ಸಮಾಜದ ಕಟ್ಟುಪಾಡುಗಳನ್ನು ಧಿಕ್ಕರಿಸುವ ಮಹಿಳೆ ಸದಾ ಶಿಕ್ಷಾರ್ಹಳು ಎಂದು ಭಾವಿಸುವ ಪ್ರಾಚೀನ ಮನೋಭಾವ, ತನ್ನಿಚ್ಛೆಯಂತೆ ನಡೆಯಲು ಬಯಸುವ ಮಹಿಳೆಯನ್ನು ಓರೆಗಣ್ಣಿನಿಂದ ನೋಡುವ ಮಡಿವಂತಿಕೆಯ ಧೋರಣೆ ಮತ್ತು ಇವೆಲ್ಲ ಗುಣಗಳನ್ನೂ ನಿಯಂತ್ರಿಸಿ ನಿರ್ದೇಶಿಸುವ ಪ್ರಾಚೀನ ಸಮಾಜದ ಪಿತೃಪ್ರಧಾನ, ಪುರುಷ ಪಾಳೆಗಾರಿಕೆ ಹಾಗೂ ಯಜಮಾನಿಕೆಯ ಸಂಸ್ಕೃತಿಯಂತಹ ಅವಲಕ್ಷಣಗಳು ಕಾಣುತ್ತವೆ.

ಸಮಾಜ ಸುಧಾರಣೆ ಮತ್ತು ಮಹಿಳಾ ಸಬಲೀಕರಣದ ಹಾದಿಯಲ್ಲಿ ಶತಮಾನಗಳನ್ನು ಸವೆಸಿರುವ ಭಾರತೀಯ ಸಮಾಜವು 21ನೇ ಶತಮಾನದ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಡಿಜಿಟಲ್ ಯುಗವನ್ನು ಪ್ರವೇಶಿಸಿದ್ದರೂ ಈ ಅವಲಕ್ಷಣಗಳನ್ನು ತೊಡೆದುಹಾಕಲು ಸಾಧ್ಯವಾಗದಿರುವುದು ನಮ್ಮ ಮುಂದಿನ ಸವಾಲಾಗಬೇಕಿದೆ. ದೇಶದ ರಾಜಕಾರಣವನ್ನು ನಿರ್ದೇಶಿಸುವ ಪುರುಷಾಧಿಪತ್ಯದ ನೆಲೆಗಳಲ್ಲಿ ನೇಹಾ, ದಾನಮ್ಮ, ಸೌಜನ್ಯ ಎಲ್ಲರೂ ವಸ್ತುಗಳಾಗಿ ಕಾಣುತ್ತಾರೆಯೇ ವಿನಾ ಸಂತ್ರಸ್ತ ಜೀವಗಳಾಗಿ ಅಲ್ಲ. ಈ ವಸ್ತುಗಳ ಸುತ್ತ ಕಟ್ಟಲಾಗುವ ನಿರೂಪಣೆಗಳು ಅವುಗಳಿಂದಾಗುವ ರಾಜಕೀಯ ಲಾಭ, ನಷ್ಟದತ್ತ ಗಮನಹರಿಸುತ್ತವೆ. ಹಾಗಾಗಿಯೇ ಸಾಂಸ್ಕೃತಿಕ ನೆಲೆಗಳಲ್ಲಿ ಮಹಿಳೆಗೆ ಸೂಚಿಸಲಾಗುವ ಘನತೆ, ಗೌರವ ಎಲ್ಲವೂ ಆಲಂಕಾರಿಕ ಆಗಿಬಿಡುತ್ತವೆ. ನೇಹಾಳ ಸಾವು ರಾಜಕೀಯ ನಾಯಕರಿಗೆ ಚುನಾವಣಾ ಬಂಡವಾಳ ಆಗುತ್ತದೆ. ಫಯಾಜ್‌ನ ಅಪರಾಧವು ಕಾನೂನು ಸರಪಳಿಗಳಲ್ಲಿ ಮರೆಯಾಗಿಬಿಡುತ್ತದೆ.

ಆದರೆ ಇಂತಹ ಪ್ರಕರಣಗಳ ಹಿಂದಿರುವ ಪುರುಷ ಅಹಮಿಕೆ ಮತ್ತು ಅದನ್ನು ಪೋಷಿಸುವ ಪಿತೃಪ್ರಧಾನ ಪಾಳೆಗಾರಿಕೆ ಮನಸ್ಥಿತಿ ಯಥಾಸ್ಥಿತಿಯಲ್ಲಿ ಇರುತ್ತದೆ. ನೇಹಾಳಂತಹವರು ಬಲಿಯಾಗುವುದು ಈ ಸಂಸ್ಕೃತಿಗೆ.

ವಾಚಕರ ವಾಣಿ

ನಮ್ಮ ಯುವಜನ ಕಲಿಯುತ್ತಿರುವುದೇನು?

ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಪ್ರಜ್ಞಾವಂತ ಸಮಾಜವನ್ನು ಬೆಚ್ಚಿಬೀಳಿಸಿದೆ. ಆರೋಪಿಗೆ ಕಠಿಣ ಶಿಕ್ಷೆ ಆಗಲೇಬೇಕು. ಪ್ರೀತಿಯ ಹೆಸರಿನಲ್ಲಿ ಕಾಲೇಜು ಕ್ಯಾಂಪಸ್‌ನಲ್ಲಿಯೇ ನಡೆದಿರುವ ಈ ಕೊಲೆಯು ಕಾಲೇಜು ಶಿಕ್ಷಣದ ನೈತಿಕ ಮೌಲ್ಯಗಳ ಪಾಠವನ್ನು ಪ್ರಶ್ನೆ ಮಾಡುವಂತಿದೆ.

ರಾಜ್ಯದ ಯುವಕ- ಯುವತಿಯರು ಏನನ್ನು ಕಲಿಯುತ್ತಿದ್ದಾರೆ? ಇಂದು ಮೌಲ್ಯಗಳು ಎಲ್ಲಿವೆ? ತಂದೆ- ತಾಯಿ, ಗುರುಹಿರಿಯರು, ಹೆಣ್ಣುಮಕ್ಕಳು, ವೃದ್ಧರು, ಅಂಗವಿಕಲರನ್ನು ಗೌರವಿಸುವ ನೈತಿಕ ಮೌಲ್ಯಗಳ ಪಾಠ ಶಿಕ್ಷಣದಿಂದ ದೂರವಾಗುತ್ತಿದೆ. ಬರೀ ವ್ಯಾವಹಾರಿಕ, ವೃತ್ತಿಪರತೆಯ ಪಠ್ಯಕ್ರಮಗಳು ಶಿಕ್ಷಣದಲ್ಲಿ ಸೇರ್ಪಡೆಯಾಗಿವೆ. ಮೌಲ್ಯಗಳೇ ಇಲ್ಲದ ಅಂಕಗಳ ಯಂತ್ರದಂತಹ ಯುವ ಸಮುದಾಯ ತಯಾರಾಗುತ್ತಿದೆ. ಇದಕ್ಕೆ ಜ್ವಲಂತ ಉದಾಹರಣೆ, ನೇಹಾ ಕೊಲೆ.

ಅಂಬರೀಷ್ ಎಸ್. ಪೂಜಾರಿ, ವಿಜಯಪುರ

ಪಠ್ಯೇತರ ಪ್ರಶ್ನೆ: ಮರುಪರೀಕ್ಷೆ ಸೂಕ್ತ

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಇತ್ತೀಚೆಗೆ ನಡೆದ ಸಿಇಟಿಯಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನಿರ್ಲಕ್ಷ್ಯದಿಂದ ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಸೇರಿ ವಿದ್ಯಾರ್ಥಿಗಳು ಪರದಾಡಬೇಕಾಗಿ ಬಂದದ್ದು ಬಹಳ ಬೇಸರದ ಸಂಗತಿ. ಸಿಇಟಿಯಲ್ಲಿ ಬರೀ ಒಂದೆರಡು ಅಂಕಗಳ ವ್ಯತ್ಯಾಸದಿಂದಲೇ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರಿ ಬದಲಾವಣೆ ಆಗುತ್ತದೆ. ಹೀಗಾಗಿ, ವಿದ್ಯಾರ್ಥಿಗೆ ಸಿಇಟಿಯ ಪ್ರತಿ ಅಂಕವೂ ಮುಖ್ಯವಾಗಿರುತ್ತದೆ.

ಕೆಲವು ವರ್ಷಗಳ ಹಿಂದಿನಿಂದಲೂ ಇಂತಹ ತಪ್ಪುಗಳು ನಡೆಯುತ್ತಲೇ ಇವೆ. ಇದಕ್ಕೆ ಕಾರಣವೇನು, ಯಾರು ಹೊಣೆ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಪಣಕ್ಕಿಟ್ಟು ಅದರೊಂದಿಗೆ ಚೆಲ್ಲಾಟವಾಡುತ್ತಿರುವವರು ಮತ್ತು ಪ್ರಶ್ನೆಪತ್ರಿಕೆಗಳನ್ನು ಈ ರೀತಿ ಸಿದ್ಧಪಡಿಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆಗಳು ಎದುರಾಗಿವೆ. ಈಗ ಕೃಪಾಂಕ ನೀಡುವ ಮಾತು ಕೇಳಿಬಂದಿದೆ. ಇದರ ಬದಲು ಮರುಪರೀಕ್ಷೆ ನಡೆಸುವುದೇ ಸರಿಯಾದ ಕ್ರಮ.

ಬೂಕನಕೆರೆ ವಿಜೇಂದ್ರ, ಮೈಸೂರು

ಮಾತಿನ ಮರ್ಮ ಜನರಿಗೆ ಅರ್ಥವಾಗದೇ?

'ಖಾಲಿ ಚೊಂಬನ್ನು ಅಕ್ಷಯ ಪಾತ್ರೆ ಮಾಡಿದ್ದು ಮೋದಿ' ಎಂದಿದ್ದಾರೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ. 'ಚೊಂಬು ಹಿಡಿದು ಪ್ರಧಾನಿ ಎದುರು ಭಿಕ್ಷೆ' ಎಂದಿದ್ದಾರೆ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ (ಪ್ರ.ವಾ., ಏ. 22). ದೇವೇಗೌಡರು ಈ ಹಿಂದೆ ಮುಖ್ಯಮಂತ್ರಿ ಮತ್ತು ಪ್ರಧಾನಿ ಆಗಿದ್ದವರು. ಅದಕ್ಕಿಂತ ಮಿಗಿಲಾಗಿ ತಾವು 'ಮಣ್ಣಿನ ಮಗ' ಎಂದೇ ರಾಜಕೀಯ ಮಾಡಿದವರು. ಈ ಇಬ್ಬರೂ ಮುಖ್ಯಮಂತ್ರಿಗಳಾಗಿದ್ದಾಗ ಹಲವು ಸಲ ನಮ್ಮ ರಾಜ್ಯದ ಪಾಲಿಗಾಗಿ ಕೇಂದ್ರ ಸರ್ಕಾರದ ಮುಂದೆ ಹಕ್ಕು ಮಂಡಿಸಿದ್ದುಂಟು. ಅಂದರೆ ನಮ್ಮ ದೇಶದ ಒಕ್ಕೂಟ ಸರ್ಕಾರದಲ್ಲಿ ರಾಜ್ಯಗಳ ಹಕ್ಕು ಮತ್ತು ಅಧಿಕಾರ ಏನೆಂಬುದು ಅವರಿಗೂ ಚೆನ್ನಾಗಿ ಗೊತ್ತು. ಅಂಥವರೇ ಈ ರೀತಿ ಮಾತನಾಡಿದರೆ ಅದರ ಮರ್ಮ ಏನೆಂಬುದು ಜನರಿಗೆ ಅರ್ಥವಾಗುವುದಿಲ್ಲ ಅಂದುಕೊಂಡರೆ ಏನು ಹೇಳುವುದು?

ಅದರಲ್ಲೂ ಮತದಾರರು ಚುನಾವಣೆಯ ಸಂದರ್ಭದಲ್ಲಿ ತುಂಬಾ ಜಾಗೃತರಾಗಿ ರಾಜಕಾರಣಿಗಳ ಮಾತನ್ನು ಆಲಿಸುತ್ತಾರೆ. ಹೀಗಾಗಿ, ಇಂತಹ ತಳಬುಡವಿಲ್ಲದ ಮಾತುಗಳು ಅರ್ಥ ಕಳೆದುಕೊಳ್ಳುತ್ತವೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಶಿಕ್ಷಣದ ಗುಣಮಟ್ಟ: ಆತ್ಮವಿಮರ್ಶೆ ನಡೆಯಲಿ

'ಭಾರತದಲ್ಲಿ ಸಾಧಾರಣ ವಿದ್ಯಾರ್ಥಿಗಳಲ್ಲಿ ಅನೇಕರು ಕಾಲೇಜು ಪ್ರಾಧ್ಯಾಪಕರಾಗುತ್ತಾರೆ' ಎಂದು ಅಕ್ಷತ್ ಶ್ರೀವಾಸ್ತವ ಎಂಬುವರು ಹೇಳಿರುವುದು 'ಕಿಡಿನುಡಿ'ಯಲ್ಲಿ (ಪ್ರ.ವಾ., ಏ. 20) ಪ್ರಕಟವಾಗಿದೆ. ಅಕ್ಷತ್ ಅವರು ತಮ್ಮ ಹೆಸರಿನಲ್ಲಿರುವ ಶ್ರೀವಾಸ್ತವ ಎಂಬುದನ್ನು ಸಾರ್ಥಕಪಡಿಸಿಕೊಂಡಂತೆ ಕಟು ವಾಸ್ತವವನ್ನೇ ನುಡಿದಿದ್ದಾರೆ. 'ಅನೇಕರು' ಎನ್ನುವುದಕ್ಕಿಂತ ಅಲ್ಲಿ 'ಬಹುತೇಕರು' ಎಂದಿದ್ದರೂ ಆಗುತ್ತಿತ್ತು. ಇತ್ತೀಚಿನ ದಶಕಗಳಲ್ಲಿ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂಬ ಆತಂಕದಲ್ಲಿರುವ ಪ್ರತಿಯೊಬ್ಬರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಉಲ್ಲೇಖ ಇದು. ಪಠ್ಯೇತರ ಓದು ಒತ್ತಟ್ಟಿಗಿರಲಿ, ಸರಿಯಾದ ಕಾಗುಣಿತವೂ ಗೊತ್ತಿಲ್ಲದ ಭಾಷಾ ಪಂಡಿತರು ಕಾಲೇಜು ಪ್ರಾಧ್ಯಾಪಕರಾಗಿರುವುದು, ಕೋಚಿಂಗ್ ಶಿಶುಗಳೇ ಸರ್ಕಾರದ ಅಧಿಕಾರಿಗಳಾಗಿ ಆಯ್ಕೆಯಾಗುತ್ತಿರುವುದು ನಮ್ಮ ವರ್ತಮಾನದ ದುರವಸ್ಥೆ.

ಈರಪ್ಪ ಎಂ. ಕಂಬಳಿ, ಬೆಂಗಳೂರು

ನೋಟನ್ನು ಕತ್ತರಿಸಬಹುದೇ?

ಭಾನುವಾರದ (ಏ. 21) ಪ್ರಮುಖ ದಿನಪತ್ರಿಕೆಗಳ ಮುಖಪುಟಗಳಲ್ಲಿ ಕಾಂಗ್ರೆಸ್ ಪಕ್ಷದ ಜಾಹೀರಾತು ಪ್ರಕಟವಾಗಿದೆ. ಇದು, ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ತೆರಿಗೆಯ ಪಾಲನ್ನು ಸರಿಯಾಗಿ ಹಂಚದೆ ಅನ್ಯಾಯ ಮಾಡುತ್ತಿರುವ ಕುರಿತಾಗಿದೆ. ಕೇಂದ್ರದಿಂದ ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಬೇಕು ಮತ್ತು ಜನರಿಗೆ ತಿಳಿಸಬೇಕು ಎಂಬುದನ್ನು ಒಪ್ಪಬಹುದು. ಆದರೆ, ಆ ಜಾಹೀರಾತಿನಲ್ಲಿ ಒಂದು ಚೊಂಬಿನ ಚಿತ್ರ ಇದೆ. ಅದರ ಮೇಲೆ ನೂರು ರೂಪಾಯಿ ನೋಟಿದ್ದು, ಅದು ನಾವು ಕಟ್ಟುವ ತೆರಿಗೆಗೆ ದ್ಯೋತಕ. ಅಂತೆಯೇ ಅದರಲ್ಲಿ ಕರ್ನಾಟಕಕ್ಕೆ ಮರಳಿ ಸಿಗುವುದು ಶೇಕಡ 13ರಷ್ಟು ಅತ್ಯಲ್ಪ ಮೊತ್ತ ಎಂಬುದನ್ನು ಉದಾಹರಣೆಯಾಗಿ ತೋರಿಸಲು, ಅಷ್ಟು ಭಾಗವನ್ನು ಕತ್ತರಿಸಿ ಚೊಂಬಿನಲ್ಲಿ ಬೀಳುವಂತೆ ತೋರಿಸಲಾಗಿದೆ. ಆದರೆ ನೋಟನ್ನು ಈ ರೀತಿ ಕತ್ತರಿಸುವುದು ಸರಿಯೇ?

ನೋಟುಗಳನ್ನು ಮಡಚಲೂಬಾರದು ಎಂದು ಹಿರಿಯರು ಹೇಳುತ್ತಿದ್ದುದು ನೆನಪಾಗುತ್ತದೆ. ಆದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ನೋಟನ್ನೇ ಕತ್ತರಿಸಿ ಜಾಹೀರಾತು ನೀಡಿದೆ ಎಂದರೆ, ಅದು ಜನರಿಗೆ ಯಾವ ರೀತಿಯ ಸಂದೇಶವನ್ನು ನೀಡುತ್ತದೆ? ಇದರಿಂದ ನೋಟಿಗೆ ಅಪಮಾನ ಮಾಡಿದಂತೆ ಅಲ್ಲವೇ? ತೆರಿಗೆ ಅನುದಾನದ ತಾರತಮ್ಯ ಕುರಿತ ವಿಚಾರವನ್ನು ಜನರಿಗೆ ತಿಳಿಸಲು ಅನ್ಯಮಾರ್ಗ ಬಳಸಬಹುದಿತ್ತು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಭಾರತ ಉಪಖಂಡದಲ್ಲಿತ್ತು ವಿಶ್ವದ ಈವರೆಗಿನ ದೈತ್ಯ ಹಾವು’

• ಜಯಸಿಂಹ ಆರ್.

ಗುಜರಾತ್‌ನ ಕಛ್‌ ಪ್ರದೇಶದ ಪನಾನ್‌ಂಧ್ರೋ ಎಂಬಲ್ಲಿ ಸುಣ್ಣಕಲ್ಲು ಗಣಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿತ್ತು. 2005ರ ಒಂದು ದಿನ ಗಣಿಯಲ್ಲಿ ಮಣ್ಣು ಅಗೆಯುವಾಗ ಕಾರ್ಮಿಕರಿಗೆ ಯಾವುದೋ ಪ್ರಾಣಿಯ ಮೂಳೆಯಂತಹ ಹಲವು ವಸ್ತುಗಳು ದೊರೆತಿದ್ದವು. ತೀರಾ ವಿಚಿತ್ರವಾಗಿ ಇದ್ದುದ್ದರಿಂದ ಆ ಬಗ್ಗೆ ಪರಿಶೀಲನೆ ನಡೆಸಲು ವಿಜ್ಞಾನಿಗಳನ್ನು ಕರೆಸಲಾಗಿತ್ತು. ಐಐಟಿ–ರೂರ್ಕಿಯ ವಿಜ್ಞಾನಿ ಸುನೀಲ್ ವಾಜಪೇಯಿ ಸ್ಥಳಕ್ಕೆ ಭೇಟಿ ನೀಡಿ, ಉತ್ಖನನ ನಡೆಸಿದ್ದರು. ಅಲ್ಲಿ ದೊರೆತ ಪಳೆಯುಳಿಕೆಗಳು ಯಾವುದೋ ದೊಡ್ಡ ಸರೀಸೃಪವೊಂದರ ಬೆನ್ನುಮೂಳೆಗಳಂತಹ ರಚನೆಗಳಾಗಿದ್ದವು. ಅಂತಹ ಒಟ್ಟು 27 ಪಳೆಯುಳಿಕೆಗಳು ಅವರಿಗೆ ದೊರೆತಿದ್ದವು. ಅದೇ ಸ್ಥಳದಲ್ಲಿ ಮೊಸಳೆಗಳ ಹಲ್ಲುಗಳನ್ನು ಹೋಲುವ ಮತ್ತು ದೊಡ್ಡ ಮೀನುಗಳ ಹಲ್ಲುಗಳನ್ನು ಹೋಲುವ ಹಲವು ಪಳೆಯುಳಿಕೆಗಳೂ ಪತ್ತೆಯಾಗಿದ್ದವು. ಇದು ಯಾವುದೋ ಒಂದು ದೊಡ್ಡ ಮೊಸಳೆಯ ಬೆನ್ನುಮೂಳೆ ಎಂದು ನಿರ್ಧರಿಸಿ, ತಮ್ಮ ಸಂಶೋಧನಾಲಯದಲ್ಲಿ ಸಂರಕ್ಷಿಸಿ ಇಟ್ಟರು.

‘ವಾಸುಕಿ ಇಂಡಿಕಸ್’ನ ಬೆನ್ನುಮೂಳೆಗಳ ಪಳೆಯುಳಿಕೆಗಳು

2005ರಲ್ಲಿ ಹೀಗೆ ತೆಗೆದಿರಿಸಲಾಗಿದ್ದ ಪಳೆಯುಳಿಕೆಗಳ ಮೇಲೆ 2022ರವರೆಗೂ ಯಾವುದೇ ಸಂಶೋಧನೆ ಅಥವಾ ಅಧ್ಯಯನ ನಡೆಯಲಿಲ್ಲ. ಆದರೆ 2022ರ ಮೇ ವೇಳೆಗೆ ವಾಡಿಯಾ ಇನ್‌ಸ್ಟಿಟ್ಯೂಟ್‌ನ ವಿಜ್ಞಾನಿಗಳ ತಂಡವು ಒಂದು ಅಧ್ಯಯನ ವರದಿ ಪ್ರಕಟಿಸಿತ್ತು. ಲಡಾಖ್‌ನ ಹಿಮಗಾಡಿನಲ್ಲಿ ಆ ವಿಜ್ಞಾನಿಗಳ ತಂಡ ದೈತ್ಯ ಹಾವೊಂದರ ಪಳೆಯುಳಿಕೆಯನ್ನು ಪತ್ತೆ ಮಾಡಿತ್ತು. ದೀರ್ಘ ಅಧ್ಯಯನದ ನಂತರ ಅದು ಸುಮಾರು 3.8 ಕೋಟಿ ವರ್ಷಗಳ ಹಿಂದೆ ಇದ್ದ ಮ್ಯಾಡ್ಸೊಇಡ್ ಪ್ರಭೇದದ ಉಪಪ್ರಭೇದಕ್ಕೆ ಸೇರಿದ ಹಾವಿನದ್ದು ಎಂದು ಪತ್ತೆಯಾಗಿತ್ತು. ಆ ಹಾವಿನಬೆನ್ನು ಮೂಳೆಗಳ ಚಿತ್ರವನ್ನೂ ಅಧ್ಯಯನ ವರದಿಯಲ್ಲಿ ಪ್ರಕಟಿಸಲಾಗಿತ್ತು. ಅದೇ ಸಮಯದಲ್ಲಿ ಐಐಟಿ–ರೂರ್ಕಿಯ ವಿಜ್ಞಾನಿ ಸುನೀಲ್ ವಾಜಪೇಯಿ ಅವರ ತಂಡಕ್ಕೆ, ದೇವಜಿತ್ ದತ್ತಾ ಎಂಬ ಮತ್ತೊಬ್ಬ ವಿಜ್ಞಾನಿ ಸೇರಿಕೊಂಡರು.

ಸುನೀಲ್ ಅವರ ಪ್ರಯೋಗಾಲಯದಲ್ಲಿ ಇದ್ದ ಈ ಪಳೆಯುಳಿಕೆಗಳ ಮೇಲೆ ತುಸು ಅಧ್ಯಯನ ನಡೆಸಿದರು. ಆಗಲೇ ಅವರಿಗೆ ಅದು ಮೊಸಳೆಯದ್ದಲ್ಲ ಎಂಬ ಅನುಮಾನ ಹುಟ್ಟಿದ್ದು. ಏಕೆಂದರೆ ಬೆನ್ನುಮೂಳೆಗಳು ಹರಡಿಕೊಂಡಿರುವ ರೀತಿ ಮತ್ತು ಅವು ಪರಸ್ಪರ ಜೋಡಣೆಯಾಗಿದ್ದ ರೀತಿ ಮೊಸಳೆಗಿಂತ ತುಸು ಭಿನ್ನವಾಗಿದ್ದವು. ಈ ಬಗ್ಗೆ ಪರಸ್ಪರ ಚರ್ಚಿಸಿದ ಸುನೀಲ್ ಮತ್ತು ದೇವಜಿತ್ ಅವರು ಆ ಪಳೆಯುಳಿಕೆಯ ಮೇಲೆ ಹೆಚ್ಚಿನ ಅಧ್ಯಯನ ನಡೆಸಲು ನಿರ್ಧರಿಸಿದರು. ಹಲವು ತಿಂಗಳ ಅಧ್ಯಯನದ ನಂತರ ಅದೊ ಗೊಂಡ್ವಾನಾ (ಆಸ್ಟ್ರೇಲಿಯಾ, ಭಾರತ ಉಪಖಂಡ, ದಕ್ಷಿಣ ಅಮೆರಿಕ ಮತ್ತು ಆಫ್ರಿಕಾ ಖಂಡಗಳನ್ನು ಒಳಗೊಂಡಿದ್ದ ಬೃಹತ್ ಖಂಡ) ಖಂಡದಲ್ಲಿ ಇದ್ದ ಮ್ಯಾಡ್ಸೊಇಡ್ ಹಾವಿನ ಜಾತಿಗೆ ಸೇರಿದ, ಉಪಪ್ರಭೇದವೊಂದರ ಪಳೆಯುಳಿಕೆಯಾಗಿತ್ತು. ಈ ಹಾವು ಸುಮಾರು 4.7 ಕೋಟಿ ವರ್ಷಗಳ ಹಿಂದೆ ಬದುಕಿತ್ತು ಎಂಬುದನ್ನು ಸಂಶೋಧನೆ ಬಹಿರಂಗಪಡಿಸಿತು.

ಮ್ಯಾಡ್ಸೊಇಡ್ ಈವರೆಗಿನ ಅತ್ಯಂತ ದೈತ್ಯ ಹಾವುಗಳ ಪ್ರಭೇದವಾಗಿದೆ. ಹೀಗಾಗಿ ಈ ಇಬ್ಬರೂ ವಿಜ್ಞಾನಿಗಳು ತಮ್ಮಲ್ಲಿದ್ದ ಬೆನ್ನುಮೂಳೆಗಳ ಪಳೆಯುಳಿಕೆಗಳನ್ನು ಬಳಸಿಕೊಂಡು, ಆ ಹಾವಿನ ಉದ್ದವನ್ನು ಅಂದಾಜು ಮಾಡಿದರು. ಅದಾಗಲೇ ಪ್ರಚಲಿತದಲ್ಲಿದ್ದ ಎರಡು ಸೂತ್ರಗಳನ್ನು ಬಳಸಿಕೊಂಡು ಹಾವಿನ ಉದ್ದವನ್ನು ಅಂದಾಜು ಮಾಡಿದರು. ಒಂದು ಅಂದಾಜಿನ ಪ್ರಕಾರ ಆ ಹಾವಿನ ಉದ್ದ 11 ಮೀಟರ್ (36.3 ಅಡಿ). ಇನ್ನೊಂದು ಅಂದಾಜಿನ ಪ್ರಕಾರ ಆ ಹಾವಿನ ಉದ್ದ 15.5 ಮೀಟರ್ (51.3 ಅಡಿ). ಆ ಹಾವಿನ ಅಂದಾಜು ಉದ್ದ 51 ಅಡಿಯನ್ನು ಮೀರಿಸಿತ್ತು. ಅದು ನಿಜವೇ ಆಗಿದ್ದರೆ, ಈವರೆಗೆ ವಿಜ್ಞಾನಿಗಳಿಗೆ ದೊರೆತಿರುವ ಪಳೆಯುಳಿಕೆಗಳಲ್ಲೇ ಅತ್ಯಂತ ದೊಡ್ಡ ಹಾವಿನ ಪಳೆಯುಳಿಕೆ ಇದಾಗಿತ್ತು. ವಿಜ್ಞಾನಿಗಳು ಅದನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡರು. ಹೌದು, ಅದು ಆವರೆಗಿನ ಅತ್ಯಂತ ದೊಡ್ಡ ಪಳೆಯುಳಿಕೆಯಾಗಿದ್ದ ಟೈಟನಾಬೊವಾದ್ದಕ್ಕಿಂತಲೂ (ಸುಮಾರು 42 ಅಡಿ) ದೊಡ್ಡ ಹಾವಿನದ್ದಾಗಿತ್ತು. ಟೈಟನಾಬೊವಾ 5.8 ಕೋಟಿ ವರ್ಷಗಳಿಂದ 6.6 ಕೋಟಿ ವರ್ಷಗಳ ಹಿಂದೆ ಬದುಕಿದ್ದ ದೈತ್ಯ ಹಾವಾಗಿತ್ತು. ಆ ಹಾವಿನ ಉದ್ದ ಅಗಲದ ದಾಖಲೆಗಳನ್ನೂ ಈ ಪಳೆಯುಳಿಕೆಯು ಮೀರಿಸುತ್ತಿತ್ತು.

ಮ್ಯಾಡ್ಸೊಇಡ್ ಕುಟುಂಬಕ್ಕೆ ಸೇರಿದ್ದರೂ ತನ್ನದೇ ವಿಶೇಷ ರಚನೆಗಳನ್ನು ಹೊಂದಿದ್ದ ಈ ಹಾವನ್ನು ವಿಜ್ಞಾನಿಗಳು ‘ವಾಸುಕಿ ಇಂಡಿಕಸ್’ ಎಂದು ಕರೆದರು. ವಾಸುಕಿ ಇಂಡಿಕಸ್‌ನ ಅತ್ಯಂತ ದೊಡ್ಡ ಬೆನ್ನುಮೂಳೆಯ ಅಗಲ 11 ಸೆಂ.ಮೀಟರ್. ಆ ಪ್ರಕಾರ ಆ ಹಾವಿನ ದೇಹದ ಅಗಲ 44 ಸೆಂ.ಮೀ. ಎಂದು ಅಂದಾಜಿಸಲಾಗಿತ್ತು. ಉದ್ದ ಮತ್ತು ಅಗಲದ ಆಧಾರದಲ್ಲಿ ಆ ಹಾವಿನ ತೂಕವನ್ನೂ ಅಂದಾಜು ಮಾಡಲಾಯಿತು. ‘ವಾಸುಕಿ ಇಂಡಿಕಸ್’ ಸುಮಾರು ಒಂದು ಟನ್ ತೂಗುತ್ತಿತ್ತು ಎಂಬ ನಿರ್ಧಾರಕ್ಕೆ ವಿಜ್ಞಾನಿಗಳು ಬಂದರು. ಹೀಗೆ ‘ವಾಸುಕಿ ಇಂಡಿಕಸ್’ನ ಈ ಪಳೆಯುಳಿಕೆಗಳು ಈವರೆಗೆ ದೊರೆತ ಅತ್ಯಂತ ದೊಡ್ಡ ಹಾವಿನ ಪಳೆಯುಳಿಕೆ ಎಂದಾಗಿದೆ. ಈ ಬಗ್ಗೆ ಇನ್ನಷ್ಟು ಅಧ್ಯಯನಗಳು ನಡೆಯುತ್ತಿವೆ.

‘ವಾಸುಕಿ ಇಂಡಿಕಸ್’

‘ಹಿಂದೂ ಪುರಾಣಗಳಲ್ಲಿ ಬರುವ ವಾಸುಕಿಯ ಹೆಸರನ್ನೇ ಈ ಹಾವಿಗೆ ಇಡಲಾಗಿದೆ’ ಎಂದು ಅಧ್ಯಯನ ವರದಿಯಲ್ಲಿ ವಿಜ್ಞಾನಿಗಳು ಹೇಳಿದ್ದಾರೆ. ಇದಷ್ಟೇ ಅಲ್ಲದೇ, ಭಾರತದ ನೆಲದಲ್ಲೇ ‘ವಾಸುಕಿ ಇಂಡಿಕಸ್’ ಉಪಪ್ರಬೇಧವು ವಿಕಾಸವಾಗಿತ್ತು.

ಗೊಂಡ್ವಾನಾ ಮಹಾಖಂಡದಿಂದ ಭಾರತ ಉಪಖಂಡವು ಬೇರ್ಪಟ್ಟು, ಯುರೇಷ್ಯಾ ಖಂಡದತ್ತ ಚಲಿಸುತ್ತಿದ್ದ ಕಾಲವದು. ಈಗಿನ ಭಾರತದ ಪಶ್ಚಿಮ ಭಾಗ, ಈಗಿನ ಪಾಕಿಸ್ತಾನದಲ್ಲಿ ‘ವಾಸುಕಿ ಇಂಡಿಕಸ್’ ಯಥೇಚ್ಛವಾಗಿದ್ದವು. ಭಾರತ ಉಪಖಂಡವು ಯುರೇಷ್ಯಾ ಖಂಡಕ್ಕೆ ಜತೆಯಾದ ನಂತರ ಈ ಹಾವುಗಳು ಯುರೇಷ್ಯಾಗೂ ದಾಟಿಕೊಂಡವು. ನಂತರದಲ್ಲಿ ಆಫ್ರಿಕಾ ಖಂಡಕ್ಕೂ ಹೋದವು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಈ ಹಾವು ಭಾರತದಲ್ಲೇ ವಿಕಾಸವಾಗಿದ್ದರಿಂದಲೂ ಅದಕ್ಕೆ ಭಾರತದ್ದೇ ಹೆಸರು ಇಡಲಾಗಿದೆ ಎಂಬುದು ವಿಜ್ಞಾನಿಗಳ ವಿವರಣೆ.

ಈ ಹಾವಿಗೆ ನಮ್ಮ ಕಾಲದ ವಾಸುಕಿ ಎಂಬ ಹೆಸರು ಇಡಲಾಗಿದೆ. ಆದರೆ ಈ ಹಾವಿನ ಪ್ರಭೇದ ಸಂಪೂರ್ಣವಾಗಿ ಅಳಿದುಹೋಗಿ 4.63 ಕೋಟಿ ವರ್ಷಗಳ ನಂತರ ಆಧುನಿಕ ಮಾನವ ‘ಹೋಮೊ ಸೆಪಿಯನ್ಸ್’ ವಿಕಾಸವಾಗಿದ್ದು.

ಮೊಸಳೆ, ಮೀನೇ ಆಹಾರ

ಬೆನ್ನುಮೂಳೆಯ ಪಳೆಯುಳಿಕೆಗಳು ಹಾವಿನದ್ದು ಎಂದು ಗೊತ್ತಾದ ನಂತರ, ಅವುಗಳ ಜತೆಯಲ್ಲೇ ದೊರೆತಿದ್ದ ಹಲ್ಲಿನ ಪಳೆಯುಳಿಕೆಗಳನ್ನು ವಿಜ್ಞಾನಿಗಳು ಮತ್ತೆ ಪರಿಶೀಲಿಸಿದರು. ‘ವಾಸುಕಿ ಇಂಡಿಕಸ್’ ಬದುಕಿದ್ದ ಕಾಲದಲ್ಲೇ ಇದ್ದ ದೈತ್ಯ ಮೊಸಳೆಗಳು ಮತ್ತು ಮೀನುಗಳ ಹಲ್ಲುಗಳ ಪಳೆಯುಳಿಕೆಗಳು ಅದಾಗಿದ್ದವು. ಆ ಕಾಲದ ಮೊಸಳೆ ಮತ್ತು ಮೀನುಗಳು ‘ವಾಸುಕಿ ಇಂಡಿಕಸ್’ನ ಪ್ರಧಾನ ಆಹಾರ ಎಂಬ ನಿರ್ಧಾರಕ್ಕೆ ಬಂದರು. ಇದಲ್ಲದೇ ಇನ್ನಷ್ಟು ದೈತ್ಯ ಜಲಚರಗಳನ್ನೂ ‘ವಾಸುಕಿ’ ಆಹಾರವಾಗಿ ಸೇವಿಸುತ್ತಿತ್ತು. ದೈತ್ಯ ದೇಹದ ಕಾರಣ ಈ ಹಾವು ಅತ್ಯಂತ ನಿಧಾನವಾಗಿ ಚಲಿಸುತ್ತಿತ್ತು.

ಅರೆಜೌಗು ಪ್ರದೇಶವು ವಾಸುಕಿ ಇಂಡಿಕಸ್‌ನ ಆವಾಸಸ್ಥಾನವಾಗಿತ್ತು. ಇದು ಹೊಂಚುಹಾಕಿ ಕುಳಿತು ಬೇಟೆಯಾಡುತ್ತಿತ್ತು. ಬಲಿಪ್ರಾಣಿಯನ್ನು ನುಂಗಿದ ನಂತರ ಈಗಿನ ಹೆಬ್ಬಾವುಗಳಂತೆಯೇ ವಿಶ್ರಮಿಸುತ್ತಿತ್ತು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

ವಾಸುಕಿ ಇಂಡಿಕಸ್ ಬದುಕಿದ್ದ ಕಾಲದಲ್ಲಿ ಈಗಿನ ಗುಜರಾತ್‌ನ ಕಛ್ ಅರೆಜೌಗು ಪ್ರದೇಶದಂತೆಯೇ ಇತ್ತು. ವರ್ಷದ ಕೆಲವು ತಿಂಗಳುಗಳಲ್ಲಿ ಸಮುದ್ರದ ನೀರು ಇಲ್ಲಿ ತುಂಬಿಕೊಳ್ಳುತ್ತಿತ್ತು ಮತ್ತು ನಂತರ ಸಮುದ್ರದ ನೀರು ಹಿಂದೆ ಸರಿಯುತ್ತಿತ್ತು. ಅಂತಹ ಅರೆಜೌಗು ಪ್ರದೇಶವು ವಾಸುಕಿ ಇಂಡಿಕಸ್‌ಗೆ ಅಗತ್ಯವಿದ್ದ ಮೊಸಳೆ ಮತ್ತು ಮೀನುಗಳನ್ನು ಒದಗಿಸಿಕೊಡುತ್ತಿತ್ತು ಎಂದು ವಿಜ್ಞಾನಿಗಳು ವಿವರಿಸಿದ್ದಾರೆ.



ಹಾವಿನ ಪಳೆಯುಳಿಕೆ ದೊರೆತಿದ್ದ ಪ್ರದೇಶ. ಇಲ್ಲೇ ಮೊಸಳೆಗಳು ಮತ್ತು ಮೀನಿನ ಹಲ್ಲುಗಳ ಪಳೆಯುಳಿಕೆ ದೊರೆತಿದ್ದವು

ವಿಜ್ಞಾನಿ ಸುನಿಲ್ ವಾಜಪೇಯಿ ಅವರು ಉತ್ಖನನ ನಡೆಸಿದ್ದ ಪ್ರದೇಶದ ಚಿತ್ರ

ಆಧಾರ: ‘ಸೈಂಟಿಫಿಕ್ ರಿಪೋರ್ಟ್’ನಲ್ಲಿ ಪ್ರಕಟವಾದ ಸುನೀಲ್ ವಾಜಪೇಯಿ ಮತ್ತು ದೇವಜಿತ್ ದತ್ತಾ ಅವರ ಸಂಶೋಧನಾ ವರದಿ, ಪಿಐಬಿ ಪತ್ರಿಕಾ ಪ್ರಕಟಣೆ, ರಾಯಿಟರ್ಸ್

ಗರಿಷ್ಠ ಉಷ್ಣಾಂಶ

‘ವಾಸುಕಿ ಇಂಡಿಕಸ್’ ಎಲ್ಲಾ ಹಾವುಗಳಂತೆ ತಣ್ಣನೆಯ ರಕ್ತದ ಸರೀಸೃಪವಾಗಿತ್ತು. ಹೀಗಾಗಿ ಅದಕ್ಕೆ ಅತಿಬಿಸಿಯ ಅವಶ್ಯಕತೆ ಇತ್ತು. ಅದು ಬದುಕಿದ್ದ ಅವಧಿಯಲ್ಲಿ, ಅಂದರೆ ಸುಮಾರು 4.7 ಕೋಟಿ ವರ್ಷಗಳ ಹಿಂದೆ ಭೂಮಿಯ ಮೇಲ್ಮೈ ಸರಾಸರಿ ಉಷ್ಣಾಂಶವೂ ಅಧಿಕವಾಗೇ ಇದ್ದಿರಬೇಕು ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

ತಣ್ಣನೆಯ ರಕ್ತದ ಇಷ್ಟು ದೈತ್ಯ ಹಾವೊಂದು ಜೀವಿಸಬೇಕಾದರೆ 27 ಡಿಗ್ರಿ ಸೆಲ್ಸಿಯಸ್‌ನಿಂದ 28.5 ಡಿಗ್ರಿ ಸೆಲ್ಸಿಯಸ್‌ನಷ್ಟಾದರೂ ಸರಾಸರಿ ಉಷ್ಣಾಂಶ ಇರಬೇಕಿತ್ತು. ಇದು ಭೂಮಿಯ ಈಗಿನ ಸರಾಸರಿ ಉಷ್ಣಾಂಶಕ್ಕಿಂತ ಕಡಿಮೆ. ಬಹುಶಃ 4.7 ಕೋಟಿ ವರ್ಷಗಳ ಹಿಂದೆ ಭೂಮಿಯ ಭೂಮಿಯ ಮೇಲ್ಮೈ ಉಷ್ಣಾಂಶ ಈಗಿನದಕ್ಕಿಂತ ಹೆಚ್ಚೇ ಇದ್ದಿರಬೇಕು ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ. ‘ವಾಸುಕಿ ಇಂಡಿಕಸ್’ ಬದುಕಿದ್ದ ಅವಧಿಗಿಂತ 1.5 ಕೋಟಿ ವರ್ಷಗಳಷ್ಟು ಹಿಂದೆಯೇ ಡೈನೊಸಾರ್‌ಗಳು ಅಳಿದು ಹೋಗಿದ್ದವು. ವಿವಿಧ ಕಾರಣಗಳಿಂದಾಗಿ ಭೂಮಿಯ ಮೇಲಿನ ಉಷ್ಣಾಂಶ ಇಳಿಕೆಯಾಗಿದ್ದೇ ಡೈನೊಸಾರ್‌ಗಳು ಅಳಿದುಹೋಗಲು ಕಾರಣ ಎಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಅತಿಹೆಚ್ಚು ಉಷ್ಣಾಂಶದಲ್ಲಿ ಬದುಕಿದ್ದ ‘ವಾಸುಕಿ ಇಂಡಿಕಸ್’ ಉಷ್ಣಾಂಶ ಇಳಿಕೆಯಾಗಿದ್ದರಿಂದಲೇ ಅಳಿದು ಹೋಯಿತೇ ಎಂಬುದರತ್ತ ಈಗ ಸಂಶೋಧನೆ ಮುಂದುವರಿದಿದೆ.

ಸಿನಿ ಬಿಟ್ಸ್

ಶೈನ್ ಶೆಟ್ಟಿ–ಅಂಕಿತ ‘ಜಸ್ಟ್ ಮ್ಯಾರೀಡ್’

ಬಿಗ್‌ಬಾಸ್ ಸ್ಪರ್ಧಿ ಶೈನ್ ಶೆಟ್ಟಿ ಮತ್ತು ಅಂಕಿತ ಅಮರ್ ಜೋಡಿಯಾಗಿ ನಟಿಸಿರುವ ‘ಜಸ್ಟ್ ಮ್ಯಾರೀಡ್’ ಚಿತ್ರದ ಚಿತ್ರೀಕರಣ ಪೂರ್ತಿಗೊಂಡಿದೆ. ಸಿ.ಆರ್. ಬಾಬಿ ನಿರ್ದೇಶಿಸುತ್ತಿರುವ ಚಿತ್ರಕ್ಕೆ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಬಂಡವಾಳ ಹೂಡಿದ್ದಾರೆ.

‘ಬೆಂಗಳೂರು, ಮೈಸೂರು ಮತ್ತು ಚಿಕ್ಕಮಗಳೂರಿನಲ್ಲಿ ನಲವತ್ತೈದು ದಿನಗಳ ಚಿತ್ರೀಕರಣಗೊಂಡಿದೆ. ಸದ್ಯ ಚಿತ್ರೀಕರಣ ನಂತರದ ಕೆಲಸಗಳು ನಡೆಯುತ್ತಿವೆ’ ಎಂದು ಚಿತ್ರತಂಡ ಹೇಳಿದೆ.

ಚಿತ್ರದಲ್ಲಿ ಆರು ಹಾಡುಗಳಿದ್ದು ಅಜನೀಶ್ ಲೋಕನಾಥ್ ಅವರೆ ಸಂಗೀತ ಸಂಯೋಜನೆ ಮಾಡಿದ್ದಾರೆ. ‘ಪ್ರೇಮಕಥೆಯ ಚಿತ್ರವಾಗಿದ್ದರೂ, ಪ್ರೇಕ್ಷಕರಿಗೆ ಬೇಕಾದ ಎಲ್ಲಾ ಅಂಶಗಳು ಇವೆ’ ಎಂದಿದ್ದಾರೆ ನಿರ್ದೇಶಕಿ.

ರಘು ನಿಡುವಳ್ಳಿ ಸಂಭಾಷಣೆ, ಪಿ.ಜಿ ಛಾಯಾಚಿತ್ರಗ್ರಹಣ, ಶ್ರೀಕಾಂತ್ ಮತ್ತು ಅಶಿಕ್ ಕುಸುಗೊಳ್ಳಿ (ಗಣೇಶ ಸಾಂಗ್) ಸಂಕಲನವಿದೆ.

ದೇವರಾಜ್, ಅಚ್ಯುತಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್, ಶ್ರುತಿ ಕೃಷ್ಣ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಆತ್ಮದ ಹುಡುಕಾಟದಲ್ಲಿ ‘ಮಾಂತ್ರಿಕ’

ಆತ್ಮದ ಕಥೆಯನ್ನಿಟ್ಟು ಸಾಕಷ್ಟು ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾಗಳು ಕನ್ನಡದಲ್ಲಿ ಬಂದಿವೆ. ಆ ಸಾಲಿಗೆ ಮತ್ತೊಂದು ಸೇರ್ಪಡೆ ‘ಮಾಂತ್ರಿಕ’. ವ್ಯಾನವರ್ಣ ಜಮ್ಮುಲ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುವುದರ ಜೊತೆಗೆ ಬಂಡವಾಳವನ್ನೂ ಹೂಡಿದ್ದಾರೆ. ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

‘ಇದೊಂದು ಆತ್ಮ, ದೆವ್ವದ ಹುಡುಕಾಟದ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥೆ. ದೆವ್ವ ಎಂಬುದು ಇದೆಯೋ, ಇಲ್ಲವೋ ಅಥವಾ ಅದೆಲ್ಲ ನಮ್ಮ ಭ್ರಮೆಯೋ ಎಂಬ ವಿಷಯದ ಮೇಲೆ ಈ ಚಿತ್ರ ಸಾಗುತ್ತದೆ. ಚಿತ್ರದ ಎಲ್ಲ ಕೆಲಸಗಳು ಮುಗಿದಿದ್ದು ಬಿಡುಗಡೆಗೆ ಸಿದ್ಧವಿದೆ’ ಎಂದರು ನಿರ್ದೇಶಕರು.

ರಾಧಿಕಾ ಮಾಲಿ ಪಾಟೀಲ ಹಾಗೂ ಮೈಥಿಲಿ ನಾಯಕ್ ಚಿತ್ರದ ನಾಯಕಿಯರು. ಬೆಂಗಳೂರು, ಮಂಗಳೂರಿನಲ್ಲಿ ಚಿತ್ರೀಕರಣಗೊಂಡಿದೆ. ಸ್ಟಾಲಿನ್ ಸಂಗೀತ, ಅನಿಲ್ ಆಂಟೋನಿ ಹಾಗೂ ರಮೇಶ್ ಮರ್ರಿಪಲ್ಲಿ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

ರಾಧಿಕಾ ಮಾಲಿ ಪಾಟೀಲ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ನುಡಿ ಬೆಳಗು

ದೇಶದ ಕುರಿತಾದ ನಿಜವಾದ ಕಾಳಜಿ

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ವಿಸ್ತೀರ್ಣದಲ್ಲಿ ಸುಮಾರು ನಮ್ಮ ದೇಶದ ಮಹಾರಾಷ್ಟ್ರ ರಾಜ್ಯದಷ್ಟು ಮಾತ್ರ ದೊಡ್ಡದಿರುವ ಪುಟಾಣಿ ದ್ವೀಪ ದೇಶ ಜಪಾನ್; ಸಂಪನ್ಮೂಲಗಳ ಸದ್ಬಳಕೆ, ಪ್ರಜೆಗಳ ಪ್ರಾಮಾಣಿಕ ದೇಶ ಪ್ರೇಮ, ಕಾಯಕ ಪ್ರಜ್ಞೆ ಮೂಲಕ ವಿಶೇಷ ಪ್ರಗತಿ ಸಾಧಿಸಿ, ಅಭಿವೃದ್ಧಿಯ ವಿಚಾರದಲ್ಲಿ ಹಲವು ದೇಶಗಳಿಗಿಂತ ಬಹಳ ಮುಂದಿದೆ. ಇದಕ್ಕೆ ಮುಖ್ಯ ಕಾರಣ, ಅಲ್ಲಿನ ನಾಗರಿಕರಿಗೆ ತಮ್ಮ ದೇಶದ ಕುರಿತಾಗಿ ಇರುವ ನಿಸ್ವಾರ್ಥ ಕಾಳಜಿ ಹಾಗೂ ಕಳಕಳಿ. 1945ರಲ್ಲಿ ನಡೆದ ಎರಡನೇ ವಿಶ್ವ ಯುದ್ಧದ ಸಂದರ್ಭದಲ್ಲಿ ನಡೆದ ಅತ್ಯಂತ ಭೀಕರ ಬಾಂಬ್ ದಾಳಿಯಿಂದ ಸಂಪೂರ್ಣ ನಾಶವಾಗಿದ್ದ ಹಿರೋಶಿಮಾ, ನಾಗಸಾಕಿ ನಗರಗಳನ್ನು ಕೆಲವೇ ವರ್ಷಗಳಲ್ಲಿ ಮರು ನಿರ್ಮಾಣ ಮಾಡಿ, ಮಾದರಿಯಾದವರು ಜಪಾನೀಯರು. ಈ ಜಪಾನೀಯರಿಗೆ ತಮ್ಮ ದೇಶದ ಬಗೆಗಿರುವ ವಿಶಿಷ್ಟ ಕಾಳಜಿಯ ಕುರಿತು ಹಲವಾರು ಕಥೆಗಳಿವೆ.

ಒಮ್ಮೆ ಜಪಾನ್ ದೇಶದ ಚಪ್ಪಲಿ ಕಾರ್ಖಾನೆಯೊಂದರ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರವೊಂದನ್ನು ನಡೆಸಲು ಆಲೋಚಿಸಿದರು.

ಸಾಮಾನ್ಯವಾಗಿ ನಮ್ಮಲ್ಲಿ ಮುಷ್ಕರವೆಂದರೆ ಕಾರ್ಖಾನೆಯ ಲಾಕ್ ಡೌನ್, ಎಲ್ಲವನ್ನೂ ಬಲಾತ್ಕಾರವಾಗಿ ಬಂದ್ ಮಾಡಿಸುವುದು, ಸಾರ್ವಜನಿಕ ಆಸ್ತಿಪಾಸ್ತಿಗಳ ನಾಶ, ಟೈರಿಗೆ ಬೆಂಕಿ ಹಚ್ಚಿ ರಸ್ತೆ ತಡೆ ಮಾಡುವುದು, ದುಷ್ಕರ್ಮಿಗಳಿಂದ ದೊಂಬಿ ಕಲ್ಲು ತೂರಾಟ ಇತ್ಯಾದಿಗಳು ಸರ್ವೇ ಸಾಮಾನ್ಯ. ಆದರೆ ತಾವು ಮಾಡುವ ಕಾಯಕ, ದೇಶದ ಪ್ರಗತಿಗೆ ಅತ್ಯಂತ ಅವಶ್ಯಕ ಹಾಗೂ ತಮ್ಮ ಮುಷ್ಕರದಿಂದ ದೇಶದ ಪ್ರಗತಿ ಕುಂಠಿತವಾಗಬಾರದೆಂದು ಎಂದು ದೃಢವಾಗಿ ನಂಬಿದ್ದ ಜಪಾನಿನ ಈ ಚಪ್ಪಲಿ ಕಾರ್ಖಾನೆಯ ಕಾರ್ಮಿಕರು ಮುಷ್ಕರವನ್ನು ಹೇಗೆ ಮಾಡಿದರು ಗೊತ್ತೇ?

ತಮ್ಮ ಕೆಲಸಕ್ಕೆ ಎಂದೂ ರಜೆ ಹಾಕದೇ, ಕಾರ್ಖಾನೆಯ ಉತ್ಪಾದನೆಗೆ ಕೊಂಚವೂ ತಡೆಯಾಗದಂತೆ ತಮ್ಮ ಬೇಡಿಕೆಗಳನ್ನು ಇವರು ಈಡೇರಿಸಿಕೊಂಡ ವಿಧಾನ ಅತ್ಯಂತ ವಿಶಿಷ್ಟವಾಗಿದೆ. ಮುಷ್ಕರ ನಿರತ ಈ ಕಾರ್ಖಾನೆಯ ಕಾರ್ಮಿಕರು, ಬರೀ ಎಡಗಾಲಿನ ಚಪ್ಪಲಿಯನ್ನು ಮಾತ್ರ ಉತ್ಪಾದನೆ ಮಾಡತೊಡಗಿದರು. ತಮ್ಮ ಬೇಡಿಕೆ ಈಡೇರುವ ತನಕ ಬಲಗಾಲಿನ ಚಪ್ಪಲಿಗಳನ್ನು ಉತ್ಪಾದಿಸುವುದಿಲ್ಲ ಎಂಬುದು ಅವರ ದೃಢ ನಿಲುವಾಗಿತ್ತು. ಕೇವಲ ಎಡಗಾಲಿನ ಚಪ್ಪಲಿಯನ್ನು ಮಾತ್ರ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಅಸಾಧ್ಯವೆಂದರಿತ ಕಾರ್ಖಾನೆಯ ಮಾಲೀಕರಿಗೆ, ಕಾರ್ಮಿಕರ ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಈಡೇರಿಸದೆ ಬೇರೆ ದಾರಿಯಿರಲಿಲ್ಲ.

ಹೀಗೆ ಒಂದು ನಿಮಿಷದ ಕೆಲಸವನ್ನೂ ವ್ಯರ್ಥ ಮಾಡದೇ ಸಾರ್ವಜನಿಕ ಆಸ್ತಿಗಳಿಗೆ ಯಾವುದೇ ಹಾನಿಯುಂಟು ಮಾಡದೇ, ತಮ್ಮ ಕಾಯಕದ ಮೂಲಕವೇ ಪ್ರತಿಭಟನೆ ಮಾಡಿ ಬೇಡಿಕೆಗಳನ್ನು ಈಡೇರಿಸಿಕೊಂಡ ಜಪಾನೀಯರ ಈ ವಿಧಾನ ಮಾದರಿಯಲ್ಲವೇ? ದೇಶದ ಕುರಿತಾದ ನಿಜವಾದ ಕಳಕಳಿಗೆ ಇದು ಬಹಳ ದೊಡ್ಡ ಉದಾಹರಣೆ. ತಮ್ಮ ಕಾಯಕ ಯಾವುದೇ ಇರಲಿ, ಅದನ್ನು ಅತ್ಯಂತ ನಿಷ್ಠೆಯಿಂದ ಮಾಡಬೇಕೆಂದು ಪ್ರತಿಯೊಬ್ಬ ಪ್ರಜೆಯೂ ಆಲೋಚಿಸಿದಾಗ ಮಾತ್ರ, ಯಾವುದೇ ದೇಶ ಜಪಾನ್ ಮಾದರಿಯಲ್ಲಿ ಬೆಳವಣಿಗೆ ಹೊಂದಲು ಸಾಧ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಚತುರ್ದಶಿ ಗಂ. 27-26, ನಕ್ಷತ್ರ ಹಸ್ತ ಗಂ. 20-00 ಯೋಗ: ಹರ್ಷಣ ಗಂ. 28-28 ಕರಣ: ಗರ ಗಂ. 14-21, ಮೇಷ ಮಾಸದ 10 ನೇ ದಿನ, ಮಳೆನಕ್ಷತ್ರ: ಅಶ್ವಿನಿ 3.

ರಾಹುಕಾಲ: ಬೆಳಿಗ್ಗೆ 07-30 - 09-00

ಸೂರ್ಯೋದಯ: 06-17 **ಸೂರ್ಯಾಸ್ತ:** 06-41

ಮುಸ್ಲಿಂ ದಿನಾಂಕ: 12 ಶವ್ವಾಲ್

ಅದೃಷ್ಟ ಸಂಖ್ಯೆ: 6, 8

ಮೇಷ: ವೈದ್ಯ ವೃತ್ತಿಯಲ್ಲಿರುವವರಿಗೆ ಹೃದಯ ವಿದ್ರಾವಕ ರೋಗಿಯೊಬ್ಬರು ಭೇಟಿಯಾಗುವ ಸಾಧ್ಯತೆ ಇದೆ. ಸೂಕ್ಷ್ಮಗ್ರಹಿಯಾದ ನೀವು ಮುಂದಿನ ಆತಂಕ ಕಂಡುಕೊಳ್ಳಲಿದ್ದೀರಿ. ನಿಮ್ಮ ಪ್ರತಿಭೆ ಈ ದಿನ ಬೆಳಕಿಗೆ ಬರಲಿದೆ.

ವೃಷಭ: ನಿರಂತರ ಕೆಲಸ ಕಾರ್ಯಗಳಿಂದಾಗಿ ದಣಿದ ನಿಮಗೆ ಈ ದಿನ ಸಿಗಲಿರುವ ಸ್ವಲ್ಪ ಮಟ್ಟಿನ ಬಿಡುವು ಆರಾಮವೆನಿಸಲಿದೆ. ಸದ್ಗುರುವಿನ ದರ್ಶನದಿಂದ ಮನಸ್ಸಿನಲ್ಲಿರುವ ಪ್ರಶ್ನೆಗೆ ಉತ್ತರ ಸಿಗಲಿದೆ. ಇಂದೇ ಭೇಟಿ ಮಾಡಿ.

ಮಿಥುನ: ರೈತಾಪಿ ವರ್ಗದವರಿಗೆ ಉಸಿರುಗಟ್ಟಿಸುವಂತಹ ಸಂದರ್ಭವಿದ್ದಲ್ಲಿ ಅದನ್ನು ನಿವಾರಿಸಲು ಸರಿಯಾದ ಸಮಯದಲ್ಲಿ ಸ್ನೇಹಿತರೊಬ್ಬರು ಬರಲಿದ್ದಾರೆ. ದೂರದ ಪ್ರಯಾಣಗಳಿಗೆ ಆದಷ್ಟು ಕಡಿವಾಣ ಹಾಕಿ.

ಕರ್ಕಾಟಕ: ಗೆಳೆಯರ ಸವಾಲಿನಲ್ಲಿ ಸದಾ ವಿಜಯ ನಿಮ್ಮದೇ ಆಗಿರುವುದರಿಂದ ಬೇಸರವಿಲ್ಲದೆ ಸಂತಸದಿಂದ ಇರುವಿರಿ. ದುಶ್ಚಟಗಳಿಗೆ ಒಳಗಾಗಿ ಅದರಿಂದ ಹೊರಬರಬೇಕೆಂದು ಇರುವವರು ಇಂದೇ ಪ್ರಯತ್ನ ಆರಂಭಿಸಿ.

ಸಿಂಹ: ದೊಡ್ಡ ಮಟ್ಟದ ಲೋಕಕಲ್ಯಾಣಾರ್ಥವಾಗಿ ನಡೆಸುವ ಧಾರ್ಮಿಕ ಕಾರ್ಯಕ್ರಮಕ್ಕೆ ಸಾರ್ವಜನಿಕರ ಸಹಾಯ ಹಾಗೂ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಬೆಂಬಲ ಸಿಗಲಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ.

ಕನ್ಯಾ: ದೀರ್ಘಕಾಲೀನ ಯೋಜನೆಗಳು ಫಲದಾಯಕವಾಗಿ ವೃತ್ತಿಪರರಿಗೆ ಕಾರ್ಯರಂಗದಲ್ಲಿ ಪ್ರಗತಿ ನೀಡಲಿವೆ. ನಿಮ್ಮ ವ್ರತ ಹಾಗೂ ಅನುಷ್ಠಾನದ ಫಲವಾಗಿ ನಿಮ್ಮ ಮಕ್ಕಳಿಗೆ ಶ್ರೇಯಸ್ಸಾಗುವುದು ಅನುಭವಕ್ಕೆ ಬರುತ್ತದೆ.

ತುಲಾ: ತಾಯಿಗೆ ನುರಿತ ವೈದ್ಯರಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಲು ವಿಶ್ವಾಸಿಗಳಿಂದ ವೈದ್ಯರ ಸಂಪರ್ಕಕ್ಕೆ ನೆರವು ಸಿಗಲಿದೆ. ಉನ್ನತ ಶಿಕ್ಷಣ ಪಡೆದವರು ಓದಿಗೆ ತಕ್ಕಂಥ ಕೆಲಸ ನಿರೀಕ್ಷಿಸುತ್ತಿದ್ದರೆ ಸದ್ಯ ಸಿಗುವುದು ಕಷ್ಟ.

ವೃಶ್ಚಿಕ: ರಾಸಾಯನಿಕ ವಸ್ತುಗಳ ಉತ್ಪಾದನೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಅವಗಢಗಳ ಬಗ್ಗೆ ಎಚ್ಚರ ವಹಿಸುವುದು ಒಳ್ಳೆಯದು. ಓಡುತ್ತಿರುವ ಪ್ರಪಂಚದೊಂದಿಗೆ ನೀವೂ ಸಹ ಓಡಲು ಪ್ರಯತ್ನಿಸುವುದು ಉತ್ತಮ.

ಧನು: ನಿಮ್ಮದೇ ಸಂಸ್ಥೆಯಲ್ಲಿ ನಿಮ್ಮ ಕೈಕೆಳಗೆ ಕೆಲಸ ಮಾಡುತ್ತಿದ್ದ ವ್ಯಕ್ತಿ ಹೊಸ ಸಂಸ್ಥೆಯ ಸ್ಥಾಪನೆ ಮಾಡಿದ್ದನ್ನು ನೋಡಿ ಅಸೂಯೆ ಪಡಬೇಡಿ. ನೀವು ಆಪ್ತರ-ಲ್ಲಿಟ್ಟ ನಂಬಿಕೆಯು ಸುಳ್ಳಾಗುವ ಸಂದರ್ಭ ಬರಬಹುದು.

ಮಕರ: ಈಗ ನಿರ್ಮಾಣವಾಗಿರುವ ನಿಮ್ಮ ಸಂಚಾರಿ ಪ್ರವೃತ್ತಿಯನ್ನು ನಿಗದಿತ ವೇಳಾಪಟ್ಟಿ ಮಾಡಿಕೊಳ್ಳುವ ಮೂಲಕ ಸರಿಪಡಿಸಿಕೊಳ್ಳಬಹುದು. ಇಂದು ನಿಮಗೆ ನಿರ್ಜಲೀಕರಣದಂತಹಾ ಸಮಸ್ಯೆಗಳು ಕಾಡಬಹುದು.

ಕುಂಭ: ದುರ್ಜನರು, ದುರಾಚಾರಿಗಳಿಂದ ಉಂಟಾಗಬಹುದಾದ ಅಪಾಯದ ಸೂಚನೆ ಇದ್ದರೆ ಈ ತಕ್ಷಣವೇ ಮುನ್ನೆಚ್ಚರಿಕೆ ವಹಿಸುವುದು ಹೆಚ್ಚು ಸೂಕ್ತ. ಸಂಘ ಸಂಸ್ಥೆಯ ಜವಾಬ್ದಾರಿಯಿಂದ ಸದ್ಯಕ್ಕೆ ವಿಮುಖರಾಗಬೇಡಿ.

ಮೀನ: ಶಿಕ್ಷಣ ಸಂಸ್ಥೆಗಳನ್ನು ಕಟ್ಟಬೇಕೆಂದು ಯೋಚಿಸುತ್ತಿರುವ ವ್ಯಕ್ತಿಗಳಿಗೆ ಸಹಾಯದ ನೆರವು ಸಿಗಲಿದೆ. ಪ್ರಲೋಭನಗೆ ಒಳಗಾಗಿ ಪಾಲುದಾರರಿಗಾಗಲಿ ಸಹೋದ್ಯೋಗಿಗಳಿಗಾಗಲಿ ಮೋಸ ಮಾಡುವ ಯೋಚನೆ ಬೇಡ.

ಪದಬಂಧ 5658

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಆಹಾರವನ್ನು ಸೇವಿಸದಿರುವುದು (4)
3. ಹಜಾರ ಇಲ್ಲಿ ಕಾಣುತ್ತಿದೆ (4)
5. ಕುಂಬಾರನ ಚಕ್ರ (3)
6. ಕುದುರೆಯನ್ನೇರುವ ಬಳೆ (3)
8. ಕದಕ್ಕೆ ತಾಕಿಸಿರುವ ಕನ್ನೆ (3)
9. ಅಂಕಣದಲ್ಲಿ ಕಾಣಿಸಿದ ಸಂಖ್ಯೆ (2)
10. ಅರವತ್ತು ನಿಮಿಷಗಳ ಕಾಲಾವಧಿ (2)
11. ಈ ರೀತಿ ವಂದಿಸು (3)
12. ಸ್ವಾರಸ್ಯವಾದ ಕಥೆಯಿದು (3)
14. ಚಕಚಕನೆ ನೇಯುವ ರಾಟೆ (3)
15. ಕಚಕ್ಕನೆ ಕತ್ತರಿಸಿರುವ ತಲೆಗೂದಲು (2)
16. ಚಾರ ಕೊನೆಗಿದ್ದಾಗಲೇ ಈ ದುರದೃಷ್ಟ! (4)
17. ಚಮ್ಮಾರ ತೋರಿಸಿದ ವಿಸ್ಮಯ (4)

ಮೇಲಿಂದ ಕೆಳಕ್ಕೆ

1. ದಾರಿಯ ಕೊನೆಗಿರುವ ದಾನಶೀಲ (3)
2. ಸವತಿಯ ಹತ್ತಿರವಿರುವ ಹೆಂಡತಿ (2)
3. ಮೋಸಕ್ಕೆ ಹೆಸರಾದ ಪ್ರಾಣಿ ಇಲ್ಲಿಗೆ ಬಂದಿದೆಯಲ್ಲಾ? (2)
4. ಒನಪು ತೋರಿದಾಗ ಬಂದಿರುವ ಸ್ಮರಣೆ (3)
7. ಈ ರೀತಿ ಸಮರ್ಥಿಸು (5)
8. ಚಪ್ಪಾಳೆಯನ್ನು ಈ ರೀತಿ ಹೇಳಿ (5)
11. ಉಗುರಿನ ಮೊನೆ (3)
13. ತೆರ ನೀಡದ ಪದ್ದ (3)
14. ಜೀವಂತ ವಸ್ತುವಿದು (2)



5657ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1. ಹತ್ಯಾಕಾಂಡ 3. ಕಲರವ
5. ಬಸುರಿ 6. ಉರ
7. ಪತಿತ 9. ನೀರಸ
11. ಸ್ನಾನ 14. ರಥಿಕ
15. ಕಡಿವಾಣ 16. ರತಿಪತಿ

ಮೇಲಿಂದ ಕೆಳಕ್ಕೆ:

1. ಹಸ್ತಕ್ಷೇಪ 2. ಡಬರಿ
3. ಕರಿಕು 4. ವಠಾರ
6. ಉಪಚಾರ 8. ತಿರೋಧಾನ
10. ಸಭಾಪತಿ 11. ಸ್ಥಾಪಕ
12. ಹೂರಣ 13. ಮಕರ

ಸುಡೊಕು 6043

2				9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6042 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಪ್ರಜಾ ಮತ

2024 ಜನತಂತ್ರದ ಹಬ್ಬ

ಮೊದಲ ಮತದ ಸಂಭ್ರಮ

ಸ್ಫೂರ್ತಿ ಕುಲಕರ್ಣಿ, ಹಾವೇರಿ

ನಾನು ಮೊದಲ ಬಾರಿಗೆ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿರುವುದು ತುಂಬಾ ಖುಷಿ ತಂದಿದೆ. ನನ್ನ ಹಕ್ಕು ಚಲಾಯಿಸುವ ಕುತೂಹಲದ ಕ್ಷಣಕ್ಕಾಗಿ ಕಾಯುತ್ತಿರುವೆ. ಜಾತಿ, ಧರ್ಮ, ಹಣ, ಹೆಂಡ ಮುಂತಾದ ಆಮಿಷಕ್ಕೆ ಒಳಗಾಗಿ ನಮ್ಮ ಮತ ಮಾರಿಕೊಳ್ಳಬಾರದು. ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ವಿದ್ಯಾರ್ಹತೆ, ಸೇವಾ ಮನೋಭಾವ, ಪ್ರಾಮಾಣಿಕತೆ ನೋಡಿ ಮತ ಹಾಕಬೇಕು. ಎಲ್ಲ ಉತ್ಸಾಹಿ ಯುವಕ–ಯುವತಿಯರು ನಮ್ಮ ದೇಶದ ಸುಭದ್ರತೆಗೆ ಅರ್ಹ ಪ್ರಾಮಾಣಿಕ ಅಭ್ಯರ್ಥಿಗೆ ಮತದಾನ ಮಾಡಬೇಕು.

ರೇಣುಕರಾಜ ಎಸ್. ತೆಕ್ಕಲಕೋಟೆ, ಬಳ್ಳಾರಿ

ಇದು ನನ್ನ ಮೊದಲ ಮತದಾನ. ನನ್ನ ನಾಗರಿಕ ಕರ್ತವ್ಯ ನಿರ್ವಹಿಸಲು ಉತ್ಸುಕನಾಗಿರುವೆ. ನಮ್ಮ ದೇಶದ ಭವಿಷ್ಯ ರೂಪಿಸುವ ಮತ್ತು ಸೂಕ್ತ ಜನಪ್ರತಿನಿಧಿಯನ್ನು ಆಯ್ಕೆ ಮಾಡುವ ಅವಕಾಶಕ್ಕೆ ಕಾಯುತ್ತಿದ್ದೇನೆ. ಈ ಚುನಾವಣೆ ಕೇವಲ ಅಭ್ಯರ್ಥಿಗಳಿಗಲ್ಲ. ಇದು ನನಗೆ ಮತ್ತು ನನ್ನ ಪೀಳಿಗೆಗೆ ಹೆಚ್ಚು ಮುಖ್ಯ. ಮೌಲ್ಯಗಳನ್ನು ಎತ್ತಿಹಿಡಿಯಲು, ಸಮಸ್ಯೆಗಳಿಗೆ ಪರಿಹಾರ ಹುಡುಕಲು ಮತ್ತು ಪ್ರಜಾಸತ್ತಾತ್ಮಕ ಸರ್ಕಾರ ರಚಿಸಲು ಹೆಮ್ಮೆಯಿಂದ ಮತ ಚಲಾಯಿಸುವೆ.

ಮತ ಆಮಿಷ: ಆಯೋಗದ ವಶ

₹75.47 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹80.41 ಕೋಟಿ
ಮದ್ಯ	₹177.34 ಕೋಟಿ (1.46 ಕೋಟಿ ಲೀ)
ಮಾದಕವಸ್ತು	₹11.23 ಕೋಟಿ (525 ಕೆ.ಜಿ.)
ಚಿನ್ನ	₹57.67 ಕೋಟಿ (108.48 ಕೆ.ಜಿ.)
ಬೆಳ್ಳಿ	₹1.18 ಕೋಟಿ (301.89 ಕೆ.ಜಿ.)

ಎಂಥಾ ಮಾತು!

'ಯತ್ನಾಳ ಅವರು ವಿಶ್ವಗುರು, ದೇಶದ ಎನ್‌ಸೈಕ್ಲೋಪಿಡಿಯಾ. ಅವರಿಗೆ ಎಲ್ಲ ಮಾಹಿತಿ ಇರುತ್ತದೆ. ಯಾರು ಹಣ ಕೊಡುತ್ತಾರೆ? ಹೇಗೆ ಕೊಡುತ್ತಾರೆ ಎಂಬುದು ಅವರಿಗೆ ಗೊತ್ತಿರುತ್ತದೆ. ಸ್ವಾಮೀಜಿಗೆ ₹500 ನೋಟು ಕೊಟ್ಟಿದ್ದಾರೋ, ₹2 ಸಾವಿರ ನೋಟು ಕೊಟ್ಟಿದ್ದಾರೋ ಅವರನ್ನೇ ಕೇಳಬೇಕು. ಯಾರ ಮೇಲೆ ಏನು ಬೇಕಾದರೂ ಮಾತನಾಡುವ ಹವ್ಯಾಸ ಅವರಿಗಿದೆ, ಹಾರಿಕೆ ಹೇಳಿಕೆ ನೀಡುವಲ್ಲಿ ನಿಸ್ಸೀಮರಿದ್ದಾರೆ'

ಸಂತೋಷ್ ಲಾಡ್, ಸಚಿವ

('ದಿಂಗಾಲೇಶ್ವರ ಶ್ರೀಗಳಿಗೆ ಹಣ ನೀಡಿ ಚುನಾವಣೆಗೆ ನಿಲ್ಲಿಸಲಾಗಿದೆ' ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಕ್ಕೆ ಪ್ರತಿಕ್ರಿಯೆ)

14 ವರ್ಷ ಸಿಎಂ, 10 ವರ್ಷ ಪ್ರಧಾನಿಯಾದ ನರೇಂದ್ರ ಮೋದಿ ಅವರ ಬಳಿ ₹2.30 ಕೋಟಿ ಆಸ್ತಿ ಇದೆ. ಕೊತ್ವಾಲ್ ರಾಮಚಂದ್ರಗೆ ಸಿಗರೇಟ್, ಚಹಾ ತಂದುಕೊಟ್ಟಂತಹ ಡಿ.ಕೆ. ಶಿವಕುಮಾರ ಸಹೋದರರ ಬಳಿ ಅಧಿಕೃತವಾಗಿ ಘೋಷಿಸಿಕೊಂಡಂತೆ ₹2 ಸಾವಿರ ಕೋಟಿ ಆಸ್ತಿ ಎಲ್ಲಿಂದ ಬಂತು? ರಾಜ್ಯದ ಜನರಿಗೆ ಚೊಂಬು ಕೊಟ್ಟಿದ್ದು ನೀವೋ, ನಾವೋ ಎಂಬುದನ್ನು ಜನ ತೀರ್ಮಾನಿಸುತ್ತಾರೆ

ಬಸನಗೌಡ ಪಾಟೀಲ ಯತ್ನಾಳ, ಶಾಸಕ

'ಮೋದಿಗೆ 'ಚೊಂಬು'; 'ಇಂಡಿಯಾ'ಕ್ಕೆ ಬೆಂಬಲ'

ಪ್ರಜಾವಾಣಿ ಸಂದರ್ಶನ

ರಣದೀಪ್ ಸಿಂಗ್ ಸುರ್ಜೇವಾಲಾ

'ಮೋದಿಯವರದ್ದು 'ಚೊಂಬು' ಮಾದರಿ. ನಕಲಿ, ಸುಳ್ಳು 'ಗ್ಯಾರಂಟಿ'. ಈ ಬಾರಿ ಸರ್ವಾಧಿಕಾರದ ವಿರುದ್ಧ ಜನ ಮತ ಚಲಾಯಿಸುವುದು ಖಚಿತ. ಪರಿಣಾಮ, ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ 20ಕ್ಕೂ ಹೆಚ್ಚು, ದೇಶದಲ್ಲಿ 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ವಿಶ್ವಾಸ ವ್ಯಕ್ತಪಡಿಸಿದರು. 'ಮೋದಿ ನೀಡಿದ 'ಚೊಂಬು' ಅನ್ನು ಅವರಿಗೇ ಹಿಂದಿರುಗಿಸಲು ಮತದಾರರು ಈಗಾಗಲೇ ನಿರ್ಧರಿಸಿದ್ದಾರೆ. ಈಗಾಗಲೇ ಮತದಾನ ನಡೆದಿರುವ 102 ಕ್ಷೇತ್ರಗಳ ಮೊದಲ ಹಂತದ ಚುನಾವಣೆಯು ಮೋದಿ, ಶಾ, ನಡ್ಡಾ ಅವರ ನಿದ್ದೆಗೆಡಿಸಿದೆ' ಎಂದರು. 'ಪ್ರಜಾವಾಣಿ'ಗೆ ಸುರ್ಜೇವಾಲಾ ನೀಡಿದ ವಿಶೇಷ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

• ರಾಜೇಶ್ ರೈ ಚಟ್ಲ

• **ಮೋದಿ ಮತ್ತು ಅವರ ಸರ್ಕಾರದ ವಿರುದ್ಧ 'ಚೊಂಬು' ಹಿಡಿದಿದ್ದೀರಿ. ಏನಿದು?**

ಅವರು (ಮೋದಿ) ರಾಜ್ಯ ಮತ್ತು ದೇಶದ ಜನರಿಗೆ 10 ವರ್ಷಗಳ ಆಡಳಿತದಲ್ಲಿ ನೀಡಿದ್ದು 'ಚೊಂಬು' ಅಲ್ಲವೇ? ಕೊಟ್ಟ ಭರವಸೆಯಲ್ಲಿ ಯಾವುದನ್ನು ಈಡೇರಿಸಿದ್ದಾರೆ? 2 ಕೋಟಿ ಉದ್ಯೋಗ, ಎಲ್ಲರ ಖಾತೆಗೆ ₹15 ಲಕ್ಷ, ರೈತರ ಆದಾಯ ದ್ವಿಗುಣ, 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ನೀಡಬೇಕಿದ್ದ ₹62 ಸಾವಿರ ಕೋಟಿ, 2022ರೊಳಗೆ 100 ಸ್ಮಾರ್ಟ್ ಸಿಟಿ ಅಭಿವೃದ್ಧಿ, 2022ರೊಳಗೆ ಎಲ್ಲರಿಗೂ ಪಕ್ಕಾ ಮನೆ, ರಾಜ್ಯಕ್ಕೆ ಬರ ಪರಿಹಾರ, ತೆರಿಗೆ ಹಣ ಪಾಲು, ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಘೋಷಿಸಿದ್ದ ಹಣ... ಹೀಗೆ ಎಲ್ಲವೂ 'ಚೊಂಬು'. ಇಷ್ಟೆಲ್ಲ ಚೊಂಬು ನೀಡಿದ ಮೋದಿ ಮತ್ತು ಅವರ ಪಕ್ಷಕ್ಕೆ ಜನ ಈ ಬಾರಿ 'ಚೊಂಬು' ಮರಳಿಸುವುದರಲ್ಲಿ ಯಾವ ಅನುಮಾನವೂ ಇಲ್ಲ.

• **ಅಂದರೆ, ಮೋದಿ ಅವರು ಅಧಿಕಾರದಿಂದ ದೂರ ಉಳಿಯಲಿದ್ದಾರೆಂದೇ?**

ಖಂಡಿತ. 2004ರ ಚುನಾವಣೆಯ ಫಲಿತಾಂಶ ಈ ಬಾರಿ ಮರುಕಳಿಸಲಿದೆ. ಕಾಂಗ್ರೆಸ್ ತನ್ನ ಸ್ವಂತ ಬಲದಲ್ಲಿ 200ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ. ಅಟಲ್ ಬಿಹಾರಿ ವಾಜಪೇಯಿ ಮತ್ತು ಬಿಜೆಪಿ ಸರ್ಕಾರದ 'ಇಂಡಿಯಾ ಶೈನಿಂಗ್' ಪ್ರಚಾರದ ವಿರುದ್ಧ ಜನರು ಮತ ಚಲಾಯಿಸಿರಲಿಲ್ಲವೇ? ಈ ಚುನಾವಣೆಯಲ್ಲಿ ಮೋದಿ ಮತ್ತು ಅವರ ನೇತೃತ್ವದ ಸರ್ಕಾರದ ವಿರುದ್ಧ ಜನಾಭಿಪ್ರಾಯ ಬರಲಿದೆ.

• **ಕರ್ನಾಟಕದಲ್ಲಿ ನೀವು (ಕಾಂಗ್ರೆಸ್) ಎಷ್ಟು ಸ್ಥಾನ ಗೆಲ್ಲುತ್ತೀರಿ?**

ಕಳೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಬಿಜೆಪಿ, ಜೆಡಿಎಸ್ ಪಕ್ಷದ 27 ಜನ ಲೋಕಸಭಾ ಸದಸ್ಯರು ಕೂಡಾ ರಾಜ್ಯಕ್ಕೆ ನೀಡಿದ್ದು 'ಚೊಂಬು' ಅಲ್ಲವೇ? ಹೀಗಾಗಿ, ಬಿಜೆಪಿ–ಜೆಡಿಎಸ್ ಮೈತ್ರಿಕೂಟಕ್ಕೆ 6.5 ಕೋಟಿ ಕನ್ನಡಿಗರು ಕೂಡಾ ಅದೇ ಚೊಂಬು ನೀಡಿ ಮನೆಗೆ ಕಳುಹಿಸಲಿದ್ದಾರೆ. ಹೀಗಾಗಿ, ರಾಜ್ಯದಲ್ಲಿಯೂ ಫಲಿತಾಂಶ ರಿವರ್ಸ್ ಆಗಲಿದೆ. ನಾವು 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ. ನಾನು ಮಾಡಿಸಿದ ಸರ್ವೆ ಪ್ರಕಾರ 23 ಸ್ಥಾನ ಬರಲಿದೆ. ದಿನದಿಂದ ದಿನಕ್ಕೆ ಪರಿಸ್ಥಿತಿ ಸುಧಾರಿಸುತ್ತಿದೆ.

• **'ಇಂಡಿಯಾ' ಮೈತ್ರಿಕೂಟದಲ್ಲಿನ ಒಗ್ಗಟ್ಟು ಬಿಕ್ಕಟ್ಟಿನಲ್ಲಿದೆಯಲ್ಲ?**

ಹಾಗೇನೂ ಇಲ್ಲ. ನಮ್ಮದು ವೈವಿಧ್ಯದಲ್ಲಿ ಏಕತೆಯನ್ನು ಪ್ರತಿನಿಧಿಸುವ ಮೈತ್ರಿಕೂಟ. ಪರಸ್ಪರ ವಿಶ್ವಾಸ ಗಟ್ಟಿಯಾಗಿದೆ. ಈ ನಡುವೆಯೂ ಪ್ರತಿಯೊಂದು ರಾಜಕೀಯ ಪಕ್ಷವು ತನ್ನ ನೆಲದಲ್ಲಿ ರಾಜಕೀಯ ನೆಲೆಯನ್ನು ಗಟ್ಟಿಗೊಳಿಸಲು ಯತ್ನಿಸುವುದು ಸಹಜ. ಅದೇ ಕಾರಣಕ್ಕೆ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯವರ ಪಕ್ಷ ಪ್ರತ್ಯೇಕವಾಗಿ ಸ್ಪರ್ಧಿಸಿದೆ. ಮೈತ್ರಿಕೂಟ ಮತ್ತು ಅವರ ಸೈದ್ಧಾಂತಿಕವಾದ ಯೋಚನೆ, ರಾಷ್ಟ್ರೀಯ ಹಿತಾಸಕ್ತಿಯ ವಿಚಾರದಲ್ಲಿ ನಿಲುವು, ಗುರಿ ಒಂದೇ ಆಗಿದೆ. ಹೀಗಾಗಿ, ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳ ವಿಚಾರದಲ್ಲಿ ನಾವು ಒಂದಾಗುತ್ತೇವೆ. ಚುನಾವಣೆಯ ಬಳಿಕ ಒಂದೇ ಸೂರಿನಡಿ ಸೇರುತ್ತೇವೆ.

• **'ಗ್ಯಾರಂಟಿ'ಗಳು ಕೈಹಿಡಿಯಬಹುದೆಂಬ ಆತ್ಮವಿಶ್ವಾಸವೇ?**

ನಮ್ಮದು ಎಲ್ಲ ವರ್ಗಗಳ ಜನರಿಗೆ ಆದಾಯವನ್ನು ಸಮಾನವಾಗಿ ಹಂಚುವ ಹಾಗೂ ಕಲ್ಯಾಣ ಆಶಯದ 'ಗ್ಯಾರಂಟಿ'ಗಳು. ಬೆಲೆ ಏರಿಕೆ, ನಿರುದ್ಯೋಗ, ಹಣದುಬ್ಬರ, ಕುಸಿದ ಆರ್ಥಿಕತೆಯ ಮಧ್ಯೆ ಬಡವರು, ಶ್ರಮಿಕರು, ಮಧ್ಯಮ ವರ್ಗದವರು, ವೇತನ ಪಡೆಯುವವರು, ಪರಿಶಿಷ್ಟರು, ಹಿಂದುಳಿದವರು ಹೀಗೆ 100 ಕೋಟಿ ಜನರ ಬದುಕು ಕಟ್ಟಿಕೊಡುವ ಯೋಜನೆಗಳು. ಕರ್ನಾಟಕದ ಜನರಿಗೆ ನೀಡಿದ್ದ ಭರವಸೆಯಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಜನರಿಗೆ ವಿಶ್ವಾಸ ಬಂದಿದೆ. ರಾಷ್ಟ್ರೀಯ ಮಟ್ಟದಲ್ಲಿ ಘೋಷಿಸಿದ 25 ಅಂಶಗಳ ಐದು 'ಗ್ಯಾರಂಟಿ'ಗಳನ್ನು ಜನ ಒಪ್ಪುವ ವಿಶ್ವಾಸವಿದೆ.

• **'ಗ್ಯಾರಂಟಿ' ಯೋಜನೆಗಳು ಹೊರತುಪಡಿಸಿದರೆ ಯಾವ ವಿಚಾರಗಳು ಈ ಬಾರಿ ಮತದಾರರನ್ನು ಪ್ರಭಾವಿಸಬಹುದು?**

ಬೆಲೆ ಏರಿಕೆ, ಹಣದುಬ್ಬರ, ಆರ್ಥಿಕತೆ ಕುಸಿತ ಕೂಡಾ ಗೇಮ್ ಚೇಂಜರ್ ಆಗಲಿದೆ. ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ ರೈತರನ್ನು ಭಯೋತ್ಪಾದಕರು, ಗೂಂಡಾಗಳು, ನಕ್ಸಲರು ಎಂದೆಲ್ಲ ಬಿಜೆಪಿಯವರು ಕರೆದರು. ರೈತರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ನಾವು ಅಧಿಕಾರಕ್ಕೆ ಬಂದರೆ ರೈತರ ಸಾಲ ಸಂಪೂರ್ಣ ಮನ್ನಾ, ನರೇಗಾ ಕೂಲಿ ₹400ಕ್ಕೆ ಹೆಚ್ಚಿಸುತ್ತೇವೆಂದು ಘೋಷಿಸಿದ್ದೇವೆ. ಇನ್ನು ಮೋದಿ ಸರ್ಕಾರ ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯಗಳಿಗೆ ಅನ್ಯಾಯ ಮಾಡಿದೆ. ಕರ್ನಾಟಕಕ್ಕೆ ತೆರಿಗೆ ಜೊತೆಗೆ ಅನುದಾನ ಹಂಚಿಕೆಯಲ್ಲೂ ಅನ್ಯಾಯ ಮಾಡಿದೆ. ಬರ ಪರಿಹಾರ ಬಿಡುಗಡೆಗಾಗಿ ಸರ್ಕಾರವು ಸುಪ್ರೀಂ ಕೋರ್ಟ್‌ನ ಕದ ತಟ್ಟಿದೆ. ಈ ಎಲ್ಲ ಅಂಶಗಳೂ ಫಲಿತಾಂಶದ ಮೇಲೆ ಪರಿಣಾಮ ಬೀರಲಿವೆ. ಇಡೀ ದೇಶದ, ಕಾಂಗ್ರೆಸ್‌ನ ರಾಜಕೀಯ ಚಿತ್ರಣವನ್ನೇ ಬದಲಿಸಲಿದೆ.

• **ಎನ್‌ಡಿಎ ಮೋದಿಯವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಿದೆ. 'ಇಂಡಿಯಾ' ಮೈತ್ರಿಕೂಟದ ಮುಖ ಯಾರು?**

ನಾವು ಸಂಸದೀಯ ವ್ಯವಸ್ಥೆಯನ್ನು ಗೌರವಿಸುತ್ತೇವೆ. ನಮ್ಮದು ಚೀನಾ ಮಾದರಿಯ ಸರ್ವಾಧಿಕಾರ ಅಲ್ಲ. ಮೋದಿ ಅವರದ್ದು ಚೀನಾ ಮಾದರಿ. ಸಂಸತ್ತಿಗೆ ಚುನಾಯಿತರಾದ ಸದಸ್ಯರು ತಮ್ಮ ನಾಯಕನನ್ನು ಆಯ್ಕೆ ಮಾಡಲಿದ್ದಾರೆ. ಅತೀ ಹೆಚ್ಚು ಸ್ಥಾನ ಗೆದ್ದ ಪಕ್ಷದಿಂದ ಪ್ರಧಾನಿ ಆಯ್ಕೆ ಆಗುತ್ತಾರೆ. ❖

'ಸೂಕ್ತ ಸಮಯದಲ್ಲಿ ಸಚಿವರ ಮೌಲ್ಯಮಾಪನ'

• **ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಬಗ್ಗೆ ಏನು ಹೇಳಲು ಬಯಸುತ್ತೀರಿ?**

ನಮ್ಮದು ಉತ್ತರದಾಯಿತ್ವ ಹೊಂದಿರುವ, ಸ್ಥಿರ ಸರ್ಕಾರ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಒಂದು ತಂಡವಾಗಿ ಆಡಳಿತ ನಡೆಸುತ್ತಿದೆ. ಚುನಾವಣೆಯ ಸಂದರ್ಭದಲ್ಲಿ ಘೋಷಿಸಿದ್ದ 'ಗ್ಯಾರಂಟಿ' ಯೋಜನೆಗಳ ಅನುಷ್ಠಾನದ ಮೂಲಕ ₹58 ಸಾವಿರ ಕೋಟಿಯನ್ನು ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ ಫಲಾನುಭವಿಗಳಿಗೆ ನೇರವಾಗಿ ತಲುಪಿಸಿ ಬದುಕು ಹಸನುಗೊಳಿಸಿದೆ. ಕನ್ನಡಿಗರು ಈ ಸರ್ಕಾರದ ಭಾಗೀದಾರರು, ಚಾಲಕರು. ಇನ್ನು, ಸೂಕ್ತ ಸಮಯದಲ್ಲಿ ನಿಗಮ– ಮಂಡಳಿಗಳ ಅಧ್ಯಕ್ಷರು, ಶಾಸಕರು, ಸಚಿವರು ಕಾರ್ಯವೈಖರಿಯ ಮೌಲ್ಯಮಾಪನ ಮಾಡುತ್ತೇವೆ. ಅಷ್ಟೇ ಅಲ್ಲ, ಪಕ್ಷದ ಉಸ್ತುವಾರಿಯಾಗಿ ನನ್ನ ಕೆಲಸ, ಸಂಘಟನೆಯ ಹೊಣೆ ಹೊತ್ತವರ ಚಟುವಟಿಕೆಗಳು ಪರಾಮರ್ಶೆಗೆ ಒಳಪಡಲಿವೆ.

• **'ಅಧಿಕಾರ ಹಂಚಿಕೆ' ಸೂತ್ರದ ಬಗ್ಗೆ?**

ಈ ಬಗ್ಗೆ ನಾನು ಎಲ್ಲೂ ಮಾತನಾಡಿಲ್ಲ. ಅಷ್ಟೇ ಅಲ್ಲ, ಈ ಪ್ರಶ್ನೆಗೆ ಪ್ರತಿಕ್ರಿಯಿಸಲೂ ಬಯಸುವುದಿಲ್ಲ.

₹2 ಕೋಟಿ ನಗದು ವಶ: ಬಿಜೆಪಿ ಕಾರ್ಯದರ್ಶಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ₹2 ಕೋಟಿ ನಗದು ಸಾಗಿಸುತ್ತಿದ್ದುದನ್ನು ಚುನಾವಣಾ ಅಕ್ರಮ ತಡೆ ತಂಡ ಪತ್ತೆಹಚ್ಚಿದ್ದು, ಬಿಜೆಪಿ ರಾಜ್ಯ ಘಟಕದ ಕಾರ್ಯಾಲಯ ಕಾರ್ಯದರ್ಶಿ ಲೋಕೇಶ್ ಅಂಬೆಕಲ್ಲು, ಇತರ ಇಬ್ಬರ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ತನಿಖಾ ಠಾಣೆಯಲ್ಲಿ ಶನಿವಾರ ಸಂಜೆ ಕಾರು ತಪಾಸಣೆ ವೇಳೆ ನಗದು ಪತ್ತೆಯಾಗಿತ್ತು. ಅದು ಬಿಜೆಪಿ ರಾಜ್ಯ ಕಚೇರಿಗೆ ಸೇರಿದ್ದು ಎಂದು ಕಾರಿನಲ್ಲಿದ್ದವರು ದಾಖಲೆ ಒದಗಿಸಿದ್ದರು. ಚುನಾವಣಾಧಿಕಾರಿಗಳು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ವಶಕ್ಕೆ ನಗದನ್ನು ನೀಡಿ, ಸೂಕ್ತ ಕ್ರಮ ಜರುಗಿಸುವಂತೆ ಕೋರಿದ್ದರು.

ಹಣವನ್ನು ಬ್ಯಾಂಕ್‌ನಿಂದ ನಗದೀಕರಿಸಿರುವ ದಾಖಲೆಗಳಿವೆ. ಆದಾಯ ತೆರಿಗೆ (ಐ.ಟಿ) ಕಾಯ್ದೆ ಉಲ್ಲಂಘನೆ ಆಗಿಲ್ಲ ಎಂದು ಐ.ಟಿ ಅಧಿಕಾರಿಗಳು ತಿಳಿಸಿ, ಚುನಾವಣಾಧಿಕಾರಿಗಳಿಗೆ ನಗದನ್ನೂ ಮರಳಿಸಿದ್ದರು. ಕೇಂದ್ರ ಚುನಾವಣಾ ಆಯೋಗದ ನಿರ್ದೇಶನ ಉಲ್ಲಂಘಿಸಿ ನಗದು ಸಾಗಿಸುತ್ತಿದ್ದ ಆರೋಪದಡಿ ಕೋರ್ಟ್ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಲಾಗಿದೆ.

'ಬ್ಯಾಂಕ್‌ನಿಂದ ಚೆಕ್ ಮೂಲಕ ನಗದು ಡ್ರಾ ಮಾಡಿದ್ದು, ಕಾರ್ಯಕರ್ತರಿಗೆ ನೀಡಲು ಕಳುಹಿಸಲಾಗುತ್ತಿದೆ ಎಂದು ಉಲ್ಲೇಖಿಸಿದ್ದ ಬಿಜೆಪಿ ರಾಜ್ಯ ಘಟಕದ ಕಾರ್ಯಾಲಯದ ಪತ್ರ ಕಾರಿನಲ್ಲಿತ್ತು. ಈ ಕುರಿತು ಐ.ಟಿ ಇಲಾಖೆ ಅಧಿಕಾರಿಗಳು ವಿಚಾರಣೆ ನಡೆಸಿದ್ದು, ಆದಾಯ ತೆರಿಗೆ ವಂಚನೆ ಆಗಿಲ್ಲ ಎಂಬುದು ಕಂಡುಬಂದಿತ್ತು' ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಪಕ್ಷದ ಪದಾಧಿಕಾರಿಗಳು ಅಥವಾ ಅಭ್ಯರ್ಥಿಗಳ ಏಜೆಂಟರ ವೆಚ್ಚಕ್ಕೆ ₹10,000ಕ್ಕಿಂತ ಹೆಚ್ಚು ಮೊತ್ತವನ್ನು ನಗದು ರೂಪದಲ್ಲಿ ನೀಡುವಂತಿಲ್ಲ ಎಂಬುದು ಆಯೋಗದ ನಿರ್ದೇಶನದಲ್ಲಿದೆ. ಮಿತಿಗಿಂತ ಹೆಚ್ಚು ಮೊತ್ತವನ್ನು ಚೆಕ್, ಆನ್‌ಲೈನ್ ಮೂಲಕ ಪಾವತಿಸುವುದು ಕಡ್ಡಾಯ. ಈ ನಿರ್ದೇಶನ ಉಲ್ಲಂಘಿಸಿರುವುದಲ್ಲದೇ, ಹಣ ಪಡೆಯುವವರ ಪಟ್ಟಿ ಒದಗಿಸಿಲ್ಲ. ನಗದನ್ನು ಚುನಾವಣಾ ಅಕ್ರಮಕ್ಕೆ ಬಳಸುವ ಶಂಕೆಯ ಮೇಲೆ ಪ್ರಜಾ ಪ್ರಾತಿನಿಧ್ಯ ಕಾಯ್ದೆ, ಐಪಿಸಿಯಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

'ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿ ಶನಿವಾರ ಅರ್ಜಿ ಸಲ್ಲಿಸಲಾಗಿತ್ತು. ಭಾನುವಾರ ಬೆಳಿಗ್ಗೆ ಕೋರ್ಟ್ ಅನುಮತಿ ಲಭಿಸಿತ್ತು. ಲೋಕೇಶ್ ಅಂಬೆಕಲ್ಲು, ವಾಹನ ಚಾಲಕ ವೆಂಕಟೇಶ್ ಪ್ರಸಾದ್ ಮತ್ತು ಸಹ ಪ್ರಯಾಣಿಕ ಗಂಗಾಧರ್ ಎಂಬವರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

ನ್ಯಾಯಯುತ ತನಿಖೆ: ಕೃಷ್ಣಬೈರೇಗೌಡ ಆಗ್ರಹ

'ಚುನಾವಣೆಯ ಖರ್ಚಿಗೆ ಬಿಜೆಪಿ ನಾಯಕರು ಅಕ್ರಮವಾಗಿ ಸಾಗಿಸುತ್ತಿದ್ದ ₹2 ಕೋಟಿ ಜಪ್ತಿ ಪ್ರಕರಣದಲ್ಲಿ ಅಧಿಕಾರಿಗಳು ನ್ಯಾಯಯುತ ತನಿಖೆ ನಡೆಸಬೇಕು' ಎಂದು ಸಚಿವ ಕೃಷ್ಣ ಬೈರೇಗೌಡ ಒತ್ತಾಯಿಸಿದರು. 'ಹಣ ವಶ ಕುರಿತು ಚುನಾವಣಾ ಅಧಿಕಾರಿಗಳು, ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೂ ಮಾಹಿತಿ ನೀಡಿದ್ದಾರೆ. ಆದರೆ, ಈ ಹಣಕ್ಕೆ ಜಪ್ತಿಯಾದ ನಾಲ್ಕು ಗಂಟೆಯಲ್ಲೇ ಕ್ಲೀನ್ ಚಿಟ್ ನೀಡಿರುವುದು ಸರಿಯಲ್ಲ' ಎಂದು ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ನಾಯಕರು ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಂಡು ವ್ಯವಸ್ಥೆಯನ್ನೇ ಅವಮಾನಿಸುವಂತೆ ಚುನಾವಣೆ ನಡೆಸುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ಸರ್ಜಿಕಲ್ ಸ್ಟ್ರೈಕ್' ಎಂದು ಅಭಿಪ್ರಾಯಪಟ್ಟರು.

14 ಕ್ಷೇತ್ರ: ಕಣ ಚಿತ್ರಣ ಇಂದು ಸ್ಪಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯುವ 14 ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯಲು ಸೋಮವಾರ ಕಡೇ ದಿನ. ಬಳಿಕ ಈ ಕ್ಷೇತ್ರಗಳ ಚುನಾವಣಾ ಕಣದ ಸ್ಪಷ್ಟಚಿತ್ರಣ ದೊರಕಲಿದೆ.

ಈ ಕ್ಷೇತ್ರಗಳಲ್ಲಿ ಏ. 12ರಂದು ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. 28 ಮಹಿಳೆಯರು ಸೇರಿ 337 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಶಿವಮೊಗ್ಗದಲ್ಲಿ ಸಂಸದ ಬಿ.ವೈ.ರಾಘವೇಂದ್ರ ವಿರುದ್ಧ ಬಿಜೆಪಿ ನಾಯಕ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಬಂಡಾಯ ಸಾರಿದ್ದಾರೆ. ದಾವಣಗೆರೆಯಲ್ಲಿ ಕಾಂಗ್ರೆಸ್‌ನ ಡಾ.ಪ್ರಭಾ ಮಲ್ಲಿಕಾರ್ಜುನ ವಿರುದ್ಧ ಇನ್‌ಸೈಟ್ಸ್ ಐಎಎಸ್ ಅಕಾಡೆಮಿಯ ಜಿ.ಬಿ.ವಿನಯ್ ಕುಮಾರ್ ಬಂಡಾಯ ಸಾರಿದ್ದಾರೆ.

ಕ್ಷೇತ್ರ ಸಮೀಕ್ಷೆ

ಸ್ಪಷ್ಟವಾದ ನೀಲನಕ್ಷೆ ಯಾರಲ್ಲೂ ಇಲ್ಲ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **75.22%**

8,78,702 ಪುರುಷರು
8,99,501 ಮಹಿಳೆಯರು
17,78,310 ಒಟ್ಟು ಮತದಾರರ ಸಂಖ್ಯೆ
107 ಲಿಂಗತ್ವ ಅಲ್ಪಸಂಖ್ಯಾತರು

ಕ್ಷೇತ್ರವನ್ನು ಕಾಡುವ ವಿಷಯಗಳು

- ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿ
- ಕ್ಷೇತ್ರ ವ್ಯಾಪ್ತಿಯಲ್ಲಿ ಮೂಲ ಸೌಕರ್ಯಗಳ ಕೊರತೆ
- ಚಾಮರಾಜನಗರ ಕೊಳ್ಳೇಗಾಲ–ಕನಕಪುರ–ಬೆಂಗಳೂರು ರೈಲು ಯೋಜನೆ ಸಾಕಾರವಾಗಿಲ್ಲ
- ಅಭಿವೃದ್ಧಿ ಆಗದ ಪ್ರವಾಸೋದ್ಯಮ
- ಅಕ್ರಮ ಗಣಿಗಾರಿಕೆ
- ಪ್ರಗತಿಯಾಗದ ಕಾಡಂಚಿನ ಪ್ರದೇಶಗಳು, ಗಿರಿಜನರ ಹಾಡಿಗಳು
- ನಿಲ್ಲದ ಮಾನವ–ವನ್ಯಜೀವಿ ಸಂಘರ್ಷ



ಶಾಸಕರ ಬಲಾಬಲ
ಕಾಂಗ್ರೆಸ್ 7
ಜೆಡಿಎಸ್ 1
ಬಿಜೆಪಿ 0

1. ತಿ. ನರಸೀಪುರ
2. ಹನೂರು
3. ಚಾಮರಾಜನಗರ
4. ಗುಂಡ್ಲುಪೇಟೆ
5. ಹೆಗ್ಗಡದೇವನಕೋಟೆ
6. ನಂಜನಗೂಡು
7. ವರುಣ
8. ಕೊಳ್ಳೇಗಾಲ



ಎಸ್.ಬಾಲರಾಜು (ಬಿಜೆಪಿ)

ನನ್ನ ಪರವಾಗಿ ವಾತಾವರಣ ಚೆನ್ನಾಗಿದೆ. ಮೋದಿಯವರನ್ನು ಮೂರನೇ ಬಾರಿ ಪ್ರಧಾನಿ ಮಾಡಬೇಕೆಂದು ಜನ ತೀರ್ಮಾನಿಸಿದ್ದಾರೆ

- 👍 ಮೋದಿ ಅಲೆ, ಯಡಿಯೂರಪ್ಪ ವರ್ಚಸ್ಸು
- 👍 ಸಜ್ಜನಿಕೆ, ಕಳಂಕರಹಿತ ವ್ಯಕ್ತಿತ್ವ, ಶಾಸಕರಾಗಿ ಮಾಡಿದ್ದ ಕೆಲಸಗಳು
- 👎 ಏಳು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿರುವುದು, ಶ್ರೀನಿವಾಸ ಪ್ರಸಾದ್ ಮೌನ
- 👎 ಚಾಮರಾಜನಗರ ಜಿಲ್ಲೆಯ ಹೊರಗೆ ಹೆಚ್ಚು ಪರಿಚಿತರಲ್ಲ

ಸುನಿಲ್ ಬೋಸ್ (ಕಾಂಗ್ರೆಸ್)

ಕ್ಷೇತ್ರದ ಜನ ಕಾಂಗ್ರೆಸ್ ಪರವಾಗಿದ್ದಾರೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ನನ್ನ ಕೈ ಹಿಡಿಯುತ್ತವೆ

- 👍 ಸಿ.ಎಂ ತವರು ಕ್ಷೇತ್ರದ ಅಭ್ಯರ್ಥಿಯಾಗಿರುವುದು, ತಂದೆ ಮಹದೇವಪ್ಪ ವರ್ಚಸ್ಸು
- 👍 ಗ್ಯಾರಂಟಿ ಯೋಜನೆಗಳ ಬಲ
- 👎 ಚುನಾವಣಾ ರಾಜಕೀಯ ಹೊಸದು
- 👎 ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಚಿತರಲ್ಲ, ಜನರ ಕೈಗೆ ಸಿಗುವುದಿಲ್ಲ ಎಂಬ ಅಪವಾದ

• ಸೂರ್ಯನಾರಾಯಣ ವಿ.

ಚಾಮರಾಜ ನಗರ

ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರವೂ ಸೇರಿರುವುದರಿಂದ ರಾಜ್ಯದ ಗಮನ ಸೆಳೆದಿರುವ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರ ಈ ಬಾರಿ 'ಕೈ' – 'ಕಮಲ'ದ ನಡುವೆ ನೇರ ಹಣಾಹಣಿಗೆ ವೇದಿಕೆಯಾಗಿದೆ.

ಬಿಜೆಪಿಯಿಂದ ಕೊಳ್ಳೇಗಾಲದ ಮಾಜಿ ಶಾಸಕ ಎಸ್.ಬಾಲರಾಜು ಸ್ಪರ್ಧಿಸಿದ್ದರೆ, ಕಾಂಗ್ರೆಸ್‌ನಿಂದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಮಗ ಸುನಿಲ್ ಬೋಸ್ ಅಖಾಡದಲ್ಲಿದ್ದಾರೆ. ಇಬ್ಬರಿಗೂ ಇದು ಮೊದಲ ಲೋಕಸಭಾ ಚುನಾವಣೆ.

ತವರಿನಲ್ಲಿ ಸೋತರೆ ತಮ್ಮ ವರ್ಚಸ್ಸು, ಸ್ಥಾನಮಾನಕ್ಕೆ ಹಿನ್ನಡೆಯಾಗಬಹುದೆಂಬ ಕಾರಣಕ್ಕೆ ಸಿದ್ದರಾಮಯ್ಯ ಪ್ರತಿಷ್ಠೆ ಪಣಕ್ಕಿಟ್ಟಿದ್ದಾರೆ. 'ವರುಣ ಕ್ಷೇತ್ರದಲ್ಲಿ 60 ಸಾವಿರ ಮತಗಳ ಮುನ್ನಡೆ ನೀಡಿದರೆ ನನ್ನನ್ನು ಯಾರೂ ಮುಟ್ಟುವುದಕ್ಕಾಗುವುದಿಲ್ಲ' ಎಂದು ಈಗಾಗಲೇ ಹೇಳಿದ್ದಾರೆ. ಅಲ್ಲದೇ, ಬಿಜೆಪಿಯ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರೊಂದಿಗಿದ್ದ ಮುನಿಸು ಮರೆತು, ಖುದ್ದಾಗಿ ಅವರ ಮನೆಗೆ ಹೋಗಿ ಬೋಸ್ ಗೆಲುವಿಗೆ ನೆರವನ್ನೂ ಯಾಚಿಸಿದ್ದಾರೆ.

ಮಗನನ್ನು ಗೆಲ್ಲಿಸಿಕೊಂಡು ಬರುವ ವಾಗ್ದಾನವನ್ನು ವರಿಷ್ಠರಿಗೆ ನೀಡಿರುವ ಸಚಿವ ಮಹದೇವಪ್ಪ, ಅಭ್ಯರ್ಥಿಗಿಂತ ಹೆಚ್ಚಾಗಿ ತಾವೇ ಓಡಾಡುತ್ತಾ ತಂತ್ರಗಳನ್ನು ಹೆಣೆಯುತ್ತಿದ್ದಾರೆ. ದಲಿತ ಸಂಘಟನೆಗಳ ಮುಖಂಡರು, ಬಿಜೆಪಿ ಮುಖಂಡರು, ಕೆಲವು ಪಕ್ಷೇತರ ಅಭ್ಯರ್ಥಿಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ 'ಭದ್ರಕೋಟೆ'ಯನ್ನು ಭೇದಿಸಿದ್ದ ಬಿಜೆಪಿ, ಕ್ಷೇತ್ರವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. 2019ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ವಿ.ಶ್ರೀನಿವಾಸ ಪ್ರಸಾದ್ 'ಸ್ವಾಭಿಮಾನ'ವನ್ನು ಪಣಕ್ಕಿಟ್ಟು ರೋಚಕವಾಗಿ ಗೆದ್ದಿದ್ದರು. ಈಗ ರಾಜಕೀಯ ನಿವೃತ್ತಿ ನಂತರದ ಅವರ 'ಮೌನ'ವು ಬಿಜೆಪಿಯ ಉತ್ಸಾಹವನ್ನು ಕುಗ್ಗಿಸಿದೆ. ಅವರ ಅಳಿಯಂದಿರಿಬ್ಬರೂ ಪಕ್ಷದಲ್ಲೇ ಇರುವುದು ಬಿಜೆಪಿಗೆ ಕತ್ತಲ ಹಾದಿಯಲ್ಲಿ ಕೋಲ್ಮಿಂಚಿನಂತಾಗಿದೆ.

'ಶ್ರೀನಿವಾಸ ಪ್ರಸಾದ್ ಕಾಂಗ್ರೆಸ್ ಬೆಂಬಲಿಸಲಿದ್ದಾರೆ' ಎಂದು ಕಾಂಗ್ರೆಸ್ ಹೇಳುತ್ತಿದೆ. ಅದಕ್ಕೆ ಪುಷ್ಟಿ ನೀಡುವಂತೆ ಅವರ ಕೆಲವು ಬೆಂಬಲಿಗರೂ 'ಕೈ'ಗೆ ಜೈ ಎಂದಿದ್ದಾರೆ.

ಬಿಜೆಪಿಯ ಬಾಲರಾಜು, ದಿವಂಗತ ಆರ್. ಧ್ರುವನಾರಾಯಣ ಅವರೊಂದಿಗಿದ್ದವರು. ಧ್ರುವನಾರಾಯಣ ಅಭಿಮಾನಿಗಳು ಪಕ್ಷವನ್ನು ಬೆಂಬಲಿಸಬಹುದು, ಜೆಡಿಎಸ್ ಮೈತ್ರಿ ಕೂಡ ಶಕ್ತಿ ತುಂಬಬಹುದು ಎಂಬ ನಿರೀಕ್ಷೆ ಬಿಜೆಪಿಯಲ್ಲಿದೆ.

ಮೊದಲ ಬಾರಿಗೆ ಚುನಾವಣಾ ರಾಜಕೀಯಕ್ಕಿಳಿದಿರುವ ಬೋಸ್ ಅವರಿಗೆ ಕ್ಷೇತ್ರದ ಜನಸಂಪರ್ಕ ಕಡಿಮೆ. ನಾಮಪತ್ರ ಸಲ್ಲಿಕೆ ದಿನವೇ ಅವರ ವಿರುದ್ಧ 'ಗೋ ಬ್ಯಾಕ್ ಸುನಿಲ್' ಎಂಬ ಭಿತ್ತಿಪತ್ರಗಳು ಕಂಡು ಬಂದಿದ್ದವು. 'ಪ್ರಮಾಣಪತ್ರದಲ್ಲಿ ಕುಟುಂಬದ ಮಾಹಿತಿ ಮರೆಮಾಚಿದ್ದಾರೆ' ಎಂಬ ವಿಷಯವೂ ಕಣದಲ್ಲಿ ಚರ್ಚೆಯಾಗುತ್ತಿದೆ.

ಬಿಎಸ್‌ಪಿ ಅಭ್ಯರ್ಥಿ ಕಣದಲ್ಲಿದ್ದರೂ, ಬಿಜೆಪಿ – ಕಾಂಗ್ರೆಸ್ ನಡುವಿನ ಪೈಪೋಟಿಯಲ್ಲಿ ಛಾಪು ಒತ್ತುವ ಸಾಧ್ಯತೆ ಕ್ಷೀಣ.

ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಕ್ಷೇತ್ರದಲ್ಲಿ ಈ ಬಗ್ಗೆಯೇ ಚರ್ಚೆಯಾಗುತ್ತಿಲ್ಲ. ಎರಡೂ ಪಕ್ಷಗಳು 'ಅಭಿವೃದ್ಧಿಗಾಗಿ ಮತಕೊಡಿ' ಎಂದು ಕೇಳುತ್ತಿದ್ದರೂ, ಸ್ಪಷ್ಟವಾದ ನೀಲ ನಕ್ಷೆಯೇ ಇಲ್ಲ. 'ಕ್ಷೇತ್ರವನ್ನು ಕಾಡುತ್ತಿರುವ ಸಮಸ್ಯೆಗಳತ್ತ ಗಮನ ಕೊಡಿ' ಎಂಬಂಥ ಸಲಹೆಗಳು ಗಾಳಿಗೆ ಹೋಗುತ್ತಿವೆ. ❖

ಕುಟುಂಬ ರಾಜಕಾರಣದ ಪ್ರತಿಷ್ಠೆ ಪಣಕ್ಕೆ

• ಓದೇಶ ಸಕಲೇಶಪುರ

ಬೆಂಗಳೂರು ಗ್ರಾಮಾಂತರ

ರಾಮನಗರ: ರಾಜ್ಯದಲ್ಲಿ ರಾಜಕೀಯವಾಗಿ ಪ್ರಬಲವಾಗಿರುವ ಎರಡು ಕುಟುಂಬಗಳ ಪ್ರತಿಷ್ಠೆಯ ಕಣವಾಗಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ಈ ಬಾರಿ ಮತ್ತೊಮ್ಮೆ ಇಬ್ಬರ ಮಧ್ಯದ ಜಿದ್ದಾಜಿದ್ದಿನ ಹೋರಾಟದ ಅಖಾಡವಾಗಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಿಂದ ಆಯ್ಕೆಯಾಗಿದ್ದ ಏಕೈಕ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ನಾಲ್ಕನೇ ಸಲ ಸ್ಪರ್ಧಿಸಿದ್ದಾರೆ. ಇವರಿಗೆ ಈ ಬಾರಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರ ಅಳಿಯ, ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಎದುರಾಳಿ.

ಡಿ.ಕೆ. ಸುರೇಶ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ. ಡಾ. ಮಂಜುನಾಥ್, ದೇವೇಗೌಡರ ಅಳಿಯ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ಬಾಮೈದ.

ಶಿವಕುಮಾರ್ ಮತ್ತು ದೇವೇಗೌಡರ ಕುಟುಂಬಗಳು ಇಲ್ಲಿ ನಾಲ್ಕು ದಶಕದಿಂದ ಲೋಕಸಭಾ ಚುನಾವಣೆಗಳಲ್ಲಿ ಸೋಲು–ಗೆಲುವಿನೊಂದಿಗೆ ಮುಖಾಮುಖಿಯಾಗುತ್ತಲೇ ಬಂದಿವೆ. ಈ ಬಾರಿ ಎರಡು ಕುಟುಂಬಗಳ ಜೊತೆ ಬಿಜೆಪಿಯೂ ತನ್ನ ಪ್ರತಿಷ್ಠೆ ಪಣಕ್ಕಿಟ್ಟಿರುವುದರಿಂದ ಕ್ಷೇತ್ರ ಜಿದ್ದಾಜಿದ್ದಿನ ಕಣವಾಗಿ ಮಾರ್ಪಟ್ಟಿದೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿಯು ಸುರೇಶ್ ಗೆಲುವಿನ ಹಾದಿ ಸುಗಮಗೊಳಿಸಿತ್ತು. ಹಿಂದಿನ ಮೂರು ಚುನಾವಣೆಗಳಲ್ಲಿ ಸುಲಭವಾಗಿ ಗೆಲುವಿನ ದಡ ಸೇರಿದ್ದ ಸುರೇಶ್, ಈ ಬಾರಿ ಗೆಲುವಿಗಾಗಿ ಬೆವರು ಹರಿಸಬೇಕಾಗಿದೆ.

ಸಂಸದರಾಗಿ ತಾವು ಮಾಡಿರುವ ಅಭಿವೃದ್ಧಿ ಕೆಲಸ, ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದಾದ ಅನ್ಯಾಯಗಳ ಬಗ್ಗೆ ಹೇಳುತ್ತಾ ಮತ ಯಾಚಿಸುತ್ತಿದ್ದಾರೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅಲೆ ನೆಚ್ಚಿಕೊಂಡಿರುವ ಅವರಿಗೆ ಅಣ್ಣನ ಅಭಯವಿದೆ.

ಡಾ. ಮಂಜುನಾಥ್ ರಾಜಕೀಯಕ್ಕೆ ಹೊಸಬರಾದರೂ, ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿದ ಕೆಲಸದಿಂದಾಗಿ ಜನರಿಗೆ ಪರಿಚಿತರು. ರಾಜಕೀಯ ಕುಟುಂಬದ ಹಿನ್ನೆಲೆ ಇದ್ದರೂ ಅದರ ನೆರಳಿಲ್ಲದೆ ವೈದ್ಯಕೀಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದವರು. ಅವರ ಈ ಜನಪ್ರಿಯತೆಯನ್ನು ಮತಗಳಾಗಿ ಪರಿವರ್ತಿಸಿ ಸುರೇಶ್ ಅವರನ್ನು ಮಣಿಸುವ ತಂತ್ರ ಮೈತ್ರಿಕೂಟದ್ದು.

ಇದೇ ಕಾರಣಕ್ಕಾಗಿ ಬಿಜೆಪಿಯ ಅಮಿತ್ ಶಾ ಸಹ ಕ್ಷೇತ್ರಕ್ಕೆ ಬಂದು ಚುನಾವಣಾ ಕಹಳೆ ಮೊಳಗಿಸಿದ್ದಾರೆ. ಗೌಡರ ಕುಟುಂಬದ ಬಹುತೇಕ ಸದಸ್ಯರು ಕ್ಷೇತ್ರದಲ್ಲಿಯೇ ಬೀಡು ಬಿಟ್ಟಿದ್ದಾರೆ. ಡಿ.ಕೆ ಸಹೋದರರ ವಿರುದ್ಧ ಸತತ ವಾಗ್ದಾಳಿ ಜೊತೆಗೆ ಪ್ರಧಾನಿ ಮೋದಿ ಹೆಸರನ್ನು ಅಸ್ತ್ರ ಮಾಡಿಕೊಂಡಿದ್ದಾರೆ. ಇದರ ಜೊತೆಗೆ ಡಾ. ಮಂಜುನಾಥ್ ಗೆದ್ದರೆ ಕೇಂದ್ರ ಸಚಿವರಾಗಲಿದ್ದಾರೆ ಎಂಬ ಮಾತು ವ್ಯಾಪಕವಾಗಿ ಕೇಳಿ ಬರುತ್ತಿವೆ.

ಅಭ್ಯರ್ಥಿಗಳಿಬ್ಬರೂ ಒಕ್ಕಲಿಗ ಸಮುದಾಯದವರಾಗಿರುವುದರಿಂದ ಜಾತಿ ಮತಗಳು ವಿಭಜನೆಯಾಗಲಿವೆ. ಬಿಜೆಪಿ–ಜೆಡಿಎಸ್ ತಮ್ಮ ಸಾಂಪ್ರದಾಯಿಕ ಮತಗಳ ಜೊತೆಗೆ ಮಂಜುನಾಥ್ ವ್ಯಕ್ತಿತ್ವದಿಂದಾಗಿ ಪಕ್ಷಾತೀತ ಬೆಂಬಲ ವ್ಯಕ್ತವಾಗುವ ನಿರೀಕ್ಷೆಯಲ್ಲಿವೆ. ಕಾಂಗ್ರೆಸ್ ಸಹ ತನ್ನ ಸಾಂಪ್ರದಾಯಿಕ ಮತಗಳ ಜೊತೆಗೆ ಗ್ಯಾರಂಟಿ ಯೋಜನೆಗಳು ಕೈ ಹಿಡಿಯಲಿವೆ ಎಂಬ ಲೆಕ್ಕಾಚಾರದಲ್ಲಿದೆ.

ಕ್ಷೇತ್ರದಲ್ಲಿ ಅಭಿವೃದ್ಧಿ ವಿಷಯಕ್ಕಿಂತ ಅಭ್ಯರ್ಥಿಗಳಿಬ್ಬರ ಕುಟುಂಬಗಳ ನಡುವಣ ವೈಯಕ್ತಿಕ ಪ್ರತಿಷ್ಠೆ ಹೆಚ್ಚು ಸದ್ದು ಮಾಡುತ್ತಿದೆ. ಎರಡೂ ಕುಟುಂಬಗಳ ಜಿದ್ದಾಜಿದ್ದಿಯ ಹೋರಾಟದಿಂದಾಗಿ ಕ್ಷೇತ್ರದ ಜನರು ಈ ಬಾರಿ ಗೌಡರ ಕುಟುಂಬದ ಹೊಸ ಪ್ರತಿನಿಧಿಗೆ ಅವಕಾಶ ಕೊಡುತ್ತಾರಾ? ಅಥವಾ ಸುರೇಶ್ ಗೆಲ್ಲಿಸುವ ಮೂಲಕ ಮುಖ್ಯಮಂತ್ರಿ ಹುದ್ದೆಗೇರಲು ಕಾಯುತ್ತಿರುವ ಡಿ.ಕೆ. ಶಿವಕುಮಾರ್ ಅವರಿಗೆ ಶಕ್ತಿ ತುಂಬುತ್ತಾರಾ ಎಂಬ ಕುತೂಹಲ ಎಲ್ಲೆಡೆ ವ್ಯಾಪಿಸಿದೆ. ❖

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **64.94%**

14,06,042 ಪುರುಷರು
13,57,547 ಮಹಿಳೆಯರು
27,63,910 ಒಟ್ಟು ಮತದಾರರ ಸಂಖ್ಯೆ
321 ಲಿಂಗತ್ವ ಅಲ್ಪಸಂಖ್ಯಾತರು

ಕ್ಷೇತ್ರವನ್ನು ಕಾಡುವ ವಿಷಯಗಳು

- ಮೇಕೆದಾಟು ಅಣೆಕಟ್ಟೆ ಯೋಜನೆ ಸೇರಿದಂತೆ ನೀರಾವರಿ ಯೋಜನೆ
- ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾಣದ ಜಿಲ್ಲೆ
- ಕುಟುಂಬ ರಾಜಕಾರಣ
- ಪ್ರವಾಸಿ ತಾಣಗಳ ಅಭಿವೃದ್ಧಿ

ಶಾಸಕರ ಬಲಾಬಲ
ಕಾಂಗ್ರೆಸ್ 5
ಬಿಜೆಪಿ 2
ಜೆಡಿಎಸ್ 1

1. ರಾಜರಾಜೇಶ್ವರಿ ನಗರ
2. ಬೆಂಗಳೂರು ದಕ್ಷಿಣ
3. ಆನೇಕಲ್
4. ಕನಕಪುರ
5. ಚನ್ನಪಟ್ಟಣ
6. ಕುಣಿಗಲ್
7. ಮಾಗಡಿ
8. ರಾಮನಗರ



ಡಿ.ಕೆ. ಸುರೇಶ್ (ಕಾಂಗ್ರೆಸ್)

ಪಂಚಾಯಿತಿ ಸದಸ್ಯನಂತೆ ಕ್ಷೇತ್ರದ ಜನರ ಕಷ್ಟ,ಸುಖಗಳಿಗೆ ಸ್ಪಂದಿಸುತ್ತಾ ಕೆಲಸ ಮಾಡಿದ್ದೇನೆ. ನಾನು ಮಾಡಿರುವ ಕೆಲಸ ಹಾಗೂ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ನನ್ನ ಕೈ ಹಿಡಿಯುತ್ತವೆ

- 👍 ತಳಮಟ್ಟದಲ್ಲಿ ಕಾರ್ಯಕರ್ತರೊಂದಿಗೆ ಸಂಪರ್ಕ
- 👍 ಕ್ಷೇತ್ರದ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಐದರಲ್ಲಿ ಕಾಂಗ್ರೆಸ್ ಶಾಸಕರಿರುವುದು
- 👎 ಆಡಳಿತ ವಿರೋಧಿ ಅಲೆ, ಅಧಿಕಾರ ಕೇಂದ್ರೀಕರಣ
- 👎 ಒಳೇಟಿನ ಆತಂಕ, ಒರಟು ವ್ಯಕ್ತಿತ್ವ

ಡಾ. ಸಿ.ಎನ್. ಮಂಜುನಾಥ್ (ಬಿಜೆಪಿ)

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಳೆದ ಹತ್ತು ವರ್ಷಗಳಿಂದ ದೇಶ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿದೆ. ಅಭಿವೃದ್ಧಿ ಜೊತೆಗೆ ದೇಶದ ಸುಭದ್ರತೆಗಾಗಿ ಜನ ಬಿಜೆಪಿಗೆ ಮತ ಹಾಕಬೇಕು

- 👍 ಬಿಜೆಪಿ, ಜೆಡಿಎಸ್ ಪಕ್ಷಗಳ ಮೈತ್ರಿಯ ಬಲ
- 👍 ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿದ ಕೆಲಸ, ಕಪ್ಪುಚುಕ್ಕೆ ಇಲ್ಲದ ವ್ಯಕ್ತಿತ್ವ
- 👎 ಚುನಾವಣಾ ರಾಜಕೀಯಕ್ಕೆ ಹೊಸಬರು
- 👎 ಕುಟುಂಬ ರಾಜಕಾರಣದ ಪ್ರತಿನಿಧಿ, ಹೊರಗಿನಿಂದ ಬಂದವರು

ಲೋಕಸಭಾ ಚುನಾವಣೆಯ ಹೊಸ್ತಿಲಲ್ಲೇ ಐವರಿಗೆ ಅತ್ಯುನ್ನತ ಪುರಸ್ಕಾರ ಘೋಷಿಸಿದ್ದ ಕೇಂದ್ರ ಸರ್ಕಾರ

‘ಭಾರತ ರತ್ನ’ ತರುವುದೇ ಮತ?

ಲೋಕಸಭಾ ಚುನಾವಣೆಗೆ ತಿಂಗಳುಗಳಷ್ಟೇ ಬಾಕಿ ಇದ್ದಾಗ ಕೇಂದ್ರ ಸರ್ಕಾರವು ಐವರಿಗೆ ‘ಭಾರತ ರತ್ನ’ ಘೋಷಿಸಿತ್ತು. ಚುನಾವಣೆಯ ಲೆಕ್ಕಾಚಾರದಿಂದ ಆಡಳಿತಾರೂಢ ಎನ್‌ಡಿಎ ಸರ್ಕಾರವು ಈ ಪ್ರಶಸ್ತಿಯನ್ನು ಘೋಷಿಸಿದೆ ಎಂಬ ಟೀಕೆಗಳು ವಿರೋಧ ಪಕ್ಷಗಳಿಂದ ವ್ಯಕ್ತವಾಗಿದ್ದವು. ದೇಶಕ್ಕೆ ನೀಡಿರುವ ಅಮೂಲ್ಯ ಕೊಡುಗೆಗಳನ್ನು ಪರಿಗಣಿಸಿ ಈ ಐದು ಮಂದಿಗೆ ಅತ್ಯುನ್ನತ ಪ್ರಶಸ್ತಿ ನೀಡಿದ್ದೇವೆ ಎಂದು ಬಿಜೆಪಿಯು ಸಮರ್ಥಿಸಿಕೊಂಡಿತ್ತು. ‘ಭಾರತ ರತ್ನ’ ನೀಡಿಕೆಯ ಹಿಂದೆ ಚುನಾವಣಾ ಲೆಕ್ಕಾಚಾರ ಇದೆ ಎಂಬುದನ್ನು ಅಲ್ಲಗಳೆಯುವುದು ಕಷ್ಟ

● ನವೀನ್‌ಕುಮಾರ್ ಜಿ.

ಎಲ್‌.ಕೆ. ಅಡ್ವಾಣಿ

ಪಿ.ವಿ. ನರಸಿಂಹ ರಾವ್

ಎಂ.ಎಸ್‌. ಸ್ವಾಮಿನಾಥನ್



ಚೌಧರಿ ಚರಣ್ ಸಿಂಗ್



ಕರ್ಪೂರಿ ಠಾಕೂರ್

ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ‘ಭಾರತ ರತ್ನ’ ಪ್ರತಿ ಬಾರಿ ಘೋಷಣೆಯಾದಾಗಲೂ ಪರ–ವಿರೋಧ ಚರ್ಚೆ ಇದ್ದೇ ಇರುತ್ತದೆ. ಈ ಬಾರಿ ಲೋಕಸಭಾ ಚುನಾವಣೆಯ ಹೊಸ್ತಿಲಲ್ಲೇ ಆಡಳಿತಾರೂಢ ಪಕ್ಷವು ಐದು ಮಂದಿಗೆ ಈ ಅತ್ಯುನ್ನತ ಪುರಸ್ಕಾರವನ್ನು ಘೋಷಿಸಿರುವುದರ ಹಿಂದೆ ಬಿಜೆಪಿಯ ಮತ ಲೆಕ್ಕಾಚಾರದ ತಂತ್ರಗಾರಿಕೆ ಅಡಗಿದೆ ಎಂಬ ಟೀಕೆಗಳು ವ್ಯಕ್ತವಾಗಿದ್ದವು.

400ಕ್ಕಿಂತಲೂ ಹೆಚ್ಚು ಕ್ಷೇತ್ರಗಳನ್ನು ಗೆದ್ದೇ ಗೆಲ್ಲುತ್ತೇವೆಂಬ ಘೋಷವಾಕ್ಯವನ್ನು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ಮುಖಂಡರು ಪ್ರತಿದಿನ ಮೊಳಗಿಸುತ್ತಿದ್ದಾರೆ. ಈ ಗುರಿಯನ್ನು ಮುಟ್ಟಬೇಕಾದರೆ ಕೇವಲ ಉತ್ತರ ಭಾರತದಲ್ಲಿ ಪಕ್ಷವು ಪಾರಮ್ಯ ಮೆರೆದರೆ ಸಾಲದು, ದಕ್ಷಿಣದಲ್ಲೂ ಉತ್ತಮ ಸಾಧನೆ ಮಾಡಬೇಕಾಗುತ್ತದೆ. ದಕ್ಷಿಣದ ಇಬ್ಬರಿಗೆ ಈ ಗೌರವ ಒಲಿದಿರುವುದು ಬಿಜೆಪಿಯ ಈ ಲೆಕ್ಕಾಚಾರಕ್ಕೆ ಪುಷ್ಟಿ ನೀಡಿದೆ.

ಕಾಂಗ್ರೆಸ್ ಧುರೀಣರಾಗಿದ್ದ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್, ಬಿಜೆಪಿಯ ಸ್ಥಾಪಕ ಸದಸ್ಯರಲ್ಲೊಬ್ಬರಾದ ಎಲ್.ಕೆ.ಅಡ್ವಾಣಿ, ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್, ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಮತ್ತು ಹಸಿರು ಕ್ರಾಂತಿಯ ಹರಿಕಾರ ಎಂ.ಎಸ್. ಸ್ವಾಮಿನಾಥನ್ ಅವರಿಗೆ ಈ ಪುರಸ್ಕಾರ ಸಂದಿದೆ. 1999ರಲ್ಲಿ ನಾಲ್ಕು ಮಂದಿಗೆ ‘ಭಾರತ ರತ್ನ’ ನೀಡಿರುವುದು ಬಿಟ್ಟರೆ, ಒಂದೇ ವರ್ಷದಲ್ಲಿ ಅತಿ ಹೆಚ್ಚು ಮಂದಿಗೆ ಈ ಪ್ರಶಸ್ತಿ ನೀಡಿರುವುದು ಇದೇ ಮೊದಲು.

ರೈತರ ಕೋಪ ಶಮನವಾಗುವುದೇ?

‘ಭಾರತದ ರೈತರ ಚಾಂಪಿಯನ್’ ಎಂದೇ ಪ್ರಸಿದ್ಧರಾಗಿರುವ ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರು ಜಾಟ್ ಸಮುದಾಯದವರಾಗಿದ್ದು, ಈ ಸಮುದಾಯದವರು ರಾಜಸ್ಥಾನ, ಹರಿಯಾಣ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ಸಮುದಾಯದ ವ್ಯಕ್ತಿಗೆ ಅತ್ಯುನ್ನತ ಪ್ರಶಸ್ತಿ ನೀಡುವ ಮೂಲಕ ಇವರ ವಿಶ್ವಾಸಗಳಿಸುವ ಪ್ರಯತ್ನವನ್ನು ಬಿಜೆಪಿ ಮಾಡಿದೆ. ಆಮೂಲಾಗ್ರ ಭೂಸುಧಾರಣಾ ಕ್ರಮಗಳನ್ನು ಜಾರಿಗೆ ತಂದು ಕೃಷಿ ಕ್ಷೇತ್ರದಲ್ಲಿ ಏಕರೂಪತೆಯನ್ನು ತಂದ ಕೀರ್ತಿ ಚೌಧರಿ ಅವರಿಗೆ ಸಲ್ಲುತ್ತದೆ. ಎಂಎಸ್‌ಪಿಗೆ ಕಾನೂನಿನ ಖಾತರಿ ನೀಡಬೇಕೆಂದು ಆಗ್ರಹಿಸಿ ರೈತರು ಮತ್ತೆ ಹೋರಾಟಕ್ಕಿಳಿಯಲು ಸಿದ್ಧತೆ ನಡೆಸುತ್ತಿದ್ದ ಹೊತ್ತಿನಲ್ಲೇ ಇವರಿಗೆ ಈ ಪ್ರಶಸ್ತಿಯು ಘೋಷಣೆಯಾಗಿತ್ತು. ಚೌಧರಿ ಅವರಿಗೆ ಪ್ರಶಸ್ತಿ ನೀಡಿರುವುದರಿಂದ ಪುಳಕಿತರಾಗಿರುವ ಅವರ ಮೊಮ್ಮಗ ಜಯಂತ್ ಚೌಧರಿ ಅವರು ಕೆಲವೇ ದಿನಗಳಲ್ಲಿ ರಾಷ್ಟ್ರೀಯ ಲೋಕ ದಳವನ್ನು ಮತ್ತೆ ಎನ್‌ಡಿಎ ತೆಕ್ಕೆಗೆ ಸೇರಿಸಿದ್ದಾರೆ. ಇದರಿಂದ ಉತ್ತರ ಪ್ರದೇಶದಲ್ಲಿ ಎನ್‌ಡಿಎಗೆ ಇನ್ನಷ್ಟು ಅನುಕೂಲಕರ ವಾತಾವರಣ ಸೃಷ್ಟಿಯಾಗಿದೆ.

ಪಕ್ಷದೊಳಗಿನ ಬೇಗುದಿ ಶಮನಕ್ಕೆ ಯತ್ನ

ಮಾಜಿ ಉಪ ಪ್ರಧಾನಿ ಎಲ್.ಕೆ. ಅಡ್ವಾಣಿ ಅವರು ಅಯೋಧ್ಯೆಯಲ್ಲಿ ರಾಮಮಂದಿರಕ್ಕಾಗಿ ಶ್ರಮಿಸಿದವರಲ್ಲಿ ಮುಂಚೂಣಿಯಲ್ಲಿ ನಿಲ್ಲುವವರು. ರಥಯಾತ್ರೆಯ ಮೂಲಕ ದೇಶದಾದ್ಯಂತ ಜನರನ್ನು ರಾಮಮಂದಿರಕ್ಕಾಗಿ ಒಗ್ಗೂಡಿಸಲು ಪ್ರಯತ್ನಿಸಿದ್ದ ಅವರಿಗೆ ಮಂದಿರ ಸಾಕಾರವಾಗಿರುವ ವೇಳೆಯಲ್ಲಿ ಪ್ರಶಸ್ತಿ ನೀಡಿದರೆ ಪಕ್ಷದೊಳಗಿನವರಿಗೆ ಹಿತವಾಗುತ್ತದೆ ಎಂಬ ಲೆಕ್ಕಾಚಾರವು ಈ ಪ್ರಶಸ್ತಿ ನೀಡಿರುವುದರ ಹಿಂದಿರಬಹುದು ಎನ್ನಲಾಗುತ್ತಿದೆ. ಅಡ್ವಾಣಿ ಅವರನ್ನು ಪಕ್ಷದಲ್ಲಿ ಮೂಲೆಗುಂಪು ಮಾಡಲಾಗಿದೆ ಎಂಬ ಆರೋಪವು ಕೆಲವು ವರ್ಷಗಳಿಂದ ಕೇಳಿ ಬರುತ್ತಿತ್ತು. ಈ ಆರೋಪವನ್ನು ತೊಡೆದುಹಾಕಲು ಈ ಅತ್ಯುನ್ನತ ಪ್ರಶಸ್ತಿಗೆ ಸಾಧ್ಯವಾಗಲಿದೆ ಎಂಬ ವಿಶ್ವಾಸ ಬಿಜೆಪಿ ನಾಯಕರದ್ದಾಗಿರಬಹುದು.

ತಮಿಳುನಾಡಿನ ಮತದಾರರತ್ತ ಚಿತ್ತ

ತಮಿಳುನಾಡಿನಲ್ಲಿ ಕೆ. ಅಣ್ಣಾಮಲೈ ನೇತೃತ್ವದಲ್ಲಿ ಪಕ್ಷಕ್ಕೆ ಭದ್ರ ನೆಲೆ ಸ್ಥಾಪಿಸಲು ಬಿಜೆಪಿಯ ವರಿಷ್ಠರು ಹಲವು ವರ್ಷಗಳಿಂದಲೂ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಅಲ್ಲಿ ಎನ್‌ಡಿಎ ಒಕ್ಕೂಟದ ಜೊತೆಗಿದ್ದ ಎಐಎಡಿಎಂಕೆ ಕೂಡ ಈ ಬಾರಿ ಬಿಜೆಪಿ ಜೊತೆಗಿನ ನಂಟು ಕಡಿದುಕೊಂಡಿದೆ. ಭಾಷೆ, ಅಸ್ತಿತ್ವದ ಬಗ್ಗೆ ಸದಾ ಜಾಗೃತರಾಗಿರುವ ತಮಿಳರನ್ನು ಓಲೈಸಲು ಬಿಜೆಪಿ ಬತ್ತಳಿಕೆಯಲ್ಲಿ ಈ ಸಲ ಯಾವುದೇ ಅಸ್ತ್ರವಿರಲಿಲ್ಲ. ಇದೇ ಸಂದರ್ಭದಲ್ಲಿ ಹಸಿರು ಕ್ರಾಂತಿಯ ಹರಿಕಾರ ಎಂ.ಎಸ್. ಸ್ವಾಮಿನಾಥನ್ ಅವರಿಗೆ ‘ಭಾರತರತ್ನ’ ಘೋಷಿಸಲಾಗಿತ್ತು. ಸ್ವಾಮಿನಾಥನ್ ಅವರು ಕೃಷಿ ತಜ್ಞರಾಗಿ ಮನೆ ಮಾತಾದವರು. ದಕ್ಷಿಣ ಭಾರತದ ಈ ಮೇರು ವ್ಯಕ್ತಿಗೆ ಪ್ರಶಸ್ತಿ ನೀಡಿದರೆ ತಮಿಳುನಾಡಿನ ಜನರು ಪಕ್ಷದ ಜೊತೆ ಭಾವನಾತ್ಮಕ ನಂಟು ಹೊಂದಬಹುದೆಂಬ ಲೆಕ್ಕಾಚಾರವು ಬಿಜೆಪಿಯದ್ದಾಗಿರಬಹುದು. ತಮಿಳುನಾಡಿನ ಎಲ್ಲಾ ಕ್ಷೇತ್ರಗಳಿಗೂ ಮೊದಲ ಹಂತದಲ್ಲೇ ಮತದಾನ ನಡೆದಿದ್ದು, ಕಮಲ ಪಕ್ಷದ ನಾಯಕರು ಶುಭ ನಿರೀಕ್ಷೆಯಲ್ಲಿದ್ದಾರೆ.

> **ಹಿಂದೆಯೂ ವಿವಾದ**
>
> 2013ರಲ್ಲಿ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ ‘ಭಾರತ ರತ್ನ’ ಘೋಷಿಸಿದಾಗ ವಿರೋಧ ವ್ಯಕ್ತವಾಗಿತ್ತು. ಯುಪಿಎ ಸರ್ಕಾರವು ಚುನಾವಣೆಯ ದೃಷ್ಟಿಯಿಂದ ಸಚಿನ್ ಅವರಿಗೆ ಪ್ರಶಸ್ತಿ ನೀಡಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು.

ಹಿಂದುಳಿದ ವರ್ಗಗಳ ಓಲೈಕೆಗೆ ಯತ್ನ

ಹಿಂದುಳಿದ ಮತ್ತು ತೀರಾ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಅವಿರತ ಶ್ರಮಿಸಿದ್ದ ಕರ್ಪೂರಿ ಠಾಕೂರ್ ಅವರಿಗೆ ‘ಭಾರತ ರತ್ನ’ ನೀಡುವ ಮೂಲಕ ಈ ವರ್ಗಗಳಿಗೂ ಪ್ರಾಮುಖ್ಯ ನೀಡಲಾಗಿದೆ ಎಂಬ ಸಂದೇಶವನ್ನು ಬಿಜೆಪಿಯು ರವಾನಿಸಿದೆ. ಸಮಾಜವಾದಿ ನಾಯಕ ಕರ್ಪೂರಿ ಅವರಿಗೆ ಈ ಪ್ರಶಸ್ತಿಯನ್ನು ನೀಡಬೇಕೆಂಬುದು ಬಿಹಾರದ ಜನರ ಬಹುಕಾಲದ ಬೇಡಿಕೆಯೂ ಆಗಿತ್ತು. ಅದು ಈಗ ಈಡೇರಿದೆ. 1970ರ ದಶಕದ ಕೊನೆಯಲ್ಲಿ ಮುಂಗೇರಿ ಲಾಲ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸುವ ಮೂಲಕ ಉದ್ಯೋಗದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಪ್ರಯತ್ನವನ್ನು ಇವರು ಮಾಡಿದ್ದರು. ವಿರೋಧ ಪಕ್ಷಗಳು ಚುನಾವಣೆಯ ಹೊತ್ತಿನಲ್ಲಿ ಜಾತಿಗಣತಿಯನ್ನು ಮುಖ್ಯ ವಿಷಯವಾಗಿಸಿರುವ ಕಾರಣ, ತಾವೂ ಮೀಸಲಾತಿಯ ಪರ ಇದ್ದೇವೆ ಎಂಬುದನ್ನು ಬಿಂಬಿಸಲು ಬಿಜೆಪಿಯು ಈ ಮೂಲಕ ಪ್ರಯತ್ನಿಸಿದೆ. ಬಿಹಾರದಲ್ಲಿ ಎನ್‌ಡಿಎ ಮೈತ್ರಿ ತೊರೆದಿದ್ದ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಕೂಡ ತಮ್ಮ ಪಕ್ಷವನ್ನು ಮತ್ತೆ ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿಸಿದ್ದಾರೆ.

ಕಾಂಗ್ರೆಸ್‌ಗೆ ಏಟು

ಅವಿಭಜಿತ ಆಂಧ್ರಪ್ರದೇಶದಲ್ಲಿ ರಾಜಕೀಯ ಪ್ರವೇಶಿಸಿ ರಾಷ್ಟ್ರ ಮಟ್ಟದಲ್ಲಿ ಮಿಂಚಿದ್ದ ಪಿ.ವಿ. ನರಸಿಂಹ ರಾವ್ ಅವರನ್ನು ಕಾಂಗ್ರೆಸ್ ಪಕ್ಷವು ನಿರ್ಲಕ್ಷಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹಿಂದಿನಿಂದಲೂ ಆರೋಪ ಮಾಡುತ್ತಿದ್ದರು. ದಕ್ಷಿಣ ಭಾರತದಿಂದ ಆಯ್ಕೆಯಾದ ಮೊದಲ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ರಾವ್ ಅವರು ಭಾರತದ ಆರ್ಥಿಕತೆಗೆ ವಿವಿಧ ಸುಧಾರಣೆಗಳನ್ನು ಪರಿಚಯಿಸಿದವರು. ರಾವ್ ಅವರಿಗೆ ಈ ಗೌರವ ನೀಡಿರುವುದರಿಂದ ಅಲ್ಲಿನ ಜನರು ಪಕ್ಷದತ್ತ ಒಲವು ತೋರಬಹುದೆಂಬ ಲೆಕ್ಕಾಚಾರ ಬಿಜೆಪಿಯದ್ದು. ಆಂಧ್ರಪ್ರದೇಶದಲ್ಲಿ ಎನ್.ಚಂದ್ರಬಾಬು ನಾಯ್ಡು ಅವರ ಟಿಡಿಪಿ ಮತ್ತು ಚಿತ್ರನಟ ಪವನ್ ಕಲ್ಯಾಣ್ ಅವರ ಜನಸೇನಾ ಪಕ್ಷಗಳ ಜೊತೆ ಎನ್‌ಡಿಎ ಮೈತ್ರಿ ಮಾಡಿಕೊಂಡಿದ್ದು, ಉತ್ತಮ ಸಾಧನೆ ತೋರುವ ನಿರೀಕ್ಷೆಯಲ್ಲಿದೆ. ಬಾಬರಿ ಮಸೀದಿ ಧ್ವಂಸ ಮಾಡುವ ವೇಳೆ ರಾವ್, ಪ್ರಧಾನಿಯಾಗಿದ್ದರು ಎಂಬುದು ಗಮನಾರ್ಹ ವಿಚಾರ.

ಸ್ವಾಗತ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಛತ್ತೀಸಗಢದ ಬಾಲೋದ್ ಜಿಲ್ಲೆಗೆ ಬಂದಿಳಿದಾಗ ಪಕ್ಷದ ಮುಖಂಡ ಸಚಿನ್ ಪೈಲಟ್ (ಮಧ್ಯದಲ್ಲಿ) ಅವರು ಸ್ವಾಗತಿಸಿದರು –ಪಿಟಿಐ ಚಿತ್ರ

ಮೋದಿ–ಶಾ ಮತ್ತೆ ಬಂದರೆ ಪ್ರಜಾಪ್ರಭುತ್ವ ಅಂತ್ಯ: ಖರ್ಗೆ

ಸತ್ನಾ (ಪಿಟಿಐ): ಎನ್‌ಡಿಎ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಮೋದಿ–ಶಾ ಸರ್ಕಾರ’ ಅಧಿಕಾರಕ್ಕೆ ಮರಳಿದರೆ, ದೇಶದಲ್ಲಿ ಪ್ರಜಾಪ್ರಭುತ್ವ ಅಂತ್ಯವಾಗಲಿದೆ ಎಂದು ಎಚ್ಚರಿಸಿದರು.

ಮಧ್ಯಪ್ರದೇಶದ ಸತ್ನಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು. ಸತ್ನಾ ರ‍್ಯಾಲಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾಗವಹಿಸಬೇಕಾಗಿತ್ತು. ಆದರೆ, ಅನಾರೋಗ್ಯದಿಂದ ಅವರು ರ‍್ಯಾಲಿಗೆ ಗೈರಾದರು. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ಧಾರ್ಥ್ ಕುಶ್ವಾಹ ಪರವಾಗಿ ಖರ್ಗೆ ಚುನಾವಣಾ ಪ್ರಚಾರ ಮಾಡಿದರು.

‘ಬಾಬಾಸಾಹೇಬ್ ಅಂಬೇಡ್ಕರ್ ಬರೆದ ಸಂವಿಧಾನವನ್ನು ಅವರು ರದ್ದುಪಡಿಸುತ್ತಾರೆ. ನೀವು ಸಂವಿಧಾನ ಮತ್ತು ಮಹಿಳೆಯರ, ಕಾರ್ಮಿಕರ, ರೈತರ ಮತದಾನದ ಹಕ್ಕನ್ನು ಜೀವಂತವಾಗಿಟ್ಟುಕೊಳ್ಳಬೇಕು ಎಂದರೆ, ಕಾಂಗ್ರೆಸ್‌ಗೆ ಮತ ಚಲಾಯಿಸಿ’ ಎಂದು ಮನವಿ ಮಾಡಿದರು.

ಎಐಸಿಸಿ ಅಧ್ಯಕ್ಷರು ಹೇಳಿದ್ದು..



- ಈ ಹಿಂದೆ ಭರವಸೆ ನೀಡಿದಂತೆ ₹15 ಲಕ್ಷ ಎಲ್ಲಿ, 29 ಕೋಟಿ ಉದ್ಯೋಗಗಳು ಎಲ್ಲಿ ಎಂದು ಬಿಜೆಪಿಯನ್ನು ಪ್ರಶ್ನಿಸಿ.
- ದೇಶದ ನಿರುದ್ಯೋಗದ ಪ್ರಮಾಣವು ಕಳೆದ 45 ವರ್ಷಗಳಲ್ಲಿಯೇ ಗರಿಷ್ಠ ಮಟ್ಟ ತಲುಪಿದ್ದು, ಅದರ ಬಗ್ಗೆ ದಾಖಲೆಯೇ ಇಲ್ಲ.
- ಈ ಮನುಷ್ಯ ‘ನಾನು ಅಚ್ಛೇ ದಿನ್ ತರುತ್ತೇನೆ’ ಎಂದು ಸದಾ ಹೇಳುತ್ತಾರೆ. ಅವರು ಅನೇಕ ಸುಳ್ಳು ಹೇಳುತ್ತಾರೆ. ಹಾಗಾಗಿಯೇ ನಾನು ಅವರನ್ನು ‘ಝೂಟೋಂಕಾ ಸರ್ದಾರ್’ (ಸುಳ್ಳುಗಳ ಸರದಾರ) ಎಂದು ಕರೆಯುತ್ತೇನೆ.
- ದೇಶದ ರಸ್ತೆಗಳು, ವಿಮಾನ ನಿಲ್ದಾಣಗಳು, ಭೂಮಿ, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು, ದೊಡ್ಡ ಕಾರ್ಖಾನೆಗಳಂಥ ಆಸ್ತಿಗಳನ್ನು ‘ಇಬ್ಬರು ಖರೀದಿದಾರರಿಗೆ’ ಮಾರಲಾಗಿದೆ. ಮೋದಿ ಹಾಗೂ ಶಾ ಮಾರಾಟಗಾರರಾದರೆ, ಅದಾನಿ ಮತ್ತು ಅಂಬಾನಿ ಖರೀದಿದಾರರು.
- ಅಮಿತ್ ಶಾ ಅವರು ವಾಷಿಂಗ್ ಮಷಿನ್ ಇರುವ ಲಾಂಡ್ರಿಯನ್ನು ಹೊಂದಿದ್ದು, ಭ್ರಷ್ಟರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮುನ್ನ ಅವರನ್ನು ಶುದ್ಧೀಕರಿಸುತ್ತಾರೆ.

‘ಸಿಎಎ ಜಾರಿ ತಡೆಯಲು ಸಾಧ್ಯವಿಲ್ಲ’

ಮಾಲ್ಡಾ (ಪಶ್ಚಿಮ ಬಂಗಾಳ) (ಪಿಟಿಐ): ಬಿಜೆಪಿಯು ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸಿದೆ. ಪಶ್ಚಿಮ ಬಂಗಾಳ ಸೇರಿದಂತೆ ದೇಶದಾದ್ಯಂತ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿಗೊಳಿಸುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದರು.

ಮಾಲ್ದಾ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಕಾಯ್ದೆಯು ಯಾರ ಪೌರತ್ವವನ್ನೂ ಕಸಿದುಕೊಳ್ಳುವುದಿಲ್ಲ ಎಂದರು.

‘ರಾಜ್ಯದಲ್ಲಿ ಸಿಎಎ ಜಾರಿಗೊಳಿಸಲು ಬಿಡುವುದಿಲ್ಲ ಎಂದು ಹೇಳುವ ಮೂಲಕ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಇಲ್ಲಿನ ಜನರಿಗೆ ಮೋಸ ಮಾಡುತ್ತಿದ್ದಾರೆ’ ಎಂದರು.

ಚುನಾವಣಾ ಕಣದಲ್ಲಿ...

‘ಕೈ’ ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

ಸೂರತ್ (ಪಿಟಿಐ): ಗುಜರಾತ್‌ನ ಸೂರತ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ನೀಲೇಶ್ ಕುಂಭಾನಿ ಅವರ ನಾಮಪತ್ರ ಭಾನುವಾರ ತಿರಸ್ಕೃತಗೊಂಡಿದೆ. ನಾಮಪತ್ರದಲ್ಲಿನ ಸಹಿಗಳು ತಮ್ಮವಲ್ಲ ಎಂದು ಮೂವರು ಸೂಚಕರು ಚುನಾವಣಾಧಿಕಾರಿಗೆ ಪ್ರಮಾಣ ಪತ್ರ ಸಲ್ಲಿಸಿದ ನಂತರ ನಾಮಪತ್ರ ತಿರಸ್ಕರಿಸಲಾಗಿದೆ. ಕಾಂಗ್ರೆಸ್‌ನ ಇನ್ನೊಬ್ಬ ಅಭ್ಯರ್ಥಿ ಸುರೇಶ್ ಪಡ್ಸಲ ಅವರ ನಾಮಪತ್ರ ಕೂಡ ಅಸಿಂಧುವಾಗಿದೆ.

ನಾಮಪತ್ರಗಳಲ್ಲಿನ ಸೂಚಕರ ಸಹಿಯಲ್ಲಿ ವ್ಯತ್ಯಾಸಗಳಿದ್ದವು ಮತ್ತು ಅವು ನಿಜವಲ್ಲ ಎಂದು ತಿಳಿದುಬಂದಿದ್ದರಿಂದ ಕುಂಭಾನಿ ಮತ್ತು ಪಡ್ಸಲ ಅವರ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ ಎಂದು ಚುನಾವಣಾಧಿಕಾರಿ ಸೌರಭ್ ಪರ್ಧಿ ತಿಳಿಸಿದ್ದಾರೆ. ಇದರಿಂದಾಗಿ ಸೂರತ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿಯೇ ಕಣದಲ್ಲಿ ಇಲ್ಲದಂತಾಗಿದೆ.

ಶಶಿ ತರೂರ್ ವಿರುದ್ಧ ಪ್ರಕರಣ

ತಿರುವನಂತಪುರ (ಪಿಟಿಐ): ಕಾಂಗ್ರೆಸ್ ಮುಖಂಡ ಹಾಗೂ ತಿರುವನಂತಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶಶಿ ತರೂರ್ ಅವರು ತಮ್ಮ ಪ್ರತಿಸ್ಪರ್ಧಿಯಾದ ಬಿಜೆಪಿಯ ರಾಜೀವ್ ಚಂದ್ರಶೇಖರ್ ವಿರುದ್ಧ ಸುಳ್ಳು ಪ್ರಚಾರ ಮಾಡಿದ್ದಾರೆ ಎನ್ನುವ ಆರೋಪ ಕೇಳಿಬಂದಿದ್ದು, ಈ ಸಂಬಂಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಏಪ್ರಿಲ್ 15ರಂದೇ ಸೈಬರ್ ಪೊಲೀಸರು ಪ್ರಕರಣ ದಾಖಲಿಸಿದ್ದರು. ಶಶಿ ತರೂರ್ ಅವರು ಟಿ.ವಿ ಕಾರ್ಯಕ್ರಮವೊಂದರಲ್ಲಿ ರಾಜೀವ್ ಚಂದ್ರಶೇಖರ್ ವಿರುದ್ಧ ಸುಳ್ಳು ಪ್ರಚಾರ ಮಾಡಿದ್ದರು ಎಂದು ಬಿಜೆಪಿ ಮುಖಂಡ ಜೆ.ಆರ್. ಪದ್ಮಕುಮಾರ್ ನೀಡಿದ್ದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿದೆ.

ನಾವು ಸುರಕ್ಷಿತವಾಗಿಲ್ಲ: ಮಮತಾ

ಕುಮಾರಗಂಜ್ (ಪಿಟಿಐ): ಬಿಜೆಪಿಯು ತನ್ನನ್ನು ಮತ್ತು ಸೋದರಳಿಯ, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರನ್ನು ಗುರಿಯಾಗಿಸಿಕೊಂಡಿದೆ ಎಂದು ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಆರೋಪಿಸಿದ್ದು, ತಾವು ಸುರಕ್ಷಿತವಲ್ಲ ಎಂದು ತಿಳಿಸಿದ್ದಾರೆ.

ವಿಧಾನಸಭೆಯ ವಿಪಕ್ಷ ನಾಯಕ ಸುವೇಂದು ಅಧಿಕಾರಿ, ‘ಸೋಮವಾರ ದೊಡ್ಡ ಸ್ಫೋಟ ಸಂಭವಿಸಲಿದ್ದು, ಅದರಿಂದ ಟಿಎಂಸಿ ಮತ್ತು ಅದರ ವರಿಷ್ಠರು ಕಂಪಿಸಲಿದ್ದಾರೆ’ ಎಂದು ಹೇಳಿಕೆ ನೀಡಿದ್ದ ಮರುದಿನ ಮಮತಾ, ಬಿಜೆಪಿ ವಿರುದ್ಧ ಆರೋಪ ಮಾಡಿದ್ದಾರೆ. ಕುಮಾರಗಂಜ್ ಲೋಕಸಭಾ ಕ್ಷೇತ್ರದ ಟಿಎಂಸಿ ಅಭ್ಯರ್ಥಿ, ರಾಜ್ಯ ಸಚಿವ ವಿಪ್ಲವ್ ಮಿತ್ರ ಅವರ ಪರವಾಗಿ ಚುನಾವಣಾ ರ‍್ಯಾಲಿಯಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ರಾಜಸ್ಥಾನ: ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ವಾಗ್ದಾಳಿ

ಕಾಂಗ್ರೆಸ್‌ನ ಪಾಪಕೃತ್ಯಗಳಿಗೆ ಶಿಕ್ಷೆ

ಜೈಪುರ (ಪಿಟಿಐ): ತನ್ನ ಅಧಿಕಾರದ ಅವಧಿಯಲ್ಲಿ ಮಾಡಿರುವ ಪಾಪಕೃತ್ಯಗಳಿಗಾಗಿ ದೇಶದ ಜನರು ಕಾಂಗ್ರೆಸ್ ಪಕ್ಷವನ್ನು ‘ಶಿಕ್ಷಿಸಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ರಾಜಸ್ಥಾನದ ಭೀನ್‌ಮಾಲ್‌ನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, ‘ಒಮ್ಮೆ 400 ಸ್ಥಾನಗಳನ್ನು ಗೆದ್ದಿದ್ದ ಪಕ್ಷಕ್ಕೆ ಈಗ ಲೋಕಸಭಾ ಚುನಾವಣೆಯಲ್ಲಿ 300 ಸ್ಥಾನಗಳಲ್ಲಿ ಸ್ಪರ್ಧಿಸಲೂ ಆಗುತ್ತಿಲ್ಲ. ಕಾಂಗ್ರೆಸ್‌ನ ಈಗಿನ ಸ್ಥಿತಿಗೆ ಆ ಪಕ್ಷವೇ ಹೊಣೆ’ ಎಂದು ಕುಟುಕಿದರು.

‘ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರವನ್ನು ಹರಡುವ ಮೂಲಕ ಕಾಂಗ್ರೆಸ್ ಪಕ್ಷವು ದೇಶವನ್ನು ಟೊಳ್ಳಾಗುವಂತೆ ಮಾಡಿದೆ. ಇಂದು ದೇಶದ ಜನರು ಕಾಂಗ್ರೆಸ್ ಮೇಲೆ ಕೋಪಗೊಂಡಿದ್ದು, ಈ ಪಾಪಗಳಿಗೆ ಅದನ್ನು ಶಿಕ್ಷಿಸುತ್ತಿದ್ದಾರೆ. ಮತ್ತೆ ಕಾಂಗ್ರೆಸ್ ಮುಖ ನೋಡಬಾರದು ಎಂಬ ಸಿಟ್ಟು ಯುವ ಜನರಲ್ಲಿದೆ’ ಎಂದರು.

‘ಬಿಜೆಪಿಯನ್ನು ಎದುರಿಸಲು ಅವರು ಅವಕಾಶವಾದಿ ‘ಇಂಡಿ’ ಒಕ್ಕೂಟ ರಚಿಸಿದ್ದಾರೆ. ಆದರೆ ಅದರ ಸ್ಥಿತಿ, ಹಾರಾಡುವ ಮುನ್ನವೇ ದಾರ ತುಂಡಾದ ಗಾಳಿಪಟದ ಹಾಗಾಗಿದೆ’ ಎಂದು ಲೇವಡಿ ಮಾಡಿದರು.

‘ಈ ಲೋಕಸಭಾ ಚುನಾವಣೆಯಲ್ಲಿ ಶೇ 25ರಷ್ಟು ಸೀಟುಗಳಲ್ಲಿ ಆ ಪಕ್ಷಗಳ ಅಭ್ಯರ್ಥಿಗಳು ಪರಸ್ಪರ ಪೈಪೋಟಿಗೆ ಇಳಿದಿದ್ದಾರೆ. ಚುನಾವಣೆಗೆ ಮುನ್ನವೇ ಇಷ್ಟೊಂದು ಕಚ್ಚಾಟ ನಡೆದರೆ, ಚುನಾವಣೆಯ ನಂತರ ಲೂಟಿಗಾಗಿ ಅವರು ಯಾವ ರೀತಿ ಹೊಡೆದಾಡಿಕೊಳ್ಳಬಹುದು ಎಂಬುದನ್ನು ನಿಮಗೆ ಊಹಿಸಬಹುದು. ಇಷ್ಟು ದೊಡ್ಡ ದೇಶವನ್ನು ಅಂತಹ ಜನರ ಕೈಗೆ ಒಪ್ಪಿಸಬಹುದೇ ಎಂದು ಪ್ರಶ್ನಿಸಿದರು.

ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ –ಪಿಟಿಐ ಚಿತ್ರ

ಚುನಾವಣೆಯಲ್ಲಿ ಸ್ಪರ್ಧಿಸುವ ಧೈರ್ಯ ಇಲ್ಲದವರು ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ ಎಂದು ಹೆಸರು ಹೇಳದೆಯೇ ಕಾಂಗ್ರೆಸ್ ನಾಯಕಿ, ಸೋನಿಯಾ ಗಾಂಧಿ ಬಗ್ಗೆ ವ್ಯಂಗ್ಯವಾಡಿದರು.

ಯುಪಿಎ ಆಡಳಿತದಲ್ಲಿ ಪ್ರಧಾನಿಗೆ ಯಾರೂ ಗೌರವ ಕೊಡುತ್ತಿರಲಿಲ್ಲ. ‘ರಿಮೋಟ್ ಕಂಟ್ರೋಲ್’ನಲ್ಲಿ ಸರ್ಕಾರ ನಡೆಯುತ್ತಿತ್ತು ಎಂದು ಆರೋಪಿಸಿದರು.

‘ನಿಮ್ಮ ಸಂಪತ್ತು ಹೆಚ್ಚು ಮಕ್ಕಳಿದ್ದವರ ಪಾಲಾಗುತ್ತದೆ’

ಜೈಪುರ (ಪಿಟಿಐ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಅದು ದೇಶದ ಜನರ ಸಂಪತ್ತನ್ನು ಮುಸ್ಲಿಮರಿಗೆ ಮರು ಹಂಚಿಕೆ ಮಾಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ‘ದೇಶದ ಸಂಪನ್ಮೂಲಗಳಿಗೆ ಅಲ್ಪಸಂಖ್ಯಾತರು ಮೊದಲ ಹಕ್ಕುದಾರರು’ ಎಂಬ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹೇಳಿಕೆ ಪ್ರಸ್ತಾಪಿಸಿ ಅವರು ಹೀಗೆ ಪ್ರತಿಕ್ರಿಯಿಸಿದರು.

ರಾಜಸ್ಥಾನದ ಬನ್ಸ್ವಾರದಲ್ಲಿ ನಡೆದ ರ‍್ಯಾಲಿಯಲ್ಲಿ ಭಾಗವಹಿಸಿ ಮಾತನಾಡಿದ ಮೋದಿ, ‘ನನ್ನ ತಾಯಂದಿರೇ, ಸಹೋದರಿಯರೇ... ನಗರ ನಕ್ಸಲರ ಮನಃಸ್ಥಿತಿಯ ಅವರು ನಿಮ್ಮ ಮಂಗಳಸೂತ್ರವನ್ನೂ ಬಿಡುವುದಿಲ್ಲ. ಅವರು ಆ ಮಟ್ಟಕ್ಕೆ ಹೋಗಬಲ್ಲರು’ ಎಂದು ಹೇಳಿದರು.

‘ತಾಯಂದಿರು, ಸಹೋದರಿಯರ ಬಂಗಾರವನ್ನು ಲೆಕ್ಕ ಹಾಕುವುದಾಗಿ, ಅದರ ಬಗ್ಗೆ ಮಾಹಿತಿ ಪಡೆಯುವುದಾಗಿ, ನಂತರ ಸಂಪತ್ತನ್ನು ಮರು ಹಂಚಿಕೆ ಮಾಡುವುದಾಗಿ ಕಾಂಗ್ರೆಸ್ ಪ್ರಣಾಳಿಕೆ ಹೇಳುತ್ತದೆ. ಅದನ್ನು ಯಾರಿಗೆ ಹಂಚುತ್ತಾರೆ? ಮುಸ್ಲಿಮರು ದೇಶದ ಸಂಪತ್ತಿನ ಮೊದಲ ಹಕ್ಕುದಾರರು ಎಂದು ಮನಮೋಹನ್ ಸಿಂಗ್ ಸರ್ಕಾರ ಹೇಳಿತ್ತು. ಅದರ ಅರ್ಥ, ಹೆಚ್ಚು ಮಕ್ಕಳು ಇರುವವರಿಗೆ ಹಂಚಿಕೆ ಆಗುತ್ತದೆ. ನುಸುಳುಕೋರರಿಗೆ ನಿಮ್ಮ ಸಂಪತ್ತು ಹಂಚಿಕೆಯಾಗುತ್ತದೆ. ನೀವು ಕಷ್ಟದಿಂದ ಸಂಪಾದಿಸಿದ ಹಣ ನುಸುಳುಕೋರರ ಪಾಲಾಗಲೇ? ಅದಕ್ಕೆ ನಿಮ್ಮ ಸಮ್ಮತಿ ಇದೆಯೇ’ ಎಂದು ಮೋದಿ ಪ್ರಶ್ನಿಸಿದರು.

ಚುಟುಕು

ಟಿ.ವಿ ಚರ್ಚೆಯಲ್ಲಿ ಮಾರಾಮಾರಿ

ಟೀಕಮ್‌ಗಢ (ಪಿಟಿಐ): ಮಧ್ಯಪ್ರದೇಶದ ಟೀಕಮ್‌ಗಢದಲ್ಲಿ ರಾಷ್ಟ್ರೀಯ ಸುದ್ದಿ ವಾಹಿನಿಯೊಂದರ ಚುನಾವಣಾ ಚರ್ಚೆಯ ವೇಳೆ ಇಬ್ಬರು ವ್ಯಕ್ತಿಗಳು ಸ್ಥಳೀಯ ಬಿಜೆಪಿ ಮುಖಂಡನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಜರ್‌ಬಾಗ್‌ನಲ್ಲಿ ವಾಹಿನಿಯು ಶನಿವಾರ ರಾತ್ರಿ ಆಯೋಜಿಸಿದ್ದ ಚರ್ಚಾ ಕಾರ್ಯಕ್ರಮದ ವೇಳೆ ನಡೆದ ಘಟನೆಯ ಸಂಬಂಧ ಒಬ್ಬನನ್ನು ಬಂಧಿಸಲಾಗಿದೆ.

‘ಚರ್ಚೆಯಲ್ಲಿ ಕಾಂಗ್ರೆಸ್, ಬಿಜೆಪಿ ಜತೆಗೆ ಇತರೆ ಪಕ್ಷಗಳ ಮುಖಂಡರೂ ಭಾಗವಹಿಸಿದ್ದರು. ಆರೋಪಿಗಳಾದ ಹಿಮಾಂಶು ತಿವಾರಿ ಮತ್ತು ಬಾಬರ್ ಅವರು ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದ್ದಲ್ಲದೇ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದರು. ಅದಕ್ಕೆ ಬಿಜೆಪಿ ಮಾಧ್ಯಮ ಉಸ್ತುವಾರಿ ಪ್ರಫುಲ್ ದ್ವಿವೇದಿ ಆಕ್ಷೇಪ ವ್ಯಕ್ತಪಡಿಸಿದರು. ಆಗ ಅವರು ದ್ವಿವೇದಿ ಕಡೆಗೆ ಕುರ್ಚಿ ಎಸೆದರು’ ಎಂದು ಕೊತ್ವಾಲಿ ಪೊಲೀಸ್ ಠಾಣೆಯ ಅಧಿಕಾರಿ ಆನಂದ್ ರಾಜ್ ತಿಳಿಸಿದರು.

ದ್ವಿವೇದಿ ಕೊಟ್ಟ ದೂರಿನ ಆಧಾರದ ಮೇಲೆ ಬಾಬರ್ ಅವರನ್ನು ಬಂಧಿಸಲಾಗಿದ್ದು, ತಿವಾರಿ ಪರಾರಿಯಾಗಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ. ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ನವೀನ್ ಸಾಹು ಈ ಬಗ್ಗೆ ಸ್ಪಷ್ಟೀಕರಣ ನೀಡಿದ್ದು, ಆರೋಪಿಗಳಿಗೂ ಪಕ್ಷಕ್ಕೂ ಸಂಬಂಧವಿಲ್ಲ. ಅವರು ಪ್ರೇಕ್ಷಕರಾಗಿ ಚರ್ಚೆಯಲ್ಲಿ ಪಾಲ್ಗೊಂಡಿದ್ದರು ಎಂದಿದ್ದಾರೆ.

ಜಿಗಿ–ನೆಗೆದಾಟ

ಸಂಸದ ಕೈಸರ್ ಆರ್‌ಜೆಡಿಗೆ

ಪಟ್ನಾ (ಪಿಟಿಐ): ಲೋಕ ಜನಶಕ್ತಿ ಪಕ್ಷದ (ಎಲ್‌ಜೆಪಿ) ಸಂಸದ ಹಾಗೂ ಬಿಹಾರದಲ್ಲಿನ ಎನ್‌ಡಿಎ ಕೂಟದ ಏಕೈಕ ಮುಸ್ಲಿಂ ಸಂಸದ ಮೆಹಬೂದ್ ಅಲಿ ಕೈಸರ್ ಅವರು ಭಾನುವಾರ ಆರ್‌ಜೆಡಿಗೆ ಸೇರ್ಪಡೆಗೊಂಡರು.

ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಮೆಹಬೂಬ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಎಲ್‌ಜೆಪಿಯು ಇವರಿಗೆ ಟಿಕೆಟ್ ನಿರಾಕರಿಸಿತ್ತು. ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರನ್ನು ಭೇಟಿಯಾದ ಬಳಿಕ ಮೆಹಬೂಬ್ ಅವರು ಪಕ್ಷಕ್ಕೆ ಸೇರಿದರು. ಇದರಿಂದ ಸಂವಿಧಾನ ರಕ್ಷಣೆಗಾಗಿ ನಾವು ನಡೆಸುತ್ತಿರುವ ಹೋರಾಟಕ್ಕೆ ಬಲ ಬಂದಿದೆ ಎಂದು ತೇಜಸ್ವಿ ಯಾದವ್ ಹೇಳಿದರು. 2014ರಲ್ಲಿ ಮೆಹಬೂಬ್ ಅವರು ಕಾಂಗ್ರೆಸ್ ತೊರೆದು ಎಲ್‌ಜೆಪಿ ಸೇರಿದ್ದರು.

ಎಂಥಾ ಮಾತು!

‘ಇಂಡಿಯಾ’ ಒಕ್ಕೂಟವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ, ಸಂಸತ್‌ನ ಮೊದಲ ಅಧಿವೇಶನದಲ್ಲೇ ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ರದ್ದು ಮಾಡಲಿದೆ. ಪ್ರಣಾಳಿಕೆಯಲ್ಲಿ ಉಲ್ಲೇಖಿಸದಿದ್ದರೂ ಸಿಎಎಯನ್ನು ರದ್ದುಗೊಳಿಸುವುದು ಕಾಂಗ್ರೆಸ್ ಪಕ್ಷದ ಉದ್ದೇಶವಾಗಿದೆ. ಪ್ರಣಾಳಿಕೆಯು ಸುದೀರ್ಘವಾಗುತ್ತದೆ ಎಂಬ ಕಾರಣಕ್ಕೆ ಸಿಎಎ ಉಲ್ಲೇಖವನ್ನು ಕೈಬಿಡಲಾಗಿತ್ತು. 10 ವರ್ಷಗಳ ಆಡಳಿತಾವಧಿಯಲ್ಲಿ ಬಿಜೆಪಿಯು ದೇಶಕ್ಕೆ ಅಪಾರ ಹಾನಿಯುಂಟುಮಾಡಿದೆ. ತನಗೆ ಲಭಿಸಿದ್ದ ಬಹುಮತವನ್ನು ದುರುಪಯೋಗಪಡಿಸಿಕೊಂಡಿದೆ

ಪಿ.ಚಿದಂಬರಂ, ಕಾಂಗ್ರೆಸ್ ಮುಖಂಡ

ಕಳೆದ ಹತ್ತು ವರ್ಷಗಳಲ್ಲಿ ಬಿಜೆಪಿಯು ಸ್ಥಿರ ಸರ್ಕಾರವನ್ನು ನೀಡಿದೆ. ವಸತಿ ರಹಿತ ಜನರಿಗೆ ಸಾವಿರಾರು ಮನೆಗಳನ್ನು ಒದಗಿಸಲಾಗಿದೆ. ಗ್ರಾಮೀಣ ಪ್ರದೇಶದ ಜನರ ಬದುಕನ್ನು ಹಸನುಗೊಳಿಸಲಾಗಿದೆ. ಮಹಾರಾಷ್ಟ್ರದಲ್ಲಿ ಎನ್‌ಸಿಪಿ ಶರದ್ ಪವಾರ್ ಬಣ ಮತ್ತು ಶಿವಸೇನಾ ಉದ್ಧವ್ ಠಾಕ್ರೆ ಬಣ ಸೇರಿದಂತೆ ವಿವಿಧ ವಿರೋಧ ಪಕ್ಷಗಳು ಕುಟುಂಬ ರಾಜಕಾರಣವನ್ನು ಉಳಿಸಲು ಪ್ರಯತ್ನಿಸುತ್ತಿವೆ

ಜೆ.ಪಿ. ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ



ರಾಜಸ್ಥಾನದ ಪ್ರಮುಖ ಪ್ರವಾಸಿ ತಾಣಗಳಲ್ಲೊಂದಾಗಿರುವ ಚಿತ್ತೋರ್‌ಗಢ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ತುರುಸಿನ ಸ್ಪರ್ಧೆಗೆ ವೇದಿಕೆ ಅಣಿಯಾಗಿದೆ. ರಜಪೂತರ ಪ್ರಾಬಲ್ಯವಿರುವ ಈ ಕ್ಷೇತ್ರದಲ್ಲಿ ಕಳೆದೆರಡು ಚುನಾವಣೆಗಳಲ್ಲಿ ಗೆದ್ದಿರುವ ಚಂದ್ರಪ್ರಕಾಶ್ ಜೋಶಿ ಅವರನ್ನೇ ಬಿಜೆಪಿಯು ಮೂರನೇ ಬಾರಿ ಕಣಕ್ಕಿಳಿಸಿದೆ. ಇವರ ಗೆಲುವಿನ ಓಟಕ್ಕೆ ಕಡಿವಾಣ ಹಾಕಲು ಕಾಂಗ್ರೆಸ್, ಮಾಜಿ ರಾಜ್ಯ ಸಚಿವ ಉದಯ್‌ಲಾಲ್ ಅಂಜನಾ ಅವರನ್ನು ಅಖಾಡಕ್ಕಿಳಿಸಿದೆ. ಕೇಂದ್ರ ಸಚಿವ ಪರಷೋತ್ತಮ ರೂಪಾಲ ಅವರು ಈಚೆಗೆ ರಜಪೂತರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ರಜಪೂತರು, ಬಿಜೆಪಿ ವಿರುದ್ಧ ತಿರುಗಿ ಬಿದ್ದಿರುವುದರಿಂದ ಈ ಬಾರಿ ಕಣವು ತೀವ್ರ ಕುತೂಹಲ ಮೂಡಿಸಿದೆ ಎಂದು ಚುನಾವಣಾ ವಿಶ್ಲೇಷಕರು ಹೇಳುತ್ತಾರೆ. 2019ರ ಚುನಾವಣೆಯಲ್ಲಿ ಚಂದ್ರಪ್ರಕಾಶ್ ಜೋಶಿ ಅವರು 5,76,247 ಮತಗಳ ಅಂತರದಿಂದ ಕಾಂಗ್ರೆಸ್‌ನ ಗೋಪಾಲ್‌ಸಿಂಗ್ ಶೆಖಾವತ್ ಅವರನ್ನು ಪರಾಭವಗೊಳಿಸಿದ್ದರು. 2009ರಲ್ಲಿ ಇಲ್ಲಿ ಕಾಂಗ್ರೆಸ್ ಗೆದ್ದಿತ್ತು. ಆರ್‌ಎಸ್‌ಎಸ್ ಹಿನ್ನೆಲೆಯ ಚಂದ್ರಪ್ರಕಾಶ್ ಜೋಶಿ ಅವರು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ರಾಜ್ಯ ಮಟ್ಟದಲ್ಲಿ ಹಾಗೂ ಸ್ಥಳೀಯವಾಗಿ ಪ್ರಭಾವಿ ಮುಖಂಡರಾಗಿದ್ದಾರೆ. ಉದಯ್‌ಲಾಲ್ ಅಂಜನಾ ಅವರು ಈ ಹಿಂದೆ ರಾಜಸ್ಥಾನ ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ರೈತರ ಸಮಸ್ಯೆಗಳು, ನಿರುದ್ಯೋಗ, ಹಣದುಬ್ಬರ ಮೊದಲಾದ ವಿಷಯಗಳನ್ನು ಕಾಂಗ್ರೆಸ್ ಅಭ್ಯರ್ಥಿಯು ಪ್ರಮುಖ ಚುನಾವಣಾ ವಿಷಯವನ್ನಾಗಿಸಿದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜನರ ಮುಂದಿರಿಸಿ ಬಿಜೆಪಿ ಅಭ್ಯರ್ಥಿ ಮತಯಾಚಿಸುತ್ತಿದ್ದಾರೆ.

ಮುಖಾಮುಖಿ

ರಾಜ್‌ಕೋಟ್ (ಗುಜರಾತ್)

ಪರಷೋತ್ತಮ ರೂಪಾಲ
(ಬಿಜೆಪಿ)

ಪರೇಶ್ ಧನಾನಿ
(ಕಾಂಗ್ರೆಸ್)

v/s

ಕರಕುಶಲ ವಸ್ತುಗಳಿಗೆ ಪ್ರಸಿದ್ಧವಾಗಿರುವ ಗುಜರಾತ್‌ನ ರಾಜ್‌ಕೋಟ್ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ಏರಿಕೆಯಾಗಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಪ್ರಬಲ ಪೈಪೋಟಿಗೆ ಸಿದ್ಧರಾಗಿದ್ದಾರೆ. ಬಿಜೆಪಿಯು ಈ ಬಾರಿ ಕೇಂದ್ರ ಸಚಿವ ಪರಷೋತ್ತಮ ರೂಪಾಲ ಅವರನ್ನು ಸ್ಪರ್ಧೆಗಿಳಿಸಿದೆ. ರಾಜ್ಯಸಭಾ ಸದಸ್ಯರಾಗಿರುವ ರೂಪಾಲ, ಈ ಸಲ ಲೋಕಸಭಾ ಚುನಾವಣಾ ಕಣಕ್ಕಿಳಿದಿದ್ದಾರೆ. 2019ರ ಚುನಾವಣೆಯಲ್ಲಿ ಇಲ್ಲಿಂದ ಬಿಜೆಪಿಯ ಮೋಹನ್ ಕುಂದರಿಯಾ ಅವರು ಗೆದ್ದಿದ್ದರು. ರೂಪಾಲ ಅವರು ಈಚೆಗೆ ರಜಪೂತರ ಕುರಿತು ನೀಡಿದ್ದ ಹೇಳಿಕೆಯೊಂದು ವಿವಾದಕ್ಕೆ ಕಾರಣವಾಗಿತ್ತು. ಬಳಿಕ ಇವರು ಕ್ಷಮೆ ಯಾಚಿಸಿದ್ದರೂ ರಜಪೂತರ ಸಿಟ್ಟು ಶಮನವಾಗಿಲ್ಲ. ಇವರನ್ನು ಅಭ್ಯರ್ಥಿಯಾಗಿಸಬಾರದು ಎಂದು ಈ ಸಮುದಾಯದ ಒಂದು ವಿಭಾಗ ಆಗ್ರಹಿಸಿತ್ತು. ಈ ನಡುವೆ ಪಾಟೀದಾರ್ ಸಮುದಾಯದವರು ರೂಪಾಲ ಅವರಿಗೆ ಬೆಂಬಲ ಸೂಚಿಸಿದ್ದಾರೆ.

ಪರಷೋತ್ತಮ ರೂಪಾಲ ಅವರೊಂದಿಗೆ ಸೆಣಸಲು ಕಾಂಗ್ರೆಸ್, ಗುಜರಾತ್ ವಿಧಾನಸಭೆಯ ವಿರೋಧ ಪಕ್ಷದ ಮಾಜಿ ನಾಯಕ ಪರೇಶ್ ಧನಾನಿ ಅವರನ್ನು ಅಖಾಡಕ್ಕಿಳಿಸಿದೆ. ಧನಾನಿ, 2002ರಲ್ಲಿ ಅಮ್ರೇಲಿ ವಿಧಾನಸಭಾ ಕ್ಷೇತ್ರದಿಂದ ರೂಪಾಲ ವಿರುದ್ಧ ಸ್ಪರ್ಧಿಸಿ ಗೆದ್ದಿದ್ದರು. ರೂಪಾಲ ಅವರು ರಜಪೂತರ ಕೆಂಗಣ್ಣಿಗೆ ಗುರಿಯಾಗಿರುವುದರಿಂದ ಈ ಬಾರಿ ಧನಾನಿ ಗೆಲ್ಲಬಹುದೆಂಬ ವಿಶ್ವಾಸ ಕಾಂಗ್ರೆಸ್ ವರಿಷ್ಠರದ್ದಾಗಿದೆ. ಕಾಂಗ್ರೆಸ್‌ನ ವಿದ್ಯಾರ್ಥಿ ಸಂಘಟನೆಯಾದ ಎನ್‌ಎಸ್‌ಯುಐ ಮೂಲಕ ರಾಜಕೀಯ ಪ್ರವೇಶಿಸಿದ್ದ ಧನಾನಿ, ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. ಧನಾನಿ ಅವರು ಪಾಟೀದಾರ್ ಸಮುದಾಯದ ಉಪ ಜಾತಿಯಾದ ಲೇವಾ ಪಟೇಲ್‌ಗೆ ಸೇರಿದವರಾಗಿದ್ದು, ಈ ಸಮುದಾಯದವರು ಈ ಕ್ಷೇತ್ರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇಬ್ಬರು ಪ್ರಬಲ ಅಭ್ಯರ್ಥಿಗಳಲ್ಲಿ ಮತದಾರರು ಯಾರ ಕೈ ಹಿಡಿಯುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಈ ಸಂಚಿಕೆಯಲ್ಲಿ 150 ಕ್ಕೂ ಹೆಚ್ಚು ಬಹು ಆಯ್ಕೆಯ ಪ್ರಶ್ನೆಗಳು, QR ಕೋಡ್ ಆಧಾರಿತ 100 ಪ್ರಶ್ನೆಗಳ ಮಾದರಿ ಪರೀಕ್ಷೆ ಹಾಗೂ ವಿಡಿಯೋ ಪಾಠಗಳು

ಕೋಲ್ಕತ್ತ ನೈಟ್ ರೈಡರ್ಸ್‌ಗೆ ರೋಚಕ ಜಯ; ಆ್ಯಂಡ್ರೆ ರಸೆಲ್‌ಗೆ ಮೂರು ವಿಕೆಟ್

ಆರ್‌ಸಿಬಿ ಕೈಗೆ ಬಂದ ತುತ್ತು ಬಾಯಿಗಿಲ್ಲ!

ಕೋಲ್ಕತ್ತ (ಪಿಟಿಐ): ವಿಲ್ ಜ್ಯಾಕ್ಸ್, ರಜತ್ ಪಾಟೀದಾರ್ ಅವರ ಶತಕದ ಜೊತೆಯಾಟ ಹಾಗೂ ಕೊನೆಯ ಓವರ್‌ನಲ್ಲಿ ಕರ್ಣ ಶರ್ಮಾ ಬಾರಿಸಿದ ಮೂರು ಸಿಕ್ಸರ್‌ಗಳು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಜಯಕ್ಕೆ ಸಾಕಾಗಲಿಲ್ಲ.

ಪಂದ್ಯದ ಕೊನೆಯ ಎಸೆತದಲ್ಲಿ ನಿರ್ಧಾರವಾದ ಫಲಿತಾಂಶದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವು 1 ರನ್ ಅಂತರದ ರೋಚಕ ಜಯಸಾಧಿಸಿತು. ಆ್ಯಂಡ್ರೆ ರಸೆಲ್ (25ಕ್ಕೆ3) ಅವರ ಬೌಲಿಂಗ್ ಕೋಲ್ಕತ್ತ ಜಯದಲ್ಲಿ ಪ್ರಮುಖ ಪಾತ್ರ ವಹಿಸಿತು. ಇದರೊಂದಿಗೆ ಆರ್‌ಸಿಬಿ ತಂಡದ ಪ್ಲೇಆಫ್ ಪ್ರವೇಶದ ಹಾದಿ ಬಹುತೇಕ ಮುಚ್ಚಿದಂತಾಯಿತು. ತಂಡಕ್ಕಿದು ಸತತ ಆರನೇ ಮತ್ತು ಒಟ್ಟಾರೆ ಏಳನೇ ಸೋಲು. ಪಂಜಾಬ್ ಕಿಂಗ್ಸ್ (ಮಾರ್ಚ್ 25) ಎದುರು ಮಾತ್ರ ಫಫ್ ಬಳಗ ಜಯಿಸಿತ್ತು.

ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ 223 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಬೆಂಗಳೂರು ತಂಡದ ಇನಿಂಗ್ಸ್ ಕೆಲವು ನಾಟಕೀಯ ತಿರುವುಗಳಿಂದ ಕೂಡಿತ್ತು.

ಕೊನೆಯ ಓವರ್‌ನಲ್ಲಿ ತಂಡದ ಜಯಕ್ಕೆ 21 ರನ್‌ಗಳ ಅಗತ್ಯವಿತ್ತು. ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ಹಾಕಿದ ಈ ಓವರ್‌ನಲ್ಲಿ 'ಬಾಲಂಗೋಚಿ'ಗಳಾದ ಕರ್ಣ ಶರ್ಮಾ ಮತ್ತು ಮೊಹಮ್ಮದ್ ಸಿರಾಜ್ ಕ್ರೀಸ್‌ನಲ್ಲಿದ್ದರು. ಕರ್ಣ (20; 7ಎ) ಮೂರು ಸಿಕ್ಸರ್‌ಗಳನ್ನು ಹೊಡೆದು, ತಂಡವನ್ನು ಗೆಲುವಿನ ಸನಿಹ ತಂದು ನಿಲ್ಲಿಸಿದರು. ಆದರೆ ಓವರ್‌ನ 5ನೇ ಎಸೆತದಲ್ಲಿ ಅದೃಷ್ಟ ಕೈಕೊಟ್ಟಿತು. ಎಡಗೈ ಬ್ಯಾಟರ್ ಕರ್ಣ ನೇರ ಹೊಡೆತ ಆಡಿದರು. ಬೌಲರ್ ಸ್ಟಾರ್ಕ್ ಚುರುಕಾಗಿ ಬಾಗಿ ಕೆಳಮಟ್ಟದ ಕ್ಯಾಚ್ ಪಡೆದರು. ಕೊನೆಯ ಎಸೆತದಲ್ಲಿ ಜಯಕ್ಕೆ ಮೂರು ರನ್ ಅಗತ್ಯವಿದ್ದವು. ಎರಡು ರನ್ ಗಳಿಸಿದ್ದರೆ ಟೈ ಆಗುತ್ತಿತ್ತು. ಆದರೆ ಎರಡನೇ ರನ್ ಗಳಿಸುವ ಪ್ರಯತ್ನದಲ್ಲಿ ಲಾಕಿ ಫರ್ಗ್ಯುಸನ್ ರನ್‌ಔಟ್ ಆದರು.

12ನೇ ಓವರ್‌ನಲ್ಲಿ ತಿರುವು: ಆರ್‌ಸಿಬಿಗೆ 12ನೇ ಓವರ್‌ನವರೆಗೂ ಗೆಲುವಿನತ್ತ ಸಾಗುವ ಉತ್ತಮ ಅವಕಾಶವಿತ್ತು. ಇದಕ್ಕೆ ಕಾರಣರಾಗಿದ್ದು ವಿಲ್ ಜ್ಯಾಕ್ಸ್ (55; 32ಎ) ಮತ್ತು ರಜತ್ ಪಾಟೀದಾರ್ (52; 23ಎ) ಅವರ ಶತಕದ ಜೊತೆಯಾಟ. ತಂಡವು 3 ಓವರ್‌ಗಳಲ್ಲಿ 35 ರನ್ ಸೇರುವಷ್ಟರಲ್ಲಿ ವಿರಾಟ್ ಕೊಹ್ಲಿ ಮತ್ತು ಫಫ್ ಡುಪ್ಲೆಸಿ ನಿರ್ಗಮಿಸಿದರು. ಆಗ ಜೊತೆಗೂಡಿದ ವಿಲ್ ಮತ್ತು ರಜತ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿದರು. ವಿರಾಟ್ ಮತ್ತು ಫಫ್ ಅವರ ವೈಫಲ್ಯವನ್ನು ಮರೆಸಿದರು.

ಆದರೆ 12ನೇ ಓವರ್‌ನಲ್ಲಿ ಮಧ್ಯಮವೇಗಿ ರಸೆಲ್ ಅವರು ಇವರಿಬ್ಬರ ವಿಕೆಟ್ ಕಬಳಿಸುವ ಮೂಲಕ ಮತ್ತೆ ಜಯದ ಅವಕಾಶವನ್ನು ತಮ್ಮ ತಂಡದತ್ತ ಎಳೆದೊಯ್ದರು. ಇಲ್ಲಿಂದ ಆರಂಭವಾದ ಹಗ್ಗಜಗ್ಗಾಟದಲ್ಲಿ ಬೆಂಗಳೂರು ತಂಡದ ಸುಯಶ್ ಪ್ರಭುದೇಸಾಯಿ (24 ರನ್) ಮತ್ತು ಕಾರ್ತಿಕ್ (25; 18ಎ) ಅವರಿಬ್ಬರೂ ಮಾಡಿದ ಹೋರಾಟ ಫಲ ನೀಡಲಿಲ್ಲ. ಕಾರ್ತಿಕ್ ವಿಕೆಟ್ ಕೂಡ ರಸೆಲ್ ಪಾಲಾಯಿತು. 19ನೇ ಓವರ್‌ನಲ್ಲಿ ಕಾರ್ತಿಕ್ ಅವರೂ ಹೆಚ್ಚು ಅಬ್ಬರಿಸದಂತೆ ತಡೆಯೊಡ್ಡಿದ್ದರು. ಗ್ರೀನ್ ಮತ್ತು ಲೊಮ್ರೊರ್ ವಿಕೆಟ್‌ಗಳನ್ನು ಸುನಿಲ್ ನಾರಾಯಣ ತಮ್ಮದಾಗಿಸಿಕೊಂಡರು.

ಸಾಲ್ಟ್, ಅಯ್ಯರ್ ಮಿಂಚು: ಟಾಸ್ ಗೆದ್ದ ಬೆಂಗಳೂರು ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಫಿಲ್ ಸಾಲ್ಟ್ (48; 14ಎ) ಮತ್ತು ನಾಯಕ ಶ್ರೇಯಸ್ ಅಯ್ಯರ್ (50; 36ಎ) ಅವರ ಬಿರುಸಿನ ಬ್ಯಾಟಿಂಗ್‌ನಿಂದ ಆತಿಥೇಯ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 222 ರನ್ ಗಳಿಸಿತು.

ಆರ್‌ಸಿಬಿ ತಂಡದ ವಿಲ್ ಜ್ಯಾಕ್ಸ್ ಅವರ ವಿಕೆಟ್ ಗಳಿಸಿದ ಕೋಲ್ಕತ್ತ ತಂಡದ ಆ್ಯಂಡ್ರೆ ರಸೆಲ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಪಿಟಿಐ ಚಿತ್ರ

ವಿರಾಟ್ ಅಸಮಾಧಾನ

ಆರ್‌ಸಿಬಿ ತಂಡದ ಆರಂಭಿಕ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಅಂಪೈರ್ ತೀರ್ಪಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

7 ಎಸೆತಗಳಲ್ಲಿ 18 ರನ್ ಗಳಿಸಿ ಇನಿಂಗ್ಸ್‌ಗೆ ಉತ್ತಮ ಆರಂಭ ನೀಡಿದ್ದ ವಿರಾಟ್ ಮೂರನೇ ಓವರ್‌ನಲ್ಲಿ ಹರ್ಷಿತ್ ರಾಣಾ ಎಸೆತದಲ್ಲಿ ಬೌಲರ್‌ಗೇ ಕ್ಯಾಚ್ ಇತ್ತರು. ಆದರೆ ಆ ಎಸೆತವು ಸ್ಲೋವರ್ ಫುಲ್‌ಟಾಸ್ ಇತ್ತು. ಬಹುತೇಕ ಬ್ಯಾಟರ್ ಸೊಂಟಕ್ಕಿಂತ ಎತ್ತರದಲ್ಲಿದ್ದಂತೆ ಕಂಡಿತ್ತು. ಅದು ನೋಬಾಲ್ ಆಗಬಹುದೆಂಬ ಅಂದಾಜಿನಲ್ಲಿ ವಿರಾಟ್ ಆಡಿದರು. ಬ್ಯಾಟ್ ಅಂಚಿಗೆ ಬಡಿದು ಮೇಲೆದ್ದ ಚೆಂಡನ್ನು ರಾಣಾ ಕ್ಯಾಚ್ ಮಾಡಿದರು.

ಅಂಪೈರ್ ಔಟ್ ನೀಡಿದರು. ಇನ್ನೊಂದು ಬದಿಯಲ್ಲಿದ್ದ ಫಫ್ ಮತ್ತು ವಿರಾಟ್ ಅವರು ಡಿಆರ್‌ಎಸ್ ಮೊರೆ ಹೋದರು. ಮೂರನೇ ಅಂಪೈರ್ ಮೈಕೆಲ್ ಗಾಫ್ ಕೂಡ ಅದು ನೋಬಾಲ್ ಅಲ್ಲ, ವಿರಾಟ್ ಔಟ್ ಎಂದು ನಿರ್ಣಯ ನೀಡಿದರು. ಇದರಿಂದ ಕುಪಿತಗೊಂಡ ವಿರಾಟ್ ಫೀಲ್ಡ್ ಅಂಪೈರ್‌ಗಳ ಮುಂದೆ ಅಸಮಾಧಾನ ವ್ಯಕ್ತಪಡಿಸಿದರು.

'ನಾನು ಮತ್ತು ವಿರಾಟ್ ಈ ಎಸೆತವು ಸೊಂಟಕ್ಕಿಂತ ಮೇಲೆ ಇದೆ ಎಂದು ಅಂದುಕೊಂಡಿದ್ದೆವು. ಆ ರೀತಿ ಭಾಸವಾಗಿತ್ತು. ನನಗನಿಸತ್ತೆ ಪಾಪಿಂಗ್ ಕ್ರೀಸ್ ಸಮಕ್ಕೆ ಎತ್ತರವನ್ನು ಪರಿಗಣಿಸಿರಬೇಕು' ಎಂದು ಡುಪ್ಲೆಸಿ ಪಂದ್ಯದ ನಂತರ ಸುದ್ದಿಗಾರರಿಗೆ ಹೇಳಿದರು.

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್: 6ಕ್ಕೆ222 (20 ಓವರುಗಳಲ್ಲಿ)
ಸಾಲ್ಟ್ ಸಿ ಪಾಟೀದಾರ್ ಬಿ ಸಿರಾಜ್ 48 (14ಎ, 4x7, 6x3)
ಸುನಿಲ್ ಸಿ ಕೊಹ್ಲಿ ಬಿ ದಯಾಳ್ 10 (15ಎ, 4x2)
ರಘುವಂಶಿ ಸಿ ಗ್ರೀನ್ ಬಿ ದಯಾಳ್ 3 (4ಎ)
ವೆಂಕಟೇಶ್ ಸಿ ಲೊಮ್ರೋರ್ ಬಿ ಗ್ರೀನ್ 16 (8ಎ, 4x3)
ಶ್ರೇಯಸ್ ಸಿ ಡುಪ್ಲೆಸಿ ಬಿ ಗ್ರೀನ್ 50 (36ಎ, 4x7, 6x1)
ರಿಂಕು ಸಿ ದಯಾಳ್ ಬಿ ಫರ್ಗ್ಯುಸನ್ 24 (16ಎ, 4x2, 6x1)
ರಸೆಲ್ ಔಟಾಗದೇ 27 (20ಎ, 4x4)
ರಮಣದೀಪ್ ಔಟಾಗದೇ 24 (9ಎ, 4x2, 6x2)
ಇತರೆ: 20 (ಬೈ 4, ಲೆಗ್‌ಬೈ 7, ನೋಬಾಲ್ 2, ವೈಡ್ 7)
ವಿಕೆಟ್ ಪತನ: 1-56 (ಫಿಲ್ ಸಾಲ್ಟ್, 4.2), 2-66 (ಸುನಿಲ್ ನಾರಾಯಣ್, 5.2), 3-75 (ಅಂಗ್‌ಕ್ರಿಶ್ ರಘುವಂಶಿ, 5.6), 4-97 (ವೆಂಕಟೇಶ್ ಅಯ್ಯರ್, 8.2), 5-137 (ರಿಂಕು ಸಿಂಗ್, 13.1), 6-179 (ಶ್ರೇಯಸ್ ಅಯ್ಯರ್, 17.2).
ಬೌಲಿಂಗ್: ಮೊಹಮದ್ ಸಿರಾಜ್ 4-0-40-1; ಯಶ್ ದಯಾಳ್ 4-0-56-2; ಲಾಕಿ ಫರ್ಗ್ಯುಸನ್ 4-0-47-1; ಕರ್ಣ ಶರ್ಮಾ 4-0-33-0; ಕ್ಯಾಮರಾನ್ ಗ್ರೀನ್ 4-0-35-2

ರಾಯಲ್ ಚಾಲೆಂಜರ್ಸ್ ಬೆಂಗಳೂರು 221 (20 ಓವರ್‌ಗಳಲ್ಲಿ)
ಕೊಹ್ಲಿ ಸಿ ಮತ್ತು ಬಿ ರಾಣಾ 18 (7ಎ, 4X1, 6X2)
ಡುಪ್ಲೆಸಿ ಸಿ ವೆಂಕಟೇಶ್ ಬಿ ಚಕ್ರವರ್ತಿ 7 (7ಎ, 4X1)
ಜಾಕ್ಸ್ ಸಿ ರಘುವಂಶಿ ಬಿ ರಸೆಲ್ 55 (32ಎ, 4X4, 6X5)
ಪಾಟೀದಾರ್ ಸಿ ರಾಣಾ ಬಿ ರಸೆಲ್ 52 (23ಎ, 4X3)
ಗ್ರೀನ್ ಸಿ ರಮಣದೀಪ್ ಬಿ ಸುನಿಲ್ 6 (4ಎ)
ಪ್ರಭುದೇಸಾಯಿ ಸಿ ರಘುವಂಶಿ ಬಿ ರಾಣಾ 24 (18ಎ, 4X3)
ಲೊಮ್ರೋರ್ ಸಿ ಮತ್ತು ಬಿ ಸುನಿಲ್ 4 (3ಎ, 4X1)
ಕಾರ್ತಿಕ್ ಸಿ ಸಾಲ್ಟ್ ಬಿ ರಸೆಲ್ 25 (18ಎ, 4X3, 6X1)
ಶರ್ಮಾ ಸಿ ಮತ್ತು ಬಿ ಸ್ಟಾರ್ಕ್ 20 (7ಎ, 6X3)
ಸಿರಾಜ್ ಔಟಾಗದೇ 0
ಫರ್ಗ್ಯುಸನ್ ರನ್‌ಔಟ್ (ರಮಣದೀಪ್ ಸಿಂಗ್/ಸಾಲ್ಟ್) 1 (1ಎ)
ಇತರೆ: 9 (ಬೈ 1, ಲೆಗ್ ಬೈ 4, ವೈಡ್ 4)
ವಿಕೆಟ್ ಪತನ: 1- 27 (ವಿರಾಟ್ ಕೊಹ್ಲಿ, 2.1),2-35 (ಫಫ್ ಡುಪ್ಲೆಸಿ, 3.1), 3-137 (ವಿಲ್ ಜಾಕ್ಸ್, 11.1), 4-138 (ರಜತ್ ಪಾಟೀದಾರ್, 11.4), 5-151 (ಕ್ಯಾಮರಾನ್ ಗ್ರೀನ್, 12.3), 6-155 (ಮಹಿಪಾಲ್ ಲೊಮ್ರೋರ್ , 12.6), 7-187 (ಸುಯಶ್ ಪ್ರಭುದೇಸಾಯಿ, 17.2), 8-202 (ದಿನೇಶ್ ಕಾರ್ತಿಕ್, 18.6), 9-220 (ಕರಣ್ ಶರ್ಮಾ, 19.5), 10-221 (ಲಾಕಿ ಫರ್ಗ್ಯುಸನ್, 20)
ಬೌಲಿಂಗ್: ಹರ್ಷಿತ್ ರಾಣಾ 4-0-33-2, ಮಿಚೆಲ್ ಸ್ಟಾರ್ಕ್ 3-0-55-1, ವರುಣ್ ಚಕ್ರವರ್ತಿ 4-0-36-1, ಸುನಿಲ್ ನಾರಾಯಣ 4-0-34-2, ಸುಯಶ್ ಶರ್ಮಾ 2-0-33-0, ಆ್ಯಂಡ್ರೆ ರಸೆಲ್ 3-0-25-3
ಪಂದ್ಯದ ಆಟಗಾರ: ಆ್ಯಂಡ್ರೆ ರಸೆಲ್

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 1 ರನ್‌ಗಳ ಗೆಲುವು

ಸ್ಪಿನ್ ಮೋಡಿ: ಟೈಟನ್ಸ್ ತಂಡಕ್ಕೆ ಜಯ

ಮುಲ್ಲನಪುರ (ಪಿಟಿಐ): ಎಡಗೈ ಸ್ಪಿನ್ನರ್ ಸಾಯಿಕಿಶೋರ್ ಸ್ಪಿನ್ ಮೋಡಿ ಮತ್ತು ಬ್ಯಾಟರ್‌ಗಳ ತಾಳ್ಮೆಯ ಆಟದಿಂದ ಗುಜರಾತ್ ಟೈಟನ್ಸ್ ತಂಡವು ಪಂಜಾಬ್ ಕಿಂಗ್ಸ್ ಎದುರು ಐದು ಎಸೆತಗಳಿರುವಂತೆ ಮೂರು ವಿಕೆಟ್‌ಗಳಿಂದ ಜಯಿಸಿತು.

ಎಂವೈಎಸ್‌ಐಸಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಪಂಜಾಬ್ ತಂಡವು 20 ಓವರ್‌ಗಳಲ್ಲಿ 142 ರನ್ ಗಳಿಸಲಷ್ಟೇ ಶಕ್ತವಾಯಿತು.

ಗುಜರಾತ್ ಟೈಟನ್ಸ್ ತಂಡದ ಸ್ಪಿನ್ನರ್‌ಗಳಾದ ಸಾಯಿಕಿಶೋರ್ (33ಕ್ಕೆ4), ನೂರ್ (20ಕ್ಕೆ2), ರಶೀದ್ ಖಾನ್ (15ಕ್ಕೆ1) ಅವರು ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಗುರಿ ಬೆನ್ನಟ್ಟಿದ ಗುಜರಾತ್ ತಂಡವು 19.1 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 146 ರನ್ ಗಳಿಸಿ ಗೆದ್ದಿತು. ಪಂಜಾಬ್ ಬೌಲರ್‌ಗಳು ಗುಜರಾತ್ ತಂಡಕ್ಕೆ ಸುಲಭವಾಗಿ ಜಯಿಸಲು ಬಿಡಲಿಲ್ಲ. ಗುಜರಾತ್ ತಂಡದ ಶುಭಮನ್ ಗಿಲ್ (35; 29ಎ), ಸಾಯಿ ಸುದರ್ಶನ್ (31; 34ಎ) ಹಾಗೂ ರಾಹುಲ್ ತೆವಾಟಿಯಾ (36; 18ಎ) ತಾಳ್ಮೆಯಿಂದ ಆಡಿದರು.

ಟಾಸ್ ಗೆದ್ದ ಪಂಜಾಬ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಈ ಪಂದ್ಯಕ್ಕೂ ಶಿಖರ್ ಧವನ್ ಅಲಭ್ಯರಾದರು.

ಹಂಗಾಮಿ ನಾಯಕ ಸ್ಯಾಮ್ ಕರನ್ (20; 19ಎ, 4X2) ಮತ್ತು ಪ್ರಭಸಿಮ್ರನ್ ಸಿಂಗ್ (35; 21ಎ) ಅವರು ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. ಪ್ರಭಸಿಮ್ರನ್ 3 ಸಿಕ್ಸರ್ ಮತ್ತು 3 ಬೌಂಡರಿ ಗಳಿಸಿದರು. ಆರನೇ ಓವರ್‌ನಲ್ಲಿ ವೇಗಿ ಮೋಹಿತ್ ಶರ್ಮಾ ಅವರು ಪ್ರಭಸಿಮ್ರನ್ ವಿಕೆಟ್ ಗಳಿಸಿ ಜೊತೆಯಾಟವನ್ನು ಮುರಿದರು. ನಂತರದ ಓವರ್‌ಗಳಲ್ಲಿ ಸ್ಪಿನ್ನರ್‌ಗಳು ವಿಜೃಂಭಿಸಿದರು.

ಶಶಾಂಕ್ ಸಿಂಗ್, ಆಷುತೋಷ್ ಶರ್ಮಾ ಹಾಗೂ ಜಿತೇಶ್ ಶರ್ಮಾ ಅವರೂ ವಿಫಲರಾದರು. ಇದರಿಂದಾಗಿ ತಂಡವು 99 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತು. ಆದರೆ ಕೊನೆಯ ಹಂತದ ಓವರ್‌ಗಳಲ್ಲಿ ಹರಪ್ರೀತ್ ಸಿಂಗ್ (14; 19ಎ) ಮತ್ತು ಹರಪ್ರೀತ್ ಬ್ರಾರ್ (29; 12ಎ, 4X4, 6X1) ಸ್ವಲ್ಪ ಹೋರಾಟ ನಡೆಸಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್:20 ಓವರ್‌ಗಳಲ್ಲಿ 142 (ಸ್ಯಾಮ್ ಕರನ್ 20, ಪ್ರಭಸಿಮ್ರನ್ ಸಿಂಗ್ 35, ಹರಪ್ರೀತ್ ಬ್ರಾರ್ 29, ಮೋಹಿತ್ ಶರ್ಮಾ 32ಕ್ಕೆ2, ನೂರ್ ಅಹಮದ್ 20ಕ್ಕೆ2, ಸಾಯಿಕಿಶೋರ್ 33ಕ್ಕೆ4) ಗುಜರಾತ್ ಟೈಟನ್ಸ್: 19.1 ಓವರ್‌ಗಳಲ್ಲಿ 7ಕ್ಕೆ 146. (ಶುಭಮನ್ ಗಿಲ್ 35, ರಾಹುಲ್ ತೆವಾಟಿಯಾ (ಔಟಾಗದೇ 36), ಹರ್ಷಲ್ ಪಟೇಲ್ 15ಕ್ಕೆ3, ಲಿಯಾಮ್ ಲಿವಿಂಗ್‌ಸ್ಟೋನ್ 19ಕ್ಕೆ2).
ಪಂದ್ಯದ ಆಟಗಾರ: ಸಾಯಿಕಿಶೋರ್

ಗುಜರಾತ್ ಟೈಟನ್ಸ್ ತಂಡದ ಸ್ಪಿನ್ನರ್ ಸಾಯಿಕಿಶೋರ್ –ಎಎಫ್‌ಪಿ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	7	6	1	12	0.677
ಕೋಲ್ಕತ್ತ ನೈಟ್ ರೈಡರ್ಸ್	7	5	2	10	1.206
ಸನ್‌ರೈಸರ್ಸ್ ಹೈದರಾಬಾದ್	7	5	2	10	1.914
ಚೆನ್ನೈ ಸೂಪರ್ ಕಿಂಗ್ಸ್	7	4	3	8	0.529
ಲಖನೌ ಸೂಪರ್ ಜೈಂಟ್ಸ್	7	4	3	8	0.123
ಗುಜರಾತ್ ಟೈಟನ್ಸ್	8	4	4	8	-1.055
ಮುಂಬೈ ಇಂಡಿಯನ್ಸ್	7	3	4	6	-0.133
ಡೆಲ್ಲಿ ಕ್ಯಾಪಿಟಲ್ಸ್	8	3	5	6	-0.477
ಪಂಜಾಬ್ ಕಿಂಗ್ಸ್	8	2	6	4	-0.292
ಆರ್‌ಸಿಬಿ (ಬೆಂಗಳೂರು)	8	1	7	2	-1.046

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (379 ರನ್)
ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (13 ವಿಕೆಟ್)

ಮುಂಬೈಗೆ ಮುಯ್ಯಿ ತೀರಿಸಿಕೊಳ್ಳುವ ಛಲ

ಜೈಪುರ (ಪಿಟಿಐ): ಐಪಿಎಲ್ ಅಂಕ ಪಟ್ಟಿಯ ಅಗ್ರಸ್ಥಾನದಲ್ಲಿರುವ ರಾಜಸ್ಥಾನ ರಾಯಲ್ಸ್ ತಂಡವನ್ನು ಸೋಮವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರಿಸಲಿದೆ.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಆತಿಥೇಯ ರಾಜಸ್ಥಾನ ತಂಡವು ಎಲ್ಲ ವಿಭಾಗಗಳಲ್ಲಿಯೂ ಬಲಿಷ್ಠವಾಗಿದೆ. ಮೊದಲ ಸುತ್ತಿನ ಪಂದ್ಯದಲ್ಲಿ ರಾಯಲ್ಸ್ ತಂಡವು ಮುಂಬೈ ತಂಡವನ್ನು ಅದರ ತವರಿನಲ್ಲಿಯೇ ಮಣಿಸಿತ್ತು. ಹಾರ್ದಿಕ್ ಪಾಂಡ್ಯ ನಾಯಕತ್ವದ ಬಳಗಕ್ಕೆ ಈಗ ಮುಯ್ಯಿ ತೀರಿಸಿಕೊಳ್ಳುವ ಅವಕಾಶ ಇದೆ.

ಸಂಜು ಸ್ಯಾಮ್ಸನ್ ನಾಯಕತ್ವದ ರಾಯಲ್ಸ್ ತಂಡವು ಆಡಿರುವ ಏಳು ಪಂದ್ಯಗಳಲ್ಲಿ ಒಂದರಲ್ಲಿ ಮಾತ್ರ ಸೋತಿದೆ. ಆರನೇ ಸ್ಥಾನದಲ್ಲಿರುವ ಮುಂಬೈ ತಂಡವು ಮೂರರಲ್ಲಿ ಮಾತ್ರ ಗೆದ್ದು, ನಾಲ್ಕರಲ್ಲಿ ಸೋತಿದೆ. ಒಟ್ಟು 13 ವಿಕೆಟ್ ಗಳಿಸಿರುವ ಜಸ್‌ಪ್ರೀತ್ ಬೂಮ್ರಾ ಒಬ್ಬರೇ ಮುಂಬೈ ತಂಡದಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿರುವ ಬೌಲರ್.

ಗೆರಾಲ್ಡ್ ಕೋಯೆಟ್ಜಿ (12 ವಿಕೆಟ್) ಮತ್ತು ಆಕಾಶ್ ಮದ್ವಾಲ್ ಕೂಡ ಉತ್ತಮವಾಗಿದ್ದಾರೆ. ಸ್ಪಿನ್ನರ್ ಶ್ರೇಯಸ್ ಗೋಪಾಲ್ ಮೂರು ಪಂದ್ಯಗಳಲ್ಲಿ ತಲಾ ಒಂದು ವಿಕೆಟ್ ಗಳಿಸಿದ್ದಾರೆ. ಸೂರ್ಯ ಕುಮಾರ್ ಯಾದವ್ ಭರ್ಜರಿ ಫಾರ್ಮ್‌ನಲ್ಲಿರುವುದು ಮುಂಬೈ ತಂಡಕ್ಕೆ ಸಮಾಧಾನದ ವಿಷಯ. ಆದರೆ, ರಾಜಸ್ಥಾನ ತಂಡದ ಬೌಲಿಂಗ್ ಪಡೆಯನ್ನು ಎದುರಿಸುವುದು ಸುಲಭವಲ್ಲ. ಟ್ರೆಂಟ್ ಬೌಲ್ಟ್, ಡೆತ್ ಓವರ್ ಪರಿಣತ ಆವೇಶ್ ಖಾನ್, ಸ್ಪಿನ್ನರ್ ಯಜುವೇಂದ್ರ ಚಾಹಲ್ ಎದುರಿಸುವುದು ಕಠಿಣ ಸವಾಲು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಜಸ್‌ಪ್ರೀತ್ ಬೂಮ್ರಾ ಮತ್ತು ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

ರೋಯಿಂಗ್: ಒಲಿಂಪಿಕ್ಸ್‌ಗೆ ಬಾಲರಾಜ್

ನವದೆಹಲಿ (ಪಿಟಿಐ): ಭಾರತದ ಬಾಲರಾಜ್ ಪನ್ವರ್ ಅವರು ಪ್ಯಾರಿಸ್ ಒಲಿಂಪಿಕ್ ಕೂಟದ ರೋಯಿಂಗ್ ವಿಭಾಗದಲ್ಲಿ ಸ್ಪರ್ಧಿಸಲು ಅರ್ಹತೆ ಗಳಿಸಿದರು.

ದಕ್ಷಿಣ ಕೊರಿಯಾದ ಚುಂಗ್ಜುನಲ್ಲಿ ಭಾನುವಾರ ನಡೆದ ವಿಶ್ವ ಏಷ್ಯನ್ ಮತ್ತು ಓಷಿನಿಯಾ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ಸ್ ಅರ್ಹತಾ ರೆಗೆಟ್ಟಾದ ಪುರುಷರ ಸಿಂಗಲ್ ಸ್ಕಲ್ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆದ ಬಾಲರಾಜ್ ಅರ್ಹತೆ ಗಿಟ್ಟಿಸಿದರು.

ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಸ್ವಲ್ಪದರಲ್ಲೇ ಕಂಚಿನ ಪದಕ ತಪ್ಪಿಸಿಕೊಂಡಿದ್ದ 25 ವರ್ಷದ ಭಾರತೀಯ ಸೇನಾ ರೋವರ್, 2000 ಮೀಟರ್ ರೇಸ್‌ನಲ್ಲಿ 7ನಿಮಿಷ, 01.27 ಸೆಕೆಂಡುಗಳಲ್ಲಿ ಮೂರನೇ ಸ್ಥಾನ ಪಡೆದರು.

ಮೊದಲ 500 ಮೀಟರ್ಸ್ ಲೆಗ್‌ನಲ್ಲಿ ಪನ್ವರ್, ಚಿನ್ನದ ಪದಕವಿಜೇತ ಕಜಕಿಸ್ತಾನದ ವ್ಲಾಡಿಸ್ಲಾವ್ ಯಾಕೋವ್ಲೆವ್ ಮತ್ತು ಹಾಂಗ್ ಕಾಂಗ್‌ನ ಹಿನ್ ಚುನ್ ಚಿಯು ಅವರ ಹಿಂದೆ ಮೂರನೇ ಸ್ಥಾನದಲ್ಲಿದ್ದರು. ಆದರೆ ಪನ್ವರ್‌ಮುನ್ನಡೆ ಸಾಧಿಸಿದರು.

ಅಂತಿಮ ಹಂತದಲ್ಲಿ ಯಾಕೊವ್ಲೆವ್ ಮುನ್ನಡೆ ಸಾಧಿಸಿ, 6:59.46 ಸೆಕೆಂಡುಗಳ ಸಮಯದೊಂದಿಗೆ ಅಗ್ರಸ್ಥಾನ ಪಡೆದರು.

ಇಂಡೊನೇಷ್ಯಾದ ಮೆಮೊ ಮೆಮೋ ಎರಡನೇ ಸ್ಥಾನ ಪಡೆದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್‌ನಲ್ಲಿ ಭಾರತದ ಅರ್ಜುನ್ ಲಾಲ್ ಮತ್ತು ಅರವಿಂದ್ ಸಿಂಗ್ 11 ನೇ ಸ್ಥಾನ ಪಡೆದಿದ್ದರು.


ಬಾಲರಾಜ್ ಪನ್ವರ್

ಅಕ್ಷದೀಪ್–ಪ್ರಿಯಾಂಕಾ ಒಲಿಂಪಿಕ್ಸ್‌ಗೆ ಅರ್ಹತೆ

ಅಂತಾಲಿಯ, ಟರ್ಕಿ (ಪಿಟಿಐ); ಅಕ್ಷದೀಪ್ ಸಿಂಗ್ ಮತ್ತು ಪ್ರಿಯಾಂಕಾ ಗೋಸ್ವಾಮಿ ಅವರನ್ನೊಳಗೊಂಡ ಭಾರತದ ಮಿಶ್ರ ರಿಲೆ ತಂಡ ಭಾನುವಾರ ನಡೆದ ವಿಶ್ವ ಅಥ್ಲೆಟಿಕ್ಸ್ ರೇಸ್ ವಾಕಿಂಗ್ ಟೀಮ್ ಚಾಂಪಿಯನ್‌ಷಿಪ್ ನಲ್ಲಿ 18 ನೇ ಸ್ಥಾನ ಪಡೆಯಿತು. ಇದರೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿತು.

ಅಗ್ರ 22 ತಂಡಗಳು ಒಲಿಂಪಿಕ್ ಕೂಟಕ್ಕೆ ಅರ್ಹತೆ ಪಡೆಯುತ್ತವೆ.

ಭಾರತದ ಜೋಡಿ 42.195 ಕಿ.ಮೀ ದೂರವನ್ನು ಕ್ರಮಿಸಿ, 3ಗಂಟೆ, 05 ನಿಮಿಷ, 3 ಸೆಕೆಂಡುಗಳಲ್ಲಿ ಗುರಿ ತಲುಪಿತು. ಇಟಲಿಯ ಫ್ರಾನ್ಸೆಸ್ಕೊ ಫೋರ್ಟುನಾಟೊ ಮತ್ತು ವ್ಯಾಲೆಂಟಿನಾ ಟ್ರಾಪ್ಲೆಟ್ಟಿ ತಂಡ 2ಗಂ,56ನಿ, 45ಸೆ ಸಮಯದೊಂದಿಗೆ ಚಿನ್ನದ ಪದಕ ಗೆದ್ದಿತು. ಜಪಾನಿನ ಇಕೆಡಾ ಮತ್ತು ಕುಮಿಕೊ ಒಕಾಡಾ 2ಗಂ,57ನಿ,:04 ಸೆಕೆಂಡುಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದರು.

ಸ್ಪೇನ್‌ನ ಅಲ್ವಾರೊ ಮಾರ್ಟಿನ್ ಮತ್ತು ಲಾರಾ ಗಾರ್ಸಿಯಾ-ಕ್ಯಾರೊ ಜೋಡಿ 2:57:47 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕ ಗೆದ್ದುಕೊಂಡಿತು.

ಸ್ಕಾಟ್ಲೆಂಡ್, ಐರ್ಲೆಂಡ್ ತಂಡಕ್ಕೆ ನಂದಿನಿ ಪ್ರಾಯೋಜಕತ್ವ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಮುಂಬರಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳಿಗೆ ಪ್ರಾಯೋಜಕತ್ವ ನೀಡಲಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್ ತಿಳಿಸಿದ್ದಾರೆ.

'ಎರಡು ತಂಡಗಳು ಪಂದ್ಯ ನಡೆಯುವ ವೇಳೆ ಕೆಎಂಎಫ್ ನಂದಿನಿ ಬ್ರ್ಯಾಂಡ್ ಪ್ರದರ್ಶಿಸಲಿದ್ದಾರೆ' ಎಂದು ಹೇಳಿದ್ದಾರೆ.

'ನಂದಿನಿ ಉತ್ಪನ್ನಗಳನ್ನು ಜಾಗತಿಕಮಟ್ಟದ ಬ್ರ್ಯಾಂಡ್ ಮಾಡುವುದಕ್ಕಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿರುವ ಅವರು, 'ಈಗಾಗಲೇ ಮಧ್ಯಪ್ರಾಚ್ಯದಲ್ಲಿ ನಂದಿನಿ ಮಳಿಗೆಗಳಿವೆ. ಸಿಂಗಪುರದಲ್ಲಿ ನಮ್ಮ ಉತ್ಪನ್ನಗಳ ಲಭ್ಯವಾಗುತ್ತಿವೆ. ಅಮೆರಿಕದಲ್ಲೂ ನಂದಿನಿಯ ಸಿಹಿ ಉತ್ಪನ್ನಗಳು ಮಾರಾಟವಾಗುತ್ತಿವೆ' ಎಂದು ವಿವರಿಸಿದ್ದಾರೆ.

ಕೆಎಂಎಫ್‌ನ ಈ ನಿರ್ಧಾರವನ್ನು ಟೀಕಿಸಿರುವ ಇನ್ಫೊಸಿಸ್ ಫೌಂಡೇಷನ್‌ನ ಮಾಜಿ ಸಿಎಫ್‌ಒ ಮೋಹನ್‌ದಾಸ್ ಪೈ, 'ಇದು ಅವಮಾನದ ಸಂಗತಿ. ಕರ್ನಾಟಕದ ರೈತರಿಗೆ ಸೇರಿದ, ಕನ್ನಡಿಗರ ಹಣವನ್ನು ಏಕೆ ಬಳಸಬೇಕು? ಇದರಿಂದ ಯಾವ ಮೌಲ್ಯವನ್ನು ಜನರಿಗೆ ತಲುಪಿಸುತ್ತಿದ್ದೀರಿ? ಇದರ ಬದಲು ಬಡ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ನೀಡಬಹುದಿತ್ತು' ಎಂದು 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಕೆಎಂಎಫ್ ಎಂ.ಡಿ ಜಗದೀಶ್, 'ಈಗಲೂ ಕೆಎಂಎಫ್‌ನ ಆದಾಯದಲ್ಲಿ ಶೇ 85ರಷ್ಟು ರೈತರಿಗೇ ತಲುಪುತ್ತಿದೆ. ನಾವು ನಮ್ಮ ಉತ್ಪನ್ನಗಳ ಪ್ರಚಾರಕ್ಕಾಗಿ ಪ್ರಾಯೋಜಕತ್ವದ ನೀಡುತ್ತಿದ್ದೇವೆ. ನಂದಿನ ಉತ್ಪನ್ನಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಅಗತ್ಯವಿದೆ' ಎಂದು ಅವರು ತಿಳಿಸಿದ್ದಾರೆ .

ಕ್ಯಾಂಡಿಡೇಟ್ಸ್ ಚೆಸ್: ಪ್ರಶಸ್ತಿಗೆ ಹತ್ತಿರವಾದ ಗುಕೇಶ್

ಟೊರಾಂಟೊ (ಪಿಟಿಐ): ಹದಿಹರೆಯದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಅವರು ಕ್ಯಾಂಡಿಡೇಟ್ಸ್ ಟೂರ್ನಿಯ 13ನೇ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅವರನ್ನು ಸೋಲಿಸಿ ಪ್ರಶಸ್ತಿಗೆ ತೀರಾ ಹತ್ತಿರದಲ್ಲಿದ್ದಾರೆ. ಇನ್ನೊಂದು ಸುತ್ತು ಉಳಿದಿರುವಂತೆ 17 ವರ್ಷದ ಭಾರತದ ಆಟಗಾರ ಏಕಾಂಗಿಯಾಗಿ ಅಗ್ರಸ್ಥಾನಕೇರಿದ್ದಾರೆ.

ಈ ಟೂರ್ನಿ ಗೆದ್ದಲ್ಲಿ, ಚೆಸ್ ಇತಿಹಾಸದಲ್ಲೇ ವಿಶ್ವ ಚಾಂಪಿಯನ್‌ಗೆ ಸವಾಲಿಗ (ಚಾಲೆಂಜರ್) ಆಗುವ ಅತಿ ಕಿರಿಯ ಆಟಗಾರ ಎಂಬ ಶ್ರೇಯಸ್ಸಿಗೆ ಅವರು ಪಾತ್ರರಾಗಲಿದ್ದಾರೆ. ಚೀನಾದ ಡಿಂಗ್ ಲಿರೆನ್ ಅವರು ಪ್ರಸ್ತುತ ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ.

ಶನಿವಾರ ಇನ್ನೊಂದು ಪ್ರಮುಖ ಪಂದ್ಯದಲ್ಲಿ ರಷ್ಯಾದ ಇಯಾನ್ ನೆಪೊಮ್‌ನಿಯಚಿ ಮತ್ತು ಅಮೆರಿಕದ ಹಿಕಾರು ನಕಾಮುರಾ ಅವರು ಕೇವಲ 26 ನಡೆಗಳಲ್ಲಿ ಪಾಯಿಂಟ್ ಹಂಚಿಕೊಳ್ಳಲು ನಿರ್ಧರಿಸಿದರು.

ಗುಕೇಶ್ ಅವರ ಸಂಯಮದ ಆಟಕ್ಕೆ ಜಯ ಒಲಿಯಿತು. ಸಂಕೀರ್ಣ ಸ್ಥಿತಿಗೆ ಹೋಗಿದ್ದ ಪಂದ್ಯದ 47ನೇ ನಡೆಯಲ್ಲಿ ಅಲಿರೇಝಾ ತಪ್ಪು ಎಸಗಿದಾಗ ಭಾರತದ ಆಟಗಾರ ಆ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಎಡವಲಿಲ್ಲ. 63ನೇ ನಡೆಯಲ್ಲಿ ಗುಕೇಶ್ ಪಂದ್ಯ ಗೆದ್ದರು. ಅವರ ಬಳಿ 8.5 ಪಾಯಿಂಟ್ಸ್ ಇವೆ. ಇದು ನಕಾಮುರಾ, ನೆಪೊಮ್‌ನಿಯಾಚಿ ಮತ್ತು ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರಿಗಿಂತ ಅರ್ಧ ಪಾಯಿಂಟ್ ಹೆಚ್ಚು.

ಹೀಗಾಗಿ ಕೊನೆಯ ಸುತ್ತಿನಲ್ಲಿ ನಾಲ್ವರಿಗೆ ಪ್ರಶಸ್ತಿ ಗೆಲುವಿನ ಅವಕಾಶ ಜೀವಂತವಾಗಿದೆ. ಗುಕೇಶ್ ಅಂತಿಮ ಸುತ್ತಿನಲ್ಲಿ ನಕಾಮುರಾ ಅವರನ್ನು ಎದುರಿಸಲಿದ್ದಾರೆ. ಕರುವಾನಾ ಇನ್ನೊಂದು ಪಂದ್ಯದಲ್ಲಿ ನೆಪೊಮ್‌ನಿಯಾಚಿ ಅವರನ್ನು ಎದುರಿಸಲಿದ್ದಾರೆ. ಕೊನೆಯ ಸುತ್ತಿನಲ್ಲಿ 'ಡ್ರಾ' ಕೂಡ ಗುಕೇಶ್‌ಗೆ ನೆರವಾಗಬಹುದು ಎಂಬುದು ಚೆಸ್ ಪಂಡಿತರ ಲೆಕ್ಕಾಚಾರ.

ಆರ್.ಪ್ರಜ್ಞಾನಂದ ಮತ್ತು ವಿದಿತ್ ಎಸ್. ಗುಜರಾತಿ ಅವರು ಆರು ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನ ಹಂಚಿಕೊಂಡಿದ್ದಾರೆ. ಫಿರೋಜ್ ಅವರು 4.5 ಪಾಯಿಂಟ್ಸ್ ಗಳಿಸಿದ್ದರೆ, ತಳದಲ್ಲಿರುವ ಅಬಸೋವ್ ಬಳಿ ಮೂರೂವರೆ ಪಾಯಿಂಟ್ಸ್ ಇವೆ.

ಇತರ ಪಂದ್ಯಗಳಲ್ಲಿ ಕರುವಾನಾ ಅವರು ದೀರ್ಘ ಹೋರಾಟದ ನಂತರ ಪ್ರಜ್ಞಾನಂದ ಅವರನ್ನು ಸೋಲಿಸಿದರೆ, ವಿದಿತ್ ಇನ್ನೊಂದು ಪಂದ್ಯದಲ್ಲಿ ಅಜರ್‌ಬೈಜಾನ್‌ನ ನಿಜತ್ ಅಬಸೋವ್ ಜೊತೆ 31 ನಡೆಗಳ ನಂತರ 'ಡ್ರಾ' ಮಾಡಿಕೊಳ್ಳಲಷ್ಟೇ ಶಕ್ತರಾದರು.

ವೈಶಾಲಿಗೆ ಸತತ ನಾಲ್ಕನೇ ಜಯ :ಮಹಿಳಾ ವಿಭಾಗದಲ್ಲಿ ಭಾರತದ ವೈಶಾಲಿ ರಮೇಶಬಾಬು (ಪ್ರಜ್ಞಾನಂದ ಅವರ ಅಕ್ಕ) ಅವರು ಚೀನಾದ ಟಿಂಗ್ಜಿ ಲೀ ಅವರನ್ನು ಸೋಲಿಸಿದರು. ಆರಂಭದ ಸುತ್ತುಗಳಲ್ಲಿ ಪರದಾಡಿದ್ದ ಭಾರತದ ಆಟಗಾರ್ತಿಗೆ ಇದು ಸತತ ನಾಲ್ಕನೇ ಗೆಲುವು.

ಆದರೆ ಈ ವಿಭಾಗದಲ್ಲಿ ಚೀನಾದ ಇನ್ನೊಬ್ಬ ಆಟಗಾರ್ತಿ ಝೊಂಗ್‌ಯಿ ತಾನ್ ಅವರು ಕೊನೆಯ ಸುತ್ತು ಇರುವಂತೆ ತಮ್ಮ ನಿಕಟ ಎದುರಾಳಿ ಟಿಂಗ್ಜೀ ಅವರಿಗಿಂತ ಒಂದು ಪಾಯಿಂಟ್ ಲೀಡ್ ಪಡೆದಿದ್ದು, ಪ್ರಶಸ್ತಿಯನ್ನು ಬಹುತೇಕ ಖಚಿತಪಡಿಸಿಕೊಂಡಿದ್ದಾರೆ. ಕೊನೆಯ ಪಂದ್ಯ ಡ್ರಾ ಆದರೂ ಅವರೇ ವಿಜೇತರಾಗಲಿದ್ದಾರೆ.

ಝೊಂಗ್‌ಯಿ 13ನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (ರಷ್ಯಾ) ಜೊತೆ ಡ್ರಾ ಮಾಡಿಕೊಂಡರು. ಒಂದು ಹಂತದಲ್ಲಿ ಸತತ ಮೂರು (ಏಳರಿಂದ ಒಂಬತ್ತನೇ ಸುತ್ತು) ಪಂದ್ಯಗಳನ್ನು ಸೋತಿದ್ದ ವೈಶಾಲಿ ಅಮೋಘ ಚೇತರಿಕೆ ತೋರಿದ್ದು, ಶನಿವಾರ ಉತ್ತಮ ಗೆಲುವಿನ ಮೂಲಕ ಟಿಂಗ್ಜೀ ಅವರ ಪ್ರಶಸ್ತಿ ಆಸೆ ಭಗ್ನಗೊಳಿಸಿದರು. ಕೋನೇರು ಹಂಪಿ ಮತ್ತು ಅನ್ನಾ ಮುಝಿಚುಕ್ ನಡುವಣ ಪಂದ್ಯ ಡ್ರಾ ಆಯಿತು. ಲೀ (7.5) ಎರಡನೇ ಸ್ಥಾನದಲ್ಲಿದ್ದಾರೆ. ಗೊರ್ಯಾಚ್ಕಿನಾ, ಲಾಗ್ನೊ, ಹಂಪಿ ಮತ್ತು ವೈಶಾಲಿ ತಲಾ 6.5 ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ಟಿಂಗ್ಜಿ ಅವರು ಹಂಪಿ ವಿರುದ್ಧ ಆಡಲಿದ್ದಾರೆ. ವೈಶಾಲಿ ಅವರ ಎದುರಾಳಿ ಲಾಗ್ನೊ. ಗೊರ್ಯಾಚ್ಕಿನಾ ಅವರಿಗೆ ಸಲಿಮೋವಾ ಅವರು ಮುಖಾಮುಖಿ ಆಗಲಿದ್ದಾರೆ.

ಡಿ.ಗುಕೇಶ್ –ಪಿಟಿಐ ಚಿತ್ರ